
॥ ಶ್ರೀಃ ಹರಿಃ ಓಂ ॥

ಶ್ರೀಹರಿದಾಸ ಸಾಹಿತ್ಯ ಪ್ರಚಾರ ಗ್ರಂಥಮಾಲೆ



ಶ್ರೀಜಗನ್ನಾಥದಾಸವರ್ಯ ವಿರಚಿತ

# ಶ್ರೀಮದ್ಹರಿಕಥಾಮೃತಸಾರ

## ಸರ್ವವ್ಯಾಖ್ಯಾನಸಾರಸಂಗ್ರಹ

**ಆರೋಹಣತಾರತಮ್ಯಸಂಧಿ : ೨೫**

**ಅವರೋಹಣತಾರತಮ್ಯಸಂಧಿ : ೨೬**

**ಅನುಕ್ರಮಣಿಕಾತಾರತಮ್ಯಸಂಧಿ : ೨೭**

**(ಸಂಯುಕ್ತ ಸಂಪುಟ – ೨೫-೨೬-೨೭)**

ಪ್ರಕಾಶಕರು :

**ಹೆಚ್. ಎಸ್. ಶ್ರೀನಿವಾಸಮೂರ್ತಿ**

"ಶ್ರೀ ಉರಗಾದ್ರಿ", ನಂ. ೬೧, ೫ನೆಯ ಅಡ್ಡ ರಸ್ತೆ

ನರಸಿಂಹರಾಜಾ ಕಾಲೋನಿ, ಬೆಂಗಳೂರು-೫೬೦ ೦೧೯

ದೂರವಾಣಿ : ೬೦೨೩೫೧

**'ಶ್ರೀಮದ್ಹರಿಕಥಾಮೃತಸಾರ'**
ಸರ್ವವ್ಯಾಖ್ಯಾನಸಾರಸಂಗ್ರಹ
**ಆರೋಹಣತಾರತಮ್ಯಸಂಧಿ, ಅವರೋಹಣತಾರತಮ್ಯಸಂಧಿ**
**ಮತ್ತು ಅನುಕ್ರಮಣಿಕಾತಾರತಮ್ಯಸಂಧಿ**

**ಸಂಪುಟ – ೨೫, ೨೬, ೨೭**

ಪುಟಗಳ ಸಂಖ್ಯೆ :

ಪ್ರಥಮ ಮುದ್ರಣ : ಕ್ರಿ.ಶ. ೧೯೯೬
ಪ್ರತಿಗಳ ಸಂಖ್ಯೆ : ೧೦೦೦

**ಬೆಲೆ : ಅರವತ್ತು ರೂಪಾಯಿಗಳು**

ಪ್ರತಿಗಳು ದೊರೆಯುವ ಸ್ಥಳ :

1. **ಹೆಚ್. ಎಸ್. ಶ್ರೀನಿವಾಸಮೂರ್ತಿ**
ನಂ. 61, "ಶ್ರೀ ಯುಗಾದಿ"
5ನೇ ಅಡ್ಡರಸ್ತೆ, ನರಸಿಂಹರಾಜಾ ಕಾಲೋನಿ,
ಬೆಂಗಳೂರು-560 019
**ದೂರವಾಣಿ ಸಂಖ್ಯೆ : 602351**

2. **ವೇದಾಂತ ಬುಕ್ ಹೌಸ್**
ಉಮಾ ಚಿತ್ರಮಂದಿರದ ಸಮೀಪ
ಚಾಮರಾಜಪೇಟೆ, ಬೆಂಗಳೂರು-560 018
**ದೂರವಾಣಿಸಂಖ್ಯೆ : 600480**

3. **ನ್ಯೂ ವೇದಾಂತ ಬುಕ್‌ಹೌಸ್**
8ನೆಯ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560 003

ಮುದ್ರಕರು :
**ಸಮೀರ ಮುದ್ರಣಾಲಯ**
ನಂ. 660, 5ನೇ ಕ್ರಾಸ್, ಹನುಮಂತನಗರ
ಬೆಂಗಳೂರು-560 019

॥ ಶ್ರೀಃ ಹರಿಃ ಓಂ ॥

## ಪ್ರಕಾಶಕರ ನುಡಿ

ಸಹೃದಯರಾದ ವಾಚಕರಲ್ಲಿ ಸವಿನಯಪೂರ್ವಕ ವಿನಂತಿ.

ನಮಸ್ಕಾರೇ,

ಅಪರೋಕ್ಷೀಕೃತಶ್ರೀಶರಾದ ಶ್ರೀಜಗನ್ನಾಥದಾಸವರ್ಯರ ಮೇರುಕೃತಿ ರತ್ನ - **ಶ್ರೀಮದ್ಧರಿಕಥಾಮೃತಸಾರ.** ಇಲ್ಲಿಯ ಪರ್ಯಂತ ೩೪ ಸಂಧಿಗಳು ಶ್ರೀಹರಿ-ವಾಯುಗುರುಗಳ ಪರಮಾನುಗ್ರಹದಿಂದ ಪ್ರಕಟವಾಗಿವೆ. ಈಗ ಮುಂದಿನ ಮೂರು ಸಂಧಿಗಳನ್ನು ಒಟ್ಟಿಗೇ ಸೇರಿಸಿ, **ಸಂಯುಕ್ತ ಸಂಪುಟದ ರೂಪದಲ್ಲಿ** ಪ್ರಕಟಿಸಿ, ತಮ್ಮ ಕೈಯಲ್ಲಿಡಲು ನಮಗೆ ಪರಮ ಸಂತಸದ ಸಂಗತಿ. ಈ ಸಂಯುಕ್ತ ಸಂಚಿಕೆಯಲ್ಲಿ - ೧. ಆರೋಹಣ ತಾರತಮ್ಯಸಂಧಿ **(ಸಂಧಿ - ೩೫).** ೨. ಅವರೋಹಣತಾರತಮ್ಯಸಂಧಿ **(ಸಂಧಿ ೩೬)** ಮತ್ತು ೩. ಅನುಕ್ರಮಣಿಕಾತಾರತಮ್ಯಸಂಧಿ **(ಸಂಧಿ - ೩೭)** - ಈ ಸಂಧಿತ್ರಯಗಳು ಒಟ್ಟಿಗೇ ಸೇರಿವೆ. ೩೫ನೆಯ ಸಂಧಿಯಲ್ಲಿ ೧೯ ಪದ್ಯಗಳೂ, ೩೬ನೆಯ ಸಂಧಿಯಲ್ಲಿ ೭ ಪದ್ಯಗಳೂ ಮತ್ತು ೩೭ನೆಯ ಸಂಧಿಯಲ್ಲಿ ಕೇವಲ ೫ ಪದ್ಯಗಳೂ ಇದ್ದು, ಒಟ್ಟು ಮೂರು ಸಂಧಿಗಳಿಂದ ಪದ್ಯಗಳ ಸಂಖ್ಯೆ = ೩೧. ಇದರಿಂದ ಸಂಧಿತ್ರಯಗಳನ್ನು ಒಟ್ಟಿಗೇ ಸೇರಿಸಿ, ಸಂಯುಕ್ತ ಸಂಪುಟದ ರೂಪದಲ್ಲಿ ಪ್ರಕಟಿಸಲು ಅನುಕೂಲವಾಯಿತು.

ಹಿಂದಿನ ಸಂಧಿಗಳಂತೆಯೇ, ಪ್ರಸಕ್ತ ಸಂಧಿಗಳನ್ನು ತಾವು ಆದರದಿಂದ ಸ್ವಾಗತಿಸುತ್ತೀರೆಂದು ಭಾವಿಸಿದ್ದೇವೆ.

೩೭ ಸಂಧಿಗಳಲ್ಲಿ ದಾಸರಾಯರು ೬ ಸಂಧಿಗಳನ್ನು **ತಾರತಮ್ಯಕ್ರಮವನ್ನು** ವಿವರಿಸಲು ರಚಿಸಿರುತ್ತಾರೆ. ಇದೊಂದು ಈ ಗ್ರಂಥದ ವೈಶಿಷ್ಟ್ಯ. ಭಗವದನುಗ್ರಹಪ್ರಾಪ್ತಿಯು ಅಷ್ಟು ಸುಲಭದ ಮಾತೇನಲ್ಲ. ಆದಕ್ಕೆ ಪಂಚಭೇದ - ತಾರತಮ್ಯಗಳ ತಾತ್ತ್ವಿಕ ವಿಚಾರಗಳು ಸ್ಪಷ್ಟವಾಗಿ ಗೊತ್ತಿರಬೇಕು. ತಾರತಮ್ಯಜ್ಞಾನವಿಲ್ಲದೇ ಶ್ರೀಹರಿಯ ಪಾರಮ್ಯ ಮತ್ತು ಸರ್ವಕರ್ತೃತ್ವವನ್ನು ಅರಿಯಲು ಸಾಧ್ಯವಿಲ್ಲ.

ಈ ಸಂಪುಟದ ಪ್ರಕಟಣೆಗೆ ನಮ್ಮ ಪ್ರಕಾಶನದ ಅಭಿಮಾನಿಗಳು ನಾನಾ ರೀತಿಗಳಲ್ಲಿ ನೆರವನ್ನು ನೀಡಿರುತ್ತಾರೆ. ಅವರೆಲ್ಲರಿಗೂ ಪ್ರಕಾಶಕರು ತಮ್ಮ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತಾರೆ.

ಹಿಂದಿನ ಸಂಪುಟಗಳಿಗೆ ನೆರವು ನೀಡಿದಂತೆ, ಈ ಸಾರಿಯೂ ಸಹ KIRLOSKAR INVESTMENTS & FINANCES LTD. ಈ ಸಂಸ್ಥೆಯವರು, **ಜಾಹಿರಾತನ್ನು** ನೀಡಿ ಸಹಕರಿಸಿದ್ದಾರೆ. ಆ ಸಂಸ್ಥೆಯ ಮುಖ್ಯಾಧಿಕಾರಿಗಳಾದ **ಶ್ರೀ ಪಿ. ಆರ್. ಮುಂಡೇವಾಡಿಯವರಿಗೆ** ಪ್ರಕಾಶಕರು ತಮ್ಮ ಆತ್ಮೀಯ ಅಭಿವಂದನೆಗಳನ್ನು ಸಲ್ಲಿಸುತ್ತಿದ್ದಾರೆ. ಆ ಸಂಸ್ಥೆಯ ನೆರವು ಮುಂದಿನ ಸಂಧಿಗಳ ಪ್ರಕಟಣೆಗಳಿಗೂ ದೊರೆಯುತ್ತಿರಲೆಂದು ವಿನಂತಿಸಿಕೊಳ್ಳುತ್ತೇವೆ.

**ಮುಂದಿನ ಪ್ರಕಟಣೆ :**

ಆದಿಪೂಜಾರ್ಹನೂ, ಸರ್ವವಿಘ್ನಪರಿಹಾರಕನೂ, ತದ್ದ್ವಾರಾ ಸಕಲ ಸಿದ್ಧಿಪ್ರದಾಯಕನೂ ಆದ ವಿಘ್ನೇಶ್ವರನ ಸ್ತೋತ್ರರೂಪವಾದ ಸಂಧಿ - **ಶ್ರೀವಿಘ್ನೇಶ್ವರಸ್ತೋತ್ರ ಸಂಧಿ (ಸಂಧಿ - ೨೮).** ೨೯ನೆಯ ಸಂಪುಟದ ರೂಪದಲ್ಲಿ ಶೀಘ್ರದಲ್ಲಿಯೇ ಬಿಡುಗಡೆಯಾಗಲಿದೆ.

ಪ್ರಸಕ್ತ ಮೂರು ಸಂಧಿಗಳ ಸಂಯುಕ್ತ ಸಂಪುಟವನ್ನು ಸಕಾಲದಲ್ಲಿ ಅಂದವಾಗಿ ಮುದ್ರಿಸಿಕೊಟ್ಟ **ಸಮೀರ ಮುದ್ರಣಾಲಯದ** ಮಾಲೀಕರಾದ **ಶ್ರೀ ಎ. ಎಂ. ಮೋಹನ್** ಅವರಿಗೂ ಮತ್ತು ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೂ ಪ್ರಕಾಶಕರ ವಂದನೆಗಳು.

ಮುದ್ರಣಾಲಯದಿಂದ ಬರುತ್ತಿದ್ದ ಕರಡುಪ್ರತಿಗಳನ್ನು ತಪ್ಪಿಲ್ಲದಂತೆ ತಿದ್ದಿಕೊಟ್ಟು, ಗ್ರಂಥದ ಪ್ರಕಟಣಾಕಾರ್ಯದ ಪ್ರತಿಹಂತದಲ್ಲಿಯೂ ನೆರವು ನೀಡಿದ **ಡಾ|| ಎ. ಎನ್. ಮಾಧವರಾವ್** ಅವರಿಗೆ ನಮ್ಮ ವಿಶೇಷ ವಂದನೆಗಳು.

ನಿಮ್ಮೆಲ್ಲರ ಸಹಕಾರದಿಂದ ಉಳಿದಿರುವ ೭ ಸಂಧಿಗಳ ಪ್ರಕಟಣೆ (೨೮ ರಿಂದ ೩೪ರ ವರೆಗೆ) ಶೀಘ್ರ ಕಾಲದ ಅವಧಿಯಲ್ಲಿ ಮುಗಿಯಬೇಕಾಗಿದೆ.

೧. ಕಂತುಗಳನ್ನು ಉಳಿಸಿಕೊಂಡಿರುವ ಸದಸ್ಯರು ಪೂರ್ತಿಯಾಗಿ ಹಣವನ್ನು ಸಂದಾಯ ಮಾಡಬೇಕೆಂದು ವಿನಂತಿ.

೨. "ಕರ್ನಾಟಕ ಹರಿದಾಸ ಕೀರ್ತನ ತರಂಗಿಣೀ" - ಎಂಬ **ಮಾಲಿಕೆಯಲ್ಲಿ** ಪ್ರಕಟವಾಗುತ್ತಿರುವ **ಮಾಸಪತ್ರಿಕೆಗಳಿಗೆ** ಚಂದಾದಾರರಾಗಿ, ನೆರವನ್ನು ನೀಡಬೇಕೆಂದು ಮನವಿ.

೩. ಅ ಕಾರದಿಂದ ಪ್ರಾರಂಭವಾಗಿ, ಅಕ್ಷರಾನುಕ್ರಮದಲ್ಲಿ ಪ್ರಕಟವಾಗಲಿರುವ '**ಹರಿದಾಸ ಕೀರ್ತನ ಸುಧಾಂಬುಧಿ**' - ಯ ಸಂಪುಟಗಳನ್ನು ಕೊಂಡು, ಜ್ಞಾನಪ್ರಚಾರರೂಪವಾದ ಈ ಸತ್ಕಾರ್ಯದಲ್ಲಿ ಸಹಕರಿಸಬೇಕೆಂದು ಕೋರಲಾಗಿದೆ.

ಅಭಿಮಾನವಿರಲಿ

ಇಂತೀ ಪ್ರಣಾಮಗಳು

**H. S. ಶ್ರೀನಿವಾಸಮೂರ್ತಿ**

**(ಹರಿದಾಸರ ಪಾದಸೇವಕ)**

ಬೆಂಗಳೂರು.

ದಿನಾಂಕ : ೩೧-೧೨-೧೯೯೫

## ತಿದ್ದುಪಡಿ

| ಪುಟ ಸಂಖ್ಯೆ | ಸಾಲು | ತಪ್ಪು | ಸರಿ |
|---|---|---|---|
| 3 | 19 | ಅಕಳು | ಆಕಳು |
| 5 | 7 | ಪ್ರಣಾಡಿಕಯಾ | ಪ್ರಣಾಳಿಕಯಾ |
| 6 | 3 | ಬುಭಕ್ಷೂನ್ | ಬುಭುಕ್ಷೂನ್ |
| 6 | 23 | ವಹಿ | ವಹ್ನಿ |
| 7 | 20 | ಯೊಗ್ಯಾಸ್ವಯ | ಯೋಗ್ಯಾನ್ಸಯ |
| 8 | 10 | ಶ್ರೆಷ್ಠಾ : | ಶ್ರೇಷ್ಠಾಃ |
| 9 | 14 | ಪರ್ವವನ್ನು | ಪರ್ವತವನ್ನು |
| 10 | 7 | ಸಯಜ್ಞ | ಸುಯಜ್ಞ |
| 11 | 3 | ಆವುಗಳಗೆ | ಅವುಗಳಿಗೆ |
| 12 | 13 | ಇದರಿಂದ | ಇವರಿಂದ |
| 13 | 19 | ಅಧಿಕನು. | |
| | | ನಾರಾಯಣನು. | ಪೂರ್ಣವಿರಾಮವನ್ನು ಬಿಟ್ಟು ಓದಿಕೊಳ್ಳಿ |
| 14 | 18 | ಆವಿಗೋಗಜ | ಆವಿಗೋಗಜ |
| 16 | 7 | ಸ್ತಾವರರು | ಸ್ಥಾವರರು |
| 18 | 10 | ಪುಂದೆ | ಮುಂದೆ |
| 19 | 23 | ಮಿಕ್ಕ | ಕಮ್ಮಿ |
| 22 | 10 | ಸಪ್ತಯಷ್ಯಾದಿ | ಸಪ್ತಋಷ್ಯಾದಿ |
| 22 | 19 | ಹದನೆಂಟುಸಾವಿರ | ಹದಿನಾರುಸಾವಿರ |
| 23 | 3 | ಕಕ್ಷಾಡವರಾದ | ಕಕ್ಷಡವರಾದ |
| 23 | 18 | ಯಾನ್ಮಂದಿ | ಯಾವನ್ಮಂದಿ |
| 24 | 11 | ಉತ್ತಮೆತ್ವೇ | ಉತ್ತಮತ್ವೇ |
| 24 | 14 | ಆಜಾನತ್ವಂ | ಆಜಾನಜತ್ವಂ |
| 24 | 23 | ಕಸೇರು ತಾಸಾಂ | ಕಶೇರು ತಾಸಾಂ |
| | | ಪ್ರಧಾನಾ | ಪ್ರಧಾನಾಃ |

| | | | |
|---|---|---|---|
| 25 | 21 | ಕಸೇರು | ಕಶೇರು |
| 29 | 20 | ಯಶೋದಾನಂದ | ಯಶೋದಾ ನಂದ |
| 29 | 25 | ಚಂದ್ರ | ಚಂದ್ರಃ |
| 34 | 2 | ಸ್ವಾಹಾಯಃ | ಸ್ವಾಹಾಯೋಃ |
| 56 | 8 | ನಾಶದರು | ನಾರದರು |
| 57 | 10 | ಹುತ್ತ | ಹತ್ತು |
| 59 | 15 | ಸಾಯಂಭುವ | ಸ್ವಾಯಂಭುವ |
| 61 | 18 | ದೇವರು | ದೇವೇರು |
| 69 | 16 | 74ನೆಯ | 44ನೆಯ |
| 74 | 9 | ವಿರಜನಾದಿ | ವಿರಜಾನದಿ |
| 74 | 15 | ಇವುಗಳಲ್ಲಿದ | ಇವುಗಳಲ್ಲದ |
| 92 | 10 | ಮನೋಭಿಷ್ಟ | ಮನೋಭೀಷ್ಟ |
| 92 | 12 | ನಡಸತರ್ಕನು | ನಡೆಸತಕ್ಕವನು |
| 102 | 4 | ನರಸಿಂಹ | ನರಸಿಂಹ |
| 106 | 20 | ನಿಲ್ಲುವು | ನಿಲ್ಲುವ |
| 117 | 5 | ಅರೋಹಣಾ | ಆರೋಹಣಾ |
| 117 | 11 | ಭಕ್ತ್ಯೈಕಲಭ್ಯ | ಭಕ್ತ್ಯೈಕಲಭ್ಯ |
| 120 | 20 | ಋಷಯೋಽಪ್ಯದಿಕಾ | ಋಷಯೋಽಪ್ಯಧಿಕಾ |
| 120 | 20 | ಪ್ರೋಕ್ತಾಸ್ತೇಭ್ಯೋ | ಪ್ರೋಕ್ತಾಸ್ತೇಭ್ಯೋ |
| 120 | 21 | ವಹ್ನಿಃಸ್ತತ್ಯ | ವಹ್ನಿಸ್ತತಃ |
| 121 | 17 | ಸಾಹಾ | ಸ್ವಾಹಾ |
| 127 | 2 | ಸರಸ್ವತಿದೇವರು | ಸರಸ್ವತೀದೇವೇರು |
| 136 | 3 | (ಕಕ್ಷ ೧೨) | (ಕಕ್ಷ ೧೩) |
| 136 | 13 | ೩. ವರುಣ | ೫. ವರುಣ |
| 136 | 14 | ೬. ನಾರಾದಮುನಿ | ೭. ನಾರದಮುನಿ |
| 141 | 12 | (ಕಕ್ಷ - ೨೬) | (ಕಕ್ಷ - ೧೬) |
| 141 | 13 | (ಕಕ್ಷ -೨೯) | (ಕಕ್ಷ - ೧೭) |

| | | | |
|---|---|---|---|
| 142 | 11 | ತಾರತಮ್ಯಾ-<br>ರೋಹಣ | ತಾರತಮ್ಯಾವರೋ)<br>ಹಣ |
| 144 | 2 | ದೇವಾಶ್ಚೋಕ್ತೇ<br>ತರಾ | ದೇವಾಶ್ಚೋಕ್ತೇತರಾ |
| 153 | 22 | ಗಂಧರ್ವಗರ್ಗಕ್ಕೆ | ಗಂಧರ್ವವರ್ಗಕ್ಕೆ |
| 159 | 16 | ೪. ಮುಖ್ಯರು | ೫. ಮುಖ್ಯರು |
| 159 | 20 | ೭.ಶ್ರೀಜಗನ್ನಾಥ<br>ಪಿಠಲನ | ೬. ಶ್ರೀಜಗನ್ನಾಥ<br>ವಿಠಲನ |
| 167 | 21 | ಆರೋಹಣ | ಆರೋಹಣ |
| 179 | 13 | ಶೂರನು. | ದೂರನು. |
| 180 | 18 | ಆವತರಣಿಕೆ | ಅವತರಣಿಕೆ |
| 193 | 2 | ಭಾರ್ಗವರಾಮ | ಭಾರ್ಗವರಾಮನಾಗಿ |
| 195 | 23-24 | ತನ್ನ ದೇಶಿ<br>ಯಿಂದಲೂ<br>ಜೀವರ ದೆಶೆ<br>ಯಿಂದಲೂ ಬಹಳ<br>ಭೇದ ಉಳ್ಳವನು<br>ಶರಣಾ | ಈ ಸಾಲನ್ನು<br>ಬಿಟ್ಟು<br>ಮುಂದೆ<br>ಓದಿಕೊಳ್ಳಿ |
| 196 | 25 | ಜಡವಾದ ಜಗತ್ತಿನ | (ಇದನ್ನು ಸೇರಿಸಿ<br>ಕೊಂಡು ಮುಂದೆ<br>ಓದಿಕೊಳ್ಳಿ) ದೆಶೆ<br>ಯಿಂದಲೂ ಜೀವರ<br>ದೆಶೆಯಿಂದಲೂ<br>ಬಹಳ ಭೇದ<br>ಉಳ್ಳವನು. |

✳ ✳ ✳ ✳ ✳

|| ಶ್ರೀ ಹರಿಃ ಓಂ ||

ಶ್ರೀಹರಿದಾಸಸಾಹಿತ್ಯ ಪ್ರಚಾರ ಗ್ರಂಥಮಾಲೆ



ಶ್ರೀಜಗನ್ನಾಥದಾಸವರ್ಯಕೃತ

# ಶ್ರೀಮದ್ಧರಿಕಥಾಮೃತಸಾರ

## ಸರ್ವವ್ಯಾಖ್ಯಾನಸಾರಸಂಗ್ರಹ

## ಆರೋಹಣತಾರತಮ್ಯಸಂಧಿ

(ಸಂಧಿ - ೨೫)

॥ ಶ್ರೀಃ ಹರಿಃ ಓಂ ॥

॥ಶ್ರೀಗರುಡವಾಹನ ಲಕ್ಷ್ಮೀನರಸಿಂಹಾಭಿನ್ನ ಶ್ರೀಜಗನ್ನಾಥವಿಠ್ಠಲಾಯ ನಮಃ॥

# ಶ್ರೀಮದ್ಧರಿಕಥಾಮೃತಸಾರ

## ಆರೋಹಣ ತಾರತಮ್ಯ ಸಂಧಿ

**(ಸಂಧಿ-೨೫)**

**ಹರಿಕಥಾಮೃತಸಾರ ಗುರುಗಳ ।**
**ಕರುಣದಿಂದಾಪನಿತು ಪೇಳುವೆ ।**
**ಪರಮ ಹರಿಭಕ್ತರಿದನಾದರದಿ ಕೇಳುವುದು ॥ಪ॥**

**ಭಕ್ತರೆನಿಸುವ ದಿವ್ಯಪುರುಷರ ।**
**ಉಕ್ತಿ ಲಾಲಿಸಿ ಪೇಳ್ದ ಮಂಕ್ತಾ ।**
**ಮುಕ್ತಜೀವರ ತಾರತಮ್ಯವ ಮುನಿಪ ಶೌಂಡಿಲ್ಯ ॥**

**॥ಸಂಧಿಸೂಚನೆ॥**

ಭಗವದನುಗ್ರಹಕ್ಕೆ ಪಾತ್ರರಾದ ಪಾಪವಿದೂರರಾದ ಭಗವದ್ಭಕ್ತರ ಮಾತನ್ನು (ಪ್ರಶ್ನರೂಪವಾದ) ಕೇಳಿ, **ಶೌಂಡಿಲ್ಯಮುನಿಗಳು** ಹೇಳಿದ ಮುಕ್ತ ಹಾಗೂ ಅಮುಕ್ತಜೀವರ ತಾರತಮ್ಯವಿಷಯಕ ಪುರಾಣವಿಶೇಷಗಳನ್ನು ಪ್ರಸಕ್ತ ಸಂಧಿಯಲ್ಲಿ ನಿರೂಪಿಸಿರುತ್ತಾರೆ.

**ಮೂಲ–** **ಪದ್ಯ - ೧**

**ಸ್ಥಾವರರ ನೋಡಲ್ಕೆ ತೃಣ ಕ್ರಿಮಿ ।**
**ಜೀವರುತ್ತಮ ಕ್ರಿಮಿಗಳಿಂದಲ ।**
**ಜಾವಿ ಗೋ ಗಜ ವ್ಯಾಘ್ರ ಸಿಂಹಗಳಿಂದ ಶೂದ್ರಾದಿ ॥**

ಮೂವರುತ್ತಮ ಕರ್ಮಕರು ಭೂ ।
ದೇವರುತ್ತಮ ಕರ್ಮಿ ನೋಡಲು ।
ಕೋವಿದೋತ್ತಮ ಕವಿಗಳಿಂದಲಿ ಕ್ಷಿತಿಪರುತ್ತಮರು ॥೧॥

**ಅವತರಣಿಕೆ** - ಶುದ್ಧ ಜಡಗಳಿಂದ ಆರಂಭಿಸಿ, ಮಾನುಷಚಕ್ರವರ್ತಿಗಳ ಪರ್ಯಂತ ತಾರತಮ್ಯಕ್ರಮವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ** - **ಸ್ಥಾವರರ** - ಪ್ರಥಮಕಕ್ಷಾಪನ್ನರಾದ ಶುದ್ಧ ಜಡಗಳು. **ನೋಡಲ್ಕೆ ತೃಣ** - ದ್ವಿತೀಯ ಕಕ್ಷೆಗೆ ಸೇರಿದ ತೃಣಜೀವರು ಉತ್ತಮರು. **ಕ್ರಿಮಿಜೀವರು** - ಮೂರನೇ ಕಕ್ಷಾಪನ್ನರಾದ ಕ್ರಿಮಿಜೀವರು ತೃಣಜೀವರಿಗಿಂತಲೂ ಉತ್ತಮರು. **ಕ್ರಿಮಿಗಳಿಂದಲಿ** - ಈ ಕ್ರಿಮಿಗಳಿಗಿಂತ, **ಅಜ** - ನಾಲ್ಕನೆಯ ಕಕ್ಷೆಗೆ ಸೇರಿದ ಮೇಕೆ, ಆಡು ಇತ್ಯಾದಿ ಜೀವರಿಗಿಂತ, **ಅವಿ** - ೫ನೆಯ ಕಕ್ಷಾಪನ್ನರಾದ ಕುರಿ ಜೀವರು ಉತ್ತಮರು. **ಗೋ** - ೬ ನೇ ಕಕ್ಷಕ್ಕೆ ಸೇರಿದ ಹಸುಜೀವರು ಕುರಿಜೀವರಿಗಿಂತ ಉತ್ತಮರು. **ಗಜ** - ೭ನೆಯ ಕಕ್ಷಾಪನ್ನರಾದ ಆನೆಜೀವರು ಹಸುಜೀವರಿಗಿಂತ ಉತ್ತಮರು. **ವ್ಯಾಘ್ರ** - ೮ನೆಯ ಕಕ್ಷಕ್ಕೆ ಸೇರಿದ ವ್ಯಾಘ್ರಜೀವರು ಗಜಜೀವರಿಗಿಂತ ಉತ್ತಮರು. **ಸಿಂಹ-೯ನೆಯ** ಕಕ್ಷಕ್ಕೆ ಸೇರಿದ ಸಿಂಹಜೀವರು ವ್ಯಾಘ್ರಜೀವರುಗಳಿಗಿಂತಲೂ ಉತ್ತಮರು. **ಶೂದ್ರಾದಿ** - ೧೦ನೆಯ ಕಕ್ಷಾಪನ್ನರಾದ ಶೂದ್ರಜೀವರು ಸಿಂಹಜೀವರಿಗಿಂತ ಉತ್ತಮರು. **ಮೂವರುತ್ತಮರು** - ೧೧ನೆಯ ಕಕ್ಷದವರಾದ ಮೂರನೆಯ ವರ್ಣದ ವೈಶ್ಯಜೀವರು ಶೂದ್ರಜೀವರಿಗಿಂತ ಉತ್ತಮರು. **ಕರ್ಮಕರು** - ಹನ್ನೆರಡನೆಯ ಕಕ್ಷಕ್ಕೆ ಸೇರಿದ ಕರ್ಮಾಧಿಕಾರಿಗಳಾದ (ಆಯುಧಧರರು) ಕ್ಷತ್ರಿಯ ಜೀವರು ವೈಶ್ಯಜೀವರಿಗಿಂತ ಉತ್ತಮರು. **ಭೂದೇವರುತ್ತಮರು** - ೧೩ನೆಯ ಕಕ್ಷಾಪನ್ನರಾದ ಬ್ರಾಹ್ಮಣಜೀವರು (ಭೂದೇವರು) ಕ್ಷತ್ರಿಯ ಜೀವರಿಗಿಂತ ಉತ್ತಮರು. **ಕರ್ಮಿ ನೋಡಲು** - ಕರ್ಮಾಸಕ್ತರಾದ ಬ್ರಾಹ್ಮಣರಿಗಿಂತ, **ಕೋವಿದೋತ್ತಮರು** - ೧೪ನೆಯ ಕಕ್ಷದ ಜ್ಞಾನಪ್ರಾಚುರ್ಯವುಳ್ಳ ಕೋವಿದ ಸಾಂಕೇತರಾದ ಬ್ರಾಹ್ಮಣರು ಕರ್ಮಠಬ್ರಾಹ್ಮಣರಿಗಿಂತ ಉತ್ತಮರು. **ಕವಿಗಳಿಂದಲಿ** - ಜ್ಞಾನಪ್ರಾಚುರ್ಯರಾದ ವಿಪ್ರರಿಗಿಂತ, **ಕ್ಷಿತಿಪರುತ್ತಮರು** - ೧೫ನೆಯ ಕಕ್ಷಾಪನ್ನರಾದ ಮಾನುಷಚಕ್ರವರ್ತಿಗಳು ಉತ್ತಮರೆನಿಸುತ್ತಾರೆ ॥೧॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

**ಅವತಾರಿಕಾ -**

೨೫ನೇ ಸಂಧಿಯಲ್ಲಿ ಹೀಂಗೆ ಪೂರ್ವೋಕ್ತ ಸರ್ವ ಸಮರ್ಪಣ ಮಾಡ ತಕ್ಕವರು ಮುಕ್ತಿಯೋಗ್ಯ ತೃಣಾರಭ್ಯ ಬ್ರಹ್ಮದೇವರವರಿಗೂ ತಾರತಮ್ಯೋಪೇತರು. ಆದ್ದರಿಂದ ಮುಕ್ತಿಯಲ್ಲಿಯೂ ಸಹ ತಾರತಮ್ಯವೆಂದು ವಾಯು ಪುರಾಣಾರ್ಥವನ್ನು ಹೇಳುತ್ತಾರೆ. ಪಾಪಜನ್ಮ ಮುಕ್ತರಾದ ದಿವ್ಯಪುರುಷರ ಪ್ರಶ್ನವೆಂಬ ಮಾತನ್ನ ಲಾಲಿಸಿ ಮುಕ್ತಾಮುಕ್ತಜೀವರಲ್ಲಿ ಸಹ ತಾರತಮ್ಯ ಉಂಟೆಂದು ಶಾಂಡಿಲ್ಯಋಷಿಗಳು ಹೇಳಿದ ಪುರಾಣಾರ್ಥವನ್ನು ಈ ಸಂಧಿ ಯಲ್ಲಿ ಹೇಳುತ್ತಾರೆ.

**ಟೀಕಾ -** ಶುದ್ಧ ಜಡಗಳು ಮೊದಲು ಮಾಡಿ ಮಾನುಷಚಕ್ರವರ್ತಿಗಳ ಪರ್ಯಂತ ತಾರತಮ್ಯ ಹೇಳುತ್ತಾರೆ.

೧ನೇ ಕಕ್ಷವ. ಚೇತನರಹಿತವಾದ ಶುದ್ಧ ಜಡಗಳ, ಈ ಶುದ್ಧ ಜಡ ಗಳಿಂದಲೂ, ೨ನೇ ಕಕ್ಷದವರಾದ ತೃಣಜೀವರು ಉತ್ತಮರು. ೩ನೇ ಕಕ್ಷದವ ರಾದ ಕ್ರಿಮಿಜೀವರು, ತೃಣಜೀವರಿಗಿಂತಲೂ ಕ್ರಿಮಿಜೀವರುತ್ತಮರು. ಈ ಕ್ರಿಮಿಜೀವರಿಗಿಂತಲೂ ೪ನೇ ಕಕ್ಷದವರಾದ ಮ್ಯಾಕಿಜೀವರುಗಳು ಉತ್ತಮರು. ೪ನೇ ಕಕ್ಷ, ಈ ಮ್ಯಾಕಿಜೀವರಿಗಿಂತಲೂ ೫ನೇ ಕಕ್ಷ ಕುರಿಜೀವರು ಉತ್ತಮರು. ಗೋ - ೬ನೇ ಕಕ್ಷ ಕುರಿಜೀವರಿಗಿಂತಲೂ ಆಕಳುಜೀವರು ಉತ್ತಮರು. ೭ನೇ ಕಕ್ಷ, ಆಕಳು ಜೀವರಿಗಿಂತಲೂ ಗಜ ಜೀವರು ಉತ್ತಮರು. ೮ನೇ ಕಕ್ಷ, ಗಜಜೀವರಿಗಿಂತಲೂ ವ್ಯಾಘ್ರಜೀವರು ಉತ್ತಮರು. ೯ನೇ ಕಕ್ಷ, ವ್ಯಾಘ್ರಜೀವರಿಗಿಂತಲೂ ಸಿಂಹಜೀವರು ಉತ್ತಮರು. ಈ ಸಿಂಹಜೀವರಿ ಗಿಂತಲೂ ೧೦ನೇ ಕಕ್ಷ ಶೂದ್ರಜೀವರು ಉತ್ತಮರು. ಮೂವರುತ್ತಮರು ಎಂದರೆ, ಈ ಶೂದ್ರಜೀವರಿಗಿಂತಲೂ ೧೧ನೇ ಕಕ್ಷದವರಾದ ವೈಶ್ಯಜೀವರು

ಉತ್ತಮರು. ೧೨ನೇ ಕಕ್ಷದವರು, ಕ್ಷತ್ರಿಯ ಜೀವರು. ಈ ವೈಶ್ಯಜೀವರಿಗಿಂತಲೂ ಕ್ಷತ್ರಿಯ ಜೀವರು ಉತ್ತಮರು. ೧೩ನೇ ಕಕ್ಷದ ಬ್ರಾಹ್ಮಣರು ಈ ಕ್ಷತ್ರಿಯಜೀವರಿಗಿಂತಲೂ ಉತ್ತಮರು. ಈ ಬ್ರಾಹ್ಮಣರೊಳಗೆ ತಾರತಮ್ಯ. ಜ್ಞಾನಕ್ಕಿಂತಲೂ ಕರ್ಮವೇ ಅಧಿಕವಾಗುಳ್ಳ ಅಧಿಕಕರ್ಮಾಸಕ್ತನಾದ ಭೂದೇವ ಎಂದರೆ ಬ್ರಾಹ್ಮಣ ಉತ್ತಮ. ಕರ್ಮಾಸಕ್ತನಾದ ಬ್ರಾಹ್ಮಣನಿಗಿಂತಲೂ ಜ್ಞಾನಪ್ರಾಚುರ್ಯದಿಂದ ಕೋವಿದಸಾಂಕೇತನಾದ ಜ್ಞಾನಿಯಾದ ಬ್ರಾಹ್ಮಣ ಉತ್ತಮ. ಜ್ಞಾನ ಪ್ರಾಚುರ್ಯರಾದ ಭೂದೇವರಿಗಿಂತಲೂ ೧೪ನೇ ಕಕ್ಷದ ಮಾನುಷಚಕ್ರವರ್ತಿಗಳು ಉತ್ತಮರು ಎಂತ ತಾತ್ಪರ್ಯ ॥೧॥

## ೨. ಭಾವಪ್ರಕಾಶಿಕೆ

ಸ್ಥಾವರರ ನೋಡಲಿಕ್ಕೆ ತೃಣಜೀವರು ಉತ್ತಮರು, ಸ್ಥಾವರರು ಜಂಗಮರು, ಈ ಈರ್ವರಲ್ಲಿ ಸ್ಥಾವರರಿಗಿಂತಲೂ ಕ್ರಿಮಿಗಳು ಉತ್ತಮರು. ಕ್ರಿಮಿಜೀವರುಗಳಿಗಿಂತಲೂ ಮೇಕೆ, ಆಡು(ಅಜ), ಕುರಿಗಳು (ಅವಿ) ಗೋವು, ಗಜ, ವ್ಯಾಘ್ರ, ಸಿಂಹ ಜೀವರುಗಳು ಉತ್ತಮರು. ಇವರಕ್ಕಿಂತಲೂ ಸತ್ಕರ್ಮವನ್ನು ಆಚರಿಸುತ್ತಿರುವ ಶೂದ್ರರು ಉತ್ತಮರು. ಅವರಿಗಿಂತಲೂ ವೈಶ್ಯರು ಉತ್ತಮರು. ಅವರಿಗಿಂತಲೂ ಕ್ಷತ್ರಿಯರು ಉತ್ತಮರು. ಅವರಿಗಿಂತಲೂ ಬ್ರಾಹ್ಮಣರು ಉತ್ತಮರು. ಸತ್ಕರ್ಮರತರಾದ ಬ್ರಾಹ್ಮಣರಿಗಿಂತಲೂ ಜ್ಞಾನಿಗಳಾದ ಬ್ರಾಹ್ಮಣರು ಉತ್ತಮರು (ಕೋವಿದೋತ್ತಮರು). ಅವರಿಗಿಂತಲೂ ಭಗವತ್ಕಲಾವಿಶಿಷ್ಟರಾದ ಭೂಪತಿಗಳು ಉತ್ತಮರು ॥೧॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

(ಪಂಚರತ್ನ ಪ್ರಕಾಶಿಕೆ ಗ್ರಂಥದಲ್ಲಿ ಈ ಆರೋಹಣ ತಾರತಮ್ಯ ಸಂಧಿಯನ್ನು ೨೦ನೆಯ ಸಂಧಿಯಾಗಿ ಪರಿಗಣಿಸಲಾಗಿದೆ).

ತಾರತಮ್ಯ ಬುದ್ಧೇಃ ಮುಕ್ತ್ಯಂತರಂಗತ್ವಾತ್ ತಾಸ್ಯಾಃ ಜಿಜ್ಞಾಸಾ ಸಾಧ್ಯತ್ವಾತ್ ತಸ್ಯಾಃ 'ಇದಂ ಇತ್ಥಂ' ಇತಿ ಜ್ಞಾನ ಪ್ರಯೋಜನತ್ವಾತ್ ತಸ್ಯ ಚ ಬಹುಸಂಶಯಾಕಾರಪೂರ್ವಕತ್ವಾತ್ ತದ್ದರ್ಶನಸ್ಯ ಬಹುಮತ ವೇದನ

ಸಾಧ್ಯತ್ವಾತ್ ತದರ್ಥಂ ಶೌಂಡಿಲ್ಯ ದಿವ್ಯಪುರುಷ ಸಂವಾದಸ್ಥಂ ಆತ್ಮಪ್ರೇಕ್ಷಾ ಬಲೇನ ರಹಸ್ಯಾನುವಾದಕಂ ಮತಂ, ತತಃ ಆಧುನಿಕ ಕೃಷ್ಣಾರ್ಯಮತಂ ಚ ಸುಸ್ನೇಹಾಸುಗುಣಿತಮಾನಸೌ ಸುಜನರಂಜನೌ ಧೂತಾಂಜನೌ ನಂದಜೌ ಏವ (ಅವ) ಬದ್ಧಕರೌ ಶ್ರೀಕರೌ ಆರುರುಹತುಃ ಗೋಮಂತಂ ಯಥಾ ತದ್ವತ್ ಇಮೇ ತಾರತಮ್ಯ ಗೋತ್ರಂ ಆರುಹ್ಯ ಅತಿ ಶುಶುಭಾತೇ ಇತಿ ತದು ಭಯಂ ಸೌಹಾರ್ದಾನುವಾದಾಯ 'ವಕ್ತವ್ಯಂ ಬ್ರಹ್ಮ ಗುರುಣಾ ಚತುರ್ವಾರಂ ಅಥಾಪಿ ವಾ' ॥ ಆಚಾರ್ಯ (ಆರ್ಯ) ಪ್ರಣಾಡಿಕಯಾ ಸಂಧಿಂ ಆರಭತೇ ಪೂಜ್ಯ ಚರಣೋತ್ತಂಸಃ 'ಹರಿ' ಇತಿ ॥

ನನು ಕ ಏತೇ ದಿವ್ಯಪುಮಾಂಸಃ ? ದಿವ್ಯತ್ವ ವ್ಯಾವರ್ತ್ಯಾದಿವ್ಯತಾ ಚ ಆರ್ವಾಕ್ ಕಾ ಆಸೀತ್ ? ಕುತಸ್ತರಾಂ ಪರಸ್ತಾತ್ ? ಕುತಸ್ತಮಾಂ ಸಮಾ ಗಮಃ ಭಗವತಃ ಮುನೇಃ ಶ್ಯಾಂಡಿಲ್ಯಸ್ಯ ? ಇತಿ ಚೇತ್-ಸಂವಾದ ಭೂಮಿಃ ಪ್ರದರ್ಶ್ಯತೇ ತಾವತ್ ಈಷತ್ ॥ ತಥಾ ಹಿ- ವಾಯುಪುರಾಣೇ ಮಾಘ ಮಾಹಾತ್ಮ್ಯೇ ನವಮಾಧ್ಯಾಯಾಂತೇ ಚ ।

'ಮಾಘೇ ಮಾಸಿ ಜಲಸ್ಪರ್ಶಾತ್ ಮುಚ್ಯಂತೇ ಗತಕಲ್ಮಷಾಃ ॥ ಯಥಾಷ್ಟಾವಿಂಶತಿಃ ಪುರಾ ಪಿಶಾಚಾಃ ಬಹುರೂಪಕಾಃ ।' ಪುನಃ ನಾರದ ಪ್ರಶ್ನೇ ಕಂಜಜಃ ಬಭಾಷೇ - 'ಪುರಾ ತು ಚಾಕ್ಷುಷಾಂತರೇ ದ್ವಾಪರಾದೌ ವಿಶಾಲಾಯಾಂ ನಾರಾಯಣಾಶ್ರಮೇ ಜಾಬಾಲಿಸುಕುಮಾರೌ ನಾಮತಃ ಸುಯಜ್ಞಃ ವಿದ್ಯಾರ್ಥೀ ಸುಮನಾಃ ಅಷ್ಟವಾರ್ಷಿಕಃ ಶೌಂಡಿಲ್ಯಂ ಗುರುಂ ಉಪಸಸಾರ ॥ ತತ್ರ ದಶವರ್ಷಾಣಿ ಅವಾತ್ಸೀತ್ ॥ ಏಕದಾ ಸಮಿತ್ ಕುಶಾನ ಯನೇ ನಿಯುಕ್ತೌ ಗುರುಣಾ ಆಟವೀಂ ಯಯೌ ॥ ತತ್ರ ತಾವತ್ ಗಗನ ಚುಂಬಿನಂ ಅಶ್ವತ್ಥಂ ಅದ್ರಾಕ್ಷೀತ್ ॥ ತಸ್ಮಾತ್ ಸುಪ್ತ ಬ್ರಹ್ಮರಾಕ್ಷಸಾಃ ಸಮಾಪೇತುಃ ॥ ದೃಷ್ಟ್ವಾ ಪ್ರಾಚೀಂ ದದ್ರುವೇ ॥ ಅನುಜಗ್ಮುಃ ತೇ ॥ ತತಃ ಮಾರ್ಗರೋಧೇ ದಕ್ಷಿಣಾಂ ಆಶಾಂ ಜಗಾಮ ॥ ತತ್ರ ವಟಾತ್ ಸಪ್ತ ಆಪೇತುಃ ॥ ತತಃ ಪ್ರತೀಚೀ ಪಲಾಯನೇ ಯೋಜನಾಯಾಮಶಾಲ್ಮಲೀತಃ ಆಗತ ಸಪ್ತಕೂಷ್ಮಾಂಡಭೀತಃ ಸಪ್ತಡಾಕಿನೀವಶಂ ಪ್ರಪೇದೇ ॥ ತತಃ

ಉದೀಚ್ಯಾಂ ॥ ತತ್ರ ವೃಕ್ಷಾತ್ ವಾಮಗತಾ ತತಃ ಈಶಾನ್ಯಾಂ ಶಾಕಿನೀಸ್ತ್ರಿ-ತ್ರಯಃ ಆಸೇದುಃ ॥ ಆಗ್ನೇಯ್ಯಾಂ ಔದುಂಬರಾತ್ ದ್ವೌ ಆಸೇದಿವಾನ್ ॥ ಸ್ವಂ ಬುಭುಕ್ಷೂನ್ ನಿರೀಕ್ಷ್ಯ ವ್ಯಥಯಾ ಕೃಪಾಲುಂ ಹರಿಂ ಈ(ಪ)ಯಿವಾನ್॥ ಶುಶ್ರುವೇ ಚ ಅಶರೀರವಾಚಮ್ ॥ ಆಕರ್ಣ್ಯ ಚ ನದ್ಯಾಂ ನಿಮಜ್ಯ ಉಕ್ತ-ರೀತ್ಯಾ ನೃಸಿಂಹಮಂತ್ರಂ ಜಜಾಪ ॥ ಸ್ಕಿಂಚಿಕ್ಷಿಪ್ತೇಷು ಮಂತ್ರಿತಾಂಬು ॥ ತತಃ ಅಷ್ಟಾವಿಂಶತಿಗ್ರಹಾಃ ಸ್ವಾಪಸ್ಥಂ ಆಪ್ಯ ಉದ್ಧಾರೇ ಕೃತಾಶೋ-ಚ್ಚಾರಾಃ ವಿಜ್ಞಾಪಯಾಂ ಚಕ್ರಿರೇ ॥ ತತಃ ಪೌರ್ಣಮಾಸ್ನಾನಫಲೇನ ಗೋತ್ರೋಚ್ಚಾರಪೂರ್ವಕಂ ದತ್ತೇನ ಪ್ರಾಕ್ತನಾನ್ ವಿಸೃಜ್ಯ ಅಷ್ಟವಿಂಶತಿ ದಿವ್ಯದೇಹಾಃ ಭೂತ್ವಾ ಉದ್ಧರ್ತ್ರಾ ಸಾಕಂ ಆಯಯುಃ ಶಾಂಡಿಲ್ಯಮ್ ॥ ತಂ ಮಹಾತ್ಮಾನಂ ಪ್ರಪಚ್ಛುಃ ಮುನಿಪುಂಗವಮ್ ॥ ತದ್ವಚಃ ಸ ಸಮಾ-ಕರ್ಣ್ಯ ತಾನ್ ಉವಾಚ ಮಹಾಮುನಿಃ ॥ ಇತಿ ಪ್ರಸಕ್ತಾ ಕಥಾ ॥

'ಮುಕ್ತ' ಇತಿ ॥ ಬ್ರಹ್ಮಾದಿ ಮಾನುಷಾಂತಃ ಚ ಜ್ಞೇಯಃ ತರತಮಃ ಕ್ರಮಾತ್॥ ಜ್ಞಾತೇ ತರತಮೇ ಭಾವೇ ವಿಷ್ಣೋಃ ಮಾಹಾತ್ಮ್ಯಂ ಅಂಜಸಾ॥ ಜ್ಞಾಯತೇ ನಿಖಿಲಂ ವಕ್ತುಂ ತಸ್ಮಾತ್ ಏತತ್ ನಿಶಮ್ಯತಾಮ್ ॥ ಕೋಟಿ ಸೌವರ್ಣವಾಯುಃ ಪುತ್ರದೇಹದಾರ್ಢ್ಯಯುಕ್ತಸ್ಯ ಚ । ಸಪ್ತದ್ವೀಪವತೀಭರ್ತುಃ ಯತ್ ಸುಖಂ ಜಾಯತೇಽತುಲಮ್। ಸ ಏಕಃ ಮಾನುಷಾನಂದಃ ಮೋಕ್ಷೇ ತು ಪ್ರತಿಪದ್ಯತೇ ॥ ತಸ್ಮಾತ್ ಶತಗುಣಾನಂದಃ ಮಹೀಶಾನಾಂ ನಿಗದ್ಯತೇ ॥ ತಸ್ಮಾತ್ ಶತಗುಣಾನಂದಃ ಗಂಧರ್ವಃ ಮಾನುಷಾತ್ಮಕಃ ॥ ತಸ್ಮಾತ್ ಶತಗುಣಾನಂದಃ ಗಂಧರ್ವಃ ದೇವಸಂಜ್ಞಕಃ ॥ ತಸ್ಮಾತ್ ಶತಗುಣಾನಂದಃ ಭವೇತ್ ಪಿತೃಗಣಸ್ಯ ತು॥ ಪಿತೃಭ್ಯಶ್ಚ ಶತಾನಂದಃ ಕರ್ಮಜಾನಾಂ ಇತೀರಿತಮ್ ॥ ಕರ್ಮಜೇಭ್ಯಃ ಶತಾನಂದಾಃ ಪ್ರೋಕ್ತಾಃ ಆಜಾನಜಾಃ ಸುರಾಃ ॥ ಆಜಾನಜೇಭ್ಯಃ ಧನಪ ವಿಷ್ವಕ್ಸೇನ ಗಣಾಧಿಪಾಃ ॥ ಶತಾನಂದಾಃ ತತಃ ತೇಭ್ಯಃ ಋಷಯಃ ತೇಭ್ಯ ಏವ ಚ ॥ ಶತಾನಂದಾಃ ತು ನಿರ್ದಿಷ್ಟಾಃ ಭೃಗುವಹ್ನಿ ಪ್ರಸೂತಯಃ॥ ತೇಭ್ಯಸ್ತು ನಾರದಃ ಹ್ಯಬ್ಧಿಃ ಶತಾನಂದಃ ತಥೈವ ಚ॥ ಚಂದ್ರಸೂರ್ಯೌ ಮಾನವೀ ಚ ಯಮ ಪಾಂಪೂ ತಥೈವ ಚ ॥ ಶತಾನಂದಾಃ ತತಃ ದಕ್ಷಭಿಷಣೌ ಮನುರೇವ ಚ ॥ ರತಿಶ್ಚಾನಿರುದ್ಧಶ್ಚ ಶತಾನಂದಾಃ ತತಃ

ಪರಮ್ ॥ ಶತಾನಂದೌ ಇಂದ್ರಕಾಮೌ ತತಸ್ತೂಮಾ ಚ ವಾರುಣೀ ॥ ಸೌಪರ್ಣೀ ಚ ಶತಾನಂದಾಃ ವೀಂದ್ರಾಹೀಂದ್ರಮೃಡಾಃ ತತಃ ॥ ಶತಾನಂದಾಃ ತತಃ ಬುದ್ಧಿಃ ಗೀಶ್ಚ ತಾಭ್ಯಾಂ ತತಃ ಪರೌ ॥ ವಿಧಿಸೂತ್ರೌ ಶತಾನಂದೌ ಲಕ್ಷ್ಮೀಃ ಕೋಟಿಗುಣಾಧಿಕಾ ॥ ಏತೇಭ್ಯಃ ಭಗವಾನ್ ವಿಷ್ಣುಃ ಅನಂತಗುಣವಾನ್ ವಿಭುಃ ॥" ಇತಿ ॥

ಅಥ ಮುಕ್ತತಾರತಮ್ಯಂ ಭಿನ್ನಪ್ರಕರಣೇ (ಪ್ರಕರಣಾಂತರೇ) 'ವೃಕ್ಷಾದಿ ಜಾತಿಃ ಜೀವಾನಾಂ ಸಾ ನಿತ್ಯೈವ ಯತಸ್ತತಃ ॥ ಮುಕ್ತಿಂ ತೇನೈವ ರೂಪೇಣ ಯಾಂತಿ ತೇ ಕಾಮರೂಪಿಣಃ । ಸಂಸೃತೌ ಅನ್ಯಥಾಭಾವಃ ತೇಷಾಂ ತನುಭೃತಾಂ ಕಿಲ ॥ ತತ್ರ ಸ್ಥಾವರಮುಕ್ತೇಭ್ಯಃ ಪರಾಃ ಜಂಗಮಮುಕ್ತಿಗಾಃ ॥ ತೇಭ್ಯಃ ಮಾನುಷಮುಕ್ತಾಸ್ತು ತೇಭ್ಯಃ ಮುಕ್ತಾಃ ದ್ವಿಜಾಃ ಪರಾಃ ॥ ತತ್ರೋಪದೇಶಕರ್ತಾರಃ ಮುಕ್ತಾಃ ತೇಭ್ಯ ಅಧಿಕಾಃ ಮತಾಃ ॥ ತೇಭ್ಯೋಽಧಿಕಾಸ್ತು ಭೂಪಾಲಾಃ ಮುಕ್ತಿಗಾಃ ಪರಿಕೀರ್ತಿತಾಃ ॥ ಭೂಪೇಭ್ಯಃ ಏತರಃ ಮುಕ್ತಾಹ್ಯಧಿಕಾಃ ತೇಭ್ಯಃ ಏವ ಚ ॥ ಋಷಯಃ ಅಭ್ಯಧಿಕಾಃ ಪ್ರೋಕ್ತಾಃ ತೇಭ್ಯಃ ಪ್ಯೈ ಕರ್ಮಜಾಃ ಪರೇ ॥ ತೇಭ್ಯಃ ಆಜಾನಜಾಃ ದೇವಾಃ ತೇಭ್ಯಃ ಸಪ್ತರ್ಷಯಃ ಪರೇ ॥ ತೇಭ್ಯಃ ವಹ್ನಿಃ ತತಃ ಸೂರ್ಯಃ ತಸ್ಮಾತ್ ವಾಚಸ್ಪತಿಃ ಪರಃ ॥ ತಸ್ಮಾದಿಂದ್ರಃ ಪರಃ ಮುಕ್ತಃ ತಸ್ಮಾತ್ ಗೌರೀ ತತಃ ಹರಃ ॥ ಹರಾತ್ ಬುದ್ಧಿಃ ತತಃ ಬ್ರಹ್ಮಾ ಮುಕ್ತೌ ಜೀವಾಧಿಕೋ ಮತಃ ॥ ಬ್ರಹ್ಮತಃ ಪರಂ ಅವ್ಯಕ್ತಂ ತಸ್ಮಾತ್ ವಿಷ್ಣುಃ ಮಹಾಪ್ರಭುಃ ॥' ಇತಿ ಚ ॥

ಆಜಾನಜಕರ್ಮವಿಷಯೇ ವಿರೋಧೇ ಅಪಿ ತೈತ್ತರೀಯ ಭಾಷ್ಯ ರೀತ್ಯಾ ಯಥಾ ಯೋಗ್ಯಾನ್ವಯ ಇತಿ ತದ್ದೀಪಿಕೋಕ್ತಕ್ರಮಂ ಬ್ರೂತೇ 'ಮುಕ್ತಾಮುಕ್ತ' ಇತಿ ॥ ಆರೋಹಪೂರ್ವಕತ್ವಾತ್ ಅವರೋಹಸ್ಯ ಇತಿ ನಿರೂಪಣತ್ವೇಪಿ ವಿಶೇಷಃ ಉಕ್ತಃ ಕೃಷ್ಣಾಚಾರ್ಯೈಃ ॥

ಯತಃ ಸರ್ವಾಧಿಕತ್ವೇನ ಜ್ಞೇಯಃ ವಿಷ್ಣುಃ ಮುಮುಕ್ಷುಭಿಃ ॥ ಅತಃ ಸರ್ವಂ ನಿರೂಪ್ಯೈವ ಸರ್ವಾಧಿಕ್ಯಂ ಪ್ರಕಾಶ್ಯತೇ ॥

'ಸರ್ವಾನಿಷ್ಟೈಕ ಪಾತ್ರತ್ವಾತ್ ಕಲಿಃ ಸರ್ವಾಧಮಾಧಮಃ || ಯತಃ ಶುಭ ವಿರುದ್ಧೋಽಸೌ ಸ್ವಮೇಧ್ಯಾದಪ್ಯಧೋ ಮತಃ || ತತಃ ಶುಭಫಲಾಲ್ಪತ್ವಾತ್ ದೈತ್ಯಾಃ ತ್ವನ್ಯೇ ತತೋಽಧಿಕಾಃ || ಇಷ್ಟಾನಿಷ್ಟವಿದೂರತ್ವಾತ್ ತತಃ ಶ್ರೇಷ್ಠಂ ಜಡಂ ಮತಮ್ || ಇಷ್ಟಯೋಗಾತ್ ತತಃ ಶ್ರೇಷ್ಠಾಃ ನಿತ್ಯಸಂಸಾರಿಣಾಂ ಗಣಾಃ || ಅನಿಷ್ಟಯೋಗಸ್ಯ ಭಾವಾತ್ (ಸದ್ಭಾವಾತ್) ಮುಕ್ತಿಯೋಗ್ಯಾತ್ ಅಧಸ್ತರಃ || ಮುಕ್ತಿಯೋಗ್ಯಾಃ ತತಃ ಶ್ರೇಷ್ಠಾಃ ಇತಿ ಕಿಂ ವಾಚ್ಯಂ ಅಂಜಸಾ|| ಪೂರ್ಣಾಭಿಲಷಿತೇಷ್ಟತ್ವಾತ್ ಅನಿಷ್ಟಾಪ್ತಿವಿದೂರತಃ ಮೋಕ್ಷಯೋಗ್ಯೇಷು ಜೀವೇಷು ತೃಣಜೀವೋಽಂತ್ಯ ಇತಿ ಇಷ್ಯತೇ ||' ಇತಿ || ಅತ ಆಹ 'ಸ್ಥಾವರರ' ಇತಿ || ಸ್ಥಾವರಂ ಜಡಮ್ || 'ತತಃ ವೃಕ್ಷಾಃ ತತಃ ಲತಾಃ' ಇತಿ || 'ತತ ವೃಕ್ಷಾದಯಃ ಶ್ರೇಷ್ಠಾಃ ಸ್ಥಾವರಾಃ ನಿಜ ತಾಪತಃ ||' ಇತ್ಯುಕ್ತೇಃ || ತತ ಜಂಗಮಜೀವಾಸ್ತು ಶ್ರೇಷ್ಠಾಃ । ಪಶ್ವಾದಯಃ ಮತಾಃ || 'ಗಳಿಂದ' ಇತ್ಯತ್ರ 'ಗಳು' 'ಇವುಗಳಿಂದ' ಇತಿ ವಿವೇಕೇನ ಯೋಜ್ಯಮ್ || 'ಮನುಜರು' 'ಶೂದ್ರ ವೈಶ್ಯ ಕ್ಷತ್ರಿಯಾ' ಇತಿ ಉತ್ತರಕ್ರಮಾತ್ ಪರಸ್ಪರಮ್ || ತತಃ ಶ್ರೇಷ್ಠಾಃ ವರ್ಣಬಾಹ್ಯಾಃ ತತಃ ಶ್ರೇಷ್ಠಾಃ ನರೋತ್ತಮಾಃ || ವರ್ಣಾಶ್ರಮ ವಿಭೇದೇನ ತೇ ಸರ್ವೇಽಪಿ ಚತುರ್ವಿಧಾಃ || ಇತಿ || ತತ್ರಾಪಿ ವಿಶೇಷಂ ಅಭ್ಯುಪೇತ್ಯ ಅತ್ರಾಪಿ ವೈಲಕ್ಷಣ್ಯಂ ಅಭ್ಯುಪೈತಿ || ಶೂದ್ರೇಭ್ಯಃ ವೈಶ್ಯಜೀವಾಸ್ತು ಶ್ರೇಷ್ಠಾಃ ತೇಭ್ಯ ತಥೋತ್ತಮಾಃ || ಕ್ಷತ್ರಜೀವಾಃ ತತಃ ಶ್ರೇಷ್ಠಾಃ ಬ್ರಾಹ್ಮಣಾಃ ಪರಿಕೀರ್ತಿತಾಃ || 'ಉತ್ತಮ' ಇವರಿಂದ|| 'ನ ತಾದೃಶೀ(ಶಃ) ಸ್ಯಾತ್ ಇತ್ಯುಕ್ತೇಃ ಆಹ-'ಕೋವಿದ' ಇತಿ || 'ಉತ್ತಮಾಃ ಶತಗುಣೈಃ || ಏತೇಭ್ಯಃ ನೃಪರೇಭ್ಯಸ್ತು ಭೂಪಾಃ ಶತಗುಣೋತ್ತಮಾಃ ||' ಇತಿ ||

**ಕನ್ನಡಾರ್ಥ -**

ತಾರತಮ್ಯಜ್ಞಾನವು ಮೋಕ್ಷದ ಅಂತರಂಗ ಸಾಧನವಾಗಿರುತ್ತದೆ. ಅದು ವಿಚಾರದಿಂದ ಬರುತ್ತದೆ. ತಾರತಮ್ಯವಿಚಾರದಿಂದ ಇದು ಇಂಥದು, ಇದರ ಯೋಗ್ಯತೆಯು ಇಷ್ಟು ಎಂಬ ಜ್ಞಾನವು. ಹೀಗೆ ಖಚಿತವಾದ ಯೋಗ್ಯಸ್ವರೂಪದ ಜ್ಞಾನವು ಬರಬೇಕಾದರೆ ಆ ಬಗ್ಗೆ ಇರುವ ಸಂಶಯುಗಳು ನಿರಾಸವಾಗಬೇಕು. ಮತ್ತು ಬಹಳ ಮತಗಳ ಜ್ಞಾನವಿದ್ದು, ಯುಕ್ತಾಯುಕ್ತ ವಿಚಾರ

ಪಾದನಂತರ ಆ ಸಂಶಯಗಳು ಅಳಿಯುವುವು. ಹಾಗೂ ತಾರತಮ್ಯಜ್ಞಾನವು ನಿಶ್ಚಯವಾಗಿ ಹುಟ್ಟಿ ದೃಢವಾಗುತ್ತದೆ. ಆದುದರಿಂದ ತಾರತಮ್ಯದ ಬಗ್ಗೆ ದೃಢನಿಶ್ಚಯರೂಪವಾದ ಜ್ಞಾನವು ಅಧಿಕಾರಿಗಳಿಗೆ ಉದಯವಾಗಬೇಕೆಂಬ ಉದ್ದೇಶದಿಂದ ಶ್ರೀಮದಾಚಾರ್ಯರು, 'ಗುರುಗಳು ಯೋಗ್ಯ ಶಿಷ್ಯನಿಗೆ ವೇದಾದಿಶಾಸ್ತ್ರಗಳನ್ನು ನಾಲ್ಕುಸಲ ಅಥವಾ ಅವರ ಯೋಗ್ಯತೆಗೆ ತಕ್ಕಂತೆ ಒಂದು ಸಲವಾದರೂ ಉಪದೇಶಿಸಬೇಕು' ಎಂದು ಹೇಳಿರುವುದನ್ನು ಅನುಸರಿಸಿ, ಈ ಸಂಧಿಯನ್ನು ಶ್ರೀಪೂಜ್ಯರಲ್ಲಿ ಶ್ರೇಷ್ಠರಾದ ಶ್ರೀದಾಸರಾಯರು ಪ್ರಾರಂಭಿಸಿರುತ್ತಾರೆ, 'ಹರಿ' ಎಂಬ ಪಲ್ಲವಿಯಿಂದ. ಸುಜನರಂಜನರೂ, ಪಾಪರಹಿತರೂ ಆದ ಕೃಷ್ಣ-ಬಲರಾಮರು ಸುಸ್ನೇಹಮಯ ಅಂತಃಕರಣದಿಂದ ಒಮ್ಮನಸ್ಸಿನವರಾಗಿ ಗೋಮಂತಪರ್ವತವನ್ನು ಆರೋಹಣಮಾಡಿ (ಹತ್ತಿ) ಮೆರೆಯುತ್ತಿರುವರು. ಶ್ರೀಶಾಂಡಿಲ್ಯ ದಿವ್ಯಪುರುಷ ಸಂವಾದದಲ್ಲಿರುವ ರಹಸ್ಯವಿಷಯಗಳನ್ನು ಅನುವಾದಿಸುವ ಅವರ ಅಭಿಪ್ರಾಯವೂ ಅಧುನಿಕರಾದ ಶ್ರೀಕೃಷ್ಣದಾಸರ ಅಭಿಪ್ರಾಯವು ಸಮಾನವಿಷಯಕವಾಗಿರುತ್ತದೆ. ಭಿನ್ನಾಭಿಪ್ರಾಯವು ಅವರಲ್ಲಿ ಇರುವುದಿಲ್ಲ. ಒಮ್ಮತದಿಂದ ಉಭಯ ಮತಗಳು ತಾರತಮ್ಯಪರ್ವತವನ್ನು ಆರೋಹಣ ಮಾಡಿ ಮೆರೆಯುವುವು. ಅಂದರೆ ಶ್ರೀಕೃಷ್ಣ-ಬಲರಾಮರಲ್ಲಿ ಗೋಮಂತವನ್ನು ಆರೋಹಿಸಿದಾಗ ಒಮ್ಮನಸ್ಸಿನ ಅನುರಾಗಭಾವವಿದ್ದಂತೆ ಉಭಯ ಗ್ರಂಥಗಳಲ್ಲಿ ಸಹೈಕಮತ್ಯ-ಸೌಹಾರ್ದವಿರುವುದು ಒಂದು ಭಾವ. ಈ ಸಂಧಿಯಲ್ಲಿ ಈ ಸೌಹಾರ್ದವನ್ನು ನೋಡಬಹುದು.

ಈ ದಿವ್ಯಪುರುಷರು ಯಾರು ? ದೇವತಾಸ್ವಭಾವವು ಪ್ರಾದುರ್ಭಾವವಾಗುವ ಪೂರ್ವದಲ್ಲಿ ಅವರಿಗೆ ಇದ್ದ ಅವಸ್ಥೆಯು ಯಾವುದು ? ಮುಂದೆ ಆ ಅವಸ್ಥೆಯು ಬಂದುದು ಹೇಗೆ ? ಭಗವಾನ್ ಶಾಂಡಿಲ್ಯಮುನಿಗಳ ಆಗಮವು ಹೇಗೆ ಆಯಿತು ? ಈ ಸಂಶಯಗಳು ಉದಯಿಸುವುವು. ಆದುದರಿಂದ ಇವುಗಳನ್ನು ನಿವಾರಿಸಲು ವಾಯುಪುರಾಣದ ಮಾಘಮಾಸಮಾಹಾತ್ಮ್ಯದಲ್ಲಿರುವ ಒಂಭತ್ತನೆಯ ಅಧ್ಯಾಯದ ಕೊನೆಯಲ್ಲಿರುವ ಈ ಸಂವಾದದ ಸಾರಾಂಶವನ್ನು ಸ್ವಲ್ಪಮಟ್ಟಿಗೆ ತೋರಿಸುತ್ತೇವೆ.

'ಮಾಘಮಾಸದಲ್ಲಿ ಜಲಸ್ಪರ್ಶದಿಂದ ಪಾಪಗಳನ್ನು ಕಳೆದುಕೊಂಡು ಮುಕ್ತರಾಗುತ್ತಾರೆ. ಇದರಲ್ಲಿ ಇಪ್ಪತ್ತೆಂಟು ಪಿಶಾಚಗಳು ದೃಷ್ಟಾಂತವಾಗಿರುತ್ತವೆ' ಎಂದು ಪ್ರಸಕ್ತವಾಗಲು, ನಂತರ ನಾರದರು ಮತ್ತೆ ಪ್ರಶ್ನೆಯನ್ನು ಮಾಡಲು, ಬ್ರಹ್ಮದೇವರು ಅದೆಲ್ಲವನ್ನೂ ಉತ್ತರಿಸುತ್ತಾರೆ. ಅದರ ಸಾರಾಂಶ -

ಪೂರ್ವದಲ್ಲಿ ಚಾಕ್ಷುಷಮನ್ವಂತರದ ದ್ವಾಪರಯುಗದ ಆದಿಭಾಗದಲ್ಲಿ ವಿಶಾಲಾ (ಬದರಿ) ಕ್ಷೇತ್ರದಲ್ಲಿರುವ ನಾರಾಯಣಾಶ್ರಮದಲ್ಲಿ 'ಸುಮಜ್ಞ' ಎಂಬ ಹೆಸರಿನ ಎಂಟುವರ್ಷದ ಒಳ್ಳೆಯ ಮನಸ್ಸಿನ ಬಾಲಕನಿದ್ದನು. ಅವನು ಜಾಬಾಲಿಯ ಮಗನು. ಅವನು ಅಲ್ಲಿ ಇರುವ ಶಾಂಡಿಲ್ಯಮುನಿಗಳ ಬಳಿಗೆ ಓದಲು ಬಂದನು. ಗುರುಸೇವೆಯೊಂದಿಗೆ ಶಾಸ್ತ್ರಾಭ್ಯಾಸಂಗವನ್ನು ಮಾಡುತ್ತಾ ಹತ್ತುವರ್ಷಗಳವರೆಗೆ ಇರುವಾಗ ಒಂದು ದಿವಸ ಗುರುಗಳ ಅಪ್ಪಣೆಯ ಮೇರೆಗೆ ಸಮಿಧೆ, ದರ್ಭೆ ಮುಂತಾದವುಗಳನ್ನು ತರಲು ಅಡವಿಗೆ ಹೋಗಿದ್ದನು. ಆ ಅಡವಿಯಲ್ಲಿ ಮುಗಿಲನ್ನು ಮುಟ್ಟುವ ಅತ್ಯುನ್ನತವಾದ ಅಶ್ವತ್ಥ (ಅರಳಿಯ) ಮರವನ್ನು ಅವನು ಕಂಡನು. ಕೂಡಲೇ ಆ ಮರದಿಂದ ಏಳು ಬ್ರಹ್ಮರಾಕ್ಷಸಗಳು ಹೊರಬಿದ್ದವು. ಅವುಗಳನ್ನು ನೋಡಿದೊಡನೆಯೇ ಆ ಬಾಲಕನು (ಸುಮಜ್ಞನು) ಪೂರ್ವದಿಕ್ಕಿಗೆ ಓಡತೊಡಗಿದನು. ಬ್ರಹ್ಮರಾಕ್ಷಸಗಳು ಅವನನ್ನು ಬೆನ್ನಟ್ಟಿ ಮಾರ್ಗವನ್ನು ನಿರೋಧಿಸಿದವು. ಆಗ ಅವನು ದಕ್ಷಿಣ ದಿಕ್ಕಿಗೆ ಧಾವಿಸಿದನು. ಆಗ ಅಲ್ಲಿರುವ ಆಲದಮರದ ದೆಶೆಯಿಂದ ಮತ್ತೆ ಏಳು ರಾಕ್ಷಸಗಳು ಅವನಿಗೆ ಎದುರು ಬಂದು ಭಯಗೊಳಿಸಿದವು. ನಂತರ ಬಾಲಕನು ಪಶ್ಚಿಮ ದಿಕ್ಕಿಗೆ ಓಡುತ್ತಿರುವಾಗ ಯೋಜನಾಯಾಮವಾದ (ಅಷ್ಟು ದಪ್ಪ ಹಾಗೂ ಉನ್ನತ) ಶಾಲ್ಮಲೀಮರದಿಂದ ಏಳು ಕೂಷ್ಮಾಂಡ ಪಿಶಾಚಿಗಳಿಂದ ಹೆದರಿದನು. ಹಾಗೂ ಏಳು ಡಾಕಿನಿ ಎಂಬ ಪಿಶಾಚಿಗಳ ಕೈಯಲ್ಲಿ ಸಿಕ್ಕಿಬಿದ್ದನು. ಉತ್ತರದಿಕ್ಕಿನಲ್ಲಿ ೨, ಈಶಾನ್ಯದಲ್ಲಿ ೩, ಔದುಂಬರ ಗಿಡದಿಂದ ಆಗ್ನೇಯದಲ್ಲಿ ೨, ಹೀಗೆ ಏಳು ಶಾಕಿನೀ ಪಿಶಾಚಗಳ ಕೈಯಲ್ಲಿ ಸಿಕ್ಕಿಬಿದ್ದನು. ಹೀಗೆ ೨೮ ರಾಕ್ಷಸಗಳು ತನ್ನನ್ನು ತಿನ್ನುವವೆಂಬ ಭೀತಿಯಿಂದ ಆ ಬಾಲಕನು ಶ್ರೀಹರಿಯನ್ನು ಮೊರೆಹೊಕ್ಕು ಭಕ್ತಿಯಿಂದ ಸ್ತುತಿಸಿದನು. ಆಗ

ಆಕಾಶವಾಣಿಯಾಯಿತು. ಅದನ್ನು ಕೇಳಿ, ಅದರಂತೆ ನದಿಯಲ್ಲಿ ಸ್ನಾನಮಾಡಿ, ಉಪದೇಶಾನುಸಾರವಾಗಿ, ಶ್ರೀನೃಸಿಂಹಮಂತ್ರವನ್ನು ಜಪಿಸಿ, ಆ ಜಪಾಭಿ ಮಂತ್ರಿತವಾದ ಉದಕವನ್ನು ಅವುಗಳಿಗೆ ಸಿಂಪಡಿಸಿದನು. ಕೂಡಲೇ ಆ ೨೮ ಗ್ರಹಗಳು ತಮ್ಮ ನಿಜವಾದ ಸ್ಥಿತಿಯನ್ನು ಹೊಂದಿ, ತಮ್ಮ ತಮ್ಮ ಹೆಸರು ಮುಂತಾದವುಗಳನ್ನು ಹೇಳಿ, ಉದ್ಧಾರಮಾಡಬೇಕೆಂದು ಆ ಬಾಲಕನನ್ನು ಬೇಡಿಕೊಂಡವು. ಆಗ ಪೌರ್ಣಮಿಯ ಸ್ನಾನದ ಫಲವನ್ನು ಅವುಗಳಿಗೆ, ಗೋತ್ರ ಮುಂತಾದವುಗಳ ಉಚ್ಚಾರಪೂರ್ವಕವಾಗಿ ಕೊಟ್ಟನು. ಆಗ ಆ ಫಲ ದಿಂದ ಅವರು ಹಿಂದಿನ ಪಿಶಾಚದೇಹಗಳನ್ನು ಕಳೆದುಕೊಂಡು, ದೇವಶರೀರ ಗಳನ್ನು ಧರಿಸಿ, ಆ ಬಾಲಕನೊಡನೆ ಶಾಂಡಿಲ್ಯಮುನಿಗಳ ಬಳಿಗೆ ಬಂದರು. ಮತ್ತೆ ಅವರನ್ನು ಕೆಲವು ಪ್ರಶ್ನೆಗಳನ್ನು ಕೇಳಿದರು. ಆಗ ಶಾಂಡಿಲ್ಯಮುನಿಗಳು ಅವರಿಗೆ ಹೇಳಲು ಉಪಕ್ರಮಿಸಿದರು, ಇದು ಪೂರ್ವದಲ್ಲಿ ನಡೆದ ಕಥಾಸಂದರ್ಭ.

ಮುಕ್ತಾಮುಕ್ತ ತಾರತಮ್ಯಜ್ಞಾನದ ವಿಷಯದಲ್ಲಿ ಪ್ರಮಾಣಗಳನ್ನು ಉದಾಹರಿಸುತ್ತಾರೆ.

ಬ್ರಹ್ಮದೇವರನ್ನಾರಂಭಿಸಿ ಮಾನುಷರವರೆಗೆ ಇರುವ ತರತಮ ಭಾವ ವನ್ನು ಕ್ರಮದಿಂದ ತಿಳಿದುಕೊಳ್ಳಬೇಕು. ತರತಮಭಾವವನ್ನು ತಿಳಿದುಕೊಂಡ ನಂತರ ವಿಷ್ಣುವಿನ ಸರ್ವೋತ್ತಮತ್ವವನ್ನು ತಿಳಿದುಕೊಳ್ಳುತ್ತಾನೆ. ಆದುದರಿಂದ ತಾರತಮ್ಯವನ್ನು ಹೇಳಲು ಉಪಕ್ರಮಿಸುತ್ತೇವೆ. ಇದನ್ನು ಶ್ರವಣಮಾಡ ಬೇಕು. ಧನ, ಸಂಪತ್ತು, ಕೋಶ, ಶೌರ್ಯ, ವಯಸ್ಸು, ಮಕ್ಕಳು, ದೇಹದಾರ್ಢ್ಯ ಮುಂತಾದ ಭೋಗಸಾಮಗ್ರಿ ಸಂಪನ್ನವಾದ ಸಪ್ತದ್ವೀಪ ಸಹಿತ ಭೂಮಿಯ ಸಾರ್ವಭೌಮ ಚಕ್ರವರ್ತಿಗೆ ಆಗುವ ಅಪರಿಮಿತ ಆನಂದಕ್ಕೆ, ಮುಕ್ತಿಯಲ್ಲಿಯ ಮಾನುಷರ ಒಂದು ಆನಂದವು ಸಮಾನವಾಗಿರುತ್ತದೆ. ಈ ಮುಕ್ತಿಯಲ್ಲಿರುವ ಮಾನುಷರ ಒಂದುನೂರು ಆನಂದಗಳಿಗೆ ಮಹೀಶರ (ರಾಜರ) ಒಂದು ಆನಂದವು ಸಮವಿರುತ್ತದೆ. ಅವರ ನೂರು ಆನಂದಗಳಿಗೆ ಮನುಷ್ಯ ಗಂಧರ್ವರ ಒಂದು ಆನಂದವು ಸಮವಿರುತ್ತದೆ. ಮನುಷ್ಯ ಗಂಧರ್ವರ ನೂರು ಆನಂದಗಳಿಗೆ ದೇವ ಗಂಧರ್ವರ ಒಂದು ಆನಂದವು ಸರಿ ಇರುತ್ತದೆ. ದೇವ ಗಂಧರ್ವರು

ನೂರು ಆನಂದಗಳಿಗೆ ಚಿತ್ರಗಣದ ಒಂದು ಆನಂದವು ಸರಿಯಿರುತ್ತದೆ. ಚಿತ್ರಗಣದ ನೂರು ಆನಂದಗಳಿಗೆ ಆಜಾನಜದೇವತೆಗಳ ಆನಂದವು ಸರಿಯಿರುತ್ತದೆ.

ಆಜಾನಜ ದೇವತೆಗಳ ನೂರು ಆನಂದಗಳಿಗೆ ಕುಬೇರ, ವಿಷ್ವಕ್ಸೇನ ವಿಘ್ನೇಶ (ಗಣೇಶ)ರುಗಳ ಒಂದು ಆನಂದವು ಸರಿಯಿರುತ್ತದೆ. ಇವರ ನೂರು ಆನಂದಗಳಿಗೆ ಋಷಿಗಳ ಒಂದು ಆನಂದವು ಸರಿಯಿರುತ್ತದೆ. ಋಷಿಗಳ ನೂರು ಆನಂದಗಳಿಗೆ ಭೃಗು-ಅಗ್ನಿ ಪ್ರಸೂತಿಗಳ ಒಂದು ಆನಂದವು ಸರಿಯಿರುತ್ತದೆ. ಇವರ ನೂರು ಆನಂದಗಳಿಗೆ ನಾರದ, ವರುಣ, ಚಂದ್ರ, ಸೂರ್ಯ, ಮಾನವಿ (ಶತರೂಪಾ) ಇವರುಗಳ ಒಂದು ಆನಂದವು ಸರಿ. ಇವರ ಆನಂದಗಳ ನೂರು ಪಟ್ಟು ಅಧಿಕ ಆನಂದವು ದಕ್ಷ, ಬೃಹಸ್ಪತಿ, ಸ್ವಾಯಂಭುವಮನು, ರತಿ, ಪ್ರ, ಅನಿರುದ್ಧ ಇವರಿಗೆ ಇರುತ್ತದೆ. ಇವರ ನೂರು ಪಟ್ಟು ಅಧಿಕ ಆನಂದವುಳ್ಳವರು ಇಂದ್ರಕಾಮರು. ಇಂದ್ರಕಾಮರುಗಳಿಂದ ನೂರು ಪಟ್ಟು ಆನಂದವುಳ್ಳವರು ಉಮಾ, ವಾರುಣೀ, ಸೌಪರ್ಣೀದೇವಿಯರುಗಳು. ಇವರಿಂದ ನೂರುಮಡಿ ಅಧಿಕ ಆನಂದವುಳ್ಳವರು ಗರುಡ ಶೇಷ ರುದ್ರರು. ಇವರಿಂದ ನೂರು ಪಟ್ಟು ಆನಂದವುಳ್ಳವರು ಭಾರತೀ, ಸರಸ್ವತೀ ದೇವಿಯರು. ಅವರಿಗಿಂತ ನೂರುಮಡಿ ಅಧಿಕಾನಂದವುಳ್ಳವರು ಬ್ರಹ್ಮ - ವಾಯುದೇವರುಗಳು. ಬ್ರಹ್ಮ-ವಾಯುಗಳಿಂದ ಕೋಟಿಗುಣಗಳಿಂದ ಅಧಿಕಾನಂದವುಳ್ಳವರು ಶ್ರೀಮಹಾಲಕ್ಷ್ಮೀದೇವಿಯರು. ಇವರೆಲ್ಲರಿಗಿಂತಲೂ ಅನಂತಾನಂತ ನಿರವಧಿಕ ಗುಣಗಳಿಂದ ಅಧಿಕಾಧಿಕತಮನು ಶ್ರೀಹರಿಯು ಎಂದು ಮುಕ್ತತಾರತಮ್ಯದಲ್ಲಿ ಪ್ರಮಾಣವಿರುತ್ತದೆ.

ಮತ್ತೊಂದು ಪ್ರಕರಣದಲ್ಲಿಯೂ ಮುಕ್ತತಾರತಮ್ಯವನ್ನು ಹೀಗೆ ನಿರೂಪಿಸಿರುತ್ತಾರೆ-

ಜೀವರಿಗೆ ವೃಕ್ಷ ಮುಂತಾದ ಸ್ವಭಾವ ಸ್ವರೂಪ ಜಾತಿಗಳು ನಿತ್ಯವಾಗಿರುವುದರಿಂದ ಆ ಸ್ವರೂಪಜಾತಿಗಳಿಂದ ಸಹಿತವಾಗಿಯೇ ಕಾಮರೂಪಿಗಳಾದರು ಮುಕ್ತಿಯನ್ನು ಹೊಂದುತ್ತಾರೆ. ಯಾಕೆಂದರೆ ಸಂಸಾರಾವಸ್ಥೆಯಲ್ಲಿ ಅವರ ಅನ್ಯಥಾರೂಪವು ಬಂದಿರುತ್ತದೆ. ಹೀಗಿರುವಾಗ ಸ್ಥಾವರಮುಕ್ತರಿಗಿಂ ಜಂಗಮ (ಸಂಚಾರವುಳ್ಳ) ಮುಕ್ತರು ಶ್ರೇಷ್ಠರು, ಅವರಿಂದ ಮುಕ್ತಮನುಷ್

ಜೀವರು ಶ್ರೇಷ್ಠರು. ಇವರಿಂದ ಮುಕ್ತದ್ವಿಜರು ಶ್ರೇಷ್ಠರು. ಅವರಲ್ಲಿ ಮುಕ್ತರಾದ ತತ್ತ್ವೋಪದೇಶಕರು (ಬ್ರಾಹ್ಮಣರು) ಶ್ರೇಷ್ಠರು. ಇವರಿಗಿಂತ ಮುಕ್ತ, ರಾಜಗಣ ಜೀವರು ಶ್ರೇಷ್ಠರು. ಮುಕ್ತರಾಜರಿಂದ ಮುಕ್ತಪಿತೃಗಳು ಶ್ರೇಷ್ಠರು. ಅವರಿಂದ ಋಷಿಗಳು ಶ್ರೇಷ್ಠರು. ಅವರಿಂದ ಆಜಾನಜದೇವತೆಗಳು ಶ್ರೇಷ್ಠರು. ಅವರಿಂದ ಸಪ್ತರ್ಷಿಗಳು ಶ್ರೇಷ್ಠರು. ಅವರಿಗಿಂತ ಅಗ್ನಿ, ಅಗ್ನಿಗಿಂತ ಸೂರ್ಯ ಸೂರ್ಯನಿಂದ ಬೃಹಸ್ಪತಿ ಶ್ರೇಷ್ಠ, ಬೃಹಸ್ಪತಿಯಿಂದ ಮುಕ್ತ ಇಂದ್ರ. ಮುಕ್ತ ಇಂದ್ರನಿಂದ ಮುಕ್ತ ಗೌರೀ, ಮುಕ್ತ ಗೌರಿಯಿಂದ ಮುಕ್ತ ಹರ. ಮುಕ್ತಹರನಿಂದ ಮುಕ್ತ ಸರಸ್ವತೀ. ಮುಕ್ತ ಸರಸ್ವತಿಯಿಂದ ಮುಕ್ತ ಚತುರ್ಮುಖನು ಶ್ರೇಷ್ಠನು. ಬ್ರಹ್ಮನಿಂದ ನಿತ್ಯಮುಕ್ತಳಾದ ರಮಾದೇವಿಯು ಶ್ರೇಷ್ಠಳು. ನಿತ್ಯ ಮುಕ್ತಳಾದ ರಮಾದೇವಿಗಿಂತ ಶ್ರೀಮಹಾನಾರಾಯಣನು ಅತ್ಯಂತ ಅಪರಿಮಿತ ಮಿಗಿಲೆನಿಸಿದವನು ಎಂದು.

'ಆಜಾನಜ. ಕರ್ಮದೇವತೆಗಳ ವಿಷಯದಲ್ಲಿ ತುಸು ವಿರೋಧವು ತೋರಿ ಬರುತ್ತಿದ್ದರೂ, ಅದನ್ನು ತೈತ್ತರೀಯ ಭಾಷ್ಯದಲ್ಲಿ ಹೇಳಿದಂತೆ ಯಥಾ ಯೋಗ್ಯವಾಗಿ ಅನ್ವಯಿಸಿ ಪರಿಹರಿಸಬೇಕು' ಎಂದು ದೀಪಿಕೆಯಲ್ಲಿ ಹೇಳಿದ ಕ್ರಮವನ್ನು ಹೇಳುತ್ತಾ 'ಮುಕ್ತಾಮುಕ್ತ' ಎಂಬುದಾಗಿ.

'ಆರೋಹಣದ ಮೊದಲು ಅವರೋಹಣ' ಹೀಗೆ ಇರುವುದರಿಂದ ನಿರೂಪಣಾಕ್ರಮವಿದ್ದರೂ, ಕೃಷ್ಣಾಚಾರ್ಯರು, ವಿಶೇಷವನ್ನು ಇಲ್ಲಿ ನಿರೂಪಿಸುತ್ತಾರೆ.

ಮುಮುಕ್ಷುಗಳು 'ಸರ್ವರಿಂದಲೂ ಅತ್ಯಂತ ಅಧಿಕನು. ನಾರಾಯಣನು ಎಂದು ತಿಳಿಯಲೇಬೇಕು. ಆದುದರಿಂದ ಕೆಳಗಿನವರನ್ನಾರಂಭಿಸಿ, ಮೇಲೆ ಮೇಲಿನವರನ್ನು ನಿರೂಪಿಸಿ, ಕೊಟ್ಟಕೊನೆಗೆ ವಿಷ್ಣುವನ್ನು ನಿರೂಪಿಸಿದರೆ ಶ್ರೀವಿಷ್ಣುವಿಗೆ ಸರ್ವೋತ್ತಮತ್ವವು.

ಕಲಿಯು ಸಕಲ ಅನಿಷ್ಟ (ದುಃಖ)ಗಳಿಗೆ ಮುಖ್ಯಪಾತ್ರನಾದುದರಿಂದ ಎಲ್ಲರಿಂದಲೂ ಅತ್ಯಂತ ಅಧಮಾಧಮನು. ಯಾಕೆಂದರೆ ಶುಭಫಲದಿಂದ ಸ್ವಭಾವದಿಂದಲೇ ಅವನಿಗೆ ವಿರೋಧವಿರುತ್ತದೆ. ಮತ್ತು ಅವನು ತನ್ನ ಪುರೀಷಕ್ಕಿಂತಲೂ ಅಧಮನು ಎಂದು ಪ್ರಮಾಣ ಪ್ರಸಿದ್ಧಿಯಿರುತ್ತದೆ. ಅಶುಭ

ಫಲವು ಸ್ವಲ್ಪ ಇರುವುದರಿಂದ ಮಿಕ್ಕ ದೈತ್ಯರು ಅವನಿಗಿಂತ ಅಧಿಕರು. ಇಷ್ಟ, ಅನಿಷ್ಟಗಳೆರಡೂ ಇಲ್ಲದಿರುವುದರಿಂದ ಜಡಗಳು ಈ ಕಲಿ ಮುಂತಾದ ದೈತ್ಯ ಜೀವರಿಗಿಂತ ಶ್ರೇಷ್ಠರು. ನಿತ್ಯಸಂಸಾರಿಗಳಿಗೆ ಮಿಶ್ರಸುಖವೆಂಬ ಇಷ್ಟವೂ ಇರುವುದರಿಂದ ಅವರು ಜಡಗಳಿಗಿಂತ ಅಧಿಕರು. ಆದರೆ ನಿತ್ಯಸಂಸಾರವೆಂಬ ಅನಿಷ್ಟವಿರುವುದರಿಂದ ಅವರು ಮುಕ್ತಿಯೋಗ್ಯ ಸುಜೀವರಿಗಿಂತ ಕಡಿಮೆಯವರು. ನಿತ್ಯಸಂಸಾರಿಗಳಿಗಿಂತ ಮುಕ್ತಿಯೋಗ್ಯರು ಅಧಿಕರು ಎಂದು ಬೇರೆ ಹೇಳುವ ಕಾರಣವಿಲ್ಲ. ಮುಕ್ತಿಯೋಗ್ಯರಿಗೆ ಮುಕ್ತಿಯಲ್ಲಿ ಇಷ್ಟಪ್ರಾಪ್ತಿಯೂ, ಅನಿಷ್ಟನಿವೃತ್ತಿಯೂ ಆಗುತ್ತದೆ.

ಮುಕ್ತಿಯೋಗ್ಯಜೀವರಲ್ಲಿ ತೃಣಜೀವರು ಅತ್ಯಂತ ಕಡಿಮೆಯವರು ಎಂದು ಹೇಳಲಾಗಿರುತ್ತದೆ.

ಈ ವಚನಗಳಿಗೆ ಅನುಸಾರವಾಗಿ ತಾರತಮ್ಯವನ್ನು ಆರೋಹಣ ಕ್ರಮದಿಂದ ನಿರೂಪಿಸಿರುತ್ತಾರೆ, ಸ್ಥಾವರ ಎಂಬ ಪದ್ಯದಿಂದ.

ಸ್ಥಾವರರು ನಿಂತಲ್ಲಿಯೇ ನಿಂತಿರುವುದರಿಂದ ಅವರಿಗೆ ಸುಖಪ್ರಾಪ್ತಿಯು ಕಡಿಮೆ. ಹಾಗೂ ಸಂಸಾರದಲ್ಲಿ ದುಃಖವು ಹೆಚ್ಚಾಗುವುದರಿಂದ ಅವರು ಕಡಿಮೆಯವರು ಎಂಬ ಪ್ರಮಾಣಗಳಿಗನುಸಾರವಾಗಿ 'ಸ್ಥಾವರರ' ಎಂಬುದಾಗಿ ಹೇಳಿರುತ್ತಾರೆ.

ಅವರಿಗಿಂತ ಪಶು ಮುಂತಾದ ಚರಜೀವರು ಶ್ರೇಷ್ಠರು. ಎಂಬ ವಚನಾನುಸಾರವಾಗಿ 'ಅವಿಗೋಗಜ' ಎಂದು ಹೇಳಿದ್ದಾರೆ. ಸಿಂಹಗಳು, ಸಿಂಹಗಳಿಂದ ಹೀಗೆ ಬೇರೆ ಬೇರೆಯಾಗಿ ಒಡೆದು ಪದಗಳನ್ನು ಅನ್ವಯಿಸಬೇಕು. ಮೂವರು ಎಂದರೆ, ಶೂದ್ರ, ವೈಶ್ಯ, ಕ್ಷತ್ರಿಯರು ಎಂದು ಅರ್ಥವನ್ನು ಹಿಂದೆ ಹೇಳಿದಂತೆ ತಿಳಿಯಬೇಕು. ವರ್ಣಬಾಹ್ಯರು ಪಶ್ವಾದಿಗಳಿಂದ ಅಧಿಕರು. ಅವರಿಂದ ಕಾರ್ಮಿಕರಾದ, ವರ್ಣಗಳಾದ ಶೂದ್ರ ಮುಂತಾದವರು ಕ್ರಮದಿಂದ ಅಧಿಕರಾಗಿರುತ್ತಾರೆ. ಅವರಿಂದ ಶ್ರೇಷ್ಠರು ಬ್ರಾಹ್ಮಣರು. ಬ್ರಾಹ್ಮಣರಲ್ಲಿ ಕೋವಿದರು ಶ್ರೇಷ್ಠರು, ಕೋವಿದರಿಗೆ ಸದೃಶರು ಸಿಗುವುದಿಲ್ಲ, ಎಂದು ಉಕ್ತವಾಗಿರುತ್ತದೆ. ಕೋವಿದ-ಕವಿಗಳಿಂದ ಕ್ಷಿತಿಪರು ನೂರುಗುಣದಿಂದ ಉತ್ತಮರು ಎಂದು ಈ ಪದ್ಯದ ಭಾವ ॥ ೧ ॥

## ಶ್ರೀಗುರು ಹೃದಯ ಪ್ರಕಾಶಿಕೆ

ಹೀಗೆ ಸರ್ವಸಮರ್ಪಣೆ ಮಾಡತಕ್ಕವರು ಮುಕ್ತಿಯೋಗ್ಯ ತೃಣಾದಿ ಬ್ರಹ್ಮಾಂತ ತಾರತಮ್ಯೋಪೇತರು. ಆದ್ದರಿಂದ ಮುಕ್ತಿಯಲ್ಲಿ ಸಹ ತಾರತಮ್ಯ ಉಂಟೆಂದು ವಾಯುಪುರಾಣಾರ್ಥವನ್ನು ಈ ಸಂಧಿಯಲ್ಲಿ ತಿಳಿಸುತ್ತಾರೆ. ಪಾಪಜನ್ಮ ಮುಕ್ತರಾದ ದಿವ್ಯಪುರುಷರ ಪ್ರಶ್ನೆ ಎಂಬ ಮಾತನ್ನು ಲಾಲಿಸಿ ಕೇಳಿ ಮುಕ್ತಾಮುಕ್ತ ಜೀವರಲ್ಲಿಯೂ ತಾರತಮ್ಯ ಉಂಟೆಂದು ಶಾಂಡಿಲ್ಯಋಷಿಗಳು ಹೇಳಿದ ವಾಯುಪುರಾಣ ಕಥೆ ಎಂಬ ಹರಿಕಥೆಯೇ ಅಮೃತವೆಂಬ ಮುಕ್ತಿಯಲ್ಲೂ ಇರತಕ್ಕ ರಸ. ಅದನ್ನು ಯಥಾಶಕ್ತಿ ಗುರುಕೃಪೆಯಿಂದ ಹೇಳುವುದನ್ನು ಶ್ರೀಹರಿಯ ಪರಮಭಕ್ತರು ಆದರಿಸಿ ಕೇಳಬೇಕು ॥ಸಂ.ಸೂ॥

ಸ್ಥಾವರವೆಂಬ ಶಿಲೆ ಮೊದಲಾದ ಜೀವರಿಗಿಂತ ತೃಣ, ವೃಕ್ಷಾದಿ ಸ್ವರೂಪ ಜೀವರು ಉತ್ತಮರು. ಅವರಿಗಿಂತ ಕ್ರಿಮಿಸ್ವರೂಪಜೀವರುತ್ತಮರು ಅವರಿಗಿಂತ ಅಜಪವೆಂಬ ಮೇಕೆ. ಅವಿ ಎಂಬ ಕುರಿ, ಗೋವು, ಗಜ, ವ್ಯಾಘ್ರ ಎಂದರೆ ಹುಲಿ, ಸಿಂಹ ಮುಂತಾದ ಜೀವರು ಉತ್ತಮರು. ಅವರಿಗಿಂತ ಶೂದ್ರ, ವೈಶ್ಯ, ಕ್ಷತ್ರಿಯರು ಕ್ರಮೇಣ ಉತ್ತಮರು. ಅವರಿಗಿಂತ ಸತ್ಕರ್ಮ ಆಚರಿಸುವ ಭೂದೇವರೆಂಬ ಬ್ರಾಹ್ಮಣಜೀವರು ಉತ್ತಮರು. ಅವರಿಗಿಂತ ಜ್ಞಾನಿಗಳು ದೊಡ್ಡವರು. ಆ ಜ್ಞಾನಿಗಳೆಂಬ ಮನುಷ್ಯೋತ್ತಮರಿಗಿಂತಲೂ ಕ್ಷಿತಿಪರೆಂಬ ರಾಜಜೀವರುಗಳು ಇಲ್ಲಿ ಮತ್ತು ಮುಕ್ತಿಯಲ್ಲಿ ಸಹ ಉತ್ತಮರು ॥೧॥

## ಸರ್ವವ್ಯಾಖ್ಯಾನ ಸಾರಸಂಗ್ರಹ

೧. ಪಾಪಜನ್ಮಮುಕ್ತರಾದ ದಿವ್ಯಪುರುಷರು ಪ್ರಶ್ನೆಮಾಡಲಾಗಿ, ಅವರ ಉಕ್ತಿಯನ್ನು ಲಾಲಿಸಿ ಮುಕ್ತಾಮುಕ್ತಜೀವರಲ್ಲೂ ತಾರತಮ್ಯ ಉಂಟೆಂದು **ಶಾಂಡಿಲ್ಯಋಷಿಗಳು** ಹೇಳಿದ **ವಾಯುಪುರಾಣಗತ** ವಿಷಯವನ್ನು ದಾಸರಾಯರು, ಯಥಾಶಕ್ತಿ ಗುರುಗಳ ಕೃಪೆಯಿಂದ ಹೇಳುವುದನ್ನು ನಿರ್ಮತ್ಸರರಾದ ಭಾಗವತೋತ್ತಮರು ಆದರಿಸಿ ಕೇಳಬೇಕೆಂದು ಸಂಧಿಸೂಚನಾ ರೂಪದಲ್ಲಿ ತಿಳಿಸುತ್ತಾರೆ.

**ಶಾಂಡಿಲ್ಯರು** ಕಶ್ಯಪವಂಶದ ಒಬ್ಬ ಮಹರ್ಷಿ. ಅಗ್ನಿ ಈಶ್ವರ ವಂಶದಲ್ಲಿ ವೈಶ್ವಾನರನೆಂಬ ಹೆಸರಿನಿಂದ ಜನಿಸಿದರು. ಇವರು ಬರೆದ ಗ್ರಂಥವು **ಶ್ಯಾಂಡಿಲ್ಯತತ್ತ್ವ** ಎಂದು ಸುಪ್ರಸಿದ್ಧವಾಗಿದೆ.

೨. ಶ್ರೀಪರಮಾತ್ಮನಿಂದ ಸೃಷ್ಟವಾದ ಪದಾರ್ಥಗಳು ಎರಡು ಪ್ರಕಾರ.

1. ಶುದ್ಧಜಡಗಳು. ಮತ್ತು 2. ಚೇತನಗಳು.
ಚೇತನವರ್ಗದಲ್ಲಿ ಪುನಃ ಎರಡು ಪ್ರಭೇದಗಳು.

1. ಸ್ಥಾವರರು ಮತ್ತು 2. ಜಂಗಮರು.

೩. ಶುದ್ಧಜಡವಸ್ತುಗಳಿಂದ **ಸ್ಥಾವರಜೀವರು** ಉತ್ತಮರು.

೪. ಚಲನೆಯಿಲ್ಲದೇ ಇದ್ದಲ್ಲಿಯೇ ಇರುವ ವೃಕ್ಷ, ಲತಾ, ಗುಲ್ಮಾದಿಗಳು ಸ್ಥಾವರವರ್ಗಕ್ಕೆ ಸೇರಿದಜೀವರು. ಚಲನಶಕ್ತಿ ಇರುವವರು ಜಂಗಮ ಜೀವರು.

೫. **ತೃಣಜೀವರು** ಎರಡನೆಯ ಕಕ್ಷಕ್ಕೆ ಸೇರಿದವರು. ತೃಣಜೀವರು ಸ್ಥಾವರರಿಗಿಂತ ಉತ್ತಮರು.

೬. 3ನೆಯ ಕಕ್ಷಾಪನ್ನರಾದ **ಕ್ರಿಮಿಜೀವರು** ತಾರತಮ್ಯದಲ್ಲಿ ತೃಣಜೀವರಿಗಿಂತ ಉತ್ತಮರು.

೭. ಮೇಕೆ, ಆಡು ಇತ್ಯಾದಿ ಜೀವರು **ಅಜಜೀವರು** 4ನೆಯ ಕಕ್ಷೆಗೆ ಸೇರಿದವರು. ಕ್ರಿಮಿ ಜೀವರಿಗಿಂತ ಉತ್ತಮರು.

೮. ಐದನೆಯ ಕಕ್ಷಾಪನ್ನರಾದ ಕುರಿಜೀವರು **ಅವಿಜೀವರು** ಅಜಜೀವರಿಗಿಂತಲೂ ಉತ್ತಮರು.

೯. 6ನೆಯ ಕಕ್ಷೆಗೆ ಸೇರಿದ **ಗೋಜೀವರು** ಅವಿಜೀವರಿಗಿಂತ ಉತ್ತಮರು.

೧೦. **ಗಜಜೀವರು** 7ನೆಯ ಕಕ್ಷಾಪನ್ನರು ಗೋಜೀವರಿಗಿಂತ ಉತ್ತಮರು.

೧೧. 8ನೆಯ ಕಕ್ಷೆಗೆ ಸೇರಿದ **ವ್ಯಾಘ್ರಜೀವರು** ಗಜ ಜೀವರಿಗಿಂತ ಉತ್ತಮರು.

೧೨. **ಸಿಂಹಜೀವರು** 9ನೆಯ ಕಕ್ಷಾಪನ್ನರು. ವ್ಯಾಘ್ರಜೀವರಿಗಿಂತ ಉತ್ತಮರು.

೧೩. ಚಾತುರ್ವರ್ಣಗತರಾದವರಲ್ಲಿ **ಶೂದ್ರವರ್ಣಕ್ಕೆ ಸೇರಿದ ಜೀವರು** (ಹತ್ತನೆಯ ಕಕ್ಷ) ಸಿಂಹಜೀವರುಗಳಿಗಿಂತ ಉತ್ತಮರು.

೧೪. ಮೂರನೆಯ ವರ್ಣಕ್ಕೆ ಸೇರಿದ **ವೈಶ್ಯವರ್ಣಜೀವರು** ಶೂದ್ರವರ್ಣಗತ ಜೀವರಿಗಿಂತ ಉತ್ತಮರು (ಹನ್ನೊಂದನೆಯ ಕಕ್ಷ).

೧೫. ವೈಶ್ಯಜೀವರುಗಳಿಗಿಂತ ಎರಡನೆಯ ವರ್ಣಕ್ಕೆ ಸೇರಿದ ಕ್ಷತ್ರಿಯ ಜೀವರು ಉತ್ತಮರು (**ಕರ್ಮಕರು**). (ಹನ್ನೆರಡನೆಯ ಕಕ್ಷದವರು).

೧೬. ಕ್ಷತ್ರಿಯ ಜೀವರುಗಳಿಗಿಂತ ಸತ್ಕರ್ಮಾನುಷ್ಠಾನರತರಾದ ಬ್ರಾಹ್ಮಣ ಜೀವರು (**ಭೂದೇವರು**) ಉತ್ತಮರು (ಹದಿಮೂರನೆಯ ಕಕ್ಷ).

೧೭. 14ನೆಯ ಕಕ್ಷಕ್ಕೆ ಸೇರಿದ ಜ್ಞಾನಪ್ರಚುರರಾದ ವಿಪ್ರೋತ್ತಮರು (**ಕೋವಿದೋತ್ತಮರು**), ಕೇವಲ ಕರ್ಮಾಸಕ್ತರಾದ ಬ್ರಾಹ್ಮಣರಿಗಿಂತ ಉತ್ತಮರು.

೧೮. 15ನೆಯ ಕಕ್ಷಾಪನ್ನರಾದ **ಮಾನುಷ ಚಕ್ರವರ್ತಿಗಳು (ಕ್ಷಿತಿಪರು)** ಜ್ಞಾನಪ್ರಚುರರಾದ ಬ್ರಾಹ್ಮಣ ಜೀವರುಗಳಿಗಿಂತ **(ಕವಿಗಳಿಂದಲಿ)** ಉತ್ತಮರು.

ಇಂತು ತಾರತಮ್ಯಕ್ರಮ ಹೀಗಿದೆ–

**ಶುದ್ಧ ಜಡಗಳು- ಸ್ಥಾವರಜೀವರು - ತೃಣಜೀವರು - ಕ್ರಿಮಿಜೀವರು- ಅಜ - ಅವಿ - ಗೋ - ಗಜ - ವ್ಯಾಘ್ರ - ಸಿಂಹಜೀವರು - ಶೂದ್ರ ಜೀವರು- ವೈಶ್ಯಜೀವರು-ಕ್ಷತ್ರಿಯ ಜೀವರು-ಕರ್ಮಠರಾದ ಬ್ರಾಹ್ಮಣರು- ಜ್ಞಾನಪ್ರಚುರರಾದ ವಿಪ್ರರು - ಮಾನುಷಚಕ್ರವರ್ತಿಗಳು. ॥೧॥**

## ಪದ್ಯ - ೨

**ಮೂಲ -**

> **ಧರಣಿಪರ ನೋಡಲ್ಕೆ ನರ ಗಂ ।**
> **ಧರ್ವರುತ್ತಮ ದೇವಗಂಧ ।**
> **ರ್ವರ ಗಣೋತ್ತಮರಿವರಿಗಿಂತ ಶತೋನಶತಕೋಟಿ ॥**
> **ಪರಮಋಷಿಗಳು ಅಪ್ಸರಸ್ತ್ರೀ ।**
> **ಯರು ಸಮಾನರು ಇವರಿಗಿಂತಲಿ ।**
> **ಚಿರಪಿತೃಗಳುತ್ತಮರು ಚಿರನಾಮಕ ಪಿತೃಗಳಿಂದ ॥೨॥**

**ಅವತರಣಿಕೆ–**

ಮುಂದೆ ಮಾನುಷ ಚಕ್ರವರ್ತಿಗಳಿಂದ ಆರಂಭಿಸಿ, ಚಿರಪಿತೃಗಣ ಪರ್ಯಂ ತಾರತಮ್ಯಕ್ರಮದಲ್ಲಿ ಉತ್ತಮತ್ವವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ–**

**ಧರಣಿಪರ ನೋಡಲ್ಕೆ** – 15ನೇ ಕಕ್ಷಾಪನ್ನರಾದ ಮಾನುಷ ಚಕ್ರವರ್ತಿಗಳ ದೃಷ್ಟಿಯಿಂದ, **ನರಗಂಧರ್ವರು ಉತ್ತಮರು**– 16ನೇ ಕಕ್ಷಾಪನ್ನರಾದ ನರಗಂಧರ್ವರು ಉತ್ತಮರು. **ದೇವಗಂಧರ್ವಗಣೋತ್ತಮರು**– ಮಾನುಷ ಗಂಧರ್ವಗಣಕ್ಕಿಂತ 17ನೆಯ ಕಕ್ಷೆಗೆ ಸೇರಿದ ದೇವಗಂಧರ್ವಗಣದವರು ಉತ್ತಮರು. **ಇವರಿಗಿಂತ**– ಈ ದೇವಗಂಧರ್ವಗಣದವರಿಗಿಂತ, **ಶತೋನಶತಕೋಟಿ** – ನೂರು ಕಡಿಮೆ ನೂರುಕೋಟಿ ಋಷಿಗಳು, ಅಂದರೆ 18ನೇ ಕಕ್ಷೆಕ್ಕೆ ಸೇರಿದ 99 ಕೋಟಿ. 99 ಲಕ್ಷದ, 99 ಸಾವಿರದ 900 ಋಷಿಗಳು ಉತ್ತಮರು. (**ಪರಮ – ಊನ** ಎಂದು **ಹೇಳಿರತಕ್ಕ** 900 ಋಷಿಗಳ ಪರಮ ಎಂದು ಹೇಳಿರುವುದರಿಂದ) ಮೇಲೆ ಹೇಳಿದ ಋಷಿಗಳಿಗೆ ಉತ್ತಮರು. ಉತ್ತಮರ ಕಕ್ಷದಲ್ಲಿ ಸೇರಿದವರೆಂದು ತಾತ್ಪರ್ಯ. **ಅಪ್ಸರಸ್ತ್ರೀಯರು ಸಮಾನರು**– ಕೇವಲ ಅಪ್ಸರಸ್ತ್ರೀಯರು ಶತೋನಶತಕೋಟಿ ಋಷಿಗಳಿಗೆ ಸಮಾನರು. ಇವರು ದೇವಗಂಧರ್ವರಿಗಿಂತ ಉತ್ತಮರು. **ಇವರಿಗಿಂತಲಿ**- ಶತೋನ ಶತಕೋಟಿ ಋಷಿಗಳು ಮತ್ತು ತತ್ಸಮಾನರಾದ ಅಪ್ಸರಸ್ತ್ರೀಯರುಗಳಿಗಿಂತ

**ಚಿರಪಿತೃಗಳು ಉತ್ತಮರು**– 19ನೆಯ ಕಕ್ಷದ ಚಿರಪಿತೃಗಳು ಉತ್ತಮರು. **ಚಿರನಾಮಕ ಪಿತೃಗಳಿಂದ**– ಈ ಚಿರನಾಮಕ ಪಿತೃಗಳಿಗಿಂತ (ಉತ್ತಮರು ಯಾರೆಂಬುದನ್ನು ಮುಂದಿನ ಪದ್ಯದಿಂದ ತಿಳಿಸುತ್ತಾರೆ) ॥೨॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಮಾನುಷ ಗಂಧರ್ವರ ಆರಂಭಮಾಡಿ ಚಿರಪಿತೃಗಳ ಪರಿಯಂತ ತಾರತಮ್ಯವನ್ನ ಹೇಳತಾರೆ.

ಪೂರ್ವೋಕ್ತ ೧೫ನೆ ಕಕ್ಷದ ಮಾನುಷಚಕ್ರವರ್ತಿಗಳ ನೋಡಲಾಗಿ ೧೬ನೇ ಕಕ್ಷದ ಮಾನುಷಗಂಧರ್ವರು ಉತ್ತಮರು. ಮಾನುಷಗಂಧರ್ವರಿಗಿಂತ ೧೭ನೇ ಕಕ್ಷದ ದೇವಗಂಧರ್ವಗಣದವರು ಉತ್ತಮರು. ಈ ದೇವಗಂಧರ್ವರಿಗಿಂತ ೧೮ನೇ ಕಕ್ಷದ ನೂರು ಕಡಿಮೆ ನೂರುಕೋಟಿ ಋಷಿಗಳು ಉತ್ತಮರು. ಪರಮ ಶಬ್ದ ದಿಂದ ಊನ ಎಂತ ಹೇಳತಕ್ಕ ನೂರು ಋಷಿಗಳು ಉತ್ತಮರು. ಉತ್ತಮ ಕಕ್ಷದಲ್ಲಿ ಸೇರಿದವರೆಂದು ತಾತ್ಪರ್ಯ. ಕೆಲವು ಅಪ್ಸರಸ್ತ್ರೀಯರು ಶತೋನಶತ ಕೋಟಿ ಋಷಿಗಳಿಗೆ ಸಮಾನರು. ಇವರು ದೇವಗಂಧರ್ವರಿಂದ ಉತ್ತಮರು. ಉತ್ತಮಕಕ್ಷದಲ್ಲಿ ಸೇರಿದವರೆಂದು ತಾತ್ಪರ್ಯ. ಕೆಲವು ಅಪ್ಸರಸ್ತ್ರೀಯರು ಶತೋನಶತಕೋಟಿ ಋಷಿಗಳಿಗೆ ಸಮಾನರು. ಇವರು ದೇವಗಂಧರ್ವರಿಂದ ಉತ್ತಮರು. ೧೯ನೇ ಕಕ್ಷ ಶತೋನಕೋಟಿ ಋಷಿಗಳು ಮತ್ತು ಕೆಲವು ಅಪ್ಸರರಿಗಿಂತಲೂ ಚಿರಪಿತೃಗಳು ಉತ್ತಮರು. ಈ ಚಿರಪಿತೃಗಳಿಗಿಂತ ಉತ್ತಮರು ದಾರೆಂದರೆ ಅವರನ್ನ ಮುಂದೆ ಹೇಳತಾರೆ ॥೨॥

### ೨. ಭಾವಪ್ರಕಾಶಿಕೆ–

ತಾರತಮ್ಯರೀತ್ಯಾ ಭೂಪಾಲರಾದ ಚಕ್ರವರ್ತಿಗಳಿಗಿಂತಲೂ, ನರ ಗಂಧರ್ವರು ಉತ್ತಮರು. ಇವರಿಗಿಂತಲೂ ದೇವಗಂಧರ್ವಗಣವು ಉತ್ತಮ, ಇವರಿಗಿಂತ 100 ಮಿಕ್ಕ 100 ಕೋಟಿ ಋಷಿಗಳು ಉತ್ತಮರು. ಗೋಪಿಯ

ರಾಗಿ ಗೋಕುಲದಲ್ಲಿ ಹುಟ್ಟಿ, ಕೃಷ್ಣನ ಅಂಗಸಂಗವನ್ನು ಹೊಂದಿದ ಅಪ್ಸರ ಸ್ತ್ರೀಯರು 100 ಕಮ್ಮಿ 100 ಕೋಟಿ ಋಷಿಗಳಿಗೆ ಸಮಾನರೆನಿಸುವರು. ಇವರಿಗಿಂತಲೂ ಚಿರಪಿತೃಗಳು ಉತ್ತಮರು ॥೨॥

## ೩. ಶ್ರೀ ವ್ಯಾಸದಾಸಸಿದ್ಧಾಂತ ಕೌಮುದೀ–

'ಧರಣ' ಇತಿ। 'ಉತ್ತಮ' ಇವರಿಂದ॥ 'ತೇಭ್ಯಃ ಮಾನುಷಗಂಧರ್ವಾಃ ಶ್ರೇಷ್ಠಾಃ ಶತಗುಣೇನ ತು॥ ತೇಭ್ಯಃ ಶತಗುಣಾತ್ ಶ್ರೇಷ್ಠಾಃ ಗಂಧರ್ವಾಃ ದೇವಸಂಜ್ಞಕಾಃ॥ ಅಪ್ಸೋ ೀತ್ತರಶತಾನ್ಯೇ ಚ' ಇತಿ॥'ಶತೋನ' ಇತಿ॥ 'ಮಾನ ಯೋಽತ್ರ ಪರಿಗ್ರಾಹ್ಯಾಃ ಶತೋನಶತಕೋಟಯಃ ॥' ಇತಿ 'ಅಂತರ್ಶಿನಃ ಶೇಷಾ ಋಷಯಃ ತು ಆಜಾನಾಪೇಕ್ಷಯಾ ಶತಗುಣಾಧಮಾಃ ॥' ಇತಿ ಮತೈ ಕದೇಶಾಭಿಪ್ರಾಯೇಣ । ಯದ್ವಾ - ಮೂಲವತ್ ಯಥಾಯೋಗ್ಯ ಅನ್ವಯಃ ತಥೈವ ಉಪಸಂಹಾರಾತ್ ॥೨॥

**ಕನ್ನಡಾರ್ಥ :**

ರಾಜರುಗಳಿಂದ ಮನುಷ್ಯಗಂಧರ್ವರು ಶ್ರೇಷ್ಠರು. ಅವರಿಗಿಂತ ದೇವ ಗಂಧರ್ವರು ನೂರು ಗುಣಗಳಿಂದ ಶ್ರೇಷ್ಠರು. ಮತ್ತು ನೂರೆಂಟು ದೇವ ದೇವತೆಗಳೂ ಎಂದೂ ಹೇಳಲಾಗಿರುತ್ತದೆ. ನೂರು ಕಡಿಮೆ ಒಂಭತ್ತುಕೋಟಿ ದೇವಋಷಿಗಳು. ಇವರಿಗಿಂತ (ದೇವಗಂಧರ್ವಗಣದಿಂದ) ಉತ್ತಮರು ಎಂಬ ಪ್ರಮಾಣವಿರುತ್ತದೆ. ಅಂತರ್ದರ್ಶಿಗಳಾದ ಋಷಿಗಳು ಆಜಾನದೇವತೆಗಳಿಗಿಂತ ಶತಾಧಮರು ಎಂಬ ಏಕದೇಶಿಮತವನ್ನು ಅನುಸರಿಸಿ ಹೀಗೆ ಹೇಳಿರುತ್ತಾರೆ. ಅಥವಾ ಮೂಲದಂತೆ ಇದಕ್ಕೆ ದ್ವಂತೆಯಾದರೂ ಯೋಚಿಸಬಹುದು ॥೨॥

## ೪. ಶ್ರೀಗುರು ಹೃದಯ ಪ್ರಕಾಶಿಕೆ

ಆ ಕ್ಷಿತಿಪರಿಗಿಂತ ನರಗಂಧರ್ವಜೀವರು ಉತ್ತಮರು. ಅವರಿಗಿಂತ ದೇವ ಗಂಧರ್ವಗಣ ಉತ್ತಮ. ಇವರಿಗಿಂತ ಶತೋನವೆಂಬ ನೂರು ಕಡಿಮೆ ಶತ ಕೋಟಿ ಪದ ಋಷಿಗಳು ಉತ್ತಮರು. ಅಪರ ಪತ್ನಿಯರು ಇವರಿಗಿಂತ ಕಡಿಮೆ, ತಮ್ಮಲ್ಲಿ ಸಮರು. ಋಷಿಗಳಿಗಿಂತ ಚಿರಪಿತೃಗಣ ಉತ್ತಮರು ॥೨॥

## ಸರ್ವವ್ಯಾಖ್ಯಾನ ಸಾರಸಂಗ್ರಹ

೧. ಮಾನುಷ ಚಕ್ರವರ್ತಿಗಳಿಗಿಂತ **ಮಾನುಷ್ಯಗಂಧರ್ವರು** ಉತ್ತಮರು (16ನೆಯ ಕಕ್ಷ)

೨. ನರಗಂಧರ್ವರಿಗಿಂತ **ದೇವಗಂಧರ್ವಗಣಕ್ಕೆ** ಸೇರಿದವರು ಉತ್ತಮರು. (17ನೆಯ ಕಕ್ಷ).

೩. ದೇವಗಂಧರ್ವಗಣಕ್ಕಿಂತ 100 ಕಡಿಮೆ 100ಕೋಟಿ ಸಂಖ್ಯಾಕರಾದ ಋಷಿಗಳು ಉತ್ತಮರು (18ನೆಯ ಕಕ್ಷ).

೪. 'ಊನ' ಎಂಬ ಶಬ್ದದಿಂದ (99ಕೋಟಿ, 99ಲಕ್ಷ, 99ಸಾವಿರದ 900 ಋಷಿಗಳಿಗಿಂತ) 100 ಮಂದಿ ಋಷಿವರ್ಗ ಉತ್ತಮರು. (ಪರಮ).

೫. **ಅಪ್ಸರಸ್ತ್ರೀಯರಗಣ** ಶತೋನ ಶತಕೋಟಿಋಷಿಗಳಿಗೆ **ಸಮಾನ ಕಕ್ಷಾಪನ್ನರು**.

೬. **ಚಿರಪಿತೃಗಳು** (19ನೆಯ ಕಕ್ಷ) ಶತೋನಶತಕೋಟಿಋಷಿಗಳು ಮತ್ತು ಅಪ್ಸರಸ್ತ್ರೀಯರುಗಳಿಗಿಂತಲೂ ಉತ್ತಮರು.

**ತಾರತಮ್ಯಕ್ರಮ-**

ಮಾನುಷಚಕ್ರವರ್ತಿಗಳು - ನರಗಂಧರ್ವರು - ದೇವಗಂಧರ್ವರು - ಶತೋನಶತಕೋಟಿ ಋಷಿಗಳು, ಇವರಿಗೆ ಸಮಾನರಾದ ಅಪ್ಸರಸ್ತ್ರೀಯರು- ಚಿರಪಿತೃಗಳು. ॥೨॥

### ಪದ್ಯ - ೩

**ಮೂಲ -**

**ಎರಡೈದು ಎಂಭತ್ತುಋಷಿ ತುಂ ।**
**ಬರ ಶತೋರ್ವಶಿಯಪ್ಸರಸ್ತ್ರೀ ।**
**ಯರು ಶತಾಜಾನಜರು ಉತ್ತಮ ಚಿರಪಿತೃಗಳಿಂದ ॥**
**ವರರು ಊರ್ವಶಿಗಿಂತ ವೈಶ್ಯಾ ।**
**ನರನ ಸುತರೀರೆಂಟು ಸಾವಿರ ।**
**ಹರದೆಯರೊಳುತ್ತಮ ಕಶೇರ್ಯರ್ವತ್ತನಾಲ್ಕು ಜನ ॥೩॥**

**ಅವತರಣಿಕೆ-**

ಚಿರಪಿತೃಗಳ ನಂತರ ಬರುವ ದೇವತೆಗಳ ತಾರತಮ್ಯವಿಚಾರ ತಿಳಿಸುತ್ತಾರೆ.

**ಪ್ರತಿಪದಾರ್ಥ-**

**ಎರಡೈದು ಎಂಭತ್ತು ಋಷಿ-** ತೊಂಭತ್ತು ಮಂದಿ ಋಷಿಗಳು. (ಎರಡೈದು $= 2 \times 5 = 10$. ಅಂದರೆ $10 + 80 = 90$ ಮಂದಿ). ಚಿರಪಿತೃಗಳಿಗಿಂತ 90 ಮಂದಿ ಋಷಿವರ್ಗ ಉತ್ತಮರು. ಅವರ ವಿವರ -ಚಿರಪಿತೃಗಳು-7, ನಾರದಋಷಿ-1, ಭೃಗು-1, ವಿಶ್ವಾಮಿತ್ರ-1, ಈ ಹತ್ತು ಋಷಿಗಳು ಹಿಂದಿನ ಪದ್ಯದಲ್ಲಿ ಶತೋನಶತಕೋಟಿ ಋಷಿಗಳು ಎಂದಿದ್ದಾರೆ. ಶತಕೋಟಿಯಲ್ಲಿ 100 ಮಂದಿ ಹೋಗತಾ ಎಂದರ್ಥ, ಈ 100 ಮಂದಿ ಋಷಿವರ್ಗದಲ್ಲಿ ಮೇಲಿನ 90 ಮಂದಿ $+$ ಸಪ್ತಯಪ್ಯಾದಿ $10 = 100$ಮಂದಿ ಆಯಿತು. **ತುಂಬರ ಶತ-** ತುಂಬರನೇ ಮೊದಲಾದ ದೇವಗಂಧರ್ವರು 100 ಮಂದಿ. ಇವರಲ್ಲಿ ತುಂಬರಾದಿಗಳು 8 ಮಂದಿ ದೇವಗಂಧರ್ವರು ಹೋಗತಾ ಉಳಿದ ದೇವಗಂಧರ್ವಗಣ 92. **ಊರ್ವಶಿಯರಪ್ಸರಸ್ತ್ರೀಯರು ಶತ-** ಊರ್ವಶೀ ಮುಂತಾದ ಅಪ್ಸರಸ್ತ್ರೀಯರು $+$ ಉಳಿದ 8ಮಂದಿ ಅಪ್ಸರಸ್ತ್ರೀಯರು. ಇವರು 19ನೇ ಕಕ್ಷದ ಚಿರಪಿತೃಗಳಿಗಿಂತ ಉತ್ತಮರು. **ಅವರರು-** 20ನೆಯ ಕಕ್ಷಕ್ಕೆ ಸೇರಿದ ನೂರುಮಂದಿಗಿಂತ (100ಋಷಿವರ್ಗ $+ 100$ ಸಮಾನಕಕ್ಷದವರಾದ ಅಪ್ಸರಸ್ತ್ರೀಯರು) 19ನೆಯ ಕಕ್ಷದ ಚಿರಪಿತೃಗಳು ಅವರರು ಎಂದರೆ ಕಡಿಮೆ. **ಊರ್ವಶಿಗಿಂತ-**ಊರ್ವಶೀ ಇತ್ಯಾದಿ ಅಪ್ಸರಸ್ತ್ರೀಯರಿಗಿಂತ, **ವೈಶ್ವಾನರನ ಸುತರು-** ಅಗ್ನಿಪುತ್ರರಾದ, **ಈರೆಂಟುಸಾವಿರ-** ಹದಿನೆಂಟುಸಾವಿರ ಸಂಖ್ಯಾಕರಾದ (ಈರ್ ಎಂಟು $= 2 \times 8 = 16$), **ಹರದೆಯರೊಳು-** ಕೃಷ್ಣಪತ್ನಿಯ 16,000 ಮಂದಿಗಳು, **ಉತ್ತಮ-** ಉತ್ತಮರು (21ನೆಯ ಕಕ್ಷಾ), **ಕಶೇರು ಸಪ್ತಸ್ತುನಾಲ್ಕುಜನ-**22ನೆಯ ಕಕ್ಷೆಯ ಕಶೇರು ಆರಂಭವಾಡಿಕೊಂಡು 74 ಮಂದಿ. 16,000 ಕೃಷ್ಣಪತ್ನಿಯರಿಗಿಂತ, **ಉತ್ತಮ-** ಉತ್ತಮರು ॥೩॥

## ಶ್ರೀಸಂಕರ್ಷಣಒಡೆಯರ ವ್ಯಾಖ್ಯಾನ

ಚಿರಪಿತೃಗಳ ನಂತರ ತಾರತಮ್ಯ ಹೇಳತಾರೆ.

ಮ್ಯಾಲೆ ಶತೋನಶತಕೋಟಿ ಋಷಿಗಳ ಹೇಳಿದ್ದಾರೆ. ಅವರಲ್ಲಿ ಋಷಿ

ಎಂತ ಹೇಳಿದ ನೂರು ಋಷಿಗಳು ದಾವ ಕಕ್ಷದಲ್ಲಿ ಸೇರಿದ್ದಾರೇಂದರೆ, ಎರಡೈದು ಅಂದರೆ ಹತ್ತು, ಎಂಭತ್ತು ಅಂತು ತೊಂಭತ್ತುಮಂದಿ ಋಷಿಗಳು ಉತ್ತಮರು. ಆದ್ದರಿಂದ ಉತ್ತಮ ಕಕ್ಷಾದವರಾದ ೧೯ನೇ ಕಕ್ಷದ ಕರ್ಮಜರಲ್ಲಿ ಸೇರಿದ್ದಾರೆ. ಉಳಿದ ಹತ್ತುಮಂದಿ ಋಷಿಗಳು ತೊಂಭತ್ತುಋಷಿಗಳಿಗೆ ಉತ್ತಮರಾದ್ದರಿಂದ ಕರ್ಮಜ ಕಕ್ಷದ ಮ್ಯಾಲಿನ ಕಕ್ಷಕ್ಕೆ ಸೇರಿದ್ದಾರೆ. ಅವರು ದಾರೆಂದರೆ, ಸಪ್ತಋಷಿಗಳು ಏಳು, ನಾರದಋಷಿ ಒಂದು, ಭೃಗು ಒಂದು, ವಿಶ್ವಾಮಿತ್ರ ಒಂದು, ಅಂತು ನೂರು ಸರಿ ಆಯಿತು. ನೂರುಕೋಟಿಋಷಿಗಳೊಳಗೆ ಈ ನೂರುಮಂದಿ ಋಷಿಗಳು ಹೋಗತಾ ಉಳಿದವರು ಮ್ಯಾಲೆ ತಾರತಮ್ಯದಲ್ಲಿ ಬಂದಿದ್ದಾರೆ. ತುಂಬರನೇ ಮೊದಲಾದ ಗಂಧರ್ವರು ನೂರುಮಂದಿ. ಇವರಲ್ಲಿ ಕರ್ಮಜರಲ್ಲಿ ಸೇರಿದವರು ಎಂಟುಮಂದಿ ತುಂಬುರಾದಿಗಳು ಹೋಗತಾ ಉಳಿದವರು ತೊಂಭತ್ತೆರಡು ಮಂದಿ ಗಂಧರ್ವರು. ಊರ್ವಶೀ ಮೊದಲಾದ ಅಪ್ಸರ ಸ್ತ್ರೀಯರು ನೂರು ಮಂದಿ. ಇವರಲ್ಲಿ ಕರ್ಮಜರಲ್ಲಿ ಸೇರಿದವರು ಊರ್ವಶೀ ಮೊದಲಾದ ಅಪ್ಸರರು ತೊಂಭತ್ತೆರಡುಮಂದಿ ಹೋಗತಾ ಉಳಿದವರು ಎಂಟುಮಂದಿ ಅಪ್ಸರರು, ೧೯ನೇ ಕಕ್ಷಾದ ಚಿರಪಿತೃಗಳಿಗಿಂತಲೂ ಉತ್ತಮರು, ೨೦ನೇ ಕಕ್ಷದವರು. ಇವರು ದಾರೆಂದರೆ ೯೨ ಮಂದಿ ಪೂರ್ವೋಕ್ತ ಅವಶಿಷ್ಟ ಗಂಧರ್ವರು, ೮ ಮಂದಿ ಪೂರ್ವೋಕ್ತ ಅವಶಿಷ್ಟರಾದ ಅಪ್ಸರಸ್ತ್ರೀಯರು ಅಂತೂ ನೂರುಮಂದಿ. ಇನ್ನು ಇವರಿಗೆ ಸಮಾನರು ಅನೇಕಮಂದಿ. ಇವರು ಯಾನ್ಮಂದಿ ಚಿರಪಿತೃಗಳಿಗೆ ಉತ್ತಮರು. ೨೦ನೇ ಕಕ್ಷದವರಾದ ನೂರುಮಂದಿ ಗಿಂತ ಚಿರಪಿತರು ಅವರರೇತ ಅರ್ಥ. ೨೧ನೇ ಕಕ್ಷದವರಾದ ನೂರುಮಂದಿಗೀತ ಅಗ್ನಿಪುತ್ರರಾದ ಹದಿನಾರುಸಾವಿರ ಈ ಕೃಷ್ಣಪತ್ನೀರಾದ ೧೬,೦೦೦ ಮಂದಿ ಒಳಗೆ ಉತ್ತಮರಾದವರು ೨೨ನೇ ಕಕ್ಷದ ಕಶೇರು ಆರಂಭಮಾಡಿ ಎಪ್ಪತ್ತು ನಾಲ್ಕುಜನ ಉತ್ತಮರು. ದೇವಗಂಧರ್ವರಾರಭ್ಯ ಶತೋನಕೋಟಿ ಋಷಿಗಳ ಪರಿಯಂತ ಅನಾಖ್ಯಾತ ಆಜಾನಜರು, ಹದಿನಾರುಸಾವಿರ ಗೋಪಿಕಾ ಸ್ತ್ರೀಯರು, ಆಖ್ಯಾತ ಆಜಾನಜರು. ಈ ಎರಡರಲ್ಲಿ ಬಹುಮಂದಿ ಆಜಾನಜರು ಇದ್ದಾರೆ. ಮ್ಯಾಲೆ ವಿವರಿಸಿದ್ದು ದಿಕ್ಪ್ರದರ್ಶನ ಎಂತ ತಾತ್ಪರ್ಯ ॥೩॥

**೨. ಭಾವಪ್ರಕಾಶಿಕೆ-**

90 ಮಂದಿ ಋಷಿಗಳು (ಎರಡೈದು ಎಂಭತ್ತು), ತುಂಬರು ಮೊದಲಾದ

100 ಮಂದಿ ಗಂಧರ್ವರು, ಊರ್ವಶೀ ಮೊದಲಾದ 100 ಮಂದಿ ಅಪ್ಸರ ಸ್ತ್ರೀಯರು. ಇವರು ಚಿರಪಿತೃಗಳಿಗಿಂತಲೂ ಉತ್ತಮರು. ಅಗ್ನಿಯ ಸುತರಾ (ವೈಶ್ವಾನರ ಸುತರು) 16,100. ಋಷಿಗಳು ತಪಸ್ಸುಮಾಡಿ ಸ್ತ್ರೀತ್ವವನ್ನು ಹೊಂದಿ, ಕೃಷ್ಣನ ಹೆಂಡತಿಯರಾಗಿದ್ದವರು, ಚಿರಪಿತೃಗಳಿಗಿಂತ ಕಿಂಚಿತ್ ಕಿರಿ ರೆನಿಸುವರು (ಅವರರು), ಮತ್ತು ಊರ್ವಶೀ ಮೊದಲಾದವರಿಗಿಂತಲೂ ಕಿಂಚಿದುತ್ತಮರೆಂದು ತಿಳಿಯಬೇಕು. ಈ 16,100ಮಂದಿ ಕೃಷ್ಣನ ಪತ್ನಿಯರ ಪೈಕಿ ಕಶೇರು ಎಂಬಾಕೆಯು ಉತ್ತಮಳು. ಆಜಾನಜದೇವತೆಗಳಲ್ಲಿ ಸೇರಿದ 74 ಜನರು ಕಶೇರು ಎಂಬಾಕೆಗೆ ಸಮರೆನಿಸುವರು ॥೩॥

## ೩. ಶ್ರೀವ್ಯಾಸದಾಸ ಸಿದ್ಧಾಂತಕೌಮುದೀ-

ಪಿತೃಭ್ಯಃ ಊರ್ವಶ್ಯಾದಿಭ್ಯಃ ಅಪಿ ರಮಾವೇಶತ್ ವರಾಃ ॥ 'ಹರಿ ಸ್ತ್ರೀ ॥ ನನು ಋಷಿಭ್ಯಃ ಉತ್ತಮತ್ವೇ ಚಿರಪಿತೄಣಾಂ ಕಿಂ ಮಾನವತ್? ಇತಿ ಚೇತ್ ನ॥ ತೇಭ್ಯಸ್ತು ಚಿರಸಂಜ್ಞಕಾಃ॥ ಪಿತರಃ ಶತಶಃ ಶ್ರೇಷ್ಠಾಃ ಪಿತೄಣಾಂ ಸಪ್ತಕಂ ವಿನಾ॥ ಇತ್ಯುಕ್ತೇಃ॥

ನನು ತುಂಬುರಾದೇಃ ಆಜಾನತ್ವಂ ಕಥಂ ಚೇತಾ? ಇತ್ಥಮ್- ಇದಮ ಏಕದೇಶಮತವಿವಕ್ಷಯಾ॥ ಅತ್ರ ಕೇಚಿತ್ 'ನಿರುಕ್ತಾ ಜಾನ ದೇವತಾಃ॥ ತುಂಬು ರ್ವಾಪಿ ಶತಂ ಚೈವ ಊರ್ವಶ್ಯಾದ್ಯಪ್ಸರಃ ಶತಮ್॥ ನಾರದಾ ದೀನ್ ಉಚಥ್ಯಾಂತಾನ್ ವಿನೋಕ್ತಾ ಋಷಯೋಽಖಿಲಾಃ॥ ಆಜಾನಜದೇವಾಃ ಇತಿ॥ ವಿಶೇಷಸ್ತು ವಿವೃತೌ॥ ಆಜಾನಾನಾಂ ಏತತ್ತ್ವಮ್ ಕರ್ಮದೇವವತ್ ನಾಮಭಿಃ ಅನಾಖ್ಯಾತಾಃ॥ ಜಾತಾಃ ದೇವಕುಲೇ ಭಿನ್ನಾಃ ಪಟುಧಾದ್ಯಾ ತೃತೀಯಭಾಗ ವತಗಾಃ॥ ವೈಶ್ವಾನರೋತ್ಪತ್ತಯಃ ಆಜಾನಸಮಾನಾಃ ಕುತ ಚೇತ್-'ಅಗ್ನಿಪುತ್ರಾಃ ಪೂರ್ವಂ ತಪೋಬಲಾತ್ ಸ್ತ್ರೀತ್ವಂ ಸಮಾಗತಾಃ ಪಶ್ಚಾತ್ ಸಂಗಮಾಕಾಂಕ್ಷಯಾ ಹರೇಃ ಸಪ್ತದ್ವ್ಯಷ್ಟಸಾಹಸ್ರ ಮಹಿಷ್ಯಃ ತಾ ಹರಿಪ್ರಿಯಾಃ॥' ಇತಿ ॥ 'ಕಸೇರು' 'ತಾಸಾಂಪ್ರಧಾನಾ' ಇತಿ ವಚನಾತ್ 'ನಾಲ್ಕು' ಇತ್ಯತ್ರರಾಪ್ಸ್ವಯಿ ॥೩॥

**ಕನ್ನಡಾರ್ಥ-**

ಕೃಷ್ಣಪತ್ನಿಯರಾದ ೧೬,೦೦೦ ಸ್ತ್ರೀಯರು ಚಿರಪಿತೃಗಳಿಂದಲೂ, ಊರ್ವಶೀ ಮುಂತಾದವರಿಗಿಂತಲೂ ರಮಾವೇಶವಿರುವುದರಿಂದ ಅಧಿಕರು ಋಷಿಗಳಿಗಿಂತ ಚಿರಪಿತೃಗಳು ಅಧಿಕರೆಂಬ ವಿಷಯದಲ್ಲಿ 'ತೇಭ್ಯಸ್ತು ಚಿರ ಪಿತೃಕಾಃ' ಎಂಬ ವಚನವು ಪ್ರಮಾಣವಾಗಿರುತ್ತದೆ.

ತುಂಬುರು ಮುಂತಾದವರು ಆಜಾನಜದೇವತೆಗಳು ಎಂಬ ವಿಷಯವೂ ಸಹ ಏಕದೇಶಮತದ (ಅಭಿಪ್ರಾಯ) ದೃಷ್ಟಿಯಿಂದಲೇ ಒಪ್ಪುತ್ತದೆ. ಇಲ್ಲಿ ಕೆಲವರು, 'ಹಿಂದೆ ನಿರೂಪಿಸಲಾದ ಆಜಾನಜದೇವತೆಗಳು, ತುಂಬುರು ಮುಂತಾದ ನೂರು ಗಂಧರ್ವರು, ಊರ್ವಶೀ ಮುಂತಾದ ಅಪ್ಸರೆಯರು, ನಾರದರನ್ನಾರಂಭಿಸಿ ಉಚಥ್ಯರವರೆಗಿರುವ ಋಷಿಗಳನ್ನು ಬಿಟ್ಟು ಉಳಿದ ಋಷಿಗಳು ಇವರು ಆಜಾನಜದೇವತೆಗಳು' ಎಂದು ಹೇಳುವರು. ಹೆಚ್ಚಿನ ಸಂಗತಿಗಳನ್ನು ತಾರತಮ್ಯವಿವೃತ್ತಿಯಲ್ಲಿ ಕಾಣಬಹುದು.

ನಾಮನಿರ್ದೇಶಪೂರ್ವಕವಾಗಿ ವೇದಗಳಲ್ಲಿ ಹೇಳಲ್ಪಡದವರು ಹಾಗೂ ದೇವಕುಲದಲ್ಲಿ ಉತ್ಪನ್ನರಾದವರು ಇಂಥಹ ದೇವತೆಗಳು 'ಆಜಾನಜರು' ಎಂದು ಭಾಗವತ ತೃತೀಯ ಸ್ಕಂಧದಲ್ಲಿ ಹೇಳಲಾಗಿರುತ್ತದೆ.

ಅಗ್ನಿಪುತ್ರರು (೧೬,೦೦೦ ಕೃಷ್ಣಮಹಿಳೆಯರು) ಆಜಾನದೇವತೆಗಳಿಗೆ ಸಮಾನರು. ಯಾಕೆಂದರೆ 'ಅಗ್ನಿಪುತ್ರರು ಪೂರ್ವದಲ್ಲಿ ತಪಸ್ಸನ್ನು ಆಚರಿಸಿ ಅದರಿಂದ ಸ್ತ್ರೀಭಾವವನ್ನು ಹೊಂದಿದರು. ಅನಂತರದಲ್ಲಿ ಅವರು ಹರಿಯ ಸಂಗಮಕಾಮನೆಯಿಂದ ಮಾಡಿದ ತಪೋಬಲದಿಂದ ಕೃಷ್ಣಸ್ತ್ರೀಯರಾಗಿ ಶ್ರೀಕೃಷ್ಣನಿಗೆ ಪ್ರಿಯರಾದರು' ಎಂದು ಪ್ರಮಾಣಗಳಿರುತ್ತವೆ.

'ಕಸೇರು ಎಂಬುವಳು ಅವರಲ್ಲಿ ಪ್ರಧಾನಳು' ಎಂದೂ ವಚನವಿರುತ್ತದೆ ॥೩॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಈ ಚಿರಪಿತೃಗಳಿಗಿಂತ ಎರಡೈದೆಂಬ ಹತ್ತು ಎಂಭತ್ತು ಸೇರಿ ಒಟ್ಟು ತೊಂಭತ್ತು ಜನ ಋಷಿಗಳು ತುಂಬುರು ಎಂಬ ಗಂಧರ್ವ ಊರ್ವಶೀ ಮೊದಲಾದ ನೂರುಮಂದಿ ಅಪ್ಸರಸ್ತ್ರೀಯರು, ನೂರುಜನ ಆಜಾನಜದೇವತೆಗಳು ಉತ್ತಮರು. ಊರ್ವಶಿಗಿಂತ ವೈಶ್ವಾನರನೆಂಬ ಅಗ್ನಿಪುತ್ರರುಗಳಾದ ಹ... ನಾರು ಸಾವಿರದ ನೂರುಜನ ಕೃಷ್ಣಪತ್ನಿಯರು ಉತ್ತಮರು. ಈ ಹರಿಮಡದಿಯರೆಂಬ ಹರದಿಯರು ಎಂದರೆ ಗೃಹಕೃತ್ಯಪಾಲನಶೀಲರು ಇವರಲ್ಲಿ ಕಶೇರು ಮೊದಲಾದ ೭೪ ಜನ ಉತ್ತಮರು ॥೩॥

## ಸರ್ವವ್ಯಾಖ್ಯಾನ ಸಾರಸಂಗ್ರಹ

೧. **ಎರಡೈದು ಎಂಭತ್ತು**-ಎರಡೈದು $= 5 \times 2 = 10$. ಇದರ ಮೇಲೆ 80. ಅಂದರೆ $10 + 80 = 90$ ಮಂದಿ ಋಷಿವರ್ಗ ಮತ್ತು ತುಂಬುರು 100 ಮಂದಿ ದೇವಗಂಧರ್ವವರ್ಗ ಮತ್ತು ಅವರ ಸಮಾನಕಕ್ಷೆದವರಾದ ಊರ್ವಶೀ ಮೊದಲಾದ 100ಮಂದಿ ಅಪ್ಸರಸ್ತ್ರೀಯರು, ಈ ವರ್ಗಕ್ಕೆ ಸೇರಿದ **ಆಜಾನಜದೇವತೆಗಳು** ಚಿರಪಿತೃಗಳಿಗಿಂತ ಉತ್ತಮರು.

೨. ಹಿಂದಿನ ಪದ್ಯದಲ್ಲಿ **ಶತಕೋಟಿಶತಕೋಟಿ ಋಷಿವರ್ಗ** ಎಂದು ಹೇಳಿದ್ದಾರೆ. ಅಂದರೆ 100 ಕಡಿಮೆ 100ಕೋಟಿ ಋಷಿಗಳೆಂದರ್ಥ. ಇವರಲ್ಲಿ 100 ಮಂದಿ, ಉಳಿದ ನೂರು ಕಡಿಮೆ ನೂರುಕೋಟಿ ಋಷಿಗಳಿಗಿಂತ ಉತ್ತಮ ಕಕ್ಷೆದವರು. ಈ ನೂರುಮಂದಿ ಋಷಿವರ್ಗದಲ್ಲಿ 10 ಮಂದಿ ಉಳಿದ 90 ಮಂದಿಗಿಂತ ಉತ್ತಮರು. ಅವರು ಯಾರೆಂದರೆ- ಸಪ್ತಋಷಿವರ್ಗ 7, ನಾರದಋಷಿ 1, ಭೃಗು 1 ಮತ್ತು ವಿಶ್ವಾಮಿತ್ರ 1. ಈ ಹತ್ತುಮಂದಿ, 100ರಲ್ಲಿ ಹೋಗಿ ಉಳಿದ ತೊಂಭತ್ತು ಮಂದಿ ಋಷಿಗಳೆಂದು ತಾತ್ಪರ್ಯ. ಈ ಸಂಖ್ಯೆಯನ್ನು ಎರಡೈದು ಎಂಭತ್ತು ಎಂದಿದ್ದಾರೆ. ಅಂದರೆ $5 \times 2 + 80 = 90$ ಆಗುವುದು.

**೩. ವೈಶ್ವಾನರನ ಸುತರು** – ವೈಶ್ವಾನರ ಎಂದರೆ ಅಗ್ನಿದೇವರು. ಅವರ ಸುತರಾದ ಋಷಿಗಳು ಹದಿನಾರುಸಾವಿರದ ನೂರುಮಂದಿ. ದ್ವಾಪರದಲ್ಲಿ ಶ್ರೀಕೃಷ್ಣನ ಅಂಗಸಂಗವನ್ನು ಹೊಂದಿ, ಸಾಪಯವಮೋಕ್ಷವನ್ನು ಹೊಂದಿದರು. ಈ 16,100 ಮಂದಿ ಕನ್ಯಾವಸ್ಥೆಯಲ್ಲಿ ನರಕಾಸುರನ ಬಂಧನದಲ್ಲಿದ್ದರು. ಶ್ರೀಕೃಷ್ಣನು ನರಕಾಸುರನನ್ನು ವಧಿಸಿ, ಆ ಕನ್ಯೆಯರ ಪ್ರಾರ್ಥನೆಯಂತೆ 16,100 ಮಂದಿಯನ್ನೂ ಪತ್ನಿಯರನ್ನಾಗಿ ಸ್ವೀಕರಿಸಿದನು. ತ್ರೇತೆಯಲ್ಲಿ ಅವರೆಲ್ಲರೂ ಶ್ರೀರಾಮಚಂದ್ರನ ಅಂಗಸಂಗವನ್ನು ಬಯಸಿದ್ದರು. ಏಕಪತ್ನೀವ್ರತಸಂಕಲ್ಪನಾದ ಶ್ರೀರಾಮನು, ಮುಂದಿನ ಯುಗದಲ್ಲಿ ಅವತರಿಸಿ, ಅವರನ್ನು ಪತ್ನಿಯರನ್ನಾಗಿ ಸ್ವೀಕರಿಸುವೆನೆಂದು ಆಶ್ವಾಸನೆ ನೀಡಿದ್ದನು. ಅದರಂತೆ ಆ ಋಷಿಗಳೆಲ್ಲರೂ ಗೋಪಿಕಾಸ್ತ್ರೀಯರಾಗಿ ಜನಿಸಿ ಶ್ರೀಕೃಷ್ಣನ ಪತ್ನಿಯರಾದರು (21ನೆಯ ಕಕ್ಷಾಪನ್ನರು). ಈ ವರ್ಗ ಮೇಲಿನ ಆಜಾನಜದೇವತೆಗಳಿಗಿಂತ ಉತ್ತಮರು.

೪. ಈ 16,100 ಮಂದಿ ಕೃಷ್ಣಪತ್ನಿಯರ ಪೈಕಿ **ಶತೇರು** ಮೊದಲಾಗಿ ಎಪ್ಪತ್ತುನಾಲ್ಕುಮಂದಿ, ಉಳಿದವರಿಗಿಂತ ಉತ್ತಮರು.

**ಹರದೆಯುರೆಂದರೆ,** ಗೃಹಕೃತ್ಯಪಾಲನಶೀಲರೆಂದರ್ಥ ॥೩॥

**ಪದ್ಯ - ೪**

ಮೂಲ -

**ಸರಿಯೆನಿಪರು ವ್ರಜೌಕಸಸ್ತ್ರೀ ।**
**ಯರು ಸುರಾಸ್ಯಾತ್ಮಜರಿಗೆ ಪು ।**
**ಷ್ಕರನು ಕರ್ಮಪ ಪುಷ್ಕರನಿಗೆ ಶನೈಶ್ಚರುತ್ತಮನುಸು ॥**
**ತರಣಿಜನಿಗುತ್ತಮಳುಷಾಶ್ವಿನಿ ।**
**ಸುರರರಸಿಗುತ್ತಮ ಜಲಪ ಬುಧ ।**
**ಶರಧಿಜಾತ್ಮಜಗುತ್ತಮ ಸ್ವಹದೇವಿಯೆನಿಸುವಳು ॥೪॥**

**ಅವತರಣಿಕೆ** -

ಮುಂದಿನ ಕ್ರಮದಲ್ಲಿ ತಾರತಮ್ಯ ವಿಚಾರವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ -**

**ವ್ರಜೌಕಸ** - ವೃಂದಾವನಗ್ರಾಮಸ್ಥ ಮನೆಗಳಲ್ಲಿರತಕ್ಕ, **ಸ್ತ್ರೀಯರು**- ಕೃಷ್ಣನ ಅಂಗಸಂಗ ಮಾಡಿದ ಗೋಪಿಕಾಸ್ತ್ರೀಯರು, **ಸರಿಯೆನಿಸರು**- ಕಶೇರು ಮೊದಲಾದ 74 ಮಂದಿಗೆ ಸಮಾನ ಎಂದು ಕರೆಯಿಸುವರು. **ಸುರಾಸ್ಯಾತ್ಮಜರಿಗೆ** - ಅಗ್ನಿಪುತ್ರರಾದ 16,100 ಮಂದಿಗೆ, **ಕರ್ಮಪ** - ಕರ್ಮಾಭಿಮಾನಿಯಾದ, **ಪುಷ್ಕರನು** - ಪುಷ್ಕರ ಎಂಬ ದೇವತೆಯು (23ನೆಯ ಕಕ್ಷಾ), **ಉತ್ತಮನು** - ಉತ್ತಮನು. **ಪುಷ್ಕರಣಿಗೆ**- ಈ ಪುಷ್ಕರನಿಗಿಂತಲೂ, **ಶನೈಶ್ಚರನು ಉತ್ತಮನು**- ಶನಿರಾಯನು ಉತ್ತಮನು ( 24ನೆಯ ಕಕ್ಷಾ ). **ತರಣಿಜಗೆ** - ಸೂರ್ಯಪುತ್ರನಾದ ಶನಿಗಿಂತ, **ಉತ್ತಮಳು ಉಷಾ** - ಉಷಾದೇವಿಯು ಉತ್ತಮಳು ( 25ನೆಯ ಕಕ್ಷ). **ಅಶ್ವಿನೀಸುರರರಸಿಗೆ** - ಅಶ್ವಿನೀದೇವತೆಗಳ ಪತ್ನಿಯಾದ ಉಷಾದೇವಿಗಿಂತ, **ಜಲಪ ಬುಧ** - ಜಲಾಭಿಮಾನಿಯಾದ ಬುಧನು (26ನೆಯ ಕಕ್ಷ) **ಉತ್ತಮು**- ಉತ್ತಮನು. **ಶರಧಿಜ** - ಸಮುದ್ರದಲ್ಲಿ ಉತ್ಪನ್ನನಾದ ಚಂದ್ರನು, **ಆತ್ಮಜಗೆ** - ಚಂದ್ರಪುತ್ರನಾದ ಬುಧನಿಗಿಂತ, **ಉತ್ತಮು** - ಉತ್ತಮಳು. **ಸ್ವಹದೇವಿಯು** - 27ನೆಯ ಕಕ್ಷದವಳಾದ ಸ್ವಾಹಾದೇವಿಯು (ಅಗ್ನಿಪತ್ನಿ). **ಉತ್ತಮಳು** - ಬುಧನಿಗಿಂತ ಉತ್ತಮಳೆಂದು ಕರೆಯಿಸುವಳು ॥೪॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ವೃಂದಾವನಗ್ರಾಮಸ್ಥ ಮನೆಗಳಲ್ಲಿರತಕ್ಕ, ಜಾರತನದಿಂದ ಕೃಷ್ಣಾಂಗಸಂಗ ಮಾಡಿದ ಸ್ತ್ರೀಯರು, ಕಶೇರು ಮೊದಲಾದ ಎಪ್ಪತ್ತನಾಲ್ಕು ಜನಗಳಿಗೆ ಸಮಾನರು ಎಂತ ಕರೆಸುವರು. ಅಗ್ನಿಪುತ್ರರಾದ ೧೬,೧೦೦ ಮಂದಿಗೆ ಕರ್ಮಾಭಿಮಾನಿಯಾದ, ೨೩ನೇ ಕಕ್ಷದ ಪುಷ್ಕರನು ಉತ್ತಮನು. ಈ ಪುಷ್ಕರನಿಗಿಂತಲೂ ೨೪ನೇ ಕಕ್ಷದವನಾದ ಶನಿರಾಯನು ಉತ್ತಮನು. ಈ ಸೂರ್ಯಪುತ್ರ ಶನಿರಾಯಗೆ ಉಷಾದೇವಿಯು ಉತ್ತಮಳು. ಅಶ್ವಿನೀದೇವತೆಗಳ ಹೆಂಡತಿಯಾದ ೨೫ನೇ ಕಕ್ಷದವಳಾದ ಉಷಾದೇವಿಗೆ ೨೬ನೇ ಕಕ್ಷದ ಜಲಾಭಿಮಾನಿ

ಯಾದ ಬುಧನು ಉತ್ತಮನು. ಸಮುದ್ರೋದ್ಭವನಾದ ಚಂದ್ರಪುತ್ರನಾದ ಬುಧಗೆ ೨೭ನೇ ಕಕ್ಷದವಳಾದ ಸ್ವಾಹಾದೇವಿಯು ಉತ್ತಮಳು ಎಂತ ಕರಸೋವಳಾಗತಾಳೆ ಎಂತ ತಾತ್ಪರ್ಯ ॥೪॥

## ೨. ಭಾವಪ್ರಕಾಶಿಕೆ-

ಗೋಪಿಕಾಸ್ತ್ರೀಯರು, ಅಗ್ನಿಪುತ್ರರಾದ 16,100 ಮಂದಿ ಸ್ತ್ರೀಯರಿಗೆ ಸರಿಯೆನಿಸುವರು. ಇವರಿಗಿಂತಲೂ ಕರ್ಮಾಭಿಮಾನಿಯಾದ ಪುಷ್ಕರನು ಉತ್ತಮನು. ಪುಷ್ಕರನಿಗೆ ಶನೈಶ್ಚರನು ಉತ್ತಮನು. ಸೂರ್ಯಪುತ್ರನಾದ ಶನೈಶ್ಚರನಿಗೆ ಅಶ್ವಿನೀದೇವತೆಗಳ ಪತ್ನಿಯಾದ ಉಷಾದೇವಿಯು ಉತ್ತಮಳು. ಆಕೆಗಿಂತಲೂ ಜಲಾಭಿಮಾನಿಯಾದ ಬುಧನು ಉತ್ತಮನು. ಸಮುದ್ರದಲ್ಲಿ ಹುಟ್ಟಿದ ಚಂದ್ರನ ಮಗನಾದ ಬುಧನಿಗೆ ಸ್ವಾಹಾದೇವಿಯು ಉತ್ತಮಳೆಂದು ಕರೆಸುವಳು ॥೪॥

## ೩. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ -

'ಸರಿ' ಇತಿ ॥ ಹಿಂದೆ ಉಕ್ತಸಂಖ್ಯೋಪೇತಾಃ ॥ 'ಗಂ' ಅವರಿಂದ ॥ 'ದ್ವಿಗುಣಾಧಮಾಃ' ಇತಿ ಚ ಜ್ಞೇಯಮ್ ॥ ಏತಾದೃಶತಾತ್ಪರ್ಯೇ ಚ - 'ಕೃಷ್ಣಪ್ರಿಯಾಭ್ಯಃ ಗೋಪೀಭ್ಯಃ ಭಕ್ತಿತಃ ದ್ವಿಗುಣಾಧಿಕಾಃ ॥ ಮಹಿಷ್ಯೋಷ್ಟೌ ವಿನಾಯಾಃ ತಾಃ ಕಥಿತಾಃ ಕೃಷ್ಣವಲ್ಲಭಾಃ ॥' ಇತಿ ॥ ವ್ರಜೌಕಸ ವಿವೇಕಃ - ಗೋಪಾಂಗನಾಃ ದ್ವಿವಿಧಾಃ ॥ ಕೃಷ್ಣೋದ್ವಾಹಿತಾಃ ಕಾತ್ಯಾಯನೀವ್ರತಧರಾಃ ಸ್ವಪತಿತ್ವಹೇತೋಃ । ತದನ್ಯಾಃ ಅನ್ಯೋದ್ವಾಹಿತಾಃ ಶ್ರೀಕೃಷ್ಣಭಕ್ತಾಃ ॥ ಇತಿ ॥ ಅನ್ಯೈಃ ಧೃತಾಃ ಅಯುಗಬಾಣಬಲಾಭಿಸುನ್ನಾಃ' ಇತ್ಯುಕ್ತೇಃ । 'ಅಥೋ ಅಪಿ ಪರಮಾಪ್ಸರಸಃ ಪ್ರರಾಮಾಃ ॥' ಇತ್ಯುಕ್ತೇಃ ॥ ತತಃ ಯಶೋದಾನಂದಗೇಹಿನೀ ॥ ತತಃ ದೇವಕೀ ॥ ಕರ್ಮ ಪುಷ್ಕರಃ ತತಃ ದಶಗುಣ್ಯೈಃ ನೀಚಃ ॥ 'ಉತ್ತಮ' - ಏತೇಭ್ಯಃ ಅಧಿಕಃ ಉದ್ದಿಷ್ಟಃ ಶನಿಃ ಪೃಥಿವ್ಯಭಿಮಾನವಾನ್ ॥ ತರಣಿಜಃ ಶನಿಃ ॥ 'ಶನೇರಶ್ವಿಭಾರ್ಯೋಷಾ' ಇತ್ಯುಕ್ತೇಃ ಪ್ರವರಾ ॥ ಪುಷ್ಕರೇಣ ತು ಶ್ರೇಷ್ಠಾ ದಶಗುಣ್ಯೈಃ ಪ್ರೋಕ್ತಾ ॥ ಉಷಸಸ್ತು ಬುಧಃ ಅಧಿಕಃ ॥ 'ಶರಧಿಜ' ಚಂದ್ರ ॥ ಬುಧಾದಪಿ ಅಧಿಕಾ ಸ್ವಾಹಾ ಉಷಸಸ್ತು ದಶಾಧಿಕಾ ॥೪॥

**ಕನ್ನಡಾರ್ಥ -**

ಮೊದಲು ಅಗ್ನಿಪುತ್ರರಾಗಿದ್ದು ಅನಂತರ ತಪಸ್ಸಿನಿಂದ ಶ್ರೀಕೃಷ್ಣಪತ್ನಿಯರಾದ ೧೬,೧೦೦ ಸ್ತ್ರೀಯರುಗಳಿಗಿಂತ ಶ್ರೀಕೃಷ್ಣನಿಂದ ಉಪಭುಕ್ತರಾದ ಗೋಪಿಕಾಸ್ತ್ರೀಯರು ಎರಡು ಗುಣಗಳಿಂದ ಕಡಿಮೆಯುಳ್ಳವರು. ಗೋಪಾಂಗನೆಯರಲ್ಲಿ ಎರಡು ಬಗೆಯವರಿರುತ್ತಾರೆ. ಶ್ರೀಕೃಷ್ಣನಿಂದ ಲಗ್ನವಾದವರು, ಕಾತ್ಯಾಯನೀ ವ್ರತವನ್ನು ಮಾಡಿರುವವರು ಕೆಲವರು. ಕೆಲವರು ಬೇರೆಯವರನ್ನು ಮದುವೆಯಾಗಿ ಶ್ರೀಕೃಷ್ಣನಿಂದ ಉಪಭೋಗವನ್ನು ಹೊಂದಿದವರು. 'ಬೇರೆಯ ಪತಿಗಳಿದ್ದರೂ ಅನಂಗಬಾಣಗಳ ವಶದಿಂದ ಶ್ರೀಕೃಷ್ಣನಲ್ಲಿ ಬಂದರು' ಎಂದು ಹೇಳುವ ಭಾರತತಾತ್ಪರ್ಯನಿರ್ಣಯ ವಚನಗಳು ಆಧಾರವಿವೆ. ಇಬ್ಬರೂ ಶ್ರೇಷ್ಠ ಅಪ್ಸರೆಯರು. 'ಪೂರ್ವದಲ್ಲಿ ತಪಸ್ಸನ್ನಾಚರಿಸಿದವರು' ಎಂದು ಹೇಳಲಾಗಿದೆ. (ಅನಂತರ ನಂದಪತ್ನಿ ಯಶೋದಾ. ಅನಂತರ ದೇವಕೀ). ಅನಂತರ ಕರ್ಮ ಪುಷ್ಕರನು ಹತ್ತು ಗುಣಗಳಿಂದ ಕಡಿಮೆಯುಳ್ಳವನು. ಇವರೆಲ್ಲರಿಂದ ಶನಿಯು ಅಧಿಕನು. ಪೃಥಿವೀ ಕಲೆಗೆ ಅಭಿಮಾನಿಯು. ತರಣಿಜ-ಶನಿ. (ಸೂರ್ಯನ ಮಗ). ಶನಿಗಿಂತ ಅಶ್ವಿನಿಪತ್ನಿಯಾದ ಉಷಾದೇವಿ ಅಧಿಕಳು ಎಂದು ಹೇಳಲಾಗಿದೆ. ಪುಷ್ಕರನಿಗಿಂತ ಉಷಾ ಹತ್ತು ಗುಣಗಳಿಂದ ಹಿರಿಯಳು, ಬುಧನು ಉಷಾದೇವಿಗಿಂತ ಅಧಿಕನು. ಶರಧಿಜ - ಚಂದ್ರ, ಅವನ ಸುತ - ಬುಧ. ಬುಧನಿಗಿಂತ ಸ್ವಾಹಾ ಅಧಿಕಳು ಉಷಾಗಿಂತ ಹತ್ತು ಗುಣಗಳಿಂದ ಉತ್ತಮಳು ॥೪॥

## ೪. ಶ್ರೀಗುರು ಹೃದಯ ಪ್ರಕಾಶಿಕೆ

ಈ ೧೬,೧೦೦ ಜನ ಕೃಷ್ಣಪತ್ನಿಯರಿಗೆ ಗೋಕುಲದ ಗೋಪಸ್ತ್ರೀಯರು ಸಮಾನರು. ಇವರಿಗಿಂತ ಕರ್ಮಾಧಿಪತಿ ಪುಷ್ಕರ ಉತ್ತಮ. ಆತನಿಗಿಂತ ಅಶ್ವಿನಿ ದೇವತೆಗಳ ಪತ್ನಿ ಉಷಾದೇವಿ ಉತ್ತಮಳು. ಆಕೆಗಿಂತ ಜಲಾಧಿಪತಿ ಬುಧ ಉತ್ತಮನು. ಆತನಿಗಿಂತ ಸ್ವಾಹಾದೇವಿ ಉತ್ತಮಳು ॥೪॥

## ಸರ್ವವ್ಯಾಖ್ಯಾನ ಸಾರಸಂಗ್ರಹ

**೧. ಸುರಾಸ್ಯಾತ್ಮಜರಿಗೆ** - ಸುರ - ದೇವತೆಗಳು, ಆಸ್ಯ - ಮುಖ. ದೇವತೆಗಳ ಮುಖನೆಂದು ಪ್ರಖ್ಯಾತನಾದ ಅಗ್ನಿ. ಅಗ್ನಿ ದ್ವಾರವೇ ದೇವತಾ

ವರ್ಗ ಆಹುತಿಯನ್ನು ಸ್ವೀಕರಿಸುವರು. ಇದರಿಂದ ಅಗ್ನಿಗೆ ದೇವಮುಖನೆಂತ ಹೆಸರು.

ಅಗ್ನಿಯ ಆತ್ಮಜರು ಎಂದರೆ, ಅಗ್ನಿಯ ಪುತ್ರರಾದ ಋಷಿಗಳು. ಇವರು ಶ್ರೀಕೃಷ್ಣನ ಅಂಗಸಂಗ ಬಯಸಿ, 16,100 ಮಂದಿ ಅವತರಿಸಿ, ಶ್ರೀಕೃಷ್ಣ ಪತ್ನಿಯರಾದರು. ಇಂತಹ 16,100 ಮಂದಿ ಶ್ರೀಕೃಷ್ಣಪತ್ನಿಯರಿಗೆ, ಗೋಕುಲದ ಗೋಪಿಕಾಸ್ತ್ರೀಯರು ಸಮಾನಕಕ್ಷಾಪನ್ನರು. ವ್ರಜ - ಗೋಕುಲ. ವ್ರಜೌಕಸರೆಂದರೆ, ಗೋಕುಲದ ಗ್ರಾಮಗಳಲ್ಲಿ ವಾಸಿಸುವ ಗೋಪಿಕಾ ಸ್ತ್ರೀಯರೆಂದರ್ಥ.

೨. **ಕರ್ಮಪ ಪುಷ್ಕರನು** - ಪುಷ್ಕರ ಎಂಬ ದೇವತೆಯು ಕರ್ಮಾಭಿಮಾನಿ. ಪುಷ್ಕರನು 16,100 ಮಂದಿ ಅಗ್ನಿಪುತ್ರರಾದ ಶ್ರೀಕೃಷ್ಣಪತ್ನಿಯರು ಮತ್ತು ತತ್ಸಮಾನರಾದ ಗೋಪಿಕಾಸ್ತ್ರೀಯರಿಗಿಂತಲೂ ಉತ್ತಮನು. (23ನೆಯ ಕಕ್ಷ).

೩. ಪುಷ್ಕರನಿಗಿಂತ **ಶನೈಶ್ಚರನು** ಉತ್ತಮನು (24ನೆಯ ಕಕ್ಷ). ಶನಿ ರಾಯನು ಪೃಥ್ವೀತತ್ತ್ವಕ್ಕೆ ಅಭಿಮಾನಿ ಮತ್ತು ಸೂರ್ಯದೇವನಿಗೆ ಛಾಯಾದೇವಿ ಯಲ್ಲಿ ಸಂಜಾತನು. ನವಗ್ರಹಗಳಲ್ಲಿ ಶನಿಯು ಒಬ್ಬನು.

೪. **ತರಣಿಜನಿಗೆ** - ತರಣಿ - ಸೂರ್ಯ. ತರಣಿಜ - ಸೂರ್ಯ-ಛಾಯಾ ದೇವಿಯರ ಪುತ್ರ ಶನೈಶ್ಚರನು.

೫. **ಉಷಾ ಅಶ್ವಿನೀ ಸುರರ ಅರಸಿ** - ಉಷಾದೇವಿಯು, ನಾಸಿ ಕೇಂದ್ರಿಯಕ್ಕೆ ಅಭಿಮಾನಿಗಳಾದ ಅಶ್ವಿನೀದೇವತೆಗಳ (ನಾಸತ್ಯ ಮತ್ತು ದಸ್ರ ಎಂಬ ಅವಳಿ ದೇವತೆಗಳು) ಪತ್ನಿ (ಅಶ್ವಿನೀ ಸುರರ ಅರಸಿ). ಉಷಾದೇವಿಯು ಶನೈಶ್ಚರನಿಗಿಂತ ಉತ್ತಮಳು. (25ನೆಯ ಕಕ್ಷ).

೬. **ಜಲಪ ಬುಧ** - (26ನೆಯ ಕಕ್ಷ). ಬುಧನು ಜಲಾಭಿಮಾನಿಯಾದ ದೇವತೆ. ಬುಧನು ಚಂದ್ರನ ಪುತ್ರನು. ಇದನ್ನು **ಶರಧಿಜಾತ್ಮಜ** ಎಂದಿದ್ದಾರೆ, ದಾಸರಾಯರು. ಅಂದರೆ, ಶರಧಿ - ಸಮುದ್ರ. ಸಮುದ್ರಮಥನ ಸಮಯ ದಲ್ಲಿ, ಜ - ಹುಟ್ಟಿದ ಚಂದ್ರ. ಆತ್ಮಜ - ಚಂದ್ರನ ಪುತ್ರ ಬುಧ. ಬುಧನು ಉಷಾದೇವಿಗಿಂತ ಉತ್ತಮನು.

೭. **ಸ್ವಾಹಾದೇವಿಯು** - (ಅಗ್ನಿಪತ್ನಿ) ಬುಧನಿಗಿಂತ ಉತ್ತಮಳು. (27ನೆಯ ಕಕ್ಷ) ॥೪॥

**ಪದ್ಯ - ೫**

**ಮೂಲ -**

**ಅನಳಭಾರ್ಯಳಿಗಿಂತನಾಖ್ಯಾ ।**
**ತನಿಮಿಷರನಾಖ್ಯಾತರಿಂದಲಿ ।**
**ಘನಪ ಪರ್ಜನ್ಯಾನಿರುದ್ಧನ ಸ್ತ್ರೀ ಉಷಾದೇವಿ ॥**
**ದ್ಯುನದಿ ಸಂಜ್ಞಾ ಶ್ಯಾಮಲ ರೋ ।**
**ಹಿಣಿಗಳಾರ್ವರು ಸಮರನಾಖ್ಯಾ ।**
**ತನಿಮಿಷೋತ್ತಮರಿವರಿಗಿಂತಲಿ ನೂರು ಕರ್ಮಜರು ॥ ೫ ।**

**ಅವತರಣಿಕೆ -**

ಮುಂದಿನ ಸಾಲಿನ ದೇವತಾತಾರತಮ್ಯಕ್ರಮವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ -**

**ಅನಳಭಾರ್ಯಳಿಗಿಂತ**- ಅಗ್ನಿಪತ್ನಿಯಾದ ಸ್ವಾಹಾದೇವಿಗಿಂತಲೂ, **ಅನಾಖ್ಯಾತ ಅನಿಮಿಷರು** - ಅನಾಖ್ಯಾತದೇವತೆಗಳು ಉತ್ತಮರು ( 28ನೆಯ ಕಕ್ಷ ), **ಅನಾಖ್ಯಾತರಿಂದಲಿ** - ಅನಾಖ್ಯಾತದೇವತೆಗಳಿಗಿಂತಲೂ, **ಘನಪ ಪರ್ಜನ್ಯ** - ಮೇಘಾಭಿಮಾನಿಯಾದ ಪರ್ಜನ್ಯದೇವತೆ, **ಅನಿರುದ್ಧನ ಸ್ತ್ರೀ** - ಅನಿರುದ್ಧನ ಪತ್ನಿ, **ಉಷಾದೇವಿ** - ಉಷಾ ಎಂಬ ದೇವತೆ ( ಇವಳಿಗೆ ವಿರಾಟ್ ದೇವಿ ಎಂಬ ನಾಮಾಂತರವೂ ಉಂಟು). **ದ್ಯುನದಿ** - ಸ್ವರ್ಗನದಿಯಾದ ಗಂಗಾದೇವಿ, **ಸಂಜ್ಞಾ** - ಸೂರ್ಯಪತ್ನಿ ಸಂಜ್ಞಾದೇವಿ, **ಶ್ಯಾಮಲಾ** - ಯಮದೇವರ ಪತ್ನಿ ಶ್ಯಾಮಲಾದೇವಿ, **ರೋಹಿಣಿ** - ಚಂದ್ರಪತ್ನಿ ರೋಹಿಣಿದೇವಿ. **ಆರ್ವರು** - ಪರ್ಜನ್ಯ, ಉಷಾ, ಗಂಗಾ, ಸಂಜ್ಞಾ, ಶ್ಯಾಮಲಾ, ರೋಹಿಣಿ. ಈ ಆರು ಮಂದಿ (29ನೆಯ ಕಕ್ಷ). **ಸಮರು** - ಸಮಾನ ಕಕ್ಷದವರು. **ಅನಾಖ್ಯಾತ ಅನಿಮಿಷರು** - ಅನಾಖ್ಯಾತರಾದ ದೇವತೆಗಳಿಗಿಂತ, **ಉತ್ತಮರು** - ಉತ್ತಮರು. **ಇವರಿಗಿಂತಲಿ** - ಈ ಆರು ಮಂದಿಗಿಂತಲೂ, **ನೂರು ಕರ್ಮಜರು**

ನೂರುಮಂದಿ ಪ್ರಿಯವ್ರತಾದಿ ಕರ್ಮಜದೇವತೆಗಳಾದ ರಾಜರು ಉತ್ತಮರೆಂದು ತಾತ್ಪರ್ಯ (30ನೆಯ ಕಕ್ಷ) ॥೫॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅನಾಖ್ಯಾತದೇವತೆಗಳಾರಭ್ಯ ಕರ್ಮಜರ ಪರ್ಯಂತ ತಾರತಮ್ಯವನ್ನ ಹೇಳುತಾರೆ.

ಅಗ್ನಿಭಾರ್ಯ ಸ್ವಾಹಾದೇವಿಗಿಂತಲೂ ೨೮ನೇ ಕಕ್ಷದ ಅನಾಖ್ಯಾತ ದೇವತೆಗಳು ಉತ್ತಮರು. ಈ ಅನಾಖ್ಯಾತದೇವತೆಗಳಿಗಿಂತಲೂ, ಮೇಘಾಭಿಮಾನಿಯಾದ ಪರ್ಜನ್ಯ, ಅನಿರುದ್ಧನ ಪತ್ನಿ ಉಷಾದೇವಿ (ವಿರಾಟ್ ಎಂತ ನಾಮಾಂತರ ಉಂಟು), ವರುಣನ ಪತ್ನಿ ಭಾಗೀರಥಿದೇವೇರು, ಸಂಜ್ಞಾದೇವೇರು, ಶ್ಯಾಮಲಾದೇವೇರು, ರೋಹಿಣೀದೇವೇರು ಅಂತು ಆರು ಮಂದಿಗಳು ೨೯ನೇ ಕಕ್ಷದವರು ಸಮಾನರು. ಅನಾಖ್ಯಾತರಾದ ದೇವತೆಗಳಿಂದ ಉತ್ತಮರು. ಈ ಆರುಮಂದಿಗಿಂತಲೂ, ೩೦ನೇ ಕಕ್ಷದವರಾದ ಕರ್ಮಜರು, ನೂರುಮಂದಿ ಪ್ರಿಯವ್ರತಾದಿರಾಯರುಗಳು ಉತ್ತಮರು ಎಂತ ತಾತ್ಪರ್ಯ॥೫॥

### ೨. ಭಾವಪ್ರಕಾಶಿಕೆ

ಅಗ್ನಿದೇವರ ಹೆಂಡತಿಯಾದ ಸ್ವಾಹಾದೇವಿಗಿಂತಲೂ, ದೇವತೆಗಳಲ್ಲಿ ಅನಾಖ್ಯಾತರಾದ, ಅನಾಖ್ಯಾತದೇವತಾವರ್ಗ ಉತ್ತಮರು. ಅನಾಖ್ಯಾತರಿಂದ ಮೇಘಾಭಿಮಾನಿಯಾದ ಪರ್ಜನ್ಯನು ಉತ್ತಮನು. ಇವನಿಗೆ ಅನಿರುದ್ಧನ ಸ್ತ್ರೀ ಉಷಾದೇವಿ, ಗಂಗಾದೇವಿ, ಸೂರ್ಯನ ಪತ್ನಿ ಸಂಜ್ಞಾ, ಯಮದೇವರ ಹೆಂಡತಿ ಶ್ಯಾಮಳಾದೇವಿ, ಚಂದ್ರನ ಪತ್ನಿ ರೋಹಿಣೀ ಇವರ್ಯವರು ಸಮರು. ಈ ಆರು ಮಂದಿ ಅನಾಖ್ಯಾತದೇವತೆಗಳಿಗಿಂತ ಉತ್ತಮರು. ಇವರಿಗಿಂತ ಕರ್ಮಪ್ರಧಾನರಾಗಿ ಪದವಿಯನ್ನು ಹೊಂದಿದ ಕರ್ಮದೇವತೆಗಳೆಂದು ಕರೆಯಿಸುವ 100 ಮಂದಿ ಉತ್ತಮರು ॥೫॥

೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ -

'ಅನಲ' ಇತಿ ॥ 'ಘನಪಃ' - ಮೇಘಪಾಲಾ ॥ ಸ್ವಾಹಾಯಃ ... ಣಾತ್ ಶ್ರೇಷ್ಠಾ। ವಿರಾಟ್ ಸಂಜ್ಞಾ ಚ ರೋಹಿಣೀ ॥ 'ಅನಾಖ್ಯಾತಾ' ಇತಿ ॥ ಮಹಿಷೀಣಾಂ ಶ್ರೈಷ್ಠ್ಯಂ ಆವೇಶಾತ್ ॥ ಪರ್ಜನ್ಯಾದಿಭ್ಯಃ ಏತೇ... ಚ್ಯವನೋಚಥ್ಯ ಇತ್ಯಾದ್ಯುಕ್ತಾ। ॥೫॥

ಕನ್ನಡಾರ್ಥ -

'ಘನಪಃ' ಮೇಘಪಾಲನಾದ ಪರ್ಜನ್ಯದೇವನು. ಸ್ವಾಹಾದೇವಿ... ವಿರಾಟ್ (ಉಷಾ), ಸಂಜ್ಞಾ, ರೋಹಿಣೀ ಇವರು ಎರಡು ಗುಣಗ... ಅಧಿಕರು. ಇವರು ಅನಾಖ್ಯಾತವೇವತೆಗಳಿಗೆ ಸಮರು. ಇವರಿಂದ ... ಮಹಿಷಿಯರು ಆವೇಶದಿಂದ ಮಾತ್ರ ಶ್ರೇಷ್ಠರು, ಸ್ವಾಭಾವಿಕವಾಗಿ ... ಇವರಿಗಿಂತ ಕರ್ಮಜದೇವತೆಗಳು ಉತ್ತಮರು.

ಈ ಪರ್ಜನ್ಯ ಮುಂತಾದವರಿಗಿಂತ ಚ್ಯವನ ಉಚಥ್ಯ ಮುಂತಾದವ... ಶ್ರೇಷ್ಠರೆಂದು ಪ್ರಮಾಣಗಳಲ್ಲಿ ಹೇಳಲಾಗಿರುತ್ತದೆ. ॥೫॥

೪. ಶ್ರೀಗುರುಹೃದಯಪ್ರಕಾಶಿಕೆ -

ಅಗ್ನಿಪತ್ನಿ ಸ್ವಾಹಾದೇವಿಗಿಂತ ಅನಾಖ್ಯಾತರೆಂಬ ಅಪ್ರಸಿದ್ಧ ದೇವ... ಗಳು ಉತ್ತಮರು. ಅವರಿಗಿಂತ ಮೇಘಾಧಿಪತಿ ಪರ್ಜನ್ಯ ಉತ್ತಮ... ಅನಿರುದ್ಧನ ಪತ್ನಿ ಉಷಾದೇವಿ, ದ್ಯುನದಿ ಎಂಬ ಗಂಗೆ, ಸೂರ್ಯಪತ್ನಿ ಸಂಜ್ಞಾ ಯಮಪತ್ನಿ ಶ್ಯಾಮಲಾ, ಚಂದ್ರಪತ್ನಿ ರೋಹಿಣೀ ಇವರೈದು ಜನ ಸಮರು. ಈ ಐದು ಜನಕ್ಕಿಂತ ಕರ್ಮಜರೆಂಬ ನೂರು ಜನ ರಾಜರು ಉತ್ತಮರು ॥೫॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಅನಳಭಾರ್ಯಳಿಗಿಂತ - ಅಗ್ನಿದೇವರ ಪತ್ನಿಯಾದ ಸ್ವಾಹಾದೇವಿ... ಗಿಂತಲೂ, (ಅನಳ - ಅಗ್ನಿ, ಭಾರ್ಯ - ಪತ್ನಿಯಾದ ಸ್ವಾಹಾದೇವಿ)

ನಾಖ್ಯಾತ ದೇವತೆಗಳು ಉತ್ತಮರು (ಅನಾಖ್ಯಾ ಅನಿಮಿಷರು, ಎಂದರೆ ನಾಖ್ಯಾತ ದೇವತೆಗಳು) (28ನೆಯ ಕಕ್ಷ).

೨. ಘನಪ - ಘನ ಎಂದರೆ ದಟ್ಟವಾದ ಮೋಡಗಳು. (ಮೇಘಗಳು) ನಪ ಎಂದರೆ ಮೇಘಾಭಿಮಾನಿಯಾದ ಪರ್ಜನ್ಯ.

೩. ಅನಿರುದ್ಧನ ಸ್ತ್ರೀ ಉಷಾದೇವಿ - ಕಾಮನ ಪುತ್ರನು ನಿರುದ್ಧನು. ಅವನ ಪತ್ನಿ ಉಷಾದೇವಿ. ಈಕೆಗೆ ವಿರಾಟ್‌ದೇವಿ ಎಂಬ ಮಾಂತರವೂ ಇದೆ.

೪. ದ್ಯುನದಿ - ದ್ಯು - ಸ್ವರ್ಗಲೋಕ. ದ್ಯುನದಿ - ಸ್ವರ್ಗಲೋಕದಲ್ಲಿ ರಿಯುವ ಆಕಾಶಗಂಗೆ ಅಥವಾ ಅಮರತರಂಗಿಣೀ ಎಂಬ ಗಂಗಾನದಿ. ದಕ್ಕೆ ಅಭಿಮಾನಿಯಾದ ಗಂಗಾದೇವಿ.

೫. ಸಂಜ್ಞಾ - ಸೂರ್ಯನ ಪತ್ನಿ ಸಂಜ್ಞಾದೇವಿ.

೬. ಶ್ಯಾಮಲಾ ಯಮಧರ್ಮರಾಯನ ಮಡದಿ.

೭. ರೋಹಿಣೀ - ಚಂದ್ರನ ಪತ್ನಿಯಾದ ರೋಹಿಣೀದೇವಿ.

೮. ಈ ಆರ್ವರು - ಪರ್ಜನ್ಯ, ಉಷಾದೇವಿ, ಗಂಗಾ, ಸಂಜ್ಞಾ, ಶ್ಯಾಮಲಾ, ರೋಹಿಣೀ ಈ ಆರುಮಂದಿ ಸಮಾನ ಕಕ್ಷದವರು. 29ನೆಯ ದ ಈ ಆರುಮಂದಿ ದೇವತಾವರ್ಗ, ಅನಾಖ್ಯಾತದೇವತೆಗಳಿಗಿಂತ ತ್ತಮರು.

೯. ನೂರು ಕರ್ಮಜರು - ಕರ್ಮಪ್ರಧಾನರಾಗಿ ಪದವಿಗೆ ಬಂದಿರುವ ಯುವ್ರತರಾಯಾದಿ ನೂರು ಮಂದಿ ಕರ್ಮಜರು 30ನೆಯ ಕಕ್ಷ. ಮೇಲಿನ ಆಮಂದಿ ದೇವತೆಗಳಿಗಿಂತ ಉತ್ತಮರು ॥೫॥

ಪದ್ಯ - ೬

ಮೂಲ -

ಪೃಥು ನಹುಷ ಶಶಿಬಿಂದು ಪ್ರಿಯ ।
ವ್ರತ ಪರೀಕ್ಷಿತ ನೃಪರು ಭಾಗೀ ।
ರಥಿಯ ನೋಡಲ್ಕಧಿಕ ಬಲ್ಯಾದಿಂದ್ರ ಸಪ್ತಕರು ॥

**ಪಿತೃಗಳೇಳೆಂಟಧಿಕವಪ್ಸರ ।
ಸತಿಯರೀರ್ಕೈದೊಂದು ಮನುಗಳು ।
ದಿತಿಜಗುರು ಚ್ಯಾವನ ಉಚಥ್ಯರು ಕರ್ಮಜರು ಸಮರು ॥೬॥**

**ಅವತರಣಿಕೆ -**

30ನೆಯ ಕಕ್ಷಾವನ್ನರಾದ ಕರ್ಮಜರಾದ ನೂರುಮಂದಿ ರಾಜರುಗಳ ವಿಚಾರ ತಿಳಿಸುತ್ತಾರೆ.

**ಪ್ರತಿಪದಾರ್ಥ -**

**ಪೃಥು** - ಪೃಥುರಾಜ, **ನಹುಷ** - ನಹುಷ ಚಕ್ರವರ್ತಿ. **ಶಶಿಬಿಂದು** - ಶಶಿಬಿಂದುರಾಯ. **ಪ್ರಿಯವ್ರತ** - ಪ್ರಿಯವ್ರತರಾಜ, **ಪರೀಕ್ಷಿತ** - ಪರೀಕ್ಷಿದ್ರಾಯ, **ನೃಪರು** - ಇತ್ಯಾದಿ ಅರಸರು 100 ಮಂದಿ. **ಪಿತೃಗಳೇಳು** - ಏಳು ಮಂದಿ ಪಿತೃಗಳು, **ಎಂಟು ಅಪ್ಸರ ಸತಿಯರು** - ಎಂಟು ಮಂದಿ ಅಪ್ಸರ ಸ್ತ್ರೀಯರು ನೂರುಮಂದಿಯೊಳಗೆ ಎಂಟು ಹೋಗುತ್ತಾ ಉಳಿದ 92 ಮಂದಿ (ಅಜಾನಜರಲ್ಲೇ ಸೇರಿದ್ದಾರೆ.). **ಅಧಿಕರು** - ಉತ್ತಮರು. **ಈರ್ಕೈದೊಂದು ಮನುಗಳು** - (ಈರೈದು + ಒಂದು = ೧೦ + ೧ = ೧೧). **ದಿತಿಜಗುರು** - ದೈತ್ಯರ ಗುರುಗಳಾದ ಶುಕ್ರಾಚಾರ್ಯರು. **ಚ್ಯಾವನ ಉಚಥ್ಯರು** - ಚ್ಯವನ ಉಚಥ್ಯ ಇವರೇ ಮೊದಲಾದ 90 ಮಂದಿ ಋಷಿಗಳು. **ಕರ್ಮಜರು ಸಮರು** - ಈ ಮೂವತ್ತೂ ಮಂದಿ ಕರ್ಮಜರು ಸಮರು. **ಭಾಗೀರಥಿಯ ನೋಡಲ್ಕೆ** - ಪೂರ್ವೋಕ್ತ ಗಂಗಾ, ಪರ್ಜನ್ಯಾದಿ ಆರುಮಂದಿಗಳಿಗಿಂತಲೂ ತಾರತಮ್ಯದಲ್ಲಿ ಉತ್ತಮರು ಎಂದರ್ಥ ॥೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ -

ಇನ್ನೂ ೩೦ನೇ ಕಕ್ಷದ ಕರ್ಮಜರಾದ ನೂರುಮಂದಿ ರಾಜರು ಮೊದಲಾದವರ ವಿಚಾರ ಹೇಳುತ್ತಾರೆ.

ಪೃಥುರಾಯ, ನಹುಷರಾಯ, ಶಶಿಬಿಂದುರಾಯ, ಪ್ರಿಯವ್ರತರಾಯ, ಪರೀಕ್ಷಿತರಾಯ ಇವರೇ ಮೊದಲಾದ ಅರಸರು ನೂರುಮಂದಿ, ಬಲಿಯೇ ಮೊದಲಾದ ಏಳುಮಂದಿ ಇಂದ್ರರು. ಚಿರಪಿತೃಗಳು ಏಳುಮಂದಿ. ಅಪ್ಸರ ಸ್ತ್ರೀಯರು ನೂರುಮಂದಿಯೊಳಗೆ ಎಂಟುಮಂದಿ ಹೋಗತಾ ತೊಂಭತ್ತೆರಡು ಮಂದಿ (ಎಂಟು ಮಂದಿ ಆಜಾನಜರಲ್ಲಿ ಸೇರಿದ್ದಾರೆ), ೯೨ ಮಂದಿ ಅಪ್ಸರರು, ೮ ಮಂದಿ ಗಂಧರ್ವರು, ಇವರು ಆಜಾನಜರಲ್ಲಿ ಪಠಿತರಾದವರು. ಗಂಧರ್ವರು ಎಂಟುಮಂದಿ. ಇವರು ಆಜಾನಜರಲ್ಲಿ ಪಠಿತರಾದವರು. ಅವರು ತಾರತಮ್ಯ ದಲ್ಲಿ ಅಧಿಕರಾದವರಾದ್ದರಿಂದ ಆಜಾನಜರಲ್ಲಿ ನ್ಯೂನಮಾಡಿ ಕರ್ಮಜರಲ್ಲಿ ಸೇರಿಸ ಲ್ಪಟ್ಟದೆ. ಮನುಗಳು ಹನ್ನೊಂದುಮಂದಿ. ದೈತ್ಯಗುರುಗಳಾದ ಶುಕ್ರಾ ಚಾರ್ಯರು, ಚಾವನಋಷಿಗಳು, ಉಚಥ್ಯಋಷಿಗಳು ಇವರೇ ಮೊದಲಾದ ಋಷಿಗಳು ೯೦ ಮಂದಿ, ಇನ್ನೂ ಅನೇಕ ಮಂದಿ ಸಮಾನರು. ಈ ಮೂವತ್ತು ಮಂದಿ ಕರ್ಮಜರು ಎಂತ ಅರ್ಥ. ಪೂರ್ವೋಕ್ತ ಗಂಗಾ ಪರ್ಜನ್ಯಾದಿ ಆರು ಮಂದಿಗಿಂತಲೂ ಅಧಿಕರು ಎಂತ ತಾತ್ಪರ್ಯ ॥೬॥

## ೨. ಭಾವಪ್ರಕಾಶಿಕೆ -

ಪೃಥು, ನಹುಷ, ಶಶಿಬಿಂದು, ಪ್ರಿಯವ್ರತ, ಪರೀಕ್ಷಿತ, ಈ ರಾಜರು ಗಳು ತಾರತಮ್ಯದಲ್ಲಿ ಸೋಮಜಾಗಿ ಗಂಗೆ ಮೊದಲಾದವರಿಗಿಂತ ಉತ್ತಮರು. ಬಲಿಚಕ್ರವರ್ತಿ ಮೊದಲಾದ 7 ಮಂದಿ ಇಂದ್ರರು. 8 ಪಿತೃಗಳು. 11 ಮಂದಿ ಮನುಗಳು, ಶುಕ್ರಾಚಾರ್ಯರು, ಉಚಥ್ಯರು ಇವರೆಲ್ಲರೂ ಕರ್ಮಜದೇವತೆಗಳಿಗೆ ಸಮರು ॥೬॥

## ೩. ಶ್ರೀವ್ಯಾಸದಾಸಸಿದ್ಧಾಂತ ಕೌಮುದಿ -

'ಪೃಥು' ಇತಿ ॥ ಅತ್ರ ವಿರೋಧ ಪರಿಹಾರಃ ತು ಅನ್ಯತ್ರ ॥ 'ಎಂಟು' ಗಂಧರ್ವಾಃ ॥ ಕಾಷ್ಟನ ಅಪ್ಸರಸ್ತ್ರೀಯಃ ॥೬॥

## ಕನ್ನಡಾರ್ಥ -

ತತ್ತ್ವಾಭಿಮಾನಿಗಳಂತೆ ನಾಮನಿರ್ದೇಶ ಪೂರ್ವಕವಾಗಿ ವೇದಗಳಲ್ಲಿ ಹೇಳಲ್ಪಡದವರು ಹಾಗೂ ದೇವಕುಲೋತ್ಪನ್ನರಾದವರು ಆಜಾನಜದೇವತೆ

ಗಳು. ಇವರಲ್ಲಿ ಸೇರಿದ ಅನಾಖ್ಯಾತದೇವತೆಗಳು ಕರ್ಮಜದೇವತೆಗಳೆಂದ ಉತ್ತಮರೆಂದು ವಾಜಸನೇಯಸಂಹಿತೆಯಲ್ಲಿ ತೋರಿಬರುತ್ತದೆ. ತೈತ್ತಿರೀಯ ಉಪನಿಷತ್ತಿನಲ್ಲಿ ಕರ್ಮಜದೇವತೆಗಳಿಂದ ಕಡಿಮೆಯವರು, ಎಂದು ಹೇಳಲಾಗು ತ್ತದೆ. ಇಲ್ಲಿ ಬರುವ ವಿರೋಧದ ಪರಿಹಾರ ರೀತಿಯನ್ನು ಬೇರೆ ಕಡೆಯಲ್ಲಿ ನೋಡಿ ತಿಳಿದುಕೊಳ್ಳಬೇಕು. ನಿಜವಾಗಿ ಎರಡೂ ವಾಕ್ಯಗಳಲ್ಲಿ ವಿರೋಧವಿಲ್ಲ. 'ಎಂಟು' ಗಂಧರ್ವರು. ಕೆಲವು ಅಪ್ಸರಸ್ತ್ರೀಯರು. ಹೀಗೆ 'ಎಂಟಧಿಕವಪ್ಸರ ಸ್ತ್ರೀಯರು' ಎಂಬಲ್ಲಿ ಭಾವವನ್ನು ತಿಳಿಯಬೇಕು ॥೬॥

## ೫. ಶ್ರೀಗುರುಹೃದಯಪ್ರಕಾಶಿಕೆ

ಈ ಕರ್ಮಜರ ಪೈಕಿ ಪೃಥುರಾಯ, ನಹುಷರಾಯ, ಶಶಿಬಿಂದು, ಪ್ರಿಯ ವ್ರತ, ಪರೀಕ್ಷಿತು ಇವರುಗಳು ಭಾಗೀರಥಿಗಿಂತ ಅಧಿಕರು. ಬಲಿ ಮೊದಲಾದ ಏಳುಜನ ಇಂದ್ರರು, ಏಳುಜನ ಪಿತೃಗಳು, ಎಂಟುಜನ ಗಂಧರ್ವರು, ಎಂಟು ಜನ ಅಪ್ಸರಸ್ತ್ರೀಯರು, ಈಶ್ವರ ಮೊದಲು ಮನುಗಳು ಎಂದರೆ ಹನ್ನೊಂದು ಜನ ಮನುಗಳು, ದಿತಿಜಗುರು ಎಂದರೆ ದೈತ್ಯಗುರು ಶುಕ್ರಾಚಾರ್ಯರು, ಚ್ಯವನ ಉತಥ್ಯಋಷಿಗಳು ಕರ್ಮಜರಿಗೆ ಸಮಾನರು ॥೬॥

## ಸರ್ವವ್ಯಾಖ್ಯಾನಸಾರ ಸಂಗ್ರಹ

೧. ಪ್ರಸಕ್ತ ಪದ್ಯದಿಂದ ಪೃಥು ಇತ್ಯಾದಿ ಕರ್ಮಜರಾದ ನೂರುಮಂದಿ ನೃಪರ ತಾರತಮ್ಯ ವಿಚಾರವನ್ನು ಹೇಳುತ್ತಾರೆ.

೨. ಪೃಥು - ವೇನನ ಪುತ್ರ. ವೇನನು ಪರಮನಾಸ್ತಿಕನು. ಆ ಕಾರಣ ದಿಂದ ಭೂಮಿಯಲ್ಲಿ ಬೆಳೆಯಾಗದೆ, ಬಿತ್ತಿದ ಬೀಜಗಳನ್ನೆಲ್ಲಾ ಭೂಮಿಯು ನುಂಗುತ್ತಿತ್ತು. ಆಗ ಋಷಿಗಳ ಆದೇಶದಂತೆ ಪ್ರಜೆಗಳೆಲ್ಲರೂ ಒಗ್ಗೂಡಿ ವೇನನ ಶರೀರವನ್ನು ಮಥನ ಮಾಡಿದರು. ಆಗ ಪೃಥುರಾಜ ಹುಟ್ಟಿದ. ಪೃಥು ಪ್ರಜೆ ಗಳ ಕಷ್ಟವನ್ನು ನೋಡಿ, ಅವನಿಗೆ ಮನ ಕರಗಿತು. ಭೂಮಿಯನ್ನು ನಿಗ್ರಹಿಸಿ ಅದು ನುಂಗಿದ್ದ ಸಕಲ ವಸ್ತುಗಳನ್ನೂ ಕೊಡಿಸಿ, ಪ್ರಜೆಗಳಿಗೆ ಸುಖವನ್ನುಂಟು

ಮಾಡಿದ ಮಹಾಚಕ್ರವರ್ತಿ. ಈ ಕಾರಣದಿಂದ ಭೂಮಿಗೆ **ಪೃಥಿವೀ** (ಪೃಥು ರಾಜನ ಪುತ್ರಿ) ಎಂಬ ಹೆಸರು ಬಂದಿತು. ಈತನ ಪತ್ನಿ **ಅರ್ಚಿಸ್** ಎಂಬಾಕೆ. **ಅಂತರ್ಧಾನ**ನೆಂಬುವನು ಪೃಥು ಚಕ್ರವರ್ತಿಯ ಪುತ್ರ. ಪುರಾಣಪ್ರಸಿದ್ಧನಾದ **ಪ್ರಾಚೀನಬರ್ಹಿ** ಪೃಥುವಿನ ಮೊಮ್ಮಗ.

೩. ನಹುಷ- ಚಂದ್ರವಂಶದ ಅರಸು. **ಆಯುರಾಜನು** ಊರ್ವಶೀ ಪುರೂರವರ ಪುತ್ರ. ಆಯುರಾಜನಿಂದ ಸ್ವರ್ಭಾನುವಿನಲ್ಲಿ ಜನಿಸಿದವನೇ **ನಹುಷಚಕ್ರವರ್ತಿಯು** ಈತನ ಪತ್ನಿ, ಪಿತೃದೇವತೆಗಳ ಕನ್ಯೆಯಾಗಿದ್ದ **ವಿರಜೆ**. ನಹುಷನಿಗೆ ಯತಿ, ಯಯಾತಿ, ಸಂಯಾತಿ, ಆಯತಿ, ಆಯತಿ, ಧ್ರುವ ಎಂಬ ಆರುಮಂದಿ ಪುತ್ರರು. ಒಮ್ಮೆ ರಾಜನ ಪಲ್ಲಕ್ಕಿಯನ್ನು ಸಪ್ತರ್ಷಿಗಳು ಹೊರುತ್ತಿದ್ದರು. ಸಪ್ತರ್ಷಿಗಳ ಪೈಕಿ ಅಗಸ್ತ್ಯಮಹಾಮುನಿಗಳೂ ಇದ್ದರು. 'ಸರ್ಪ, ಸರ್ಪ' (ವೇಗ ವೇಗ ನಡೆ) ಎಂದು, ಮದೋನ್ಮತ್ತನಾದ ನಹುಷನು ಅಗಸ್ತ್ಯರನ್ನು ಕಾಲಿನಿಂದ ಒದ್ದ. ಕ್ರುದ್ಧರಾದ ಅಗಸ್ತ್ಯಮುನಿಗಳು 'ಸರ್ಪೋ ಭವ' (ಸರ್ಪನಾಗಿ ಹುಟ್ಟು) ಎಂದು ಶಪಿಸಿದರು. ಕೂಡಲೇ ನಹುಷ ಘಟ ಸರ್ಪವಾಗಿ ಭೂಮಿಗೆ ಬಿದ್ದ. ಪಾಂಡವರ ವನವಾಸಕಾಲದಲ್ಲಿ ಭೀಮಸೇನ ದೇವರನ್ನು ನಹುಷ ಬಲವಾಗಿ ಸುತ್ತಿಕೊಂಡು ಕೆಲವು ಪ್ರಶ್ನೆಗಳನ್ನು ಕೇಳಿದ. ಧರ್ಮರಾಯನು ಭೀಮನನ್ನು ಅರಸುತ್ತಾ ಬಂದು, ಸರ್ಪದ ಪ್ರಶ್ನೆಗಳಿಗೆಲ್ಲಾ ಸಮರ್ಪಕವಾದ ಉತ್ತರಗಳನ್ನಿತ್ತ. ತಕ್ಷಣ ಸರ್ಪವು ಭೀಮನನ್ನು ಬಿಟ್ಟಿತು. ಸರ್ಪದೇಹವನ್ನು ತೊರೆದು, ನಹುಷ ಅವರನ್ನು ಆಶೀರ್ವದಿಸಿ ಸ್ವಸ್ಥಾನಕ್ಕೆ ಹೋದನು.

೪. **ಶಶಿಬಿಂದು**- ಯದುವಂಶದ ಒಬ್ಬ ರಾಜರ್ಷಿ. ವೃಷ್ಣಿವಂಶದ ಚಿತ್ರರಥನ ಮಗ. ಇವನಿಗೆ ಲಕ್ಷಮಂದಿ ಪತ್ನಿಯರು. ಒಬ್ಬೊಬ್ಬರಿಗೂ ಅನೇಕ ಪುತ್ರಸಂತಾನ. ಬಿಂದುಮತಿ ಈತನ ಪುತ್ರಿ. ಬಿಂದುಮತಿಯು ಸುಪ್ರಸಿದ್ಧನಾದ ಮಾಂಧಾತರಾಜನ ಪತ್ನಿ.

೫. **ಪ್ರಿಯವ್ರತ** - ಸ್ವಾಯಂಭುವಮನುವಿನಿಂದ ಶತರೂಪಾ ಎಂಬು ವಳಲ್ಲಿ ಜನಿಸಿದ ಹಿರಿಯಮಗ. ಈತನ ತಮ್ಮನೇ ಧ್ರುವರಾಜನ ತಂದೆಯಾದ ಉತ್ತಾನಪಾದರಾಜನು. ಪ್ರಿಯವ್ರತನ ಪತ್ನಿ, ವಿಶ್ವಕರ್ಮನ ಪುತ್ರೀ ಬರ್ಹಿಷ್ಮತಿ.

ಇವರಿಗೆ ಅಗ್ನೀಧ್ರ, ಇಧ್ಮಜಿಹ್ವ, ಯಜ್ಞಬಾಹು, ಮಹಾವೀರ, ಹಿರಣ್ಯರೇ ಘೃತಪೃಷ್ಠ, ಸವನ, ಮೇಧಾತಿಥಿ, ವೀತಿಹೋತ್ರ, ಕವಿ, ಎಂಬ 10 ಮ ಪುತ್ರರು, ಊರ್ಜಸ್ವತಿ ಎಂಬ ಏಕಮಾತ್ರ ಪುತ್ರಿ. ಊರ್ಜಸ್ವತಿಯು ದೈ ಗುರುಗಳಾದ ಶುಕ್ರಾಚಾರ್ಯರನ್ನು ಲಗ್ನವಾದಳು. ಪ್ರಿಯವ್ರತನು ತನ್ನ ವನ್ನು ವೇಗವಾಗಿ ಓಡಿಸಿ, ರಥಚಕ್ರಗಳಿಂದ ರೇಖೆಗಳನ್ನು ನಿರ್ಮಿಸಿ, ಸ ಸಮುದ್ರಗಳನ್ನೂ, ಸಪ್ತದ್ವೀಪಗಳನ್ನೂ ಮಾಡಿದನು. ತನ್ನ ಓ ಹೆಂಡತಿಯ ಏಳು ಮಕ್ಕಳಿಗೂ ಸಪ್ತಸಮುದ್ರಗಳಿಂದ ಆವೃತವಾ ಸಪ್ತದ್ವೀಪಗಳನ್ನು ಹಂಚಿ ಕೊಟ್ಟನು. ಕೊನೆಯಲ್ಲಿ ನಾರದಮುನಿಯ ತತ್ತ್ವೋಪದೇಶವನ್ನು ಪಡೆದು, ವೈರಾಗ್ಯವನ್ನು ತಾಳಿ ಮುಕ್ತನಾದ. ಈತ ಹನ್ನೊಂದು ಅರ್ಬುದವರ್ಷಗಳ ಕಾಲ ಅಖಂಡವಾದ ಭೂಮಂಡ ಚಕ್ರವರ್ತಿ ಎನಿಸಿ, ರಾಜ್ಯಪರಿಪಾಲನೆಮಾಡಿದ ಮಹಾಪರಾಕ್ರಮಿ.

೬. **ಪರೀಕ್ಷಿತ**– ಮಧ್ಯಮ ಪಾಂಡವನಿಂದ ಸುಭದ್ರೆಯಲ್ಲಿ ಜ ಮಹಾವೀರ ಅಭಿಮನ್ಯು. ವಿರಾಟರಾಯನ ಪುತ್ರಿ ಉತ್ತರೆಯು ಅಭಿಮನ್ಯು ಪತ್ನಿ. ಪರೀಕ್ಷಿತನು ಅಭಿಮನ್ಯು-ಉತ್ತರೆಯರ ಸತ್ಪುತ್ರ. ಗರ್ಭದಲ್ಲಿರುವಾಗ ಅಶ್ವತ್ಥಾಮಾಚಾರ್ಯರಿಂದ ಪ್ರಯೋಗಿಸಲ್ಪಟ್ಟ ಬ್ರಹ್ಮಾಸ್ತ್ರದಿಂದ, ಶ್ರೀಕೃ ಸುದರ್ಶನಚಕ್ರದ ಪ್ರಭಾವದಿಂದ ರಕ್ಷಿಸಲ್ಪಟ್ಟನು. ಇದರಿಂದ **ಪರೀಕ್ಷಿತ** ಹೆಸರು ಬಂದಿತು. ಪಾಂಡವರ ವಂಶ ಪರಿಕ್ಷೀಣವಾಗಿದ್ದಾಗ ಜನಿಸಿದವ ರಿಂದ, ಈ ಹೆಸರು. ತನ್ನ ರಾಜ್ಯದಲ್ಲಿ ಕಲಿಯ ಗರ್ವಭಂಗವನ್ನು ಮಾ ಮಹಾಪುರುಷ. ಕಲಿಯೊಡನೆ ಸ್ವಲ್ಪ ಕಾಲ ಸಂವಾದಮಾಡಿದ ಪಾಪದ ಪರಿ ಮವಾಗಿ, ಒಮ್ಮೆ ಶಮೀಕಮುನಿಗಳು ಸಮಾಧಿ ಸ್ಥಿತಿಯಲ್ಲಿರುವಾಗ, ಅ ಕೊರಳಿಗೆ ಮೃತಸರ್ಪವನ್ನು ಬಿಲ್ಲಿನ ತುದಿಯಿಂದ ಹಾಕಿಹೋದ. ಸ್ವ ಹೊತ್ತಿನಲ್ಲಿಯೇ ಋಷಿಪುತ್ರನಾದ ಶೃಂಗಿ ಅಲ್ಲಿಗೆ ಬಂದು, ತಂದೆಯ ಯನ್ನು ಕಂಡ. ಕ್ರೋಧಪರವಶನಾಗಿ 'ಮೃತಸರ್ಪವನ್ನು ಹಾಕಿದ ಆ ಳನು ಇಂದಿಗೆ ಏಳು ದಿನದೊಳಗಾಗಿ ಸರ್ಪದಂಶನದಿಂದ ಸಾಯಲಿ' ಎ ಶಪಿಸಿದ. ಸಂಗತಿ ತಿಳಿದ ಪರೀಕ್ಷಿತನು ವೈರಾಗ್ಯ ತಾಳಿ, ಸಾವಿಗೆ ಸಿದ್ಧ ಗಂಗಾನದಿಯಲ್ಲಿ ಎತ್ತರವಾದ ಸೌಧ ಕಟ್ಟಿಸಿ, ಪ್ರಾಯೋಪವಿಷ್ಟನಾಗಿ ಕುಳ

ವ್ಯಾಸ ಪುತ್ರರಾದ ಶುಕಮಹಾಮುನಿಗಳಿಂದ ಶ್ರೀಮದ್ಭಾಗವತಪುರಾಣ ಶ್ರವಣ ಮಾಡಿ, ಸಪ್ತಾಹದ ಕೊನೆಯದಿನ ತಕ್ಷಕನ ದಂಶದಿಂದ ಮೃತನಾಗಿ ಸದ್ಗತಿ ಹೊಂದಿದ. (ತಕ್ಷಕ ಕಚ್ಚಿದ್ದು ಪರೀಕ್ಷಿತನ ಜಡದೇಹವನ್ನು ಮಾತ್ರ. ಅಷ್ಟರಲ್ಲಿ ಪರೀಕ್ಷಿತನ ಪ್ರಾಣ ಭಗವದ್ಭಕ್ತನ ಚರಣಮೂಲಗಳನ್ನು ಸೇರಿತ್ತು).

ಪೂರ್ವೋಕ್ತ ನೃಪರೆಲ್ಲರೂ ಕರ್ಮಜದೇವತಾವರ್ಗಕ್ಕೆ ಸೇರಿದವರು. ಇವರು ಭಾಗೀರಥ್ಯಾದಿ ಆರುಮಂದಿಗಳಿಗಿಂತ ಉತ್ತಮರು.

೭. **ಬಲಿಚಕ್ರವರ್ತಿ** ಮುಂತಾದ ಏಳು ಮಂದಿ ಇಂದ್ರರು, ಏಳು ಮಂದಿ ಪಿತೃಗಳು, ಹನ್ನೊಂದುಮಂದಿ ಮನುಗಳು (14 ಮಂದಿ ಮನುಗಳಲ್ಲಿ ಮೂವರು ಉತ್ತಮಕಕ್ಷಕ್ಕೆ ಸೇರಿದವರು. ಈ ಹನ್ನೊಂದು ಎಂಬ ಸಂಖ್ಯೆಯನ್ನು ದಾಸರಾಯರು **ಈರೈದೊಂದು** ಎಂದಿದ್ದಾರೆ. ಅಂದರೆ, ಈರೈದು = ಎರಡು ಐದು = 2 × 5 = 10 ಅದರ ಮೇಲೊಂದು = 10 + 1 = 11 ಆಗುವುದು. ಏಳುಮಂದಿ ಪಿತೃಗಣ, ಎಂಟು ಮಂದಿ ಅಪ್ಸರಸ್ತ್ರೀಯರು (ಊರ್ವಶೀ ಇತ್ಯಾದಿ ಅಪ್ಸರಸ್ತ್ರೀಯರು 100. ಅವರಲ್ಲಿ 92 ಮಂದಿ ಹೋಗತಾ ಉಳಿದ ಎಂಟು ಮಂದಿ ಇಲ್ಲಿ ಪರಿಗಣಿಸಲ್ಪಟ್ಟಿದ್ದಾರೆ). ದಿತಿಜ ಗುರು ಅಂದರೆ, ದೈತ್ಯರ ಗುರುಗಳಾದ **ಶುಕ್ರಾಚಾರ್ಯರು**. ಚ್ಯವನಋಷಿ, ಮತ್ತು ಉಚಿಥ್ಯ ಎಂಬ ಋಷಿ ಇವರೆಲ್ಲರೂಕರ್ಮಜದೇವತೆಗಳಿಗೆ ಸಮಾನರು.

೮. **ಶುಕ್ರಾಚಾರ್ಯರು** – ವರುಣಪುತ್ರನಾದ ಭೃಗುಮಹರ್ಷಿಯಿಂದ ಪುಲೋಮೆಯಲ್ಲಿ ಜನಿಸಿದವರು. ಚ್ಯವನ ಋಷಿ ಇವರ ತಮ್ಮ. ದೇವಯಾನಿ ಶುಕ್ರಾಚಾರ್ಯರ ಪುತ್ರಿ. ಪ್ರಿಯವ್ರತರಾಜನ ಪುತ್ರಿ ಊರ್ಜಸ್ವತಿ ಎಂಬುವಳು ಇವರ ಪತ್ನಿ. ಆಕೆಯಲ್ಲಿ ದೇವಯಾನಿ ಎಂಬ ಪುತ್ರಿ ಜನಿಸಿದಳು. ದೇವತಾವರ್ಗವನ್ನು ಬಿಟ್ಟು, ಪಕ್ಷಾಂತರಮಾಡಿ, ಬೃಹಸ್ಪತ್ಯಾಚಾರ್ಯರ ಮೇಲಿನ ಕ್ರೋಧದಿಂದಾಗಿ, ದೇವತೆಗಳಿಗೆ ಶತ್ರುಗಳಾದ ದೈತ್ಯರಿಗೆ ಗುರುಗಳಾದರು. ಇವರ ಮಕ್ಕಳೇ ಶಂಡಾಮರ್ಕರು. ಈ ಶಂಡಾಮರ್ಕರು ಪ್ರಹ್ಲಾದನ ಬಾಲ್ಯಾವಸ್ಥೆಯ ಗುರುಗಳು. ಬಲಿಚಕ್ರವರ್ತಿಯು ಇಂದ್ರನ ಪದವಿಯನ್ನು ಹೊಂದಬೇಕೆಂಬ ಹಂಬಲದಿಂದ, ಆವನ ದ್ವಾರ ಶುಕ್ರಾಚಾರ್ಯರು 100ನೆಯ ಅಶ್ವಮೇಧಯಾಗ

ವನ್ನು ಯಾಚಿಸಿದರು. ಆಗ ಬಲಿಯು ವಾಮನನಿಗೆ ಮೂರುಪಾದ ಭೂಮಿಯನ್ನು ಕೊಡಲು ಸಂಕಲ್ಪಮಾಡಿ, ಕಮಂಡಲುವಿನಿಂದ ನೀರನ್ನು ಧಾರೆ ಎರೆಯುತ್ತಿದ್ದಾಗ, ಕಮಂಡಲುವಿನ ದ್ವಾರದಲ್ಲಿ, ಶುಕ್ರಾಚಾರ್ಯರು ಸೂಕ್ಷ್ಮರೂಪದಿಂದ ಪ್ರವೇಶಮಾಡಿ ನೀರು ಬೀಳದಂತೆ ಅಡ್ಡಬಂದರು. ಆಗ ವಾಮನನು ತನ್ನ ದರ್ಭೆಯ ತುದಿಯಿಂದ ಚುಚ್ಚಿದಾಗ ಶುಕ್ರಾಚಾರ್ಯರ ಒಂದು ಕಣ್ಣು ಕುರುಡಾಯಿತು.

**೯. ಚ್ಯವನ–** ಒಬ್ಬ ಮಹರ್ಷಿ. ವರುಣಪುತ್ರನಾದ ಭೃಗುಮಹರ್ಷಿಯ ಮಗ. ಪುಲೋಮೆ ಈತನ ಜನನಿ. ಚ್ಯವನ, ಜನನಿಯ ಗರ್ಭದಲ್ಲಿರುವಾಗ ಒಬ್ಬ ರಾಕ್ಷಸನು ಪುಲೋಮೆಯನ್ನು ಅಪಹರಿಸಿದನು. ಪುಲೋಮೆ ಭಯಗ್ರಸ್ತಳಾದಳು. ಕೂಡಲೇ ಆ ಭಯದಿಂದ ಪುಲೋಮೆಯ ಗರ್ಭದಿಂದ ಶಿಶುವು ಚ್ಯುತವಾಯಿತು. ಈ ಕಾರಣದಿಂದ ಶಿಶುವಿಗೆ 'ಚ್ಯವನ' ಎಂಬ ಹೆಸರು ಬಂದಿತು. ಆ ಶಿಶು ರಾಕ್ಷಸನನ್ನು ಕ್ರೂರದೃಷ್ಟಿಯಿಂದ ನೋಡಿತು. ಕೂಡಲೇ ರಾಕ್ಷಸ ದಗ್ಧನಾದ. ಚ್ಯವನನೂ ಶುಕ್ರಾಚಾರ್ಯರೂ ಸಹೋದರರು. ಶರ್ಯಾತಿರಾಜನ ಪುತ್ರಿ ಸುಕನ್ಯೆಯನ್ನು ಲಗ್ನವಾಗಿ ಪ್ರಮತಿ ಎಂಬ ಪುತ್ರನನ್ನು ಪಡೆದ.

**೧೦. ಉಚಥ್ಯ –** ಅಂಗೀರಸಋಷಿಯ ಪುತ್ರ. ಬೃಹಸ್ಪತಿ ಮತ್ತು ಸಂವರ್ತ ಇಬ್ಬರೂ ಈತನ ತಮ್ಮಂದಿರು. ಚಂದ್ರನ ಪುತ್ರಿಯಾದ ಭದ್ರೆ ಎಂಬುವಳು ಈತನ ಪತ್ನಿ. ಅವನ ವೀರ್ಯದಿಂದ ಜನಿಸಿದವನೇ ದೀರ್ಘತಮ. ಭಾರದ್ವಾಜನು ಬೃಹಸ್ಪತಿಯ ವೀರ್ಯದಿಂದ ಜನಿಸಿದವನು.

೧೧. ಬಲ್ಯಾದಿ ಸಪ್ತ ಇಂದ್ರರು, ಏಳುಮಂದಿ ಪಿತೃಗಳು, ೧೧ ಮಂದಿ ಮನುಗಳು, ಶುಕ್ರಾಚಾರ್ಯರು, ಚ್ಯವನಋಷಿಗಳು, ಉಚಥ್ಯ ಎಂಬ ಮಹರ್ಷಿ ಮುಪ್ಪತ್ತು ಕರ್ಮಜರು ಇವರೆಲ್ಲ ಸಮಾನರು ॥೬॥

**ಪದ್ಯ - ೭**

**ಮೂಲ -**

**ಧನಪ ವಿಷ್ವಕ್ಸೇನ ಗಣಪಾ ।**
**ಶ್ವಿನಿಗಳೆಂಭತ್ತೈದು ಶೇಷರಿ ।**
**ಗೆಣೆಯೆನಿಸುವರು ಮಿತ್ರ ತಾರಾ ನಿರಋತಿ ಪ್ರವಹಿ ॥**

**ಗುಣಗಳಿಂದ್ವೈದಧಿಕ ಎಂಭ ।**
**ತ್ತೆನಿಪ ಶೇಷರಿಗುತ್ತಮರು ಸ ।**
**ನ್ಮುನಿ ಮರೀಚಿ ಪುಲಸ್ತ್ಯ ಪುಲಹ ಕ್ರತು ವಸಿಷ್ಠಮುಖ ॥೭॥**

**ಅವತರಣಿಕೆ -**

ಶತಸ್ಥರಾರಂಭವಾದಿ ಸಪ್ತರ್ಷಿಗಳ ಪರ್ಯಂತ ತಾರತಮ್ಯವಿಚಾರವನ್ನು ಹೇಳುತ್ತಾರೆ.

**ಪ್ರತಿಪದಾರ್ಥ:-**

**ಧನಪ** - ಕುಬೇರ, **ವಿಷ್ವಕ್ಸೇನ** - ವಾಯುಪುತ್ರನಾದ ವಿಷ್ವಕ್ಸೇನ, **ಗಣಪ** - ವಿಘ್ನೇಶ್ವರ, **ಅಶ್ವಿನಿಗಳೆಂಭತ್ತೈದು** - ಅಶ್ವಿನೀದೇವತೆಗಳೇ ಮೊದಲಾದವರು 85 ಮಂದಿ (ಶತಸ್ಥರೊಳಗೆ ಉತ್ತಮಕಕ್ಷಕ್ಕೆ ಸೇರಿದ 15ಮಂದಿ ಹೋಗಿ ಉಳಿದವರು) **ಶೇಷರಿಗೆ** - ಆ 85 ಮಂದಿಗಳ ಪೈಕಿ ಅವರರ ಕಕ್ಷದಲ್ಲಿ ಸೇರಿದ ಇಬ್ಬರು ಹೋಗಿ ಉಳಿದ 83 ಮಂದಿಗೆ, **ಎಣೆಯೆನಿಸುವರು**- 31ನೆಯ ಕಕ್ಷಾಪನ್ನರಾದ ಕುಬೇರ, ವಿಷ್ವಕ್ಸೇನ, ಗಣಪತಿ, ಈ ಮೂರುಮಂದಿ, ಶೇಷಶತಸ್ಥರು 83 ಮಂದಿ, ಅಂತೂ 86 ಮಂದಿಗಳು ಸಮಾನರೆನಿಸುವರು. ಇವರು ಕರ್ಮಜರಿಗೆ ಉತ್ತಮರು. **ಐದಧಿಕ ಎಂಭತ್ತೆನಿಪ ಶೇಷರಿಗೆ** - 85 ಮಂದಿ ಶೇಷಶತಸ್ಥರಿಗೆ (ಐದಧಿಕ ಎಂಭತ್ತು = 5 + 80 = 85), **ಮಿತ್ರ** - 32ನೆಯ ಕಕ್ಷದ ಮಿತ್ರನಾಮಕ ಸೂರ್ಯ, **ತಾರಾ** - ಬೃಹಸ್ಪತ್ಯಾಚಾರ್ಯರ ಮಡದಿ ತಾರಾದೇವಿ, **ನಿರಋತಿ** - ದಿಕ್ಪಾಲಕನಾದ ನಿರಋತಿ. **ಪ್ರಾವಹೀ** - ಪ್ರವಹವಾಯುವಿನ ಪತ್ನಿ ಪ್ರಾವಹೀದೇವಿ, ಈ ನಾಲ್ವರು, **ಗುಣಗಳಿಂದ** - ಕೆಲವು ಗುಣಗಳಿಂದ. **ಉತ್ತಮರು**- ಶೇಷಶತಸ್ಥರಿಗಿಂತ ಉತ್ತಮರು. **ಸನ್ಮುನಿ**, 33ನೆಯ ಕಕ್ಷದವರಾದ, ಸಮೀಚೀನವಾದ ಜ್ಞಾನ, ಭಕ್ತಿ ವೈರಾಗ್ಯಯುಕ್ತರಾದ **ಮರೀಚಿ** - ಮರೀಚಿಋಷಿಗಳು, **ಪುಲಸ್ತ್ಯ** - ಪುಲಸ್ತ್ಯಮುನಿ. **ಪುಲಹ** - ಪುಲಹನೆಂಬ ಋಷಿ, **ಕ್ರತು**- ಕ್ರತುವೆಂಬ ಮುನಿ. **ವಸಿಷ್ಠಮುಖ** - ವಸಿಷ್ಠರೇ ಆದಿಯಾಗಿ, (ಸಪ್ತಋಷಿಗಳಲ್ಲಿ 5 ಮಂದಿ ಸನ್ಮುನಿಗಳನ್ನು ಇಲ್ಲಿ ಹೇಳಿ, ಮುಂದಿನ ಪದ್ಯದಲ್ಲಿ ಉಳಿದ ಇಬ್ಬರನ್ನು ಹೇಳುತ್ತಾರೆ) ॥೭॥

# ವ್ಯಾಖ್ಯಾನಗಳು

## ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಶತಸ್ಥರಾರಂಭಮಾಡಿ ಸಪ್ತಋಷಿಗಳ ಪರಿಯಂತ ತಾರತಮ್ಯವನ್ನ ಹೇಳತಾರೆ.

ಕುಬೇರ, ವಾಯುಪುತ್ರ ವಿಷ್ವಕ್ಸೇನ, ವಿಘ್ನೇಶ್ವರ, ಅಂತು ಮೂರು ಮಂದಿ, ಪೂರ್ವೋಕ್ತರು ಮೂರು ಮಂದಿ ಅಲ್ಲದೆ ಅಶ್ವಿನೀದೇವತೆಗಳು ಮೊದಲಾದವರು ಎಂಭತ್ತೈದು ಮಂದಿ, ಈ ಶತಸ್ಥರೊಳಗೆ ಉತ್ತಮ ಕಕ್ಷದವರು ಹೋಗತಾ ಉಳಿದವರು. ಇವರೊಳಗೆ ಅವರಕಕ್ಷದಲ್ಲಿ ಸೇರಿದವರು ಇಬ್ಬರು ಹೋಗತಾ ಎಂಭತ್ತುಮೂರುಮಂದಿ ಬಾಕಿ ಉಳಿದವರು. ಶೇಷ ಉಳಿದ ಈ ೮೩ ಜನಕ್ಕೆ, ೩೧ನೇ ಕಕ್ಷದವರು ಧನಪಾದಿಗಳು ಮೂರುಮಂದಿ ಶೇಷಶತಸ್ಥರು ಎಂಭತ್ತುಮೂರು ಜನರು ಅಂತೂ ಎಂಭತ್ತಾರು ಜನರು ಸಮಾನರೆನಿಸುವರು. ಇವರು ಕರ್ಮಜರಿಗೆ ಉತ್ತಮರೆಂದು ತಾತ್ಪರ್ಯ. ಉಕ್ತ ಶೇಷರು, ಎಂಭತ್ತೈದುಜನ ೩೧ನೇ ಕಕ್ಷದವರು. ತದವರಕಕ್ಷದವರು ಇಬ್ಬರು ಅಂತು ೮೫ ಮಂದಿ. ಈ ಎಂಭತ್ತೈದು ಶೇಷಶತಸ್ಥರಾದವರಿಗೆ ೩೨ನೇ ಕಕ್ಷ ಮಿತ್ರನಾಮಕ ಸೂರ್ಯ, ತಾರಾದೇವೇರು, ನಿರುತಿ, ಪ್ರವಹಪತ್ನಿ ಪ್ರಾವಹಿ ಈ ನಾಲ್ವರು ಕೆಲವು ಗುಣಗಳಿಂದ ಶ್ರೇಷ್ಠರು. ೩೩ನೇ ಕಕ್ಷ. ಸಮೀಚೀನವಾದ ಜ್ಞಾನ ಭಕ್ತಿ ವೈರಾಗ್ಯಯುಕ್ತರಾದ ಋಷಿಗಳಾದ ಮರೀಚಿಋಷಿಗಳು. ಪುಲಸ್ತ್ಯ ಋಷಿಗಳು, ಕ್ರತು, ವಸಿಷ್ಠಋಷಿಗಳು ಮೊದಲಾದ ಐದು ಋಷಿಗಳು ಇವರಲ್ಲದೆ ಇದೇ ಕಕ್ಷದವರ ಅವಶಿಷ್ಟ, ಮುಂದಿನ ಶ್ಲೋಕದಲ್ಲಿ ಹೇಳತಾರೆ.॥೭॥

## ೨. ಭಾವಪ್ರಕಾಶಿಕೆ :–

ವಾಯುವಿನ ಮಡದಿ ಪ್ರಾವಹೀ ಇವರು 85 ಮಂದಿ ಉಕ್ತ ಶೇಷಶತಸ್ಥರಿಗಿಂತಲೂ ಉತ್ತಮರು. ಉತ್ತಮ ಋಷಿಗಳಾದ ಬ್ರಹ್ಮದೇವರ ಮಕ್ಕಳಾದ ಮರೀಚಿ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ ಇವರೇ ಮೊದಲಾದವರು. ಉಳಿದ ವಿವರಗಳನ್ನು ಮುಂದಿನ ಪದ್ಯದಲ್ಲಿ ಮುಂದುವರಿಸಲಾಗಿದೆ.॥೭॥

## ೩. ಶ್ರೀ ವ್ಯಾಸದಾಸ ಸಿದ್ಧಾಂತಕೌಮುದೀ–

'ಧನಪ' ಇತಿ॥ 'ಎಣೆ' ಸಂ। ಮಿತ್ರ ತಾರೇ ನಿಋತಿಃ ಪ್ರಾವಹೀ ಚ ಸಮಾಃ ಮತಾಃ॥ ಶತಸ್ಥಾತ್ ಅಧಿಕಾಃ ಪ್ರೋಕ್ತಾಃ ಪರ್ಜನ್ಯಾತ್ ದ್ವಿಗುಣಾಧಿಕಾಃ॥ 'ಸನ್ಮುನಿ' ಇತಿ॥ ॥೭॥

## ಕನ್ನಡಾರ್ಥ–

'ಎಣೆಯೆನಿಪರು' ಎಂದರೆ 'ಸಮಾನೆನಿಸುವರು' ಎಂದು ಅರ್ಥ. ಮಿತ್ರ, ತಾರಾ, ನಿಋತಿ, ಪ್ರಾವಹೀ ಇವರು ಸಮರು. ಶತಸ್ಥರಿಗಿಂತ ಅಧಿಕರು. ಹಾಗೂ ಪರ್ಜನ್ಯನಿಗಿಂತ ಎರಡು ಗುಣಗಳಿಂದ ಅಧಿಕರು ॥೭॥

## ೪. ಭಾವದರ್ಪಣ–

ಧನಪೇತಿ. ಐದಧಿಕಐಂಭತ್ತು ಅಂದರೆ ಎಂಭತ್ತೈದು ಜನ ಎಂಬರ್ಥ.
॥೭॥

## ೫. ಶ್ರೀ ಗುರುಹೃದಯ ಪ್ರಕಾಶಿಕೆ

ಧನಪತಿ ಎಂಬ ಕುಬೇರ, ವಿಷ್ವಕ್ಸೇನ, ಗಣಪತಿ, ಅಶ್ವಿನೀದೇವತೆಗಳು ಸಹ ಶೇಷಶತಸ್ಥರೆಂಬ ಎಂಭತ್ತೈದು ಜನಕ್ಕೆ ಎಣೆ ಎನಿಸುವರು ಎಂದರೆ ಸಮಾನರು. ಇವರಿಗಿಂತ ಮಿತ್ರನಾಮಕಸೂರ್ಯ. ಬೃಹಸ್ಪತಿ ಪತ್ನಿ ತಾರಾ. ನಿರಋತಿ, ಪ್ರವಹಪತ್ನಿ ಪ್ರಾವಹೀದೇವಿ ಸಹ ಅಧಿಕರು. ಸನ್ಮುನಿ ಎಂದರೆ ಸನಕಾದಿ ಮುನಿಗಳು, ಮರೀಚಿ. ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ. ಅತ್ರಿಋಷಿ. ಅಂಗಿರಋಷಿ ಸಹ ಏಳು ಜನ ಬ್ರಹ್ಮಪುತ್ರರು. ನಿರಋತಿ ಮೊದಲಾದವರಿಗೆ ಸಮರು. ವಿಶ್ವಾಮಿತ್ರಋಷಿ. ವೈವಸ್ವತಮನು ಇವರಿಬ್ಬರೂ ದೇವರ ಆವೇಶ ಬಲದಿಂದ ಮಿತ್ರನಾಮಕಸೂರ್ಯನಿಗಿಂತ ಉತ್ತಮರು. ವಿಶ್ವಾಮಿತ್ರರಿಗಿಂತ

ಸ್ವಾಹಾಭರ್ತೃವಾದ ಅಗ್ನಿ, ಭೃಗುಋಷಿ, ದಕ್ಷಪತ್ನಿ ಪ್ರಸೂತೀದೇವಿ ಸಹ ಮೂರುಮಂದಿ ಉತ್ತಮರು.॥೭೮॥. (ಮುಂದಿನ ಪದ್ಯದ ವ್ಯಾಖ್ಯಾನವನ್ನು ಇಲ್ಲಿಯೇ ಸೇರಿಸಿದ್ದಾರೆ).

**ಸರ್ವವ್ಯಾಖ್ಯಾನಸಾರಸಂಗ್ರಹ**

**೧. ಧನಪ** - ಧನಾಭಿಮಾನಿಯಾದ ಕುಬೇರ. ಕುಬೇರನು ಉತ್ತರ ದಿಕ್ಕಿನ ದಿಕ್ಪಾಲಕ. ವಿಶ್ವವಸನೆಂಬ ಬ್ರಹ್ಮನಿಂದ ಇಲಬಿಲೆಯಲ್ಲಿ ಜನಿಸಿದವನು. ಸೋಮನೆಂದೂ ಇವನ ನಾಮಾಂತರ. ಈ ಕಾರಣದಿಂದ ಉತ್ತರದಿಕ್ಕಿಗೆ 'ಸೌಮ್ಯ' ಎಂದು ಹೆಸರು. ಯಕ್ಷರ ಅಧಿಪತಿ. ನರವಾಹನನು. ಋದ್ಧಿ ಈತನ ಪತ್ನಿ. ಮಹಾರೂಪವಂತನೆನಿಸಿದ ನಳಕೂಬರನು ಕುಬೇರನ ಪುತ್ರ. ಅಲಕಾ ಪುರ, ಕುಬೇರನ ರಾಜಧಾನಿ. ಅತುಲೈಶ್ವರ್ಯಸಂಪನ್ನನಾದ್ದರಿಂದ **ಧನಪ** ಎಂದು ಹೆಸರು.

**೨. ವಿಷ್ವಕ್ಸೇನ** - ಪ್ರಧಾನವಾಯುದೇವರ ಪುತ್ರನು. ಸೈನ್ಯನಾಯಕ.

**೩. ಗಣಪತಿ** - ಆಕಾಶಾಭಿಮಾನಿ. ಶಬ್ದಗುಣಗ್ರಹಕನು. ನಾಭೀ ಪ್ರದೇಶಗತ ಷಡ್ದಳಪದ್ಮದಲ್ಲಿ ಮಧ್ಯಗತ ಪ್ರದೇಶವು ಆಕಾಶತತ್ತ್ವವು. ಅದು ಗಣಪನ ಮಂದಿರವು. ಉಮಾಪುತ್ರ. ವಿಶ್ವಂಭರನಾಮಕ ಶ್ರೀಹರಿಯ ಉಪಾಸಕ. ಜಾಗ್ರದವಸ್ಥಾ ಪ್ರೇರಕನಾದ ವಿಶ್ವಂಭರಮೂರ್ತಿಗೆ 19ಮುಖ ಗಳು. ಈ ಮುಖಗಳ ಪೈಕಿ ಮಧ್ಯಗತ ವದನವು ಗಜಮುಖವು. ಇದರಿಂದಲೇ ವಿಶ್ವಂಭರನ ಉಪಾಸಕನೂ, ಪ್ರತಿಬಿಂಬನೂ ಆದ ಗಣಪತಿಯ ಮುಖವೂ ಗಜಮುಖವಾಗಿದೆ.

**೪. ಅಶ್ವಿನೀ ದೇವತೆಗಳು** - ನಾಸತ್ಯ ಮತ್ತು ದಸ್ರ ಎಂಬ ಅವಳಿ ಮಕ್ಕಳು. ಘ್ರಾಣೇಂದ್ರಿಯಾಭಿಮಾನಿಗಳು. ಗಂಧಗ್ರಾಹಕರು. ಇವರ ಪತ್ನಿ ಉಷಾದೇವಿ.

**೫. ಶೇಷಶತಸ್ಥರು** - 100 ಮಂದಿ ದೇವತಾವರ್ಗದಲ್ಲಿ ಉತ್ತಮ ಕಕ್ಷೆಕ್ಕೆ ಸೇರಿದ 15 ಮಂದಿ ಹೋಗತಾ ಉಳಿದವರ ಸಂಖ್ಯೆ 85. ಈ 85 ದೇವತೆಗಳಿಗೆ **ಶೇಷಶತಸ್ಥರು** ಎಂದು ಹೆಸರು.

ಕುಬೇರ, ವಿಷ್ವಕ್ಸೇನ, ಗಣಪತಿ, ಅಶ್ವಿನೀದೇವತೆಗಳು, ಶೇಷಶತಸ್ಥರು, ಈ ಐದುಮಂದಿ ಪರಸ್ಪರ ಸಮಾನರು. (ಸಮಾನ ಕಕ್ಷದವರು). ಇವರು 31ನೇ ಕಕ್ಷದವರು. ಇವರು ಕರ್ಮಜರಿಗಿಂತ ಉತ್ತಮರು.

**೬. ಮಿತ್ರ** - ಮಿತ್ರನಾಮಕ ಸೂರ್ಯ. ಈತನು ದ್ವಾದಶಾದಿತ್ಯವರ್ಗದಲ್ಲಿ ಒಬ್ಬನು.

**೭. ತಾರಾ** - ಸುರಗುರುಗಳಾದ ಬೃಹಸ್ಪತ್ಯಾಚಾರ್ಯರ ಪತ್ನಿ. ಪಂಚಕನ್ಯೆಯರಲ್ಲಿ ಒಬ್ಬಳು. ಅಗ್ನಿಪತ್ನಿಯಾದ ಸ್ವಾಹಾದೇವಿ ಈಕೆಯ ಪುತ್ರಿ. ಬೃಹಸ್ಪತ್ಯಾಚಾರ್ಯರ ಶಿಷ್ಯನಾದ ಚಂದ್ರನು, ಗುರುಪತ್ನೀ ಗಮನ ಮಾಡಿದನು. ಚಂದ್ರನಿಂದ ಈ ಗುರುಪತ್ನಿ ತಾರಾದೇವಿಯಲ್ಲಿ ಜನಿಸಿದವನೇ ಬುಧನು.

**೮. ನಿರುಋತಿ** - ನೈರುತ್ಯದಿಕ್ಕಿಗೆ ಅಧಿಪತಿ. ದೈತ್ಯಕುಲ ಸಂಜಾತನಾದರೂ, ದೇವತಾವರ್ಗದಲ್ಲಿ ಸೇರಿದ ಮುಕ್ತಿಯೋಗ್ಯ ಚೇತನನು. ದೀರ್ಘಾದೇವಿ ಈತನ ಪತ್ನಿ.

**೯. ಪ್ರವಹೀ** - ಪ್ರವಹವಾಯುವಿನ ಪತ್ನಿ. ಪ್ರವಹವಾಯುವು 49 ಮರುತ್ ಗಣದಲ್ಲಿ ಸೇರಿದವನು. ವಾಯುವ್ಯ ದಿಕ್ಪಾಲಕನು.

ಮಿತ್ರನಾಮಕ ಸೂರ್ಯ, ತಾರಾದೇವಿ, ನಿರುಋತಿ, ಪ್ರಾವಹೀ ಈ ನಾಲ್ಕು ಮಂದಿ ಶೇಷಶತಸ್ಥರಿಗಿಂತ ಉತ್ತಮರು.

೧೦. ಮುಂದೆ ಬ್ರಹ್ಮಪುತ್ರರಾದ ಉತ್ತಮ ಜ್ಞಾನ ಭಕ್ತಿ, ವೈರಾಗ್ಯ ಸಂಪನ್ನರಾದ ಮರೀಚ್ಯಾದಿ ಸಪ್ತರ್ಷಿಗಳ ವಿಚಾರ ತಿಳಿಸುತ್ತಾರೆ. ಇವರೇ **ಸನ್ಮುನಿಗಳು.**

**೧೧. ಮರೀಚಿ** - ಸ್ವಾಯಂಭುವಮನ್ವಂತರದಲ್ಲಿ ಬ್ರಹ್ಮನ ಮಾನಸಪುತ್ರರಲ್ಲಿ ಒಬ್ಬ. ಕಶ್ಯಪಮುನಿ ಈತನ ಪುತ್ರ. ಮರೀಚಿಯು ಕರ್ದಮಪುತ್ರಿಯಾದ ಕಲಾದೇವಿಯನ್ನು ಲಗ್ನವಾಗಿದ್ದ. ಊರ್ಣ ಎಂಬಾಕೆ ಈತನ ಕಿರಿಯ ಹೆಂಡತಿ. ಈಕೆಗೆ ಆರುಮಂದಿ ಪುತ್ರರು. ಈ ಆರುಮಂದಿಯೂ ಸ್ವಭಾವದಲ್ಲಿ

ದುಷ್ಟರು. ಬ್ರಹ್ಮನಿಗೆ ಹಿಂಸೆಯನ್ನುಂಟುಮಾಡಿ, ದುಷ್ಟಯೋನಿಯಲ್ಲಿ ಜನಿಸುವಂತೆ ಶಪ್ತರಾದರು. ಮೊದಲನೆಯ ಜನ್ಮದಲ್ಲಿ ಹಿರಣ್ಯಾಕ್ಷನ ಮಕ್ಕಳಾಗಿ ಜನಿಸಿದರು. ಎರಡನೆಯ ಜನ್ಮದಲ್ಲಿ ಕಾಲನೇಮಿಯ ಪುತ್ರರಾಗಿ ಹುಟ್ಟಿದರು. ಮೂರನೆಯ ಜನ್ಮದಲ್ಲಿ ವಸುದೇವ-ದೇವಕೀ ಪುತ್ರರಾಗಿ ಕಂಸನ ಖಡ್ಗಕ್ಕೆ ಆಹುತಿಯಾದರು.

೧೨. **ಪುಲಸ್ತ್ಯ** - ಕೃತಯುಗದ ಅಂತ್ಯಭಾಗದಲ್ಲಿ ಚತುರ್ಮುಖಬ್ರಹ್ಮನ ಮಾನಸಪುತ್ರ. ಮೇರುಪರ್ವತದ ತಪ್ಪಲಿನಲ್ಲಿ ತಪಸ್ಸು ಮಾಡುತ್ತಿದ್ದ. ತೃಣಬಿಂದು ಮುನಿಯ ಪುತ್ರೀ ಗೋ ಎಂಬುವಳನ್ನು ಲಗ್ನವಾಗಿ, ವಿಶ್ರವಸನೆಂಬ ಪುತ್ರನನ್ನು ಪಡೆದ. ಅವನ ವಂಶದವನೇ ರಾವಣಾಸುರನು. ಆದರಿಂದ ರಾವಣನಿಗೆ ಪೌಲಸ್ತ್ಯನೆಂಬ ನಾಮ. ಪುನಃ ಕರ್ದಮಋಷಿಯ ಪುತ್ರಿಯಾದ ಹವಿರ್ಭುಕ್ ಎಂಬಾಕೆಯನ್ನು ಲಗ್ನವಾಗಿ, ಅಗಸ್ತ್ಯಮಹರ್ಷಿಯನ್ನು ಪಡೆದ. ಇಲಬಿಲೆ ಎಂಬುವಳಲ್ಲಿ ಕುಬೇರನನ್ನೂ, ಕೇಶಿನಿ ಎಂಬುವಳಲ್ಲಿ ರಾವಣಾದಿಗಳನ್ನೂ ಪಡೆದ.

೧೩. **ಪುಲಹ** - ಬ್ರಹ್ಮದೇವರ ನಾಭಿಯಿಂದ ಜನಿಸಿದ ಬ್ರಹ್ಮಪುತ್ರ. ಕರ್ದಮ ಋಷಿಯ ಪುತ್ರಿ ಗತಿ ಎಂಬುವಳು ಪುಲಹನ ಪತ್ನಿ. ಅವಳ ದ್ವಾರಾ ಕರ್ಮಶ್ರೇಷ್ಠ, ವರೀಯಸ್, ಸಹಿಷ್ಣು, ಎಂಬ ಮೂವರು ಪುತ್ರರನ್ನು ಪಡೆದ.

೧೪. **ಕ್ರತು** - ಸ್ವಾಯಂಭುವ ಮನ್ವಂತರದಲ್ಲಿ ಬ್ರಹ್ಮಮಾನಸ ಪುತ್ರರಲ್ಲಿ ಒಬ್ಬನು. ಚತುರ್ಮುಖಬ್ರಹ್ಮದೇವರ ಅಂಗೈಯಿಂದ ಜನಿಸಿದನು. ಸೂರ್ಯನ ಅನುಚರರಾದ ವಾಲಖಿಲ್ಯರು ಈತನ ಪುತ್ರರು. ಇವನಿಗೆ ಕ್ರಿಯೆ ಮತ್ತು ಸನ್ನತಿ ಎಂಬ ಈರ್ವರು ಪತ್ನಿಯರು.

೧೫. **ವಸಿಷ್ಠ** - ಸ್ವಾಯಂಭುವ ಮನ್ವಂತರದಲ್ಲಿ ಜನಿಸಿದ ಬ್ರಹ್ಮನ ಮಾನಸಪುತ್ರ. ಕರ್ದಮಋಷಿಯ ಏಳನೆಯ ಪುತ್ರಿ ಊರ್ಜಾ ಎಂಬುವಳನ್ನು ಲಗ್ನವಾಗಿ, ಏಳುಮಂದಿ ಪುತ್ರರನ್ನು ಪಡೆದ. ಈಗ ನಡೆಯುತ್ತಿರುವ ವೈವಸ್ವತ ಮನ್ವಂತರದಲ್ಲಿ, ಮಿತ್ರಾವರುಣರಿಂದ ಊರ್ವಶಿಯಲ್ಲಿ ಜನಿಸಿದ. ಇದರಿಂದ

ವಸಿಷ್ಠನಿಗೆ 'ಮೈತ್ರಾವರುಣಿಃ' ಎಂಬ ಹೆಸರಿದೆ. ವಸಿಷ್ಠ ಸೂರ್ಯವಂಶಸಂಜಾತರಾದ ಇಕ್ಷ್ವಾಕುರಾಜನ ಸಂತತಿಯವರಿಗೇ ಕುಲಪುರೋಹಿತ.

ಅಂತು, ಮರೀಚಿ ಪುಲಸ್ತ್ಯ ಪುಲಹ ಕ್ರತು ವಸಿಷ್ಠ ಈ ಐದುಮಂದಿ ಸನ್ಮುನಿಗಳ ವಿಚಾರ ಹೇಳಿ, ಸಪ್ತರ್ಷಿಗಳಲ್ಲಿ ಉಳಿದ ಇಬ್ಬರ ವಿಚಾರವನ್ನು ಮುಂದಿನ 8ನೆಯ ಪದ್ಯದಲ್ಲಿ ಮುಂದುವರಿಸುತ್ತಾರೆ. ॥೭॥

**ಮೂಲ–**

**ಅತ್ರಿ ಅಂಗಿರರೇಳು ಬ್ರಹ್ಮನ ।**
**ಪುತ್ರರಿವರಿಗೆ ಸಮರು ವಿಶ್ವಾ।**
**ಮಿತ್ರ ವೈವಸ್ವತರು ಈಶಾವೇಶಬಲದಿಂದ।**
**ಮಿತ್ರರರಿಗಿಂತುತ್ತಮರು ಸ್ವಾಹಾ।**
**ಭರ್ತೃ ಭೃಗುವು ಪ್ರಸೂತಿ ವಿಶ್ವಾ।**
**ಮಿತ್ರ ಮೊದಲಾದವರಿಗಿಂತಲಿ ಮೂವರುತ್ತಮರು ॥೮॥**

**ಅವತರಣಿಕೆ** – 33ನೆಯ ಕಕ್ಷಕ್ಕೆ ಸೇರಿದ ಸಪ್ತರ್ಷಿಗಳ ಪೈಕಿ ಅವಶಿಷ್ಟರಾದ ಇಬ್ಬರ ವಿಚಾರವನ್ನೂ 34ನೆಯ ಕಕ್ಷಾಪನ್ನರಾದವರ ವಿಷಯಗಳನ್ನೂ ತಿಳಿಸುತ್ತಾರೆ.

**ಪ್ರತಿಪದಾರ್ಥ–**

**ಅತ್ರಿ** - ಅತ್ರಿಋಷಿಗಳು (33ನೆಯ ಕಕ್ಷಕ್ಕೆ ಸೇರಿದ ಅವಶಿಷ್ಟರಾದವರು) **ಅಂಗಿರರು** - ಅಂಗೀರಸಮುನಿಗಳು. **ಏಳು**- ಅಂತು ಏಳುಮಂದಿ ಋಷಿಗಳು, **ಬ್ರಹ್ಮನ ಪುತ್ರರು** - ಬ್ರಹ್ಮದೇವರ ಪುತ್ರರು. **ಇವರಿಗೆ** - ಈ ಸಪ್ತರ್ಷಿಗಳಿಗೆ, ವಿಶ್ವಾಮಿತ್ರ - ವಿಶ್ವಾಮಿತ್ರಋಷಿಗಳು, **ವೈವಸ್ವತರು** - ವೈವಸ್ವತಮನು ಈ ಇಬ್ಬರು. **ಸಮರು** - ಸಮರಾದವರು. **ಈಶಾವೇಶಬಲದಿಂದ**- ಪರಮಾತ್ಮನ ಆವೇಶಬಲಯುಕ್ತರಾದ್ದರಿಂದ, **ಮಿತ್ರರಿಗಿಂತ ಉತ್ತಮರು** - ಈ 9 ಮಂದಿಗಳಿಗಿಂತಲೂ ಉತ್ತಮರು. **ಸ್ವಾಹಾಭರ್ತೃ** - 34ನೆಯ ಕಕ್ಷಕ್ಕೆ ಸೇರಿದ ಸ್ವಾಹಾದೇವಿಯ ಪತಿ ಅಗ್ನಿದೇವರು, **ಭೃಗುವು** - ಭೃಗುಋಷಿಗಳು,

**ಪ್ರಸೂತಿ** - ದಕ್ಷಪ್ರಜಾಪತಿಯ ಪತ್ನಿ ಪ್ರಸೂತಿದೇವಿ. **ಮೂವರು** - ಈ ಮೂರುಮಂದಿ, **ವಿಶ್ವಾಮಿತ್ರ ನೊದಲಾದವರಿಗಿಂತ** - ವಿಶ್ವಾಮಿತ್ರಾದಿ ೯ ಮಂದಿಗಳಿಗಿಂತಲೂ, **ಉತ್ತಮರು** - ಉತ್ತಮರೆಂದು ತಾತ್ಪರ್ಯ ॥೮॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ -

ಮೂವತ್ತು ಮೂರನೇ ಕಕ್ಷ ಅವಶಿಷ್ಟವೂ, ಮೂವತ್ತು ನಾಲ್ಕನೇ ಕಕ್ಷ ದವರ ವಿಚಾರವೂ ಹೇಳತಾರೆ.

ಹಿಂದೇ ಕಕ್ಷದಲ್ಲಿ ಅವಶಿಷ್ಟರಾದವರು ವ್ಯಾಲಿನ ಶ್ಲೋಕದಲ್ಲಿ ಉಕ್ತರು. ಅತ್ರಿಋಷಿಗಳು, ಅಂಗೀರಸಋಷಿಗಳು ಅಂತು ಏಳುಜನ ಋಷಿಗಳು ಬ್ರಹ್ಮ ದೇವರಿಗೆ ಪುತ್ರರಾದಂಥಾವರು. ಈ ಏಳು ಮಂದಿ ಋಷಿಗಳಿಗೆ ಸಮಾನರಾದ ವರು ವಿಶ್ವಾಮಿತ್ರಋಷಿಗಳು, ವೈವಸ್ವತರು ಅಂತು ಇಬ್ಬರು, ಸಪ್ತಋಷಿಗಳಿಗೆ ಸಮಾನರು. ಇವರಿಬ್ಬರು ಪರಮಾತ್ಮನ ಆವೇಶದಿಂದ ಯುಕ್ತರು. ಇವರು ಒಂಭತ್ತುಮಂದಿ ಮಿತ್ರಾದಿಗಳಿಗಿಂತಲೂ ಉತ್ತಮರು. ಹಿಂದೇ ಕಕ್ಷದವರಾದ ಅಗ್ನಿದೇವರು, ಭೃಗುಋಷಿಗಳು, ದಕ್ಷಪತ್ನಿ ಪ್ರಸೂತಿದೇವೇರು ಈ ಮೂರು ಮಂದಿ ವಿಶ್ವಾಮಿತ್ರಾದಿ ಒಂಭತ್ತುಮಂದಿಗಿಂತಲೂ ಉತ್ತಮರು ಅಂತ ತಾತ್ಪರ್ಯ ॥೮॥

### ೨. ಭಾವಪ್ರಕಾಶಿಕೆ–

ಮರೀಚಿ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ, ಅತ್ರಿ, ಅಂಗಿರರೆಂಬ ಏಳುಮಂದಿ ಬ್ರಹ್ಮದೇವರ ಮಕ್ಕಳು. (ಸಪ್ತರ್ಷಿಗಳು). ವಿಶ್ವಾಮಿತ್ರರು, ವೈವಸ್ವತಮನು. ಈ ಒಂಭತ್ತುಮಂದಿ ಸಮರು.ಮಿತ್ರಾದಿಗಳಿಗಿಂತಲೂ ಉತ್ತಮರು. ಇವರಿಗಿಂತ ಅಗ್ನಿ, ಭೃಗು, ಪ್ರಸೂತಿ ಈ ಮೂವರು ಮಂದಿ ಉತ್ತಮರು. ॥೮॥

### ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ–

'ಅತ್ರಿ' ಇತಿ॥ ವಿಶ್ವಾಮಿತ್ರಃ ಬ್ರಹ್ಮಸುತಾಃ ಸಪ್ತ ವೈವಸ್ವತಃ ಮನುಃ॥ ಮಿತ್ರಾದಿಭ್ಯೋಽಧಿಕಾಃ॥ ಏತೇ ಸಮಾನ್ಯೋನ್ಯ ಸಮಾಃ ಮತಾಃ॥ ಏತೇಭ್ಯೋಽಗ್ನಿಃ ಭೃಗುಃ ದಕ್ಷಪತ್ನೀ ಚೇತಿ ತ್ರಯೋಽಧಿಕಾಃ॥ ಪರಸ್ಪರ ಸಮಾಃ ಪ್ರೋಕ್ತಾಃ ಮಿತ್ರತಃ ದ್ವಿಗುಣಾಧಿಕಾಃ॥ ಅಗ್ನಿತಃ ನಾರದಃ ಶ್ರೇಷ್ಠಃ॥ತತೋ ವರುಣಃ ಉತ್ತಮಃ॥ ಅಗ್ನಿತಃ ಪಾದಮಾತ್ರೇಣ ವರುಣೋಽಧಿಕ ಈರಿತಃ॥ ಚಂದ್ರಾದಯಃ ಪಾದೋತ್ತಮಾಃ ಇತ್ಯನುವೃತ್ತ್ಯ ಪಾದಪಾದೋತ್ತಮಾಃ ಇತಿ ಯೋಜ್ಯಮ್॥ ವರುಣಾತ್ ಪಾದಪಾದಾರ್ಧಮಾತ್ರತಃ ವಿಧುಃ ಉತ್ತಮಃ॥ ವಿಧುಃ ಸೂರ್ಯಃ ಮನೋಃಭಾರ್ಯಾ ಯಮಸ್ಮೃತೇಃ ಸಮಾಃ ಮತಾಃ॥ ವಹ್ನ್ಯಾದೇಃ ದ್ವಿಗುಣೇನೋಚ್ಚಾಃ ॥೮॥

**ಕನ್ನಡಾರ್ಥ–**

ಏಳು ಬ್ರಹ್ಮಪುತ್ರರು, ವಿಶ್ವಾಮಿತ್ರ, ವೈವಸ್ವತಮನು ಇವರು ಒಂಭತ್ತು ಜನರು ಮಿತ್ರ ಮುಂತಾದವರಿಂದ ಅಧಿಕರೂ, ಪರಸ್ಪರ ಸಮರೂ ಆಗಿರುತ್ತಾರೆ. ಇವರಿಗಿಂತ ಅಗ್ನಿ, ಭೃಗು, ಪ್ರಸೂತಿ ಈ ಮೂವರು ಅಧಿಕರು. ಇವರೂ ಪರಸ್ಪರ ಸಮರು. ಹಾಗೂ ಮಿತ್ರನಿಂದ ಎರಡು ಗುಣಗಳಿಂದ ಅಧಿಕರು. ಅಗ್ನಿಗಿಂತ ನಾರದ ಅಧಿಕನು. ಅವನಿಂದ ವರುಣನು ಅಧಿಕನು. ಅಗ್ನಿಯಿಂದ ಪಾದಮಾತ್ರ ಅಧಿಕನು. ಚಂದ್ರಾದಿಗಳು ಪಾದೋತ್ತಮರು ಎಂಬುದನ್ನು ಅನುವರ್ತಿಸಿ 'ಪಾದಪಾದೋತ್ತಮ' ಎಂದು ಯೋಜಿಸಬೇಕು. ವರುಣನಿಂದ ಪಾದಪಾದದಿಂದ (೩/೮) ಚಂದ್ರನು ಅಧಿಕನು. ಚಂದ್ರ, ಸೂರ್ಯ, ಶತರೂಪಾ ಇವರು ಸಮರು. ಅಗ್ನಿಯಿಂದ ಎರಡು ಗುಣಗಳಿಂದ ಉಚ್ಚರು ಎಂದು ಪ್ರಮಾಣಸಮ್ಮತವಾಗಿದೆ ॥೮॥

### ೪. ಭಾವದರ್ಪಣ

ಅತ್ರಿ ॥೮॥

### ೫. ಶ್ರೀಗುರುಹೃದಯಪ್ರಕಾಶಿಕೆ

ಈ ಪದ್ಯದ ಅರ್ಥವಿವರಣೆಯನ್ನು ಹಿಂದಿನ ಪದ್ಯದಲ್ಲಿ ಕೊಡಲಾಗಿದೆ.

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಅತ್ರಿ** - ಪ್ರಸಕ್ತ ಮನ್ವಂತರದ ಸಪ್ತರ್ಷಿಗಳಲ್ಲಿ ಒಬ್ಬನು. ಬ್ರಹ್ಮನ ಮಾನಸಪುತ್ರನು. ಕರ್ದಮನೆಂಬ ಬ್ರಹ್ಮನ ಪುತ್ರಿ ಅನಸೂಯೆ ಈತನ ಪತ್ನಿ. ಶ್ರೀವಿಷ್ಣುವು ಅನಸೂಯೆಯ ಪಾತಿವ್ರತ್ಯಕ್ಕೆ ಮೆಚ್ಚಿ, ಅವಳನ್ನು ಅನುಗ್ರಹಿಸಿ, ದತ್ತಾತ್ರೇಯರೂಪದಿಂದ ಅವತರಿಸಿದನು. (ಅತ್ರಿ - ಆತ್ರೇಯ - ಅತ್ರಿಯಮಗ. ದತ್ತನೆಂಬ ನಾಮ). ಅತ್ರಿಯು ಮಂತ್ರದ್ರಷ್ಟಾರ ಮಹರ್ಷಿ. ಶ್ರೀರಾಮನು ವನವಾಸಕಾಲದಲ್ಲಿ ಅತ್ರಿಯ ಆಶ್ರಮಕ್ಕೆ ಹೋದಾಗ, ಅಲ್ಲಿ ಅತ್ರಿಮುನಿಯು ಶ್ರೀರಾಮನಿಗೆ ಅನೇಕ ಧರ್ಮರಹಸ್ಯಗಳನ್ನು ತಿಳಿಸಿದ.

**೨. ಅಂಗೀರಸ** - ಈ ಮುನಿಯು ಬ್ರಹ್ಮನ ಮಾನಸಪುತ್ರನಾಗಿ ಜನಿಸಿದನು. ಪ್ರಸಕ್ತ ವೈವಸ್ವತಮನ್ವಂತರದಲ್ಲಿ ವರುಣನು ಯಜ್ಞಮಾಡುತ್ತಿದ್ದಾಗ, ಅಗ್ನಿಕುಂಡದಿಂದ ಜನಿಸಿದನು. ವಸುದೆ ಎಂಬಾಕೆ ಈತನ ಪತ್ನಿ. ಅವಳಲ್ಲಿ ಏಳುಮಂದಿ ಪುತ್ರರೂ ಮತ್ತು ಏಳುಮಂದಿ ಪುತ್ರಿಯರೂ ಜನಿಸಿದರು. ಬೃಹಸ್ಪತಿ, ಉಚಥ್ಯ, ವಯಸ್ಯರೆಂಬ ಮಹಾಯೋಗಿಗಳು ಅಂಗೀರಸನ ಮೂವರು ಪುತ್ರರು. ಸ್ವಧೆಯೆಂಬ ಪತ್ನಿಯಲ್ಲಿ ಪಿತೃದೇವತೆಗಳನ್ನು ಪಡೆದನು.

ಅಂತು ಮರೀಚಿ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ, ಅತ್ರಿ, ಅಂಗೀರಸ ಎಂಬ ಈ ಏಳುಮಂದಿ ಸಪ್ತರ್ಷಿಗಳು ಬ್ರಹ್ಮನ ಪುತ್ರರು. 33ನೇ ಕಕ್ಷಕ್ಕೆ ಸೇರಿದವರು.

**೩. ವಿಶ್ವಾಮಿತ್ರ** - ಚಂದ್ರವಂಶದ ಕುಶಿಕರಾಜನ ವಂಶದವನಾದ ಗಾಧಿರಾಜನ ಪುತ್ರನು. ಮೊದಲು ಕ್ಷತ್ರಿಯನಾಗಿ ಜನಿಸಿ, ತನ್ನ ಅಗಾಧವಾದ ತಪೋಮಹಿಮೆಯಿಂದ ಬ್ರಹ್ಮರ್ಷಿ ಎಂದೆನಿಸಿದ ಮಹಾತಪಸ್ವಿ. ಹೈಮಾವತಿ ಎಂಬಾಕೆ ಈತನ ಪತ್ನಿ. ಶಾಲಾವತಿ ಇತ್ಯಾದಿ ಅನೇಕ ಪತ್ನಿಯರು. ಮಧುಚ್ಛಂದ, ಕತಿ, ಯಾಜ್ಞವಲ್ಕ್ಯ, ಗಾಲವ, ಮುದ್ಗಲ, ದೇವರಾತ (ಶುನಶ್ಶೇಪ) ಇತ್ಯಾದಿ ಅನೇಕಮಂದಿ ಪುತ್ರರು. ತ್ರಿಶಂಕುವಿಗಾಗಿ ಸ್ವರ್ಗವನ್ನೇ ನಿರ್ಮಿಸಿದ ಭೂಪತಿ. ವಿಶ್ವಾಮಿತ್ರನ ಸಮ್ಮುಖದಲ್ಲೇ ಸೀತಾಸ್ವಯಂವರದಲ್ಲಿ ಶ್ರೀರಾಮನು ಸೀತೆಯನ್ನು ಪರಿಗ್ರಹಿಸಿದ್ದು.

**ವೈವಸ್ವತ** - 14 ಮಂದಿ ಮನುಗಳಲ್ಲಿ ಒಬ್ಬ. ವಿವಸ್ವಂತನೆಂಬ ಆದಿತ್ಯನಿಂದ ಜನಿಸಿದ್ದರಿಂದ ವೈವಸ್ವತ ಎಂಬ ನಾಮ ಈತನ ಮಾತೆ ಸಂಜ್ಞಾದೇವಿ (ತ್ವಷ್ಟೃವಿನ ಪುತ್ರಿ). ಈಗ ನಡೆಯುತ್ತಿರುವ ವೈವಸ್ವತಮನ್ವಂತರದ ಅಧಿಪತಿ.

ಮರೀಚ್ಯಾದಿ ಸಪ್ತರ್ಷಿಗಳು ಮತ್ತು ವಿಶ್ವಾಮಿತ್ರ, ವೈವಸ್ವತಮನು ಈ 9 ಮಂದಿ ಸಮರು. ಇವರಲ್ಲಿ ನಿತ್ಯ ಹರಿಯ ಆವೇಶಬಲವಿರುವುದರಿಂದ (**ಈಶಾವೇಶಬಲದಿಂದ**) ವಿಶ್ವಾಮಿತ್ರ ಮತ್ತು ವೈವಸ್ವತಮನು ಈ ಈರ್ವರು ಸಪ್ತರ್ಷಿಗಳಿಗೆ ಸಮಾನರು. ಈ ಒಂಭತ್ತುಮಂದಿ ಮಿತ್ರನಾಮಕ ಸೂರ್ಯ ಇತ್ಯಾದಿ ವರ್ಗದವರಿಗಿಂತ ಉತ್ತಮರು.

**೫. ಸ್ವಾಹಾಭರ್ತೃ**– ಸ್ವಾಹಾದೇವಿಯ ಪತಿ ಅಗ್ನಿದೇವರು. ಪಂಚಭೂತಗಳಲ್ಲಿ ಮೂರನೆಯವನು. ಅಂತೆಯೇ ವಾಗಿಂದ್ರಿಯಕ್ಕೆ ಅಭಿಮಾನಿ. ಋಗ್ವೇದದಲ್ಲಿ ಪ್ರಥಮದೇವತೆ. ವಿರಾಡ್ರೂಪಿ ಶ್ರೀಹರಿಯ ಮುಖದಿಂದ ಜನಿಸಿದನು. ಇವನ ದ್ವಾರವೇ ಸಕಲದೇವತೆಗಳೂ ಹವಿಸ್ಸನ್ನು ಸ್ವೀಕರಿಸುವರು. ಇದರಿಂದ ಅಗ್ನಿಗೆ 'ಅಮರಾಸ್ಯ' ಅಥವಾ 'ದೇವಮುಖ' ಎಂದು ಹೆಸರು. ಅಗ್ನಿಯ ಪತ್ನಿ ಸ್ವಾಹಾದೇವಿ ದಕ್ಷಬ್ರಹ್ಮನ ಕುವರಿ. ಇದರಿಂದ ಸ್ವಾಹಾಭರ್ತೃ ಎಂದಿದ್ದಾರೆ. ಶ್ರೀಕೃಷ್ಣನ ಸೂಚನೆಯಂತೆ ಅರ್ಜುನನ ಸಹಾಯದಿಂದ ಖಾಂಡವವನವನ್ನು ಸುಟ್ಟು ಭಸ್ಮ ಮಾಡಿದನು. ಶ್ರೀಕೃಷ್ಣನಿಗೆ ಸುದರ್ಶನವೆಂಬ ಚಕ್ರಾಯುಧವನ್ನಿತ್ತನು. ಭೃಗುಋಷಿಯಿಂದ ಸರ್ವಭಕ್ಷಕನಾಗುವಂತೆ ಶಾಪ ಹೊಂದಿದನು. ಸೀತಾಕೃತಿಯನ್ನು ತನ್ನ ಆಶ್ರಯದಲ್ಲಿಟ್ಟು ಕೊಂಡಿದ್ದನು. ಟಗರು ಈತನ ವಾಹನ. ಆಗ್ನೇಯದಿಕ್ಪಾಲಕ. ಶ್ರೀರಾಮಚಂದ್ರನ ಅವರಪುತ್ರರಲ್ಲಿ ಲವನೆಂಬುವನು ಅಗ್ನಿಯ ಅವತಾರನು.

**೬. ಭೃಗು** - ಒಬ್ಬ ಮಹರ್ಷಿ. ಬ್ರಹ್ಮನ ಹೃದಯದಿಂದ ಜನಿಸಿದವನು. ಈತನ ಪುತ್ರರು ಕವಿ ಮತ್ತು ಚ್ಯವನಮುನಿ. ಖ್ಯಾತಿ ಎಂಬಾಕೆಯು ಭೃಗುವಿನ ಪತ್ನಿ. ಈಕೆಯಲ್ಲಿ ಲಕ್ಷ್ಮೀದೇವಿ ಅವತಾರ ಮಾಡಿದಳು. ಭೃಗುವು ತಂದೆಯಾದ್ದರಿಂದ ಲಕ್ಷ್ಮೀದೇವಿಗೆ 'ಭಾರ್ಗವಿ' ಎಂಬ ಹೆಸರು. ಶುಕ್ರಾಚಾರ್ಯರೂ ಭೃಗುವಿನ

ಪುತ್ರರು. (ಕಪಿ). ವೈವಸ್ವತಮನ್ವಂತರದಲ್ಲಿ (ಈಗ ನಡೆಯುತ್ತಿರುವುದು) ವರುಣನ ಯಜ್ಞಕುಂಡದಿಂದ ಜನಿಸಿದನು. ಈ ಕಾರಣದಿಂದ ಭೃಗುವಿಗೆ 'ವಾರುಣಿ' ಎಂದು ಹೆಸರು. ತೈತ್ತಿರೀಯ ಉಪನಿಷತ್ತಿನ ಮಂತ್ರದ್ರಷ್ಟಾರ ಋಷಿ. ಸತ್ಯಯಾಗದಲ್ಲಿ ತ್ರಿಲೋಕಗಳಿಗೆ ಹೋಗಿ, ಶ್ರೀಹರಿಯೇ ಸರ್ವೋತ್ತಮ ನೆಂದು ಸಾರಿದ ಮುನಿವರೇಣ್ಯ. ನಾರದರಂತೆ ಯೋಗಸಿದ್ಧ ಪುರುಷ.

೭. ಪ್ರಸೂತಿ - ದಕ್ಷಪ್ರಜಾಪತಿಯ ಪತ್ನಿ

ಆಂತೂ, ಅಗ್ನಿ, ಭೃಗು ಪ್ರಸೂತಿ ಈ ಮೂರುಮಂದಿ ಸಮರು. ವಿಶ್ವಾಮಿತ್ರಾದಿ 9 ಜನಗಳಿಗಿಂತ ಉತ್ತಮರು ॥೮॥

## ಪದ್ಯ - ೯

**ಮೂಲ -**

**ನಾರದೋತ್ತಮನಗ್ನಿಗಿಂತಲಿ ।**
**ವಾರಿನಿಧಿ ಪಾದೋತ್ತಮನು ಯಮನು ।**
**ತಾರಕೇಶ ದಿವಾಕರರು ಶತರೂಪರುತ್ತಮರು ॥**
**ವಾರಿಜಾಪ್ತನಿಗಿಂತ ಪ್ರವಹ ।**
**ಮೂರುಕೋತ್ತಮ ಪ್ರವಹಗಿಂತಲಿ ।**
**ಮೂರವ್ರುತ್ರನಿರುದ್ಧ ಗುರು ಮನು ದಕ್ಷ ಶಚಿ ರತಿಯು ॥೯॥**

**ಅವತರಣಿಕೆ -**

35ನೇ ಕಕ್ಷದಾರಭ್ಯ ನಾರದಾದಿ ಋಷಿಗಳು ಇತ್ಯಾದಿ ಆರಂಭಿಸಿ 39ನೆಯ ಕಕ್ಷಾಪರ್ಯಂತರಾದ ರತಿದೇವಿ ಪರ್ಯಂತ ತಾರತಮ್ಯ ಹೇಳುತ್ತಾರೆ.

**ಪ್ರತಿಪದಾರ್ಥ -**

**ಅಗ್ನಿಗಿಂತಲಿ** - 34ನೆಯ ಕಕ್ಷದ ಅಗ್ನ್ಯಾದಿ ಮೂರುಮಂದಿಗಳಿಗಿಂತ (ಅಗ್ನಿ, ಭೃಗು, ಪ್ರಸೂತಿ), **ನಾರದನು ಉತ್ತಮನು** - 35ನೆಯ ಕಕ್ಷದ ನಾರದಮಹರ್ಷಿಗಳು ಉತ್ತಮರು. **ವಾರಿನಿಧಿ** - 36ನೆಯ ಕಕ್ಷಕ್ಕೆ ಸೇರಿದ ಸಮುದ್ರರಾಜನು ಆದ ವರುಣನು ನಾರದರಿಗಿಂತ, **ಪಾದೋತ್ತಮನು** -

ಫಾಲ್ಗುಣದಿಂದ (ಕಾಲುಗುಣ) ಉತ್ತಮನು. **ಯಮ** - 37ನೇ ಕಕ್ಷಾಪನ್ನ ರಾದ ಯಮದೇವರು. **ತಾರಕೇಶ** - ನಕ್ಷತ್ರಾಧಿಪತಿಯಾದ ಚಂದ್ರ, **ದಿವಾಕರರು** - ಮೂರುಮಂದಿ ಸೂರ್ಯರು, **ಶತರೂಪರು** - ಸ್ವಾಯಂಭುವ ಮನುವಿನ ಪತ್ನಿ ಶತರೂಪಾದೇವಿ, ಈ ನಾಲ್ಕುಮಂದಿ (ಯಮ, ಚಂದ್ರ, ಸೂರ್ಯ, ಶತರೂಪಾ) ವರುಣನಿಗಿಂತಲೂ ಉತ್ತಮರು. **ಪ್ರವಹಮಾರುತ** - 38ನೆಯ ಕಕ್ಷದವರಾದ ವಾಯುವ್ಯದಿಕ್ಪತಿ ಪ್ರವಹವಾಯುದೇವರು, **ನಾರಿಜಾಪ್ತನಿಗಿಂತ** - ವಿವಸ್ವಾನ್ ನಾಮಕ ಸೂರ್ಯಾದಿ ಪೂರ್ವೋಕ್ತ ನಾಲ್ಕುಮಂದಿಗಳಿಗಿಂತ, **ಉತ್ತಮ** - ಉತ್ತಮರಾದವರು. **ಪ್ರವಹಗಿಂತಲಿ** - ಪ್ರವಹವಾಯುದೇವರಿಗಿಂತ, **ಮಾರಪುತ್ರ ಅನಿರುದ್ಧ** - 39ನೆಯ ಕಕ್ಷಕ್ಕೆ ಸೇರಿದ ಕಾಮಪುತ್ರ ಅನಿರುದ್ಧನು. **ಗುರು** - ದೇವಗುರುಗಳಾದ ಬೃಹಸ್ಪತ್ಯಾಚಾರ್ಯರು. **ಮನು** - ಸ್ವಾಯಂಭುವಮನು. **ದಕ್ಷ** - ದಕ್ಷಪ್ರಜಾಪತಿ, **ಶಚಿ** - ಇಂದ್ರಪತ್ನಿ ಶಚಿದೇವಿ. **ರತಿಯು** - ಕಾಮಪತ್ನಿ ರತಿದೇವಿ ಈ ಆರು ಮಂದಿ (ಅನಿರುದ್ಧ, ಬೃಹಸ್ಪತ್ಯಾಚಾರ್ಯರು, ಸ್ವಾಯಂಭುವಮನು, ದಕ್ಷ ಪ್ರಜಾಪತಿ, ಶಚಿ, ರತೀ) ಪ್ರವಹವಾಯುದೇವರಿಗಿಂತ ಉತ್ತಮರು ॥೯॥

## ವ್ಯಾಖ್ಯಾನಗಳು

### ೧. ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ಮೂವತ್ತ್ಯೆದನೇ ಕಕ್ಷದಾರಭ್ಯ ೩೯ನೇ ಕಕ್ಷದವರೆಗೂ ತಾರತಮ್ಯ ಹೇಳತಾರೆ.

ಮೂವತ್ತಾಲ್ಕನೇ ಕಕ್ಷದ ಅಗ್ನ್ಯಾದಿ ಮೂರುಮಂದಿಗಿಂತಲೂ, ೩೫ನೇ ಕಕ್ಷದ ನಾರದಋಷಿ ಉತ್ತಮನು. ೩೬ನೇ ಕಕ್ಷದವರಾದ ವರುಣದೇವರು ನಾರದಋಷಿಗಿಂತಲೂ ಫಾಲ್ಗುಣದಿಂದ ಉತ್ತಮನು. ೩೭ನೇ ಕಕ್ಷದವರಾದ ಯಮದೇವರು, ಅಶ್ವಿನ್ಯಾದಿನಕ್ಷತ್ರಗಳಿಗೆ ಈಶನಾದ ಚಂದ್ರದೇವರು, ವಿವಸ್ವಾನ್‌ನಾಮಕ ಸೂರ್ಯದೇವರು, ಸ್ವಾಯಂಭುವಮನುಪತ್ನಿ ಶತರೂಪಾ ದೇವೇರು ಈ ನಾಲ್ಕುಮಂದಿ ಪೂರ್ವೋಕ್ತ ವರುಣನಿಗಿಂತಲೂ ಉತ್ತಮರು.

ಒಬ್ಬನೇ ಕಕ್ಷದವರಾದ ಪ್ರವಹವಾಯುದೇವರು ಪೂರ್ವೋಕ್ತ ಯಮನಾ[illegible] ನಾಮಕ ಸೂರ್ಯಾದಿ ನಾಲ್ಕುಮಂದಿಗಳಿಗಿಂತಲೂ ಉತ್ತಮರಾದವರು. ಈ ಪೂರ್ವೋಕ್ತ ಪ್ರವಹವಾಯುದೇವರಿಗಿಂತಲೂ, ಒಬ್ಬನೇ ಕಕ್ಷದವರಾದ ಕಾಮಪುತ್ರ ಅನಿರುದ್ಧ, ಬೃಹಸ್ಪತ್ಯಾಚಾರ್ಯರು, ಸ್ವಾಯಂಭುವಮನು, ದಕ್ಷಪ್ರಜೇಶ್ವರ ಇಂದ್ರದೇವರ ಪತ್ನಿ ಶಚೀದೇವೇರು, ಮನ್ಮಥಪತ್ನಿ ರತಿ ದೇವೇರು ಅಂತು ಈ ಆರು ಜನರು ॥೯॥

## ೨. ಭಾವಪ್ರಕಾಶಿಕೆ: –

ಅಗ್ನಿದೇವರಿಗಿಂತ ನಾರದರು ಉತ್ತಮರು. ನಾರದರಿಗಿಂತ ವಾರಿನಿಧಿಪ ನಾದ ವರುಣನು ಕಾಲುಭಾಗಗುಣದಿಂದ ಉತ್ತಮನು. ವರುಣನಿಗಿಂತ ಯಮ, ಚಂದ್ರ, ಸೂರ್ಯ. ಸ್ವಾಯಂಭುವಮನುವಿನ ಹೆಂಡತಿ ಶತರೂಪಾದೇವಿ ಈ ಮೂವರು ಉತ್ತಮರು. ಸೂರ್ಯಾದಿಗಳಿಗಿಂತಲೂ ಪ್ರವಹವಾರುತನು ಉತ್ತಮನು. ಪ್ರವಹಮಾರುತನಿಗಿಂತ ಮನ್ಮಥನ ಮಗ ಅನಿರುದ್ಧ. ಬೃಹಸ್ಪತಿ. ಸ್ವಾಯಂಭುವಮನು, ದಕ್ಷ, ಶಚೀದೇವಿ, ರತೀದೇವಿ ಈ ಆರುಮಂದಿ ಉತ್ತಮರು ॥೯॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ–

'ವಾರಿಜ' ಇತಿ ॥ ಚಂದ್ರಾದೇಃ ಪ್ರವಹಃ ಅಧಿಕಃ ದ್ವಿಗುಣಾತ್ ॥೯॥

### ಕನ್ನಡಾರ್ಥ–

ಚಂದ್ರ ಮುಂತಾದವರಿಂದ ಪ್ರವಹನು ಎರಡು ಗುಣಗಳಿಂದ ಅಧಿಕನು ॥೯॥

## ೪. ಭಾವದರ್ಪಣ–

ನಾರದ, ವಾರಿನಿಧಿ - ವರುಣ, ತಾರಕೇಶ - ಚಂದ್ರ ॥೯॥

## ೫. ಶ್ರೀಗುರುಹೃದಯಪ್ರಕಾಶಿಕೆ

ಅಗ್ನಿಗಿಂತ ನಾರದರು ಉತ್ತಮರು. ವಾರಿನಿಧಿ ಎಂಬ ವರುಣನು ನಾರದರಿಗಿಂತ ಕಾಲುಪಾಲುಗುಣ ಉತ್ತಮನು. ಯಮ, ತಾರಕೇಶನೆಂದರೆ ಚಂದ್ರ, ದಿವಾಕರನೆಂಬ ಸೂರ್ಯ, ಸ್ವಾಯಂಭುವಮನು ಪತ್ನಿ ಶತರೂಪಾದೇವಿ ಸಹ ಉತ್ತಮರು. ವಾರಿಜಾಪ್ತನೆಂಬ ಸವಿತ್ರನಾಮಕ ಸೂರ್ಯನಿಗಿಂತ ಪ್ರವಹವಾಯುದೇವರು ಉತ್ತಮರು. ಈತನಿಗಿಂತ ಕಾಮಪುತ್ರ ಅನಿರುದ್ಧ, ಗುರು ಎಂಬ ಬೃಹಸ್ಪತಿ, ಸ್ವಾಯಂಭುವಮನು, ದಕ್ಷಪ್ರಜೇಶ್ವರ, ಶಚೀದೇವಿ, ರತೀದೇವಿ ಸಹ ಉತ್ತಮರು. ॥೯॥

## ಸರ್ವವ್ಯಾಖ್ಯಾನಸಾರಸಂಗ್ರಹ-

೧. **ನಾರದನು** - ಸ್ವಾಯಂಭುವ ಮನ್ವಂತರದಲ್ಲಿ ಬ್ರಹ್ಮನ ಹತ್ತು ಮಂದಿ ಮಾನಸಪುತ್ರರಲ್ಲಿ ಕೊನೆಯವನು. ಬ್ರಹ್ಮದೇವರ ತೊಡೆಯಿಂದ ಜನಿಸಿದವ. ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ಭೃಗು, ದಕ್ಷ, ವಸಿಷ್ಠರೆಂಬ ಒಂಭತ್ತು ಮಂದಿ ನಾರದನ ಅಣ್ಣಂದಿರು. ಈತ ಬ್ರಹ್ಮಚಾರಿ. **ತ್ರಿಲೋಕಸಂಚಾರಿ.**

೨. ಅಗ್ನಿ, ಭೃಗು, ಪ್ರಸೂತಿ ಈ ಮೂವರುಗಳಿಗಿಂತ ನಾರದನು **ಉತ್ತಮನು.**

೩. **ವಾರಿನಿಧಿ** - ವಾರಿ - ನೀರು. ನಿಧಿ-ಆಗರ. ವಾರಿನಿಧಿ ಎಂದರೆ ಸಮುದ್ರ. ಸಮುದ್ರರಾಜನಾದ **ವರುಣನು** - ವಾರಿನಿಧಿಯು. ವಾರಿನಿಧಿ ನಾಮಕನಾದ ವರುಣನು ನಾರದನಿಗಿಂತ ಪಾದಗುಣದಿಂದ (ಕಾಲುಗುಣ) ಉತ್ತಮನು.

೪. **ಯಮ** - ಸೂರ್ಯನ ಪುತ್ರ. ಸಂಜ್ಞಾದೇವಿಯಲ್ಲಿ ಜನಿಸಿದವ. ದಕ್ಷಿಣದಿಕ್ಕಿನ ಅಧಿಪತಿ. ಸಂಯಮಿನೀಪುರ ಈತನ ರಾಜಧಾನಿ. ಯಮುನೆ ಈತನ ತಂಗಿ. ಶನಿ ಈತನ ಇನ್ನೊಬ್ಬ ಹೆಂಡತಿಯಾದ ಛಾಯಾದೇವಿಯ ಪುತ್ರನು. ಅಣಿಮಾಂಡವ್ಯಮುನಿಯನ್ನು ಶಿಕ್ಷೆಗೆ ಗುರುಪಡಿಸಿ, ಭೂಲೋಕದಲ್ಲಿ

ಶೂದ್ರಯೋನಿಯಲ್ಲಿ ಜನಿಸುವಂತೆ ಶಾಪ ಪಡೆದು ವಿದುರನಾಗಿ ಅವತರಿಸಿದ. ನರಕಲೋಕಾಧಿಪತಿ. ಜೀವರಿಗೆ ಅವರವರ ಪಾಪ-ಪುಣ್ಯಕರ್ಮಗಳ ಫಲವಾಗಿ ನರಕದಲ್ಲಿ ಶಿಕ್ಷೆ ಮತ್ತು ಸನ್ಮಾನಗಳನ್ನು ಮಾಡುವ ಧರ್ಮಾಧಿಕಾರಿ. ಕುಂತಿಯಲ್ಲಿ ಮಂತ್ರಮಹಿಮೆಯಿಂದ ಯುಧಿಷ್ಠಿರನಾಗಿ ಜನಿಸಿದನು. ಸತ್ಯವಾನನನ್ನು ಬದುಕಿಸಿಕೊಟ್ಟು, ಸಾವಿತ್ರಿಯ ಮಾಂಗಲ್ಯವನ್ನು ಸಂರಕ್ಷಿಸಿದನು.

**೫. ತಾರಕೇಶ** - ಅಶ್ವಿನ್ಯಾದಿ 27 ನಕ್ಷತ್ರಗಳಿಗೆ ಅಧಿಪತಿಯಾಗಿರುವ ಚಂದ್ರನಿಗೆ ತಾರಕೇಶನೆಂದು ಹೆಸರು. (ಉಡುಪ)

ನವಗ್ರಹಗಳಲ್ಲಿ ಒಬ್ಬನು. ಅತ್ರಿ ಮುನಿಯ ಪುತ್ರ (ಅತ್ರಿಜ). ಸ್ವಾಯಂಭುವ ಮನ್ವಂತರಕ್ಕೆ ಸೇರಿದವನು. ಸೋಮನೆಂದು ಈತನ ನಾಮಾಂತರ. ಈಗ ನಡೆಯುತ್ತಿರುವ ವೈವಸ್ವತಮನ್ವಂತರದಲ್ಲಿ ಧರ್ಮಪ್ರಜಾಪತಿಯಿಂದ ವಸುವು ಎಂಬಾಕೆಯಲ್ಲಿ ಜನಿಸಿದನು. ಅಷ್ಟವಸುಗಳಲ್ಲಿ ಒಬ್ಬನು.

**೬. ದಿವಾಕರರು** - ಸೂರ್ಯರು. (ದ್ವಾದಶಾದಿತ್ಯರಲ್ಲಿ ಉತ್ತಮಕಕ್ಷೆಗೆ ಸೇರಿದವರು ಮೂರುಮಂದಿ). **ಸೂರ್ಯನು** ಕಶ್ಯಪಮುನಿಯ ಪುತ್ರ. ಅದಿತಿ ಈತನ ಜನನಿ. ತ್ವಷ್ಟೃವಿನ ಪುತ್ರಿ ಸಂಜ್ಞಾದೇವಿ ಸೂರ್ಯನ ಪತ್ನಿ. ಸಂಜ್ಞಾದೇವಿಯಲ್ಲಿ ಯಮ, ಮನು, ಯಮುನೆ ಎಂಬ ಮೂವರು ಮಕ್ಕಳನ್ನು ಪಡೆದ. ಛಾಯಾದೇವಿ ಸೂರ್ಯನ ಇನ್ನೊಬ್ಬಳು ಪತ್ನಿ. ಅವಳ ದ್ವಾರಾ ಸಾವರ್ಣಿ, ಶನೈಶ್ಚರರೆಂಬ ಇಬ್ಬರು ಸೂರ್ಯನಿಗೆ ಪುತ್ರರು. ಸಂಜ್ಞಾದೇವಿಯು ಕುದುರೆರೂಪದಿಂದಿದ್ದಾಗ ಸೂರ್ಯನಿಂದ ಅಶ್ವಿನಿದೇವತೆಗಳು ಜನಿಸಿದರು. ಸೂರ್ಯನ ಮಂತ್ರದ ವರಬಲದಿಂದ ಕುಂತಿಯು ಕರ್ಣನನ್ನು ಪುತ್ರನನ್ನಾಗಿ ಪಡೆದಳು.

**೭. ಶತರೂಪ** - ಸ್ವಾಯಂಭುವಮನುವಿನ ಪತ್ನಿ. ಶತರೂಪಾದೇವಿ.

ಇಂತು ಯಮಧರ್ಮರಾಯ, ಚಂದ್ರ, ಸೂರ್ಯ, ಶತರೂಪಾದೇವಿ ಈ ನಾಲ್ಕುಮಂದಿ ವರುಣನಿಗಿಂತ ಉತ್ತಮರು (37ನೆಯ ಕಕ್ಷ).

**೮. ಪ್ರವಹಮಾರುತ** - ವಾಯವ್ಯದಿಕ್ಕಿಗೆ ಅಭಿಮಾನಿ. 49ಮರುದ್ಗಣಗಳಲ್ಲಿ ಸೇರಿದ ಒಬ್ಬನು. ಸೂರ್ಯಾದಿ ನಾಲ್ಕುಮಂದಿಗಿಂತ ಪ್ರವಹವಾಯು ಉತ್ತಮನು.

**೯. ಮಾರಪುತ್ರ ಅನಿರುದ್ಧ** - ಮನ್ಮಥನ ಪುತ್ರನಾದ 'ಅನಿರುದ್ಧ'. ತ್ರೇತಾಯುಗದಲ್ಲಿ ಕೃಷ್ಣ-ರುಕ್ಮಿಣಿಯರ ಪುತ್ರನಾದ ಪ್ರದ್ಯುಮ್ನನಿಗೆ ಮಗನಾಗಿ, ಅನಿರುದ್ಧನಾಮಕನಾಗಿ ಅವತರಿಸಿದನು. ಬಾಣಾಸುರನ ಪುತ್ರಿಯಾದ ಉಷೆ ಅನಿರುದ್ಧನ ಪತ್ನೀ.

**೧೦. ಗುರು** - ಸುರಗುರುಗಳಾದ ಬೃಹಸ್ಪತ್ಯಾಚಾರ್ಯರು. ಬ್ರ ಮಹರ್ಷಿ. ಅಂಗೀರಸನ ಪುತ್ರ. ಈತನ ಪತ್ನೀ ತಾರಾದೇವಿ. ತಾರಾ-ಚಂದ್ರರ ಮಗನೇ ಬುಧನು. ಬೃಹಸ್ಪತ್ಯಾಚಾರ್ಯರಿಗೆ ಆರುಮಂದಿ ಪುತ್ರರು. ಅಗ್ನಿಪತ್ನಿಯಾದ ಸ್ವಾಹಾದೇವಿ ಒಬ್ಬಳು ಪುತ್ರಿ. ಕಚನೆಂಬುವನು ಬೃಹಸ್ಪತಿಯ ಪುತ್ರನು. ನಹುಷ ಇಂದ್ರಪದವಿ ಆಳುವಾಗ ಶಚೀದೇವಿಯನ್ನು ಬಲಾತ್ಕರಿಸಿದ. ಆಗ ಬೃಹಸ್ಪತಿಯು ನಹುಷನನ್ನು ಅನರ್ಥಕ್ಕೆ ಗುರಿಮಾಡಿ, ಶಚೀದೇವಿಯ ಪಾತಿವ್ರತ್ಯವನ್ನು ಸಂರಕ್ಷಿಸಿದ.

**೧೧. ಮನು** - ಹದಿನಾಲ್ಕು ಮನುಗಳಲ್ಲಿ ಒಬ್ಬನಾದ ಸ್ವಾಯಂಭುವ ಮನು ಎಂಬುವನು. ಚತುರ್ಮುಖಬ್ರಹ್ಮದೇವರ ಒಂದು ದಿನದಲ್ಲಿ 14 ಮನುಗಳು, ಭೂಲೋಕವನ್ನೂ, 14 ಮಂದಿ ಇಂದ್ರರು ಸ್ವರ್ಗಲೋಕವನ್ನೂ ಆಳುವರು. ಸ್ವಾಯಂಭುವಮನುವು ಗುದತತ್ತ್ವಕ್ಕೆ ಅಭಿಮಾನಿ. ಶತರೂಪಾದೇವಿ ಈತನ ಪತ್ನಿ.

**೧೨. ದಕ್ಷ** - ದಕ್ಷಪ್ರಜಾಪತಿ. ಸತಿ ಈತನ ಪುತ್ರಿ, ರುದ್ರದೇವರ ಪತ್ನಿ. ಹಸ್ತಾಭಿಮಾನಿದೇವತಾ.

**೧೩. ಶಚೀ** - ಇಂದ್ರದೇವರ ಪತ್ನಿ. ಪುಲೋಮನೆಂಬ ಅಸುರನ ಪುತ್ರಿ. ಇದರಿಂದ ಶಚೀದೇವಿಗೆ 'ಪೌಲೋಮಿ' ಎಂದು ಹೆಸರು. ಜಯಂತ ಇಂದ್ರ - ಶಚಿಯರ ಪುತ್ರ. ಇವಳು ಮನೋಭಿಮಾನಿ ದೇವತೆ.

**೧೪. ರತೀ** - ಮನ್ಮಥನ ಪತ್ನೀ. ದಕ್ಷಬ್ರಹ್ಮನ ಪುತ್ರಿ. ಮನೋಭಿಮಾನಿ ದೇವತೆ.

ಇಂತು ಮಾರಪುತ್ರ ಅನಿರುದ್ಧ, ಬೃಹಸ್ಪತ್ಯಾಚಾರ್ಯರು, ಸ್ವಾಯಂಭುವ ಮನು, ದಕ್ಷಪ್ರಜಾಪತಿ, ಶಚೀ, ರತೀ, ಈ ಆರುಮಂದಿ ಪ್ರವಹವಾಯುವಿಗಿಂತ ಉತ್ತಮರು ॥೯॥

### ಪದ್ಯ - ೧೦

**ಮೂಲ -**

**ಆರುಜನಗಳಿಂದಲಾಹಂ ।**
**ಕಾರಿಕಪ್ರಾಣೋತ್ತಮಖಿಳಶ ।**
**ರೀರಮಾನಿ ಪ್ರಾಣಗಿಂತಲಿ ಕಾಮ ಇಂದ್ರರಿಗೆ ।**
**ಗೌರಿ ವಾರುಣಿ ಖಗಪರಾಣಿಗೆ ।**
**ಶೌರಿಮಹಿಷಿಯರೊಳಗೆ ಜಾಂಬವ ।**
**ತೀ ರಮಾಯುತಳಾದ ಕಾರಣ ಅಧಿಕಳೆನಿಸುವಳು ॥೧೦॥**

**ಅವತರಣಿಕೆ -**

40ನೆಯ ಕಕ್ಷದಿಂದ ಆರಂಭಿಸಿ, 43ನೆಯ ಕಕ್ಷ ಪರ್ಯಂತ ತಾರತಮ್ಯ ವಿಚಾರವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ -**

**ಆರುಜನಗಳಿಂದಲಿ** - 39ನೆಯ ಕಕ್ಷದವರಾದ ಅನಿರುದ್ಧಾದಿ ಆರು ಮಂದಿಗಿಂತಲೂ, **ಅಹಂಕಾರಿಕಪ್ರಾಣ** - 40ನೆಯ ಕಕ್ಷದವರಾದ ಅಹಂಕಾರಿಕಪ್ರಾಣದೇವರು, **ಉತ್ತಮ** - ಉತ್ತಮರು. **ಅಖಿಳಶರೀರಮಾನಿ** - ಸಮಸ್ತ ಪ್ರಾಣಿಗಳ ಶರೀರಾಭಿಮಾನಿಯಾದ, **ಪ್ರಾಣಗಿಂತಲಿ** - ಅಹಂಕಾರಿಕ ಪ್ರಾಣದೇವರಿಗಿಂತಲೂ, **ಕಾಮ ಇಂದ್ರರಿಗೆ** - 41ನೆಯ ಕಕ್ಷಕ್ಕೆ ಸೇರಿದ ಇಂದ್ರದೇವರು ಮತ್ತು ಕಾಮದೇವರು ಇವರಿಬ್ಬರೂ ಉತ್ತಮರು. ಇವರಿಗಿಂತ, **ಗೌರಿ ವಾರುಣಿ ಖಗಪರಾಣಿಗೆ** - 42ನೆಯ ಕಕ್ಷದವರಾದ ರುದ್ರಪತ್ನಿ ಪಾರ್ವತೀದೇವಿ, ಶೇಷಪತ್ನಿ ವಾರುಣೀದೇವಿ ಮತ್ತು ಗರುಡದೇವರ ಪತ್ನಿ ಸೌಪರ್ಣೀದೇವಿ (ಖಗಪ - ಪಕ್ಷಿಶ್ರೇಷ್ಠರಾದ ಗರುಡದೇವರು) ಈ ಮೂರು ಮಂದಿ ಉತ್ತಮರು. ಈ ಮೂವರಿಗಿಂತಲೂ, **ಶೌರಿಮಹಿಷಿಯರೊಳಗೆ** -

ಉತ್ತಮರಾದ 43ನೆಯ ಕಕ್ಷದ ಕೃಷ್ಣಪತ್ನಿಯರಾದ ನೀಲಾದಿ ಷಣ್ಮಹಿಷಿಯರಲ್ಲಿ, **ಜಾಂಬವತೀ** - ಜಾಂಬವತೀದೇವಿಯು, **ರಮಾಯುತಳಾದ ಕಾರಣ** - ಶ್ರೀಲಕ್ಷ್ಮೀದೇವಿಯ ಆವೇಶ ಅಧಿಕವಾಗಿರುವುದರಿಂದ, **ಅಧಿಕಳೆನಿಸುವಳು** - (ಒಂದೇ ಕಕ್ಷದವಳಾದರೂ) ಷಣ್ಮಹಿಷಿಯರಲ್ಲಿ ಶ್ರೇಷ್ಠಳು ಎನ್ನಿಸುತ್ತಾಳೆ ||೧೧||

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ -

ನಲವತ್ತನೇ ಕಕ್ಷಾರಭ್ಯ ೪೩ನೇ ಕಕ್ಷದವರಿಗೂ ಹೇಳುತ್ತಾರೆ.

ಮೂವತ್ತೊಂಭತ್ತನೇ ಕಕ್ಷದವರಾದ ಕಾಮಪುತ್ರ ಅನಿರುದ್ಧಾದಿ ೬ ಜನರಿಗಿಂತಲೂ. ೪೦ನೇ ಕಕ್ಷದವರಾದ ಆಹಂಕಾರಿಕ ಪ್ರಾಣದೇವರು ಉತ್ತಮರು. ಸಮಸ್ತ ಪ್ರಾಣಿಗಳ ಶರೀರ ಅಭಿಮಾನಿಯಾದ ೪೦ನೇ ಕಕ್ಷದವರಾದ ಆಹಂಕಾರಿಕ ಪ್ರಾಣದೇವರಿಗಿಂತಲೂ ೪೧ನೇ ಕಕ್ಷದ ಇಂದ್ರದೇವರು, ಕಾಮದೇವರು ಇವರಿಬ್ಬರೂ ಉತ್ತಮರು. ೪೨ನೇ ಕಕ್ಷದವರಾದ ರುದ್ರದೇವರಪತ್ನಿ ಪಾರ್ವತೀದೇವೇರು, ಶೇಷಪತ್ನಿ ವಾರುಣೀದೇವೇರು, ಗರುಡಪತ್ನಿ ಸೌಪರ್ಣೀದೇವೇರು ಈ ಮೂರುಮಂದಿ ಉತ್ತಮರು. ಈ ಮೂರು ಮಂದಿಗಿಂತಲೂ, ೪೩ನೇ ಕಕ್ಷದವರಾದ ಕೃಷ್ಣಪತ್ನೀರಾದ ನೀಲಾದಿ ಷಣ್ಮಹಿಷಿಯರು ಉತ್ತಮರು. ಈ ನೀಲಾದಿ ಆರುಮಂದಿಯೊಳಗೆ ಜಾಂಬವತೀದೇವರು ಲಕ್ಷ್ಮೀ ಆವೇಶ ಅಧಿಕವಾಗಿರೋ ಕಾರಣದಿಂದ ಶ್ರೇಷ್ಠರೆಂದು ಕರೆಸಿಕೊಳ್ಳಲ್ಪಟ್ಟಿದ್ದಾರೆ ಎಂತ ತಾತ್ಪರ್ಯ ||೧೧||

### ೨. ಭಾವಪ್ರಕಾಶಿಕೆ–

ಪೂರ್ವೋಕ್ತ ಪದ್ಯದಂತೆ ಅನಿರುದ್ಧಾದಿ ಆರುಜನರಿಗಿಂತಲೂ ಆಹಂಕಾರಿಕ ಪ್ರಾಣನು ಉತ್ತಮನು. ಅಖಿಳಶರೀರಾಭಿಮಾನಿಯಾದ ಆಹಂಕಾರಿಕ ಪ್ರಾಣನಿಗಿಂತಲೂ ಮನ್ಮಥ ಮತ್ತು ಇಂದ್ರರು ಉತ್ತಮರು. ಕಾಮ - ಇಂದ್ರರಿಗಿಂತ ಗೌರೀ, ಶೇಷದೇವರ ಪತ್ನಿ ವಾರುಣೀ, ಗರುಡಪತ್ನಿ ಸೌಪರ್ಣೀ

ಇವರು ಮೂವರು ಉತ್ತಮರು. ಕೃಷ್ಣಪತ್ನಿಯರಾದ ಜಾಂಬವತೀ, ಮಿತ್ರವಿಂದಾ ಇತ್ಯಾದಿ ಆರುಜನರು ಉತ್ತಮರು. ಇವರೊಳಗೆ ಜಾಂಬವತಿಯು ಶ್ರೀಲಕ್ಷ್ಮೀದೇವಿಯರ ಆವೇಶವಿಶೇಷಬಲದಿಂದ ಅಧಿಕಳೆನಿಸುವಳು ॥೧೧॥

### ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ–

'ಆರುಜನರು' - ಪ್ರವಹಾತ್ ಪಂಚ ಗುಣಿತಾತ್ ಮನುಪ್ರಾವರಾಃ ॥ ಮನುಃ ಶಚೀ ರತಿಃ ದಕ್ಷಃ ಗುರುಃ ಕಾಮಸುತಃ (ತಾ) ತು ಇಮೇ ಸಮಾಃ । ತಾಭ್ಯೋಽಪ್ಯಹಂಪ್ರಾಣಃ ಪಂಚದ್ವಯಗುಣಾಧಿಕಃ॥ ತಸ್ಮಾತ್ ದಶೋತ್ತರೌ ಇಂದ್ರಕಾಮೌ 'ಗೌರಿ' ಇತಿ॥ ತತ್ರೇಷದುತ್ತಮ ಇಂದ್ರಃ॥ ತಸ್ಮಾತ್ ಶಿವಾದೀನಾಂ ಭಾರ್ಯಾಃ ದಶಗುಣಾಧಿಕಾಃ॥ ತಾಭ್ಯಃ ದ್ವಿಗುಣಿತ ಶ್ರೀಕೃಷ್ಣಸ್ಯ ಷಣ್ಮಹಿಷ್ಯಃ ಹರಿಪ್ರಿಯಾಃ ॥೧೧॥

**ಕನ್ನಡಾರ್ಥ–**

ಪ್ರವಹನಿಗೆ ಐದು ಗುಣಗಳಿಂದ ಮನು ಮುಂತಾದವರು ಅಧಿಕರು. ಮನು, ಶಚಿ, ರತಿ, ದಕ್ಷ, ಗುರು, ಅನಿರುದ್ಧ (ಕಾಮಪುತ್ರ) ಇವರು ಸಮರು. ಇವರಿಗಿಂತ ಹತ್ತು ಗುಣಗಳಿಂದ ಅಹಂಕಾರಿಕಪ್ರಾಣನು ಹಿರಿಯನು. ಅಹಂಕಾರಿಕಪ್ರಾಣನಿಗಿಂತ ಹತ್ತು ಗುಣಗಳಿಂದ ಹಿರಿಯರು ಇಂದ್ರ-ಕಾಮರು. ಅವರಲ್ಲಿ ಇಂದ್ರನು ಸ್ವಲ್ಪ ಅಧಿಕನು. ಈ ಇಂದ್ರನಿಗಿಂತ ಹತ್ತು ಗುಣಗಳಿಂದ ರುದ್ರಪತ್ನಿ ಉಮಾ, ಸೌಪರ್ಣೀ, ವಾರುಣೀದೇವಿಯರು ಅಧಿಕರು. ಇವರಿಗಿಂತ ಎರಡು ಗುಣಗಳಿಂದ ಅಧಿಕರು, ಶ್ರೀಕೃಷ್ಣನ ಷಣ್ಮಹಿಷಿಯರು. ಇವರಲ್ಲಿ ಜಾಂಬವತಿಯು ರಮಾವೇಶಕಾರಣದಿಂದ ಅಧಿಕಳು ॥೧೧॥

### ೪. ಭಾವದರ್ಪಣ

ಆರು. ಗೌರಿ - ಪಾರ್ವತಿ, ಶೌರಿ - ಕೃಷ್ಣ ॥೧೧॥

### ೫. ಶ್ರೀಗುರುಹೃದಯಪ್ರಕಾಶಿಕೆ

ಗಿಂತ ಗೌರೀ, ವಾರುಣೀ, ಗರುಡಪತ್ನಿ ಸೌಪರ್ಣೀ ಸಹ ಮೂರುಮಂದಿ ಉತ್ತಮರು. ಇವರಿಗಿಂತ ಶ್ರೀಕೃಷ್ಣ ಪತ್ನಿಯರು ನೀಲಾದಿ ಐದುಜನರು ಉತ್ತಮರು. ಇವರಿಗಿಂತ ರಮಾ ಆವೇಶ ಉಳ್ಳವಳಾದ್ದರಿಂದ ಜಾಂಬವತೀದೇವಿ ಅಧಿಕಳು ॥೧೦॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. **ಅಹಂಕಾರಿಕಪ್ರಾಣ**- ತ್ವಗಿಂದ್ರಿಯಾಭಿಮಾನಿಯಾದ ಅಹಂಕಾರಿಕ ಪ್ರಾಣನು ಸಕಲಚೇತನರ ಶರೀರಾಭಿಮಾನಿಯು. ತ್ವಗಿಂದ್ರಿಯವು ಸಮಗ್ರ ದೇಹಾದ್ಯಂತ ವ್ಯಾಪಿಸಿರುವುದು. ಇದರಿಂದ ಅಹಂಕಾರಿಕಪ್ರಾಣನು ದೇಹಾಭಿಮಾನಿಯು. 49 ಮರುದ್ಗಣದಲ್ಲಿ ಒಬ್ಬನು.

ಅನಿರುದ್ಧಾದಿ ಆರುಮಂದಿಗಳಿಗಿಂತ 40ನೆಯ ಕಕ್ಷದ ಅಹಂಕಾರಿಕ ಪ್ರಾಣನು ಉತ್ತಮನು.

೨. **ಇಂದ್ರ** - ದೇವತೆಗಳ ಅಧಿಪತಿ (ಸುರಪತಿ). ಚತುರ್ಮುಖಬ್ರಹ್ಮದೇವರ ಹಗಲಿನಲ್ಲಿ 14ಮಂದಿ ಇಂದ್ರರು ಸ್ವರ್ಗಲೋಕವನ್ನು ಆಳುವರು. ಪ್ರತಿ ಮನ್ವಂತರದಲ್ಲೂ ಒಬ್ಬೊಬ್ಬ ಇಂದ್ರಪದವಿಯನ್ನು ಹೊಂದುವನು. 'ಇಂದ್ರ' ಎನ್ನುವುದು ಪದವಿಯ ನಾಮ. 100 ಅಶ್ವಮೇಧಯಾಗಗಳನ್ನು ಪೂರ್ಣಗೊಳಿಸುವವನು ಇಂದ್ರ ಪದವಿಗೆ ಅರ್ಹನಾಗುತ್ತಾನೆ (ಉದಾ. ನಹುಷ) 14 ಇಂದ್ರರಲ್ಲಿ ಏಳನೆಯವನಾದ ಪುರಂದರನೆಂಬುವನು ಈ ಮನ್ವಂತರದ (ವೈವಸ್ವತ) ಇಂದ್ರನಾಗಿದ್ದಾನೆ. ಇಂದ್ರನ ಸಭೆಗೆ ಸುಧರ್ಮವೆಂದು ನಾಮ. ಈತನ ಅರಮನೆಗೆ ವೈಜಯಂತ ಎಂಬ ನಾಮ. ಪಟ್ಟದ ಆನೆ ಐರಾವತ. ಪಟ್ಟದ ಕುದುರೆ ಉಚ್ಚೈಶ್ರವಸ್. ವಜ್ರವು ಇಂದ್ರನ ಆಯುಧ. ವೃತ್ರಾಸುರನ ಸಂಹಾರಕ್ಕಾಗಿ ದಧೀಚಿಮುನಿಯ ಬೆನ್ನುಮೂಳೆಯಿಂದ ವಜ್ರಾಯುಧವನ್ನು ತಯಾರಿಸಿದನು. ಅಮರಾವತಿ ಇಂದ್ರನ ರಾಜಧಾನಿ. ಶಚೀ ಇಂದ್ರನ ಪತ್ನಿ. ಅಹಲ್ಯೆಯ ಪಾತಿವ್ರತ್ಯವನ್ನು ಭಂಗಗೊಳಿಸಿದ ಕಾರಣ, ಗೌತಮಋಷಿಗಳಿಂದ ಸಹಸ್ರಾಕ್ಷನಾಗುವಂತೆ ಶಪ್ತನಾದ. ವಿಶ್ವಾಮಿತ್ರನ ತಪಸ್ಸನ್ನು ಮೇನಕೆಯು

ದ್ವಾರಾ ಭಂಗಗೊಳಿಸಿದನು. ಪೂರ್ವ ದಿಕ್ಪಾಲಕ. ಮನೋಭಿಮಾನಿ ದೇವತಾ. ಭೋಗ-ಭಾಗ್ಯಗಳ ಪ್ರದನು. ಪುಲೋಮ, ಪಾಕ, ವೃತ್ರಾಸುರ ಇತ್ಯಾದಿ ಅಸುರರನ್ನು ಸಂಹರಿಸಿದ. ಋಗ್ವೇದದಲ್ಲಿ ಕೆಲವು ಮಂತ್ರಗಳಿಗೆ ಅಧಿದೇವತೆ. ಪರ್ಜನ್ಯದೇವತೆಗಳಿಗೆ ಪ್ರಭು. ಮಳೆಯು ಇಂದ್ರನ ಅನುಗ್ರಹದಿಂದ ಸುರಿಯುವುದು (ಮೇಘನಾಥನು). ವಾಲಿ, ಅರ್ಜುನ, ಕುಶ, ಶ್ರೀಜಯತೀರ್ಥರು ಇಂದ್ರಾಂಶರೆಂದು ಪ್ರಸಿದ್ಧರು.

**೩. ಕಾಮ** - ಮನ್ಮಥನೇ ಕಾಮ. ವಿರಾಡ್ರೂಪೀ ಶ್ರೀಹರಿಯ ಮನಸ್ಸಿನಿಂದ ಜನಿಸಿದ. ಇದರಿಂದ ಕಾಮನಿಗೆ ಮನಸಿಜ, ಭಾವಜ ಎಂದು ಹೆಸರು. ಶ್ರೀಹರಿಯ ಪುತ್ರನು. ಸೌಂದರ್ಯದ ಅಧಿದೇವತೆ. ಮದನ, ಮನ್ಮಥ, ಕಂದರ್ಪ, ದರ್ಪಕ, ಕಾಮ ಇತ್ಯಾದಿ ಅನೇಕ ನಾಮಗಳು. ಬ್ರಹ್ಮದೇವರನ್ನು ಒಲಿಸಿ, ಅವರಿಂದ ಜಗನ್ಮೋಹಕರೂಪವನ್ನು ಪಡೆದನು. ದಕ್ಷಪುತ್ರಿಯಾದ ರತಿ ಈತನ ಪತ್ನಿ. ಇವನ ವಾಹನ ಗಿಳಿ. (ಶುಕವಾಹನನು). ಕಬ್ಬಿನ ಜಲ್ಲೆ (ಇಕ್ಷುದಂಡ) ಇವನ ಬಿಲ್ಲು. ಪಂಚಬಾಣಗಳು - 1. ಅರವಿಂದ. 2 ಅಶೋಕ. 3. ಚೂತ, 4. ನವಮಲ್ಲಿಕಾ, 5. ನೀಲೋತ್ಪಲ ಎಂದು ಆ ಬಾಣಗಳ ಹೆಸರು. ಇವನ ಬಾಣಗಳಿಗೆ ಈ ರೀತಿ ಪುಷ್ಪಗಳ ಹೆಸರಿರುವುದರಿಂದ, ಕಾಮನಿಗೆ ಪುಷ್ಪಬಾಣನೆಂದು ಹೆಸರು. ತಪಸ್ಸಿನಲ್ಲಿ ನಿರತನಾಗಿದ್ದ ಮಹರುದ್ರದೇವರ ಮೇಲೆ ಕುಸುಮಾಸ್ತ್ರಗಳನ್ನು ಪ್ರಯೋಗಿಸಿ, ತಪೋಭಂಗ ಮಾಡಿದ. ಇದರಿಂದ ಕುಪಿತನಾದ ರುದ್ರನ ಫಾಲನೇತ್ರಾಗ್ನಿಯಿಂದ ಭಸ್ಮೀಭೂತನಾದ. ಅಂದಿನಿಂದ ಅನಂಗನೆನಿಸಿದ. ಷಣ್ಮುಖನು ಕಾಮನ ಅವತಾರನು. ದ್ವಾಪರಯುಗದಲ್ಲಿ ಕಾಮನು ಶ್ರೀಕೃಷ್ಣ - ರುಕ್ಮಿಣಿಯರಲ್ಲಿ ಪ್ರದ್ಯುಮ್ನನೆಂಬ ಹೆಸರಿನಿಂದ ಅವತರಿಸಿದನು.

ಅಹಂಕಾರಿಕಪ್ರಾಣನಿಗಿಂತ ಇಂದ್ರ - ಕಾಮರು ಉತ್ತಮರು.

**೪. ಗೌರೀ** - ಪಾರ್ವತಿಯೇ ಗೌರಿ. ಗೌರವರ್ಣದ ಶರೀರವುಳ್ಳವಳಾದ್ದರಿಂದ ಗೌರೀ ಎಂತ ನಾಮ. ಮಹರುದ್ರದೇವರ ಪತ್ನಿ. ಮನಸ್ಸಿಗೆ ಅಭಿಮಾನಿದೇವತಾ. ಮತಿಪ್ರೇರಕಳು. ಪರ್ವತರಾಜನಾದ ಹಿಮವಂತನ

ಮೇನೆಯಲ್ಲಿ ಜನಿಸಿದವಳು. ಪರ್ವತರಾಜನ ಕುವರಿಯಾದ್ದರಿಂದ ಪಾರ್ವತೀ ಎಂತನಾಮ. ಏಕಪರ್ಣಾ, ಏಕಪಾಟಲ ಎಂಬುವರು ಪಾರ್ವತಿಯ ತಂಗಿಯರು. ತಪೋನಿರತರಾಗಿದ್ದ ಮಹರುದ್ರದೇವರನ್ನು ಒಲಿಸಿಕೊಳ್ಳಲು ಪರ್ಣಾಹಾರವನ್ನು ಕೂಡಾ ತ್ಯಜಿಸಿದ್ದರಿಂದ ಅಪರ್ಣಾ ಎಂಬ ಹೆಸರು ಬಂದಿತು. ಕಷ್ಟಸಾಧ್ಯವಾದ ತಪಸ್ಸಿನಿಂದ ದೇಹ ಕೃಶವಾಗುತ್ತಿರಲು, ಮೇನೆಯು, ಎಲೈ! ದೇಹವನ್ನು ಕೃಶಮಾಡಬೇಡ - ಉ ಮಾ ಎಂದು ಬಾರಿ ಬಾರಿಗೂ ಅಡ್ಡಿಪಡಿಸಿದ ಕಾರಣದಿಂದ ಪಾರ್ವತಿಗೆ ಉಮಾ ಎಂಬ ಹೆಸರು ಬಂದಿತು. ಶಿವನನ್ನು ಒಲಿಸಿಕೊಂಡು ಕುಮಾರನೆಂಬ ಮಗನನ್ನು ಪಡೆದಳು. ಕುಮಾರನಿಗೆ ಸುಬ್ರಹ್ಮಣ್ಯ, ಕಾರ್ತಿಕೇಯ, ಷಣ್ಮುಖ ಎಂಬ ನಾಮಾಂತರಗಳಿವೆ. ಈ ಕುಮಾರನೇ ತಾರಕಾಸುರನ ಸಂಹಾರಿ.

**೫. ವಾರುಣೀ**

ಶೇಷದೇವರ ಪತ್ನಿ. ಹಿಂದಿನ ಕಲ್ಪದ ಪಾರ್ವತೀ. ಅಹಂಕಾರ ತತ್ತ್ವಕ್ಕೆ ಅಭಿಮಾನಿ. 42ನೆಯ ಕಕ್ಷ.

**೬. ಖಗಪರಾಣಿ**

ಖಂ - ಆಕಾಶ, ಖಗ - ಆಕಾಶದಲ್ಲಿ ಸಂಚರಿಸುವ ಪಕ್ಷಿಗಳು. ಖಗಪ - ಪಕ್ಷಿಶ್ರೇಷ್ಠನಾದ ಗರುಡದೇವರು. ಅವನ ಪತ್ನಿಯೇ ಸೌಪರ್ಣೀ. ಅಹಂಕಾರತತ್ತ್ವಾಭಿಮಾನಿ ದೇವತೆ. ಚಿತ್ತಾಭಿಮಾನಿ, 42ನೆಯ ಕಕ್ಷ.

ಅಂತೂ 42ನೆಯ ಕಕ್ಷಗೆ ಸೇರಿದ ಪಾರ್ವತೀ, ವಾರುಣೀ, ಸೌಪರ್ಣೀ, ಈ ಮೂವರೂ ಇಂದ್ರ - ಕಾಮರಿಗಿಂತ ಉತ್ತಮರು.

**೭. ಶೌರಿಮಹಿಷಿಯರೊಳಗೆ -**

**ಶೌರಿ** - ಶೂರಸೇನ ಮಹಾರಾಜನ ವಂಶದಲ್ಲಿ ಅವತರಿಸಿದ ಶ್ರೀಕೃಷ್ಣನು. ಇವನ ಹೆಂಡತಿಯರೇ ಷಣ್ಮಹಿಷಿಯರು.

1. ಮಿತ್ರವಿಂದಾ. 2. ನೀಲಾದೇವಿ, 3. ಭದ್ರಾದೇವಿ, 4. ಕಾಳಿಂದೀ ದೇವಿ, 5. ಲಕ್ಷಣಾದೇವಿ ಮತ್ತು 6. ಜಾಂಬವತೀದೇವಿ.

43ನೆಯ ಕಕ್ಷದ ಕೃಷ್ಣನ ಷಣ್ಮಹಿಷಿಯರಲ್ಲಿ ಶ್ರೀಜಾಂಬವತೀದೇವಿಯು ಅಧಿಕಳು, ಅವಳಲ್ಲಿ ರಮಾವೇಶವಿರುವ ಕಾರಣ.

**ಜಾಂಬವತೀ** - ಋಕ್ಷರಾಜನಾದ (ಕರಡಿಗಳ ಅಧಿಪತಿ) ಜಾಂಬವಂತನ ಪುತ್ರಿ. ಸ್ಯಮಂತಕಮಣಿಯ ಅನ್ವೇಷಣೆಯ ಪ್ರಸಂಗದಲ್ಲಿ ಶ್ರೀಕೃಷ್ಣನು ಜಾಂಬವನ ಗುಹೆಯನ್ನು ಪ್ರವೇಶಿಸಿ, ಅನೇಕ ದಿನಗಳು ಅವನೊಡನೆ ಯುದ್ಧ ಮಾಡಿದನು. ಶ್ರೀಕೃಷ್ಣನು ಜಾಂಬವಂತನ ಕೋರಿಕೆಯಂತೆ ರಾಮನಾಗಿ ತನ್ನ ಪೂರ್ವಾವತಾರವನ್ನು ಪ್ರದರ್ಶಿಸಿದನು. ಆಗ ಜಾಂಬವಂತನು ತನ್ನ ಸಾಕು ಮಗಳಾದ ಜಾಂಬವತಿಯನ್ನು ಶ್ರೀಕೃಷ್ಣನಿಗೆ ಕೊಟ್ಟು ಲಗ್ನ ಮಾಡಿದನು. ಜಾಂಬವತಿಯೇ ತುಲಸಿಯು. ಶ್ರೀರುದ್ರದೇವರ ಜೈಗೀಷವ್ಯರೂಪದಿಂದ ಜಾಂಬವತಿಗೆ ಉಪದೇಶ ॥೧೦॥

## ಪದ್ಯ - ೧೧

**ಮೂಲ-**

**ಹರ ಫಣಿಪ ವಿಹಗೇಂದ್ರ ಮೂವರು ।**
**ಹರಿಮಡದಿಯರಿಗುತ್ತಮರು ಸೌ ।**
**ಪರಣಿಪತಿಗುತ್ತಮರು ಭಾರತಿ ವಾಣಿ ಈರ್ವರಿಗೆ॥**
**ಮರುತಬ್ರಹ್ಮರು ಉತ್ತಮರು ಇಂ।**
**ದಿರೆಯು ಪರಮೋತ್ತಮಳು ಲಕ್ಷ್ಮಿಗೆ ।**
**ಸರಿಯೆನಿಸುವವರಿಲ್ಲವೆಂದಿಗು ದೇಶ ಕಾಲದೊಳು ॥೧೧॥**

**ಅವತರಣಿಕೆ-**

44ನೆಯ ಕಕ್ಷಾಪನ್ನರಾದ ಗರುಡ, ಶೇಷ, ರುದ್ರರಿಂದ ಆರಂಭಿಸಿ 47ನೆಯ ಕಕ್ಷದವರಾದ ಶ್ರೀಲಕ್ಷ್ಮೀದೇವಿಯರ ಪರ್ಯಂತ ತಾರತಮ್ಯ ವಿಚಾರ ಹೇಳುತ್ತಾರೆ.

**ಪ್ರತಿಪದಾರ್ಥ-**

**ಹರ** - 44ನೆಯ ಕಕ್ಷದ ಶ್ರೀರುದ್ರದೇವರು, **ಫಣಿಪ** - ಸರ್ಪ ಶ್ರೇಷ್ಠರಾದ ಶ್ರೀಶೇಷದೇವರು, **ವಿಹಗೇಂದ್ರ**-ಪಕ್ಷಿಶ್ರೇಷ್ಠರಾದ ಶ್ರೀಗರುಡದೇವರು,

ಈ ಮೂರುಮಂದಿ, **ಹರಿಮುಡದಿಯರಿಗೆ ಉತ್ತಮರು** - ಶ್ರೀಕೃಷ್ಣನ ಷಣ್ಮಹಿಷಿಯರಾದ ನೀಲಾದಿಗಳಿಗಿಂತ ಉತ್ತಮರು. **ಭಾರತಿ** - 45ನೆಯ ಕಕ್ಷದವರಾದ ಭಾರತೀದೇವಿಯರು, **ವಾಣಿ** - ವಾಗಭಿಮಾನಿಯಾದ ಶ್ರೀಸರಸ್ವತೀ ದೇವಿಯರು, ಈ ಇಬ್ಬರು ಗರುಡ ಶೇಷ ರುದ್ರರಿಗಿಂತಲೂ ಉತ್ತಮರು. **ಈರ್ವರಿಗೆ** - ಭಾರತೀ, ಸರಸ್ವತೀ ಈ ಇಬ್ಬರಿಗೆ, **ಮರುತ** - 46ನೆಯ ಕಕ್ಷದ ಶ್ರೀವಾಯುದೇವರು, **ಬ್ರಹ್ಮರು** - ಶ್ರೀಬಹ್ಮದೇವರು ಈ ಇಬ್ಬರು, **ಉತ್ತಮರು** - ಉತ್ತಮರಾಗಿದ್ದಾರೆ. **ಇಂದಿರೆಯು** - 47ನೆಯ ಕಕ್ಷದ ಶ್ರೀಲಕ್ಷ್ಮೀ ದೇವಿಯರು, **ಪರಮೋತ್ತಮಳು** - ಬ್ರಹ್ಮ - ವಾಯುಗಳಿಂದಲೂ ಅತ್ಯಂತ ಉತ್ತಮಳು. (ಪರಮ ಶಬ್ದದಿಂದ, ಅಸ್ವತಂತ್ರ ಚೇತನರಾದ ಬ್ರಹ್ಮವಾಯು ಗಳಿಗಿಂತ ಈಶಕೋಟಿಪ್ರವಿಷ್ಟಳಾದ ಶ್ರೀಇಂದಿರೆಯು ಉತ್ತಮಳೆಂದರ್ಥ) **ಲಕ್ಷ್ಮಿಗೆ** - ಈಶಕೋಟಿಪ್ರವಿಷ್ಟಳಾದ ಶ್ರೀಲಕ್ಷ್ಮೀದೇವಿಯರಿಗೆ, **ಸರಿಯೆನಿಸುವವರಿಲ್ಲ**- ಶ್ರೀಪರಮಾತ್ಮನ ವ್ಯತಿರಿಕ್ತ ಸಮಾನರೆಂದು ಕರೆಯಿಸುವವರು ಯಾರ್ಯಾರೂ ಇಲ್ಲವೇ ಇಲ್ಲ. **ಎಂದಿಗು** - ಅನಾದ್ಯನಂತಕಾಲದಿಂದ, **ದೇಶಕಾಲದೊಳು** - ಯಾವ ಯಾವ ದೇಶಗಳಲ್ಲಿಯಾಗಲೀ, ಯಾವ ಯಾವ ಕಾಲಗಳಲ್ಲಿಯಾಗಲೀ ಶ್ರೀಲಕ್ಷ್ಮಿಗೆ ಸರಿಸಮಾನರೆನಿಸುವವರು ಇಲ್ಲವೆಂದು ತಾತ್ಪರ್ಯ ॥೧೧॥

## ವ್ಯಾಖ್ಯಾನಗಳು

### ಶ್ರೀ ಸಂಕರ್ಷಣ ಒಡೆಯರ ವ್ಯಾಖ್ಯಾನ

ನಲವತ್ತನಾಲ್ಕನೆ ಕಕ್ಷಾರಭ್ಯ ೪೭ನೇ ಕಕ್ಷದವರಿಗೂ ಹೇಳತಾರೆ.

ನಲವತ್ತನಾಲ್ಕನೇ ಕಕ್ಷದವರಾದ ರುದ್ರದೇವರು ಒಂದು. ಸರ್ಪಶ್ರೇಷ್ಠರಾದ **ಶೇಷದೇವರು** ಎರಡು, ಪಕ್ಷಿಶ್ರೇಷ್ಠರಾದ ಗರುಡದೇವರು ಮೂರು, ಈ **ಮೂರುಮಂದಿಗಳು** ಶ್ರೀಪರಮಾತ್ಮನಪತ್ನೀರಾದ ೪೩ನೇ ಕಕ್ಷದವರಾದ **ನೀಲಾದಿ** ಆರುಮಂದಿಗಿಂತಲೂ ಉತ್ತಮರು. ಈ ಪೂರ್ವೋಕ್ತ ಗರುಡಾದಿ **ಮೂರು** ಮಂದಿಗಿಂತಲೂ ಉತ್ತಮರು ದಾರೆಂದರೆ, ೪೫ನೇ ಕಕ್ಷದವರಾದ **ಭಾರತೀದೇವೇರು**, ವಾಣೀದೇವೇರು ಇವರಿಬ್ಬರೂ ಉತ್ತಮರು. ಈ **ಭಾರತೀದೇವೇರು** ಸರಸ್ವತೀದೇವೇರು, ಇವರಿಗಿಂತಲೂ ೪೬ನೇ ಕಕ್ಷದವರಾದ

ವಾಯುದೇವರು ಒಂದು, ಬ್ರಹ್ಮದೇವೇರು ಎರಡು ಇವರಿಬ್ಬರು ಉತ್ತಮರು. ೪೭ನೇ ಕಕ್ಷದವರಾದ ಲಕ್ಷ್ಮೀದೇವೇರು ೪೬ನೇ ಕಕ್ಷದವರಾದ ಬ್ರಹ್ಮವಾಯು ಗಳಿಗಿಂತಲೂ, ಅಸ್ವತಂತ್ರ ಚೇತನರೊಳಗೆ ಇರುವ ಸರ್ವರಿಗೂ ಅತ್ಯಂತ ಶ್ರೇಷ್ಠರು. ಶ್ರೀಪರಮಾತ್ಮನ ವ್ಯತಿರಿಕ್ತ ಈ ರಮಾದೇವೇರಿಗೆ ಸಮಾನರೆನಿಸ ತಕ್ಕವರು ಯಾರು ಇಲ್ಲ. ಯಾವ ದೇಶದಲ್ಲೂ, ಯಾವಕಾಲದಲ್ಲೂ, ಅನಾದ್ಯನಂತ ಕಾಲಕ್ಕೂ ಇಲ್ಲ ಎಂತ ತಾತ್ಪರ್ಯ ॥೧೧॥

**೨. ಭಾವಪ್ರಕಾಶಿಕೆ–**

ಶ್ರೀರುದ್ರದೇವರು (ಹರ), ಶ್ರೀಶೇಷದೇವರು (ಫಣಿಪ), ಶ್ರೀಗರುಡ ದೇವರು (ವಿಹಗೇಂದ್ರ) ಈ ಮೂವರು ಶ್ರೀಕೃಷ್ಣನ ಷಣ್ಮಹಿಷಿಯರಿಗಿಂತಲೂ (ಹರಿಮಡದಿಯರಿಗೆ) ಉತ್ತಮರು. ಗರುಡಾದಿಗಳಿಗಿಂತಲೂ (ಸೌಪರಣಿಪತಿಗೆ) ಭಾರತೀದೇವಿಯರು (ಭಾರತಿ) ಮತ್ತು ಸರಸ್ವತೀದೇವಿಯರು (ವಾಣಿ) ಉತ್ತಮರು. ಇವರಿಬ್ಬರಿಗಿಂತಲೂ (ಈರ್ವರಿಗೆ), ವಾಯುದೇವರು ಮತ್ತು ಬ್ರಹ್ಮದೇವರು (ಮರುತ ಬ್ರಹ್ಮರು), ಉತ್ತಮರು. ಇವರಿಗಿಂತಲೂ ರಮಾ ದೇವಿಯರು (ಇಂದಿರೆಯು) ಪರಮ ಉತ್ತಮಳು. ಶ್ರೀಲಕ್ಷ್ಮೀದೇವಿಯರಿಗೆ ಯಾವ ದೇಶದಲ್ಲಾಗಲಿ, ಯಾವ ಕಾಲದಲ್ಲಾಗಲೀ ಎಂದೆಂದಿಗೂ ಸರಿಯಿಲ್ಲ. (ಸರಿಯೆನಿಸುವವರಿಲ್ಲ ಎಂದೆಂದಿಗೂ ದೇಶಕಾಲದೊಳು) ॥೧೧॥

**೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ–**

**ಉತ್ತಮಃ ಪಂಚಭಿಃ ತಾಭ್ಯಃ॥ ಶೇಷಸುಪರ್ಣೇಶಾಃ ತ್ರಯಃ ಪಂಚಗುಣಾಧಿಕಾಃ॥ ಸಮಾಃ ಪರಸ್ಪರಂ ಸ್ವಸ್ವಭಾರ್ಯಾಭ್ಯಃ ತೇ ದಶೋತ್ತರಾಃ॥ ತೇಭ್ಯಃ ಶ್ರೀಭಾರತೀವಾಣ್ಯೌ ಸಮೇ ಶತಗುಣೋತ್ತಮೇ॥ ತಾಭ್ಯಂ ಶತಗುಣೋದ್ರಿಕ್ತೌ ಬಹ್ಮೇಶೌ ತೌ ಸಮೌ ಮತೌ॥ ತಾಭ್ಯಾಂ ಕೋಟಿ ಗುಣೋದ್ರಿಕ್ತಾ ಕಮಲಾ ಹರ್ಯತಿಪ್ರಿಯಾ ॥೧೧॥**

**ಕನ್ನಡಾರ್ಥ–**

ಷಣ್ಮಹಿಷಿಯರಿಂದ ಐದು ಗುಣಗಳಿಂದ ಗರುಡ-ಶೇಷ-ರುದ್ರರು ಶ್ರೇಷ್ಠರು, ಪರಸ್ಪರ ಸಮರು. ತಮ್ಮ ತಮ್ಮ ಪತ್ನಿಯರಿಂದ ಹತ್ತುಗುಣ

ಗಳಿಂದ ಅಧಿಕರು. ಈ ಗರುಡಾದಿಗಳಿಗಿಂತ ಶತಗುಣಗಳಿಂದ ಅಧಿಕರು, ಭಾರತೀ ಸರಸ್ವತೀ ದೇವಿಯರು. ಇವರೀರ್ವರಿಗಿಂತ ನೂರು ಗುಣಗಳಿಂದ ಅಧಿಕರು, ವಾಯು-ಬ್ರಹ್ಮರು. ಇವರು ಪರಸ್ಪರ ಸಮರು. ಇವರೀರ್ವರಿಂದ ಕೋಟಿಗುಣಗಳಿಂದ ಮಿಗಿಲಾದವರು, ಶ್ರೀಹರಿಯ ಪ್ರೇಮಾಸ್ಪದರು ರಮಾದೇವಿಯರು. ॥೧೧॥

**೪. ಭಾವದರ್ಪಣ**

ಹರ. ಹರಿಮಹಿಷಿಯರು - ಜಾಂಬವತ್ಯಾದಿ ಷಟ್ಕರು. ಇಂದಿರಾ - ಲಕ್ಷ್ಮೀ ಎಂಬರ್ಥ ॥೧೧॥

**೫. ಶ್ರೀಗುರುಹೃದಯಪ್ರಕಾಶಿಕೆ**

ಈ ಷಣ್ಮಹಿಷಿಯರಿಗಿಂತ ರುದ್ರ, ಶೇಷ ಗರುಡ ಇವರುತ್ತಮರು. ಗರುಡರಿಗಿಂತ ಭಾರತೀಸರಸ್ವತಿಯರುತ್ತಮರು. ಇವರಿಗಿಂತ ಸೂತ್ರನಾಮಕ ಪ್ರಾಣ, ಬ್ರಹ್ಮ ಇವರುತ್ತಮರು. ಇವರಿಗಿಂತ ಇಂದಿರೆ ಎಂಬ ಮಹಾಲಕ್ಷ್ಮೀ ಅತ್ಯುತ್ತಮಳು. ಈ ರಮಾದೇವಿಗೆ ದೇಶಕಾಲದಲ್ಲಿ ದೇವರೇ ಸಮನಲ್ಲದೆ ಇನ್ಯಾರೂ ಸಮರಿಲ್ಲ ॥೧೧॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಹರ**

ಶ್ರೀಮಹಾರುದ್ರದೇವರು. 74ನೆಯ ಕಕ್ಷಾಪನ್ನರು. ಅಹಂಕಾರ ತತ್ತ್ವಾಭಿಮಾನಿಗಳು. ಮನೋಭಿಮಾನಿಗಳು. ಕಲ್ಪಾದಿಯಲ್ಲಿ ಬ್ರಹ್ಮದೇವರ ಭ್ರೂಮಧ್ಯದಿಂದ ಜನಿಸಿದವರು. ಹುಟ್ಟುತ್ತಲೇ ಅಳುತ್ತಾ ಜನಿಸಿದ್ದರಿಂದ 'ರುದ್ರ' (ರೋದಯತಿ) ಎಂಬ ಹೆಸರು ಬಂದಿತು. ಮಹಾಪ್ರಳಯಕಾಲದಲ್ಲಿ ರೌದ್ರಾವತಾರ ತಾಳುವುದರಿಂದಲೂ ರುದ್ರನೆಂತ ನಾಮ. ರುದ್ರವರ್ಗ ಹನ್ನೊಂದು ಮಂದಿ. ಅವರಲ್ಲಿ ಪಾರ್ವತೀಪತಿಯಾದ ಶಂಕರನೇ ರುದ್ರಪದವಿಗೆ ಬರುವ ದೇವತೆ. ಉಮಾಸಹಿತನಾಗಿರುವುದರಿಂದ 'ಸೋಮ' (ಸ+ಉಮ) ಎಂತಲೂ ಹೆಸರು. ತ್ರಿಶೂಲಧಾರಿ. ಡಮರುಗ ಧರಿಸಿದ್ದಾನೆ.

ಹೊದ್ದಿರುವುದು ಆನೆಯ ಚರ್ಮವಾದರೆ, ಉಟ್ಟಿರುವುದು ಹುಲಿಯ ಚರ್ಮ. ಪಿನಾಕವೆಂಬ ಧನುಸ್ಸನ್ನು ಧರಿಸಿರುವುದರಿಂದ ಪಿನಾಕಿ ಎಂದು ನಾಮ. ಜಿಂಕೆಯನ್ನು ಹಸ್ತದಲ್ಲಿ ಧರಿಸಿದ್ದಾನೆ (ಮೃಗಧರ). ಚಂದ್ರನ ಒಂದು ಕಲೆಯನ್ನು ಶಿರದಲ್ಲಿ ಧರಿಸಿದ್ದಾನೆ (ಚಂದ್ರಶೇಖರ). ಗಂಗಾಧರನು. ತ್ರಿಪುರಾಸುರ ಸಂಹಾರಿ. ಷಣ್ಮುಖ (ಕುಮಾರ) ಮತ್ತು ಗಣಪತಿ ಕಾರ್ವರು ಪುತ್ರರು. ನಂದಿವಾಹನನು. ಶ್ರೀಹರಿಯು ಪ್ರಳಯಕಾಲದಲ್ಲಿ ಸಂಕರ್ಷಣ ಮತ್ತು ನರಸಿಂಹರೂಪಗಳಿಂದ ರುದ್ರಾಂತರ್ಗತನಾಗಿದ್ದು ಜಗತ್ತನ್ನು ಸಂಹರಿಸುವ... (ಶಿವೇ ಶಿವರೂಪಸ್ಥಿತ). ಪರಮಮಂಗಳಕರನಾದ್ದರಿಂದ ಶಿವ, ಶಂಕರ ... ಹೆಸರುಗಳು.

## ೨. ಫಣಿಪ

ಫಣ ಎಂದರೆ ಹೆಡೆ. ಹೆಡೆಯುಳ್ಳದ್ದು ಫಣೀ. ಅಂದರೆ ಸರ್ಪ ಎಂದರ್ಥ. ಸರ್ಪಶ್ರೇಷ್ಠನಾದ್ದರಿಂದ ಶ್ರೀಶೇಷದೇವನಿಗೆ ಫಣಿಪನೆಂಬ ನಾಮ. ಸೂಕ್ಷ್ಮಸೃಷ್ಟಿಯಲ್ಲಿ ಬ್ರಹ್ಮದೇವನಿಂದ ಜೀವನಾಮಕನಾಗಿ ಜನಿಸಿದನು. ಜೀವಾಭಿಮಾನಿ. ಅಹಂಕಾರತತ್ತ್ವಾಭಿಮಾನಿ ದೇವತಾ. ಶ್ರೀಹರಿಯ ಹಾಸಿಗೆ ಶಯನರೂಪದಿಂದಿರುವ ಶ್ರೀಹರಿಯನ್ನು ಸೇವಿಸುತ್ತಿರುವ ಪರಮಭಕ್ತ. ಕಶ್ಯಪಮುನಿಯಿಂದ ಕದ್ರುವಿನಲ್ಲಿ ಜನಿಸಿದವನು. ಈತನಿಗೆ ಸಾವಿರ ಹೆಡೆಗಳು. ಎರಡುಸಾವಿರ ನಾಲಿಗೆಗಳಿಂದ ನಿರಂತರವೂ ಶ್ರೀಹರಿಯನ್ನು ಸ್ತೋತ್ರಮಾಡುತ್ತಿರುವನು. ಬ್ರಹ್ಮನನ್ನು ತಪಸ್ಸಿನಿಂದ ಮೆಚ್ಚಿಸಿ, ಭೂಭಾರವನ್ನು ಹೊರುವ ಸಾಮರ್ಥ್ಯ ಪಡೆದ ಮಹಾನುಭಾವ. ಒಂದು ಅಂಶದಿಂದ ಪಾತಾಳದಲ್ಲಿದ್ದು ಭೂಮಿಯನ್ನು ಸಾಸಿವೆಕಾಳಿನಂತೆ ತನ್ನ ಹೆಡೆಯ ಮೇಲೆ ಹೊತ್ತಿದ್ದಾನೆ. ಭೂಮಿಯನ್ನು ಹೊತ್ತಿರುವ ಈತನ ಕಾಲದ ತುದಿಯು ವಾಯುಕೂರ್ಮ... ಬಾಲದಲ್ಲಿ ಆಶ್ರಯ ಹೊಂದಿದೆ. ವಾರುಣೀ ಶೇಷನ ಪತ್ನಿ. ತ್ರೇತಾಯುಗದಲ್ಲಿ ರಾಮನನುಜನಾಗಿ ಲಕ್ಷ್ಮಣನಾಗಿ ಅವತರಿಸಿದ. ದ್ವಾಪರಯುಗದಲ್ಲಿ ಶ್ರೀಹರಿಯ ಶುಕ್ಲಕೇಶಾವೇಶಯುತನಾಗಿ ಬಲರಾಮ ರೂಪದಿ ಅವತರಿಸಿದ.

## ೩. ವಿಹಗೇಂದ್ರ

ವಿಹಗ ಎಂದರೆ ಆಕಾಶದಲ್ಲಿ ಸಂಚರಿಸುವ ಪಕ್ಷಿಗಳು. ಇಂದ್ರ ಎಂದರೆ ಶ್ರೇಷ್ಠ. ಅಂದರೆ ಪಕ್ಷಿಶ್ರೇಷ್ಠನಾದ ಶ್ರೀಗರುಡದೇವರು. ವೈಕಾರಿಕ ಅಹಂಕಾರತತ್ತ್ವಾಭಿಮಾನಿ. ಚಿತ್ತಾಭಿಮಾನಿ. ಕಾಲನಾಮಕನು. ಕಶ್ಯಪಮುನಿಯಿಂದ ವಿನತೆಯಲ್ಲಿ ಜನಿಸಿದವ. (ವಿನತಾತ್ಮಜ). ಸೂರ್ಯನ ಸಾರಥಿಯಾದ ಅರುಣ ಗರುಡನ ಅಣ್ಣ. ತನ್ನ ಜನನಿಯಾದ ವಿನತೆ, ಮಲತಾಯಿಯಾದ ಕದ್ರುವಿಗೆ ದಾಸಿಯಾಗಿದ್ದ ಕಾರಣ ಗರುಡ, ಕದ್ರುವಿನ ಅಧೀನದಲ್ಲಿರಬೇಕಾಗಿತ್ತು. ಒಮ್ಮೆ ಗರುಡನು ಕದ್ರುವಿನಲ್ಲಿ ತನ್ನ ತಾಯಿಯ ದಾಸ್ಯವನ್ನು ತಪ್ಪಿಸಬೇಕಾದರೆ ಏನು ಮಾಡಬೇಕೆಂದು ಕೇಳಿದನು. ಅಮೃತವನ್ನು ತಂದುಕೊಟ್ಟಲ್ಲಿ ವಿನತೆಯನ್ನು ದಾಸ್ಯದಿಂದ ಬಿಡುಗಡೆ ಮಾಡುವುದಾಗಿ ಕದ್ರುವು ತಿಳಿಸಿದಳು. ಅದರಂತೆ ಗರುಡನು ದೇವಲೋಕಕ್ಕೆ ಹೋಗಿ, ಅಮೃತಕಳಶದ ಸುತ್ತಲೂ ಸಂಚರಿಸುತ್ತಿದ್ದ ಚಕ್ರವನ್ನು ಉಪಾಯದಿಂದ ತಪ್ಪಿಸಿಕೊಂಡು, ಇಂದ್ರನ ವಜ್ರಾಯುಧದ ಪ್ರಹಾರವನ್ನು ಲೆಕ್ಕಿಸದೆ, ಸೂಕ್ಷ್ಮರೂಪದಿಂದ ಒಳಹೊಕ್ಕು, ಕಾವಲಿದ್ದ ಘಟಸರ್ಪಗಳನ್ನು ಕೊಂದು. ಅಮೃತ ಕಲಶವನ್ನು ಕದ್ರುವಿಗೆ ತಂದಿತ್ತ. ಅಂದಿನಿಂದ ವಿನತೆ ದಾಸ್ಯದಿಂದ ಮುಕ್ತಳಾದಳು. ಗರುಡನಿಗೆ ಸಾವಿರ ಪುತ್ರರು. ಅವರು ಗಂಧಮಾದನಪರ್ವತದ ಗುಹೆಯಲ್ಲಿ ವಾಸಿಸುತ್ತಿದ್ದರು. ತಾರಕಾಸುರನು ಗರುಡಪುತ್ರರನ್ನು ಗೆದ್ದು, ತನ್ನ ಪಕ್ಷಕ್ಕೆ ವಾಹನವನ್ನಾಗಿರಿಸಿದನು. ಗರುಡನು ಶ್ರೀಹರಿಯ ವಾಹನನು.

ರುದ್ರ, ಶೇಷ, ಗರುಡ ಈ ಮೂವರೂ 44ನೆಯ ಕಕ್ಷೆಗೆ ಸೇರಿದವರು. ಇವರು ಕೃಷ್ಣನ ಆರುಮಂದಿ ಪತ್ನಿಯರಿಗಿಂತ ಉತ್ತಮರು.

## ೪. ಸೌಪರ್ಣಿಪತಿಗುತ್ತಮರು

ಸೌಪರ್ಣಿಪತಿ - ಸೌಪರ್ಣೀದೇವಿಯರ ಪತಿ ಶ್ರೀಗರುಡದೇವರು. ಗರುಡ (ಶೇಷ ರುದ್ರರಿಗಿಂತ) ಭಾರತೀ ಸರಸ್ವತಿಯರು ಉತ್ತಮರು.

## ೫. ಭಾರತೀ

ಶ್ರೀವಾಯುದೇವರ ಪತ್ನಿ. 45ನೇ ಕಕ್ಷದವರು. ವಾಯುದೇವರಿಗೆ ಭರತನೆಂದು ಹೆಸರು. 'ಭ' ಅಂದರೆ ಕಾಂತಿ ಸಂಪನ್ನನಾದ ಶ್ರೀಹರಿಯಲ್ಲಿ, 'ರತ' ಎಂದರೆ ಸದಾ ಆಸಕ್ತನಾಗಿರುವುದರಿಂದ 'ಭರತ' ಎಂದು ಹೆಸರು. ಭರತನ ಅರ್ಧಾಂಗಿ ಭಾರತೀ. ಭಕ್ತಿಗೆ ಅಭಿಮಾನಿ ದೇವತೆ ಭಾರತೀ. ಬುದ್ಧಿಗೂ ಅಭಿಮಾನಿದೇವತೆ. ವಿಜ್ಞಾನತತ್ತ್ವಕ್ಕೆ ಅಭಿಮಾನಿ. ಶ್ರೀಹರಿಯ ವಿಷಯದಲ್ಲಿ ಎಂದೆಂದಿಗೂ ಜ್ಞಾನತಿರೋಧಾನವಿಲ್ಲ. ಇದರಿಂದ ಅತಿರೋಹಿತ ವಿಮಲವಿಜ್ಞಾನಿ. ಪರಶುಕ್ಲತ್ರಯದಲ್ಲಿ ಸೇರಿದವರು. ಋಜುಪತ್ನಿ. ಭಾವೀ ಸರಸ್ವತಿ. ಕಾಳೀ, ದ್ರೌಪದೀ, ಶಿವಕನ್ಯಾ, ಚಂದ್ರಸೇನಾ ಇತ್ಯಾದಿ ಅವತಾರಗಳು.

## ೬. ವಾಣೀ

ವಾಗಭಿಮಾನಿಗಳಾದ ಶ್ರೀಸರಸ್ವತೀದೇವಿಯರು. ಚತುರ್ಮುಖನ ಪತ್ನಿ. ಪರಶುಕ್ಲತ್ರಯಕ್ಕೆ ಸೇರಿದವರು. ಅತಿರೋಹಿತ ವಿಮಲ ವಿಜ್ಞಾನಿಗಳು. ಮಹತತ್ತ್ವಾಭಿಮಾನಿ. ಋಜುಪತ್ನಿ. ಅಂತು 45ನೆಯ ಕಕ್ಷದ ಭಾರತೀ ಮತ್ತು ಸರಸ್ವತಿ ಈ ಈರ್ವರು ಗರುಡ, ಶೇಷ, ರುದ್ರ ಇವರುಗಳಿಗಿಂತ ಅಧಿಕರು.

## ೭. ಮರುತ

ಶ್ರೀವಾಯುದೇವರು. ಶ್ರೀಹರಿಯ ಮುಖ್ಯಪ್ರತೀಕರು. ಶ್ರೀಹರಿಗೆ ಪ್ರಥಮಾಂಗರು. ವಿಜ್ಞಾನಕೋಶಾಭಿಮಾನಿಗಳು. ಪರಶುಕ್ಲತ್ರಯಕ್ಕೆ ಸೇರಿದವರು. ಅತಿರೋಹಿತ ವಿಮಲವಿಜ್ಞಾನಿಗಳು. ತ್ರೈಲೋಕ್ಯಾಚಾರ್ಯರು. ಹನುಮದವತಾರದಿಂದ ಶ್ರೀರಾಮನನ್ನೂ, ಭೀಮಸೇನರಾಗಿ ಯಾದವಕೃಷ್ಣನನ್ನೂ, ಆಚಾರ್ಯಮಧ್ವರಾಗಿ ವ್ಯಾಸಕೃಷ್ಣನನ್ನೂ ಸೇವಿಸಿದ ನಿರ್ವ್ಯಾಜ ಭಕ್ತಾಗ್ರೇಸರರು. ಭಾವೀ ಬ್ರಹ್ಮರು.

## ೮. ಬ್ರಹ್ಮ -

ಪದ್ಮನಾಭದೇವರ ನಾಭೀಕಮಲ ಸಂಜಾತರು. ಹಿರಣ್ಯಗರ್ಭನಾಮಕರು. ಋಜುಗಣಾಧರಸರು. ವಾಣೀಪತಿಗಳು. ಇವರೊಡನೆಯೇ

ಈ ಕಲ್ಪದಲ್ಲಿ ಮುಕ್ತರಾಗಬೇಕಾದ ಮುಕ್ತಿಯೋಗ್ಯಜೀವರು. ವಿರಜಾನದಿಯಲ್ಲಿ ಸ್ನಾನಮಾಡಿ (ಬ್ರಹ್ಮಕಾಸಹಾ) ಲಿಂಗಭಂಗವನ್ನು ಹೊಂದಿ ಮುಕ್ತರಾಗುವರು. ಪರಶುಕ್ಲತ್ರಯರಲ್ಲಿ ಒಬ್ಬರು. ಆತಿರೋಹಿತವಿಮಲವಿಜ್ಞಾನಿಗಳು. ಮಹತತ್ತ್ವಾಭಿಮಾನಿಗಳು.

ಇಂತು ಮರುತ-ಬ್ರಹ್ಮರು (46ನೆಯ ಕಕ್ಷ) ಭಾರತೀ ಸರಸ್ವತಿಯರಿಗಿಂತ ಉತ್ತಮರು.

**೯. ಇಂದಿರೆ -**

**ಈಶಕೋಟಿಪ್ರವಿಷ್ಟ**ಳು. ನಿತ್ಯಮುಕ್ತಳು. ನಿರ್ವಿಕಾರಳು. ಸೂಕ್ಷ್ಮಪ್ರಕೃತಿಗೆ ಅಭಿಮಾನಿ. ಲಿಂಗಶರೀರಾಭಿಮಾನಿಗಳು. ಶ್ರೀಹರಿಗೆ ದೇಶತಃ ಕಾಲತಃ ಸಮರು. ಗುಣತಃ ಅನಂತಕೋಟಿಗುಣಗಳಿಂದ ನ್ಯೂನರು. ಇಂತಹ ಇಂದಿರೆಯು ಮರುತ-ಬ್ರಹ್ಮರಿಗಿಂತ ಕೋಟಿಗುಣದಿಂದ ಉತ್ತಮರು. ಇಂತಹ ಲಕ್ಷ್ಮೀದೇವಿಯರಿಗೆ ಯಾವ ದೇಶದಲ್ಲಿಯಾಗಲೀ, ಯಾವಕಾಲದಲ್ಲಿಯಾಗಲೀ ಸಮರೆನಿಸುವವರು ಯಾರೂ ಇಲ್ಲ (ಶ್ರೀಹರಿಯ ವ್ಯತಿರಿಕ್ತ) ॥೧೧॥

## ಪದ್ಯ - ೧೨

**ಮೂಲ -**

**ಶ್ರೀಮುಕುಂದನ ಮಹಿಳೆ ಲಕುಮಿ ಮು ।**
**ಹಾಮಹಿಮೆಗೇನೆಂಬೆ ಬ್ರಹ್ಮೇ ।**
**ಶಾಮರೇಂದ್ರರ ಸೃಷ್ಟಿ ಸ್ಥಿತಿ ಲಯಗೈಸಿ ಅವರವರ ।**
**ಧಾಮಗಳ ಕಲ್ಪಿಸಿ ಕೊಡವಳಜ ।**
**ರಾಮರಣಳಾಗಿದ್ದು ಸರ್ವ ।**
**ಸ್ವಾಮಿ ಮಮ ಗುರುವೆಂದುಪಾಸನೆ ಮಾಳ್ಪಳಚ್ಯುತನ ॥೧೨॥**

**ಅವತರಣಿಕೆ –**

ಶ್ರೀಮುಕುಂದನ ಮಹಿಳೆ ಶ್ರೀಮಹಾಲಕ್ಷ್ಮೀದೇವಿಯರ ಮಹಾತ್ಮೆಯ ತಿಳಿಸುತ್ತಾರೆ.

**ಪ್ರತಿಪದಾರ್ಥ** -

**ಶ್ರೀಮುಕುಂದನ ಮಹಿಳೆ** - ಕಾಂತಿಸಂಪನ್ನನಾದ ಶ್ರೀಪರಮಾತ್ಮನ ಪತ್ನಿಯಾದ, **ಲಕುಮಿ** - ಲಕ್ಷ್ಮೀದೇವಿಯರ, **ಮಹಾಮಹಿಮೆಗೇನೆಂಬೆ** - ಅತ್ಯಂತ ಶ್ರೇಷ್ಠವಾದ ಮಹಾತ್ಮ್ಯೆಗೆ ವಿನಂತ ಹೇಳಲಿ ! ಅಂದರೆ ಅತ್ಯಾಶ್ಚರ್ಯಕರವಾದ ಮಹಿಮಾಸಂಪನ್ನರೆಂದರ್ಥ . **ಬ್ರಹ್ಮ** - ಬ್ರಹ್ಮದೇವರು, **ಈಶ** - ರುದ್ರದೇವರು, **ಅಮರೇಂದ್ರರ** - ಸುರಪತಿಯಾದ ಇಂದ್ರದೇವರು ಇತ್ಯಾದಿ ಸಕಲ ದೇವತಾವರ್ಗವನ್ನು, **ಸೃಷ್ಟಿ** - ಶ್ರೀರೂಪದಿಂದ ಸೃಷ್ಟಿಸುವುದು, **ಸ್ಥಿತಿ** - ಭೂರೂಪದಿಂದ ಪಾಲಿಸಿರುವುದು, **ಲಯಗೈಸಿ** - ದುರ್ಗಾರೂಪದಿಂದ ನಾಶಮಾಡಿದವರಾಗಿ, (ಲಯಾಂತದಲ್ಲಿ ವಿರಜಾದಿರೂಪರಾದ ಲಕ್ಷ್ಮೀದೇವಿಯರು, ತಮ್ಮಲ್ಲಿ ಸ್ನಾನಮಾಡುವುದರಿಂದ ಚೇತನರ ಲಿಂಗಭಂಗವನ್ನು ಐವಿಸಿ), ಅನಂತರದಲ್ಲಿ, **ಅವರವರ** - ಆಯಾ ಜೀವರುಗಳ ಯೋಗ್ಯತಾನುಸಾರ, **ಧಾಮಗಳ ಕಲ್ಪಿಸಿ**- ಪ್ರಳಯೋದಕದಲ್ಲಿ ಮುಳುಗಿರುವ ಧಾಮತ್ರಯಗಳನ್ನು ಉದಕರಹಿತವಾಗಿ ಮಾಡಿ, **ಕೊಡುವಳು** - ಅವಾಸಕ್ಕಾಗಿ ಕೊಡುವರು. **ಅಜರಾಮರಣಳಾಗಿದ್ದು** - ಅಜರ + ಅಮರಣಳಾಗಿದ್ದು, ಎಂದರೆ, ಅನಾದ್ಯನಂತಕಾಲಕ್ಕೂ ಮುಪ್ಪು, **ಸಾವು** ಇವುಗಳಿಲ್ಲದ ಅಪ್ರಾಕೃತ ದೇಹವುಳ್ಳವರಾಗಿದ್ದು, **ಅಚ್ಯುತನ** - ನಾಶರಹಿತನಾದ ಶ್ರೀಹರಿಯನ್ನು, **ಸರ್ವಸ್ವಾಮಿ** - ನಾನೂ ಸೇರಿದಂತೆ ಸಕಲ ಜಗತ್ತಿಗೂ ಒಡೆಯ, **ಮಮ ಗುರುನೆಂದು** - ನನ್ನ ಸಾಕ್ಷಾತ್ ಗುರುವೆಂತಲೂ, **ಉಪಾಸನೆ ಮಾಳ್ಪಳು** - ಉಪಾಸನೆ ಮಾಡುವರು . ಇತ್ಯಾದಿ ಮಹಿಮೆಗಳಿಂದ ಯುಕ್ತರಾದವರು ಶ್ರೀಲಕ್ಷ್ಮೀದೇವಿಯರು ಎಂದು ಹೇಳಿದ್ದಾರೆ.

## ವ್ಯಾಖ್ಯಾನಗಳು

೧. **ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ**

ಲಕ್ಷ್ಮೀದೇವೀರ ಮಹಾತ್ಮ್ಯ ಹೇಳುತಾರೆ.

ಕಾಂತಿಸಂಪನ್ನನಾದ, ಮೋಕ್ಷಪ್ರದನಾದ ಶ್ರೀಪರಮಾತ್ಮನ ಪತ್ನಿಯಾದ ನಿತ್ಯಮುಕ್ತಳಾದ ಲಕ್ಷ್ಮೀದೇವೀರ ಅತ್ಯಂತಶ್ರೇಷ್ಠವಾದ ಮಹಾತ್ಮ್ಯಗೆ ವಿನಂತ

ಹೇಳಲಿ ಎಂದರೆ, ಆಶ್ಚರ್ಯಕರರಾದ ಮಹಿಮೋಪೇತರೆಂದು ತಾತ್ಪರ್ಯ. ಈ ರಮಾದೇವೇರು ಬ್ರಹ್ಮರುದ್ರೇಂದ್ರಾದಿ ಸಮಸ್ತರನ್ನ ಶ್ರೀರೂಪದಿಂದ ಸೃಷ್ಟಿ, ಭೂರೂಪದಿಂದ ಪಾಲಿಸಿ, ದುರ್ಗಾರೂಪದಿಂದ ಲಯ ಅಂದರೆ ನಾಶ ಮಾಡಿದವರಾಗಿ, ಲಯಾಂತದಲ್ಲಿ ವಿರಜರೂಪರಾದ ತಾವು, ತಮ್ಮಲ್ಲಿ ಸ್ನಾನ ಮಾಡೋ ಮಾತ್ರದಿಂದ ಲಿಂಗಭಂಗ ಐದಿಸಿ, ಅನಂತರ ಆಯಾ ಲಿಂಗಭಂಗರಾದ ಜೀವರ ಆವಾಸಕ್ಕೆ ಯೋಗ್ಯವಾದ, ಪ್ರಳಯೋದಕದಲ್ಲಿ ಮುಳುಗಿರುವ ಧಾಮತ್ರಯಗಳ ಉಪಕರಹಿತವಾಗಿ ಮಾಡಿ, ಅಭಿವ್ಯಕ್ತರೂಪದಿಂದ ಕಲ್ಪನ ಮಾಡಿ, ಅವರವರಿಗೆ ಯೋಗ್ಯಪ್ರದೇಶಗಳ ಆವಾಸಕ್ಕಾಗಿ ಕೊಡುವರು, ಅಂತಃಪ್ರೇರಕನಾದ ತಮ್ಮ ಪತಿಯ ಆಜ್ಞಾದಿಂದ ಎಂತ ತಾತ್ಪರ್ಯ. ಅನಾದ್ಯನಂತ ಕಾಲದಿಂದಲೂ ಪರಿಣಾಮಗಳ ಹೊಂದತಕ್ಕ ನಿರ್ವಿಕಾರರಾಗಿದ್ದು, ನಾಶರಹಿತನಾದ ತಮ್ಮ ಪತಿಯಾದ ನಾರಾಯಣನಿಂದ, ಸರ್ವಚರಾಚರಕ್ಕೇನು, ತಮಗೇನು ಎಲ್ಲಕ್ಕೂ ಸ್ವಾಮಿ ಎಂತಲೂ. ಸಾಕ್ಷಾತ್ತಾಗಿ ತಮಗೆ ಗುರುವೆಂತಲೂ ಉಪಾಸನಾಮಾಡೋವರಾಗುತ್ತಾರೆ. ಏತಾದೃಶ ಮಹಾಮಹಿಮೋಪೇತರಾದವರು ಶ್ರೀಲಕ್ಷ್ಮೀದೇವೇರು ಎಂತ ತಾತ್ಪರ್ಯ ॥[illegible]॥

೨. **ಭಾವಪ್ರಕಾಶಿಕೆ–**

ಶ್ರೀಮುಕುಂದನ ಹೆಂಡತಿಯಾದ ಲಕ್ಷ್ಮೀದೇವಿಯರು ಬ್ರಹ್ಮದೇವರು, ರುದ್ರದೇವರು, ಇಂದ್ರದೇವರು ಮೊದಲಾದವರ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡಿಸಿ, ಅವರವರಿಗೆ ಅವರವರ ಸ್ಥಾನಗಳನ್ನು ಕೊಡುವರು. ಮುದಿತನ ಬರುವಿಕೆ, ಸಾಯುವಿಕೆ ಇವುಗಳಿಲ್ಲದೇ, ನನ್ನ ಗುರುವೆಂದು ಅಚ್ಯುತನ ಉಪಾಸನೆ ಮಾಳ್ಪರು. ಇಂತಹ ಮಹಾಲಕ್ಷ್ಮೀದೇವಿಯರ ಮಹಿಮೆಗಳನ್ನು ಎಷ್ಟೆಂದು ವರ್ಣಿಸುವೆ ?

ಲಕ್ಷ್ಮೀದೇವಿಯರು ಸತ್ತ್ವರಜಸ್ತಮೋಗುಣಾತ್ಮಕರಾದ ಪ್ರಕೃತಿ ಸ್ವರೂಪರು. ತ್ರಿಗುಣಾತ್ಮಕರಾಗಿ, ಶ್ರೀ ಭೂ ದುರ್ಗಾರೂಪಿಯಾಗಿರುವರು. ಶ್ರೀಪರಮಾತ್ಮನು ಪ್ರಕೃತಿಸಂಬಂಧವಾದ ರಜೋಗುಣದಿಂದ ಸೃಷ್ಟಿಕಾರ್ಯ, ಸತ್ತ್ವಗುಣದಿಂದ ಪಾಲನಕಾರ್ಯ. ತಮೋಗುಣದಿಂದ ಲಯಕಾರ್ಯಗಳನ್ನು

ಮಾಡುತ್ತಿರುವುದರಿಂದ, ಪ್ರಕೃತಿಗುಣಗಳಿಂದಲೇ ಆಗುವುದರಿಂದ, ಸೃಷ್ಟಿ ಸಂಹಾರಕರ್ತರೆಂದು ಹೇಳಿದ್ದಾರೆ. ಶ್ರೀಲಕ್ಷ್ಮೀದೇವಿಯರ ಅನುಗ್ರಹದಿಂದಲೇ ದೇವತಾವರ್ಗ ಅವರವರ ಸ್ಥಾನಗಳನ್ನು ಹೊಂದುವರು. **ಶ್ರೀಯಂ ಪ್ರಾಪ್ಯಾನುಮೋದಿತಾಃ** ಎಂದು ಭಾಗವತತಾತ್ಪರ್ಯ ವಾಕ್ಯಪ್ರಮಾಣ ॥೧॥

**೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ –**

ಶ್ರೀಃ ಇತಿ ॥ ತತೋಽನಂತ ಗುಣೋದ್ರಿಕ್ತಃ ಶ್ರೇಷ್ಠಃ ಶ್ರೇಷ್ಠತಮಃ ಹರಿಃ ॥೧॥

**ಕನ್ನಡಾರ್ಥ –**

ಶ್ರೀಹರಿಯು ರಮಾದೇವಿಯಿಂದ ಅನಂತಗುಣಗಳಿಂದ ಅಧಿಕನು. ಶ್ರೀಹರಿಯು ಶ್ರೇಷ್ಠತಮನು. ಇವನ ಸರಿ ಯಾರೂ ಇಲ್ಲ ॥೧॥

**೪. ಭಾವದರ್ಪಣ -**

ಶ್ರೀಮುಕುಂದ. ಮೋಕ್ಷಪ್ರದ. ಹರಿಧಾಮ - ಮಣಿ ॥೧॥

**೫. ಶ್ರೀಗುರುಹೃದಯಪ್ರಕಾಶಿಕೆ**

ಈ ಲಕ್ಷ್ಮೀಗುಣಗಳನ್ನೂ ಮಹಾಮಹಿಮೆಗಳನ್ನೂ ಏನೆಂದೆ ಅಂದರೆ ಅಸ್ಮದಾದಿಗಳು ವರ್ಣಿಸಲು ಸಾಧ್ಯವಿಲ್ಲವು ಎಂದರ್ಥ. ಬ್ರಹ್ಮ ಈಶ, ಅಮರೇಂದ್ರ ಮೊದಲಾದ ಸರ್ವದೇವಾದಿಗಳನ್ನು ಸೃಷ್ಟಿ, ಸ್ಥಿತಿ, ಲಯ ಮಾಡಿ ಅವರ ಧಾಮವೇನು ಸ್ವರೂಪಗತಿಯನ್ನು ಉಂಟುಮಾಡಿ ಕೊಡುವಳು. ಜರಾ ಮರಣಾದಿ ಸರ್ವದೋಷವರ್ಜಿತಳಾದ ಶ್ರೀದೇವಿಯು ಅಚ್ಯುತನಾದ ಶ್ರೀಹರಿಯನ್ನು ಸರ್ವಸ್ವಾಮಿ ಎಂದು, ತನ್ನ ಗುರುವೆಂದೂ ಸಹ ಸದಾ ಸೇವಿಸುವಳು ॥೧॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಶ್ರೀಮುಕುಂದನ -**

ಸರ್ವಮುಕ್ತಿಯೋಗ್ಯ ಜೀವರ ಅನಾದಿಕರ್ಮ ಬಂಧನವನ್ನು ಕಳೆದು, ಅವರ ಸ್ವರೂಪಗತ ಆನಂದಾಭಿವ್ಯಕ್ತಿರೂಪವಾದ ಮುಕ್ತಿಯನ್ನು ಕೊಡುವ

ನಾದ್ದರಿಂದ ಪರಮಾತ್ಮನು **ಮುಕುಂದನಾಮಕನು** (ಮುಕುಂ - ಮುಕ್ತಿ, ದ - ಪ್ರದನು).

**೨. ಮಹಿಳೆ ಲಕುಮಿ -**

ಶ್ರೀಮುಕುಂದನಾಮಕನಾದ ಶ್ರೀಪರಮಾತ್ಮನ ನಿತ್ಯಾವಿಯೋಗಿನಿಯಾದ ನಿಜಪತ್ನಿ, ಶ್ರೀಲಕ್ಷ್ಮೀದೇವಿಯರು. ತ್ರಿಗುಣಾಭಿಮಾನಿಗಳಾದ, ಜಗಜ್ಜನನಿಯಾದ ಶ್ರೀರಮಾದೇವಿಯರಿಗೆ ಲಕ್ಷ್ಮೀ ಎಂತಲೂ ನಾಮ.

**೩. ಮಹಾಮಹಿಮೆಗೇನೆಂಬೆ -**

ಶ್ರೀಮುಕುಂದನ ಮಹಿಳೆ ಶ್ರೀಲಕ್ಷ್ಮೀದೇವಿಯರ ಮಹಿಮೆ ಅಪಾರ ಹಾಗೂ ಅಸದೃಶ. ಬ್ರಹ್ಮಾದಿ ಸಮಸ್ತ ಜೀವಕೋಟಿಪ್ರವಿಷ್ಟರಾದ ಚೇತನ ವರ್ಗದಲ್ಲಿ ಶ್ರೀಲಕ್ಷ್ಮೀದೇವಿಯರಿಗೆ ಸರಿಸಮಾನ ಮಹಿಮಾಸಂಪನ್ನರಾದವರು ಯಾರ್‍ಯಾರೂ ಇಲ್ಲವೇ ಇಲ್ಲ. ಪರಮಮಹಿಮಾಸಂಪನ್ನರು ಪರಮೇಶ್ವರನ ಪತ್ನಿ ಶ್ರೀರಮಾ. ಅವರ ಮಹಿಮೆ ವರ್ಣನಾತೀತ.

**೪. ಬ್ರಹ್ಮ ಈಶ ಅಮರೇಂದ್ರರ -**

ಬ್ರಹ್ಮದೇವರು, ಈಶನಾಮಕರಾದ ರುದ್ರದೇವರು. ಸುರಾಧಿಪತಿಗಳಾದ ಇಂದ್ರದೇವರು (ಅಮರ + ಇಂದ್ರ = ಸುರರಿಗೆ ಪ್ರಭು) ಇತ್ಯಾದಿ ಸಮಸ್ತ ದೇವತೆಗಳ ಸೃಷ್ಟಿ, ಪಾಲನೆ, ಸಂಹಾರಾದಿಗಳು ಈಶನಾಜ್ಞೆಯಿಂದ ಶ್ರೀರಮಾ ದ್ವಾರವೇ ನಡೆಯುವುದು.

**೫. ಸೃಷ್ಟಿ, ಸ್ಥಿತಿ, ಲಯಗೈಸಿ -**

ಶ್ರೀಲಕ್ಷ್ಮೀದೇವಿ ಚಿತ್ಪ್ರಕೃತಿರೂಪರು. ಮೂಲ ಪ್ರಕೃತಿಗೆ ಅಭಿಮಾನಿಗಳು. ಮೂಲಪ್ರಕೃತಿಯು ತ್ರಿಗುಣಾತ್ಮಕವಾದದ್ದು. ಶ್ರೀರೂಪದಿಂದ ಸತ್ತ್ವ ಗುಣಕ್ಕೆ, ಭೂರೂಪದಿಂದ ರಜೋಗುಣಕ್ಕೆ ಮತ್ತು ದುರ್ಗಾರೂಪದಿಂದ ತಮೋಗುಣಕ್ಕೆ ಅಭಿಮಾನಿಗಳು. ಹೀಗೆ ತ್ರಿಗುಣಾಭಿಮಾನಿಗಳಾದ ಆ ತ್ರಿಭುವನ ಜನನಿಯು, ರಜೋಗುಣದಿಂದ ಸೃಷ್ಟಿಕಾರ್ಯ, ಸತ್ತ್ವಗುಣದಿಂದ

ರಕ್ಷಣಾಕಾರ್ಯ ಮತ್ತು ತಮೋಗುಣದಿಂದ ಲಯಕಾರ್ಯಗಳನ್ನು ಶ್ರೀಹರಿ ಪ್ರೇರಣೆಯಿಂದ ಮಾಡುವರು.

**ಅಂಭೃಣೀ ಸೂಕ್ತದಲ್ಲಿ** 'ಅಹಂ ರುದ್ರೇಭಿ.......' ಇತ್ಯಾದಿ ಮಂತ್ರಗಳಿಂದ, ಶ್ರೀರಮಾದೇವಿಯರ ಭ್ರೂಚಾಪ ಚಲನೆಯಿಂದ ಬ್ರಹ್ಮ, ರುದ್ರ, ಇಂದ್ರಾದಿಗಳನ್ನು ಸೃಷ್ಟಿಮಾಡುವ ಸಾಮರ್ಥ್ಯ ಆಕೆಗೆ ಕ್ಷೀರಸಾಗರಶಾಯಿಯಾದ ಶ್ರೀಪರಮಾತ್ಮನ ದಯೆಯಿಂದ ಇದೆ ಎಂದು ಹೇಳಿದೆ.

**೬. ಅವರವರ ಧಾಮಗಳ ಕಲ್ಪಿಸಿ -**

ಶ್ರೀರಮಾರಮಣನಾದ ವಾಸುದೇವನ ದೇಹದಿಂದ ಉತ್ಪತ್ತಿಯಾದ ಬೆವರು ವಿರಜಾನದಿಯ ರೂಪವಾಗಿ ಹರಿಯುತ್ತಿದೆ. ವೈಕುಂಠ, ಶ್ವೇತದ್ವೀಪ, ಅನಂತಾಸನ ಈ ತ್ರಿಧಾಮಗಳು ಮುಕ್ತಿಧಾಮಗಳು. ಇವು ಲಕ್ಷ್ಮ್ಯಾತ್ಮಕವಾಗಿವೆ. ಲಕ್ಷ್ಮ್ಯಾತ್ಮಕವಾದ ವಿರಜಾನದಿಯು ಮುಕ್ತಿಧಾಮಗಳನ್ನು ಸುತ್ತುವರಿಯುತ್ತದೆ. ಬ್ರಹ್ಮನಸಹ ಆಯಾಯಾ ಬ್ರಹ್ಮಕಲ್ಪದಲ್ಲಿ ಮುಕ್ತಿಹೊಂದಬೇಕಾದ ಮುಕ್ತಿಯೋಗ್ಯ ಚೇತನರು ವಿರಜಾನದಿಯಲ್ಲಿ ಸ್ನಾನಮಾಡಿದ ನಂತರ ಅವರ ಲಿಂಗದೇಹ ಭಂಗವಾಗುವುದು. ಈ ಲಿಂಗಭಂಗಾನಂತರ ಅನಾದಿಕರ್ಮ ಪರಂಪರೆಯಿಂದ ಆ ಜೀವರ ವಿಮೋಚನೆ. ನಂತರ ರಮಾದ್ವಾರಾ ಸ್ವರೂಪಗತ ಆನಂದದ ಅಭಿವ್ಯಕ್ತಿರೂಪವಾದ ನಿತ್ಯಾನಂದಮುಕ್ತಿ ಪ್ರಾಪ್ತಿ. ಅದರ ಪ್ರಕಾರ ಆಯಾಯಾ ಮುಕ್ತಿಯೋಗ್ಯರು ಹೊಂದುವ ಮುಕ್ತಿಧಾಮಗಳನ್ನು ಕಲ್ಪಿಸಿಕೊಟ್ಟು, ಲಕ್ಷ್ಮ್ಯಾತ್ಮಕವಾದ ಆಯಾಯಾ ಮುಕ್ತಿಧಾಮಗಳಲ್ಲಿ ರಮಾದೇವಿಯರು ಇಡುವರು.

**೭. ಅಜರಾಮರಣಳಾಗಿದ್ದು -**

ಮಹಾಲಕ್ಷ್ಮೀದೇವಿಯರು ಅಜರರು ಮತ್ತು ಅಮರಣರು. ಅಂದರೆ ಅವರ ಶರೀರವು ಪ್ರಾಕೃತವಿಕಾರವಿಲ್ಲದೆ ಅಪ್ರಾಕೃತವಾದುದು. ಮುಪ್ಪು - ಮರಣಗಳು ಪ್ರಕೃತಿಯ ಪರಿಣಾಮಗಳು. ಶ್ರೀದೇವಿಯರು ನಿತ್ಯಮುಕ್ತರು, ನಿರ್ವಿಕಾರರು. ಜನನ - ಮರಣದೂರರು.

**೮. ಅಚ್ಯುತನ -**

ಅನಾದಿನಿತ್ಯನೂ, ಶಬ್ದದೇಶಪ್ರಕಾಶನೂ, ಚತುರ್ವಿಧನಾಶರಹಿತನೂ ಆದ ಶ್ರೀಹರಿಯು ಅಚ್ಯುತನಾಮಕನು.

**೯. ಸರ್ವಸ್ವಾಮಿ -**

ಅಂತಹ ಅಚ್ಯುತನು ಚರಾಚರಾತ್ಮಕವಾದ ಜಗತ್ತಿಗೇ ಮಹಾಪ್ರಭುವು ಮತ್ತು ನಿಯಾಮಕನು.

**೧೦. ಮಮಗುರುವು -**

ನನಗೆ ಸಾಕ್ಷಾತ್ ಗುರುವು, ಉಪದೇಶಕನು ಮತ್ತು ಸ್ವಾಮಿಯು.

**೧೧. ಎಂದು ಉಪಾಸನೆ ಮಾಳ್ಪಳು -**

ಅಚ್ಯುತನಾಮಕನೇ ಸರ್ವಜಗತ್ತಿಗೆ ಪ್ರಭುವು ಮತ್ತು ನನ್ನ ಗುರುವು ಎಂಬುದಾಗಿ, ನಿತ್ಯವೂ ಅನಂತಾನಂತ ಭಗವದ್ರೂಪಗಳನ್ನು ಮನಸಾ ಉಪಾಸನೆ ಮಾಡುತ್ತಿರುವಳೆಂದು ತಾತ್ಪರ್ಯ ||೧೨||

## ಪದ್ಯ - ೧೩

**ಮೂಲ -**

**ಈಸು ಮಹಿಮೆಗಳುಳ್ಳ ಲಕುಮಿ ಪ|**
**ರೇಶನಾನಂತಾಂಶಗುಣದೊಳು|**
**ಲೇಶ ಲೇಶಕೆ ಸರಿಯೆನಿಸಲಾವಾವ ಕಾಲದಲಿ||**
**ದೇಶಕಾಲಾತೀತ ಲಕುಮಿಗೆ|**
**ಕೇಶವನ ವಕ್ಷಸ್ಥಳವೇ ಅವ|**
**ಕಾಶವಾಯಿತು ಇವನ ಮಹಿಮೆ ವ್ಯಾಪ್ತಿಗೆಣೆಯುಂಟೆ ||೧೩||**

**ಅವತರಣಿಕೆ-**

ಅನಂತಮಹಿಮೋಪೇತರಾದ ಶ್ರೀಲಕ್ಷ್ಮೀದೇವಿಯರ ವಿಚಾರ ಮತ್ತೂ ತಿಳಿಸುತ್ತಾರೆ.

**ಪ್ರತಿಪದಾರ್ಥ -**

**ಈಸು ಮಹಿಮೆಗಳುಳ್ಳ** - ಇಷ್ಟು ಮಹಾಮಹಿಮೆಗಳಿಂದ ಯುಕ್ತರಾದ. **ಲಕುಮಿ** - ಜಗಜ್ಜನನಿಯಾದ ಶ್ರೀಲಕ್ಷ್ಮೀದೇವಿಯರು. **ಪರೇಶನ** - ರಮಾಬ್ರಹ್ಮಾದಿಗಳಿಗೆ ಪ್ರಭುವೂ ಮತ್ತು ನಿಯಾಮಕನಾದ ಶ್ರೀಪರಮಾತ್ಮನ. (ಪರ-ಪರನಾಮಕರಾದ ಲಕ್ಷ್ಮೀದೇವಿಯರು. ಅಪರ-ಜೀವಗಣದಲ್ಲಿ ಉತ್ತಮರಾದ ಬ್ರಹ್ಮವಾಯುಗಳು). **ಅನಂತಾನಂತಾಂಶಗುಣದೊಳು** - ಒಂದು ಗುಣದಲ್ಲಿ ಅನಂತಾಂಶ. ಅನಂತಾನಂತಗುಣಗಳಲ್ಲಿ ಏಕಗುಣ. ಹೀಗೆ ಪಿಂಡಾಖಂಡಗುಣಪೂರ್ಣಗಳಲ್ಲಿ, **ಲೇಶಲೇಶಕೆ** - ಅನಂತಾನಂತ ಭಾಗಗಳು ಮಾಡಲಾಗಿ, **ಅವಾವಕಾಲದಲಿ** - ಸರ್ವಕಾಲಗಳಲ್ಲಿಯೂ, **ಸರಿಯೆನಿಸಳು** - ಲೇಶಾಂಶಗುಣಗಳಿಗೂ ಸಮಾನರೆನಿಸುವುದಿಲ್ಲ. **ದೇಶಕಾಲಾತೀತ** - ಲಕ್ಷ್ಮ್ಯಾತ್ಮಕ ದೇಶಗಳು, ಲಕ್ಷ್ಮ್ಯಾತ್ಮಕಕಾಲಗಳಿಂದ ಅತೀತನಾದ (ಮೀರಿದ) ಅನಂತಗುಣಪೂರ್ಣನಾದ, **ಕೇಶವನ** - ಬ್ರಹ್ಮರುದ್ರಾದಿಗಳಿಗೆ ಸ್ವಾಮಿಯಾದ ಶ್ರೀನಾರಾಯಣನ, **ವಕ್ಷಸ್ಥಳವೇ** - ಹೃದಯ ಪ್ರದೇಶವೇ, **ಲಕುಮಿಗೆ** - ಶ್ರೀಲಕ್ಷ್ಮೀದೇವಿಯರಿಗೆ, **ಅವಕಾಶವಾಯಿತು** - ಆವಾಸಕ್ಕೆ ಯೋಗ್ಯವಾದ ಸ್ಥಾನವಾಯಿತು. **ಇವನ ಮಹಿಮೆ** - ಇಂತಹ ಶ್ರೀಪರಮಾತ್ಮನ ಅಪಾರ ಮಹಿಮೆಯ, **ವ್ಯಾಪ್ತಿಗೆ** - ವ್ಯಾಪ್ತಿಗೆ, **ಎಣೆಯುಂಟೆ** - ಸರಿಯುಂಟೇ॥೧೩॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರವ್ಯಾಖ್ಯಾನ

ಇನ್ನೂ ಶ್ರೀಲಕ್ಷ್ಮೀದೇವೇರ ಮಹಿಮಾ ಹೇಳತಾರೆ.

ಇಷ್ಟು ಮಹಿಮೆಗಳಿಂದ ಯುಕ್ತರಾದ ಲಕ್ಷ್ಮೀದೇವೇರು ಬ್ರಹ್ಮಾದಿಗಳಿಗಿಂತಲೂ, ತಮಗಿಂತಲೂ ಅನ್ಯನಾದ ತಮ್ಮ ಪತಿಯಾದ ಶ್ರೀನಾರಾಯಣದೇವರ ಒಂದು ಗುಣದೊಳು ಅನಂತಾಂಶ, ಈ ಅನಂತಾಂಶಗುಣದೊಳು ಅನಂತಾನಂತ ಭಾಗಮಾಡಲಾಗಿ ಆ ಭಾಗದೊಳಗೆ ಲೇಶದೊಳಗೆ ಲೇಶಭಾಗ

ವಾದ ಗುಣಕ್ಕೆ ಸದಾ ಸರ್ವಕಾಲದಲ್ಲೂ ಸಮಾನರೆಂತ ಅನಿಸೋದಿಲ್ಲ. ಲಕ್ಷ್ಯಾತ್ಮಕ ದೇಶ, ಲಕ್ಷ್ಯಾತ್ಮಕಕಾಲ ಎರಡರಿಂದ ಅತೀತನಾದ ಗುಣಪೂರ್ಣನಾದ, ಬ್ರಹ್ಮರುದ್ರಾದಿ ದೇವತೆಗಳಿಗೆ ಸ್ವಾಮಿಯಾದ ಶ್ರೀನಾರಾಯಣದೇವರ ಹೃದಯಪ್ರದೇಶವೇ, ಲಕ್ಷ್ಮೀದೇವೇರಿಗೆ ಆವಾಸಕ್ಕೆ ಯೋಗ್ಯವಾದ ಅವಕಾಶ ಸ್ಥಾನವಾಯಿತು. ಈ ದೃಷ್ಟಾಂತದಿಂದ ಏಕದೇಶವ್ಯಾಪ್ತರು ರಮಾದೇವೇರು ಎಂತ ತಾತ್ಪರ್ಯ. ಈ ಪರಮಾತ್ಮನ ಮಹಿಮೆಗೆ, ವ್ಯಾಪ್ತಿಗೆ ಆದ್ಯಂತಗಳು ಇಲ್ಲ ಎಂತಲೂ, ರಮಾದೇವೇರ ಮಹಿಮೆಗೆ, ವ್ಯಾಪ್ತಿಗೆ ಆದ್ಯಂತಗಳುಂಟು ಎಂತಲೂ ತಾತ್ಪರ್ಯ ॥೧೩॥

## ೨. ಭಾವಪ್ರಕಾಶಿಕೆ–

ಇಷ್ಟು ಮಹಿಮೆಗಳುಳ್ಳ ಶ್ರೀಲಕ್ಷ್ಮೀದೇವಿಯರು, ಸರ್ವೋತ್ತಮನಾದ ಶ್ರೀಪರಮಾತ್ಮನ ಗುಣಗಳ ಅನಂತಾಂಶದೊಳು, ಯಾವಕಾಲದಲ್ಲಿಯಾದರೂ, ಲೇಶಲೇಶಕ್ಕೆ ಸರಿಯೆನಿಸರು. ಪರಮಾತ್ಮನ ಅನಂತಾನಂತಗುಣಗಳ ಅಂಶದೊಳಗೆ ಒಂದು ಅಲ್ಪಾಂಶಕ್ಕೂ ಸಹ ಸಮರಲ್ಲವೆಂದರ್ಥ. ಒಂದಾನೊಂದು ಕಾಲದಲ್ಲಿ ಒಂದು ದೇಶದೊಳಗೆ ಇವರಿಲ್ಲವೆಂದಿಲ್ಲ. ಸರ್ವದೇಶ ಮತ್ತು ಕಾಲಗಳಲ್ಲೂ ವ್ಯಾಪ್ತರಾಗಿರುವರೆಂದರ್ಥ. ಅಂತಹ ಲಕ್ಷ್ಮೀದೇವಿಯರಿಗೆ ಕೇಶವನ ವಕ್ಷಸ್ಥಳವೇ ವಾಸಸ್ಥಾನವಾಯಿತು. ಹೀಗೆಂದಮೇಲೆ ಈ ಪರಮಾತ್ಮನ ವ್ಯಾಪ್ತಿಗೂ ಮತ್ತು ಮಹಿಮೆಗೂ ಎಣೆಯುಂಟೆ ॥೧೩॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ –

ಏವಂ ತರತಮೋಪೇತಾ (ತೇಽಪಿ) ಸಂತಶ್ಚ ಗಣೋಕಿ ಯಮ್। ನಾಪಿ ತತ್ಸಾನ್ನಿನೀವಾಣೀ ರಮಾ ಸಾ ಮುಖ್ಯಮಾನಿನೀ॥ ಯದ್ಗುಣಾದ್ಯಂಶಕಾಂಶಂ ವಾ ತದ್ಗುಣಾಂಶಾಂಶಸಂತತಿಮ್॥ ಯಸ್ಯ ಬಾಗ್ರಾದಿಸೌಂದರ್ಯಂ ತದ್ಗುಣಾಂಶಾಂಶ ವೈಭವಮ್॥ ವಕ್ತುಂ ದ್ರಷ್ಟುಂ ಚ ಮನಸಾ ಸ್ಮರ್ತುಂ ವಾ ಸ್ವ ಸ್ವಶಕ್ತಿತಃ॥ ನಾಲಂ ನಾಲಂ ರಮಾದೀನಾಂ ಸಹಸ್ರಂ ವಾ ತಥಾಮಿತಮ್ ॥೧೩॥

**ಕನ್ನಡಾರ್ಥ –**

ಹೀಗೆ ತರತಮಭಾವದಲ್ಲಿ ಸರ್ವೋತ್ಕೃಷ್ಟತಮನಾದ ಶ್ರೀಹರಿಯನ್ನು ಅನಂತ ವೇದರಾಶಿಗಳಾಗಲೀ, ಅವುಗಳ ಅಭಿಮಾನಿಗಳಾದ ಭಾರತೀ-ಸರಸ್ವತಿಯರಾಗಲೀ, ಮುಖ್ಯಾಭಿಮಾನಿನಿಯಾದ ಶ್ರೀರಮಾದೇವಿಯರಾಗಲೀ ಸಂಪೂರ್ಣವಾಗಿ ತಿಳಿಯಲು ಸಮರ್ಥರಲ್ಲ. ಹರಿಯ ಗುಣಗಳ ದಶಾಂಶಾಂಶಗಳನ್ನಾದರೂ ಪೂರ್ಣವಾಗಿ ಎಣಿಸಲು ಸಾಧ್ಯವಿಲ್ಲ. ಹರಿಯ ನಖಾಗ್ರದಸೌಂದರ್ಯದ ಅನಂತಾನಂತ ಅಂಶಗಳಲ್ಲಿ ಒಂದು ಅಂಶವನ್ನು ಸ್ವ ಸಾಕಲ್ಯೇನ ನೋಡಲಾಗಲೀ, ಹೇಳಲಾಗಲೀ ಯಾರೂ ಸಮರ್ಥರಲ್ಲ. ರಮಾದಿಗಳಿಗೂ ಸಾಧ್ಯವಿಲ್ಲದಿರುವಾಗ ಮಿಕ್ಕವರ ಪಾಡೇನು? ॥೧೩॥

**೪. ಭಾವದರ್ಪಣ –**

ಈಸು ಮಹಿಮ ॥೧೩॥

**೫. ಶ್ರೀಗುರುಹೃದಯಪ್ರಕಾಶಿಕೆ**

ಇಷ್ಟು ಮಹಿಮೆಯುಳ್ಳ ಮಹಾಲಕ್ಷ್ಮಿಯು ಪರೇಶನಾದ ಶ್ರೀನಾರಾಯಣನ ಅನಂತಾಂಶಗುಣಗಳಲ್ಲಿ ಲೇಶಲೇಶಗುಣಕ್ಕೂ ಸರಿ ಎನಿಸಳು. ಸದಾ ಸರ್ವದೇಶಕಾಲವ್ಯಾಪ್ತಿ ಅತಿಕ್ರಮಿಸಿರುವ ಲಕ್ಷ್ಮಿಗೆ ಕೇಶವನೆಂಬ ಬ್ರಹ್ಮರುದ್ರನಿಯಾಮಕ ಸ್ವಾಮಿಯ ವಕ್ಷಸ್ಥಳವೇ ಅವಕಾಶವಾಯಿತು. ಎಂದರೆ, ದೇವನ ವಕ್ಷಸ್ಥಳ ಮೀರಿ ಹೋಗುವುದಕ್ಕೆ ಶಕ್ತಿ ಇಲ್ಲದೇ ಹೋಯಿತು. ಈ ಸ್ವಾಮಿ ಮಹಿಮೆಗೂ ವ್ಯಾಪ್ತಿಗೂ ಸರಿಮಾಡುವುದು ಯಾವುದು ಇಲ್ಲ ॥೧೩॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಈಸು ಮಹಿಮೆಗಳುಳ್ಳ –**

ಪೂರ್ವೋಕ್ತ ಮಹಾಮಹಿಮೆಗಳುಳ್ಳವಳು ಶ್ರೀಲಕ್ಷ್ಮೀದೇವಿಯು ನಿತ್ಯಮುಕ್ತಳು, ನಿರ್ವಿಕಾರಳು, ಚಿತ್ಪ್ರಕೃತಿನಾಮಕಳು. ಪ್ರಾಕೃತದೇಹರಹಿತಳು. ಸೂಕ್ಷ್ಮಪ್ರಕೃತಿಗೆ ಅಭಿಮಾನಿ. ಶ್ರೀಭೂದುರ್ಗಾ ರೂಪಳು.

ವಾಗಿ, ಚಾಮರವಾಗಿ, ಉಡುಗೆಯಾಗಿ, ನಾನಾ ಆಭರಣಗಳಾಗಿ, ಆಯುಧಗಳಾಗಿ, ಎಡಬಿಡದೆ ನಿರಂತರವೂ ಶ್ರೀಹರಿಯನ್ನು ಸೇವಿಸುತ್ತಿರುವ ಮಾನ್ಯಳು, ಧನ್ಯಳು. ದೇಶತಃ ಕಾಲತಃ ಶ್ರೀಹರಿಯ ಸಮವ್ಯಾಪ್ತಳು. ಗುಣತಃ ಅನಂತ ಕೋಟಿಗುಣಗಳಿಂದ ಅವರಳು. ನಿತ್ಯ ಹರಿಯ ಅಧೀನಳು (ಪರಾಧೀನವ್ಯಾಪ್ತಿವುಳ್ಳವಳು).

**೨. ಲಕುಮೀ -**

ಜಗಜ್ಜನನಿಯಾದ ತ್ರಿಗುಣಾಭಿಮಾನಿಯು. ಜಗತ್ತಿನ ಸೃಷ್ಟಿ, ಸ್ಥಿತಿ, ಲಯಾದಿಗಳಿಗೆ ಉಪಾಧಿಕಾರಣಳು.

**೩. ಪರೇಶನ -**

'ಪರ' ಎಂಬ ಶಬ್ದಕ್ಕೆ ಶ್ರೇಷ್ಠ ಎಂದರ್ಥ. ಈ ಶಬ್ದವನ್ನು ಉಭಯಾರ್ಥಗಳಲ್ಲಿ ಪ್ರಯೋಗಿಸಬಹುದು.

೧. ಬ್ರಹ್ಮಾದಿ ಚೇತನರಿಗಿಂತ ಕೋಟಿಗುಣದಿಂದ ಉತ್ತಮಳಾದ ಶ್ರೀರಮಾದೇವಿಗೆ 'ಪರ' ಎಂದು ಹೆಸರು. ಪರನಾಮಕಳಾದ ಶ್ರೀಲಕ್ಷ್ಮೀಗಿಂತ ಅನಂತಾನಂತಕೋಟಿಗುಣಗಳಿಂದ ಉತ್ತಮೋತ್ತಮನು, ಶ್ರೀಲಕ್ಷ್ಮೀಗೆ ಪ್ರಭುವು ಮತ್ತು ನಿಯಾಮಕನು. ಇದರಿಂದ 'ಪರೇಶ' ಎಂದು ಪರಮಾತ್ಮನಿಗೆ ಹೆಸರು. (ಪರ + ಈಶ - ಸರ್ವೋತ್ತಮನು. ನಿಯಾಮಕನು).

೨. ಜೀವಕೋಟಿಗಳಲ್ಲಿ ಅತ್ಯಂತ ಶ್ರೇಷ್ಠರು ಬ್ರಹ್ಮ - ವಾಯ್ವಾದಿ ಋಜುಗಳು. ಅಂಥಹ ಜೀವೋತ್ತಮರಾದ ಬ್ರಹ್ಮ - ವಾಯ್ವಾದಿ ಋಜುಗಳಿಗಿಂತಲೂ ಅತ್ಯಂತ ಶ್ರೇಷ್ಠನು. ಅಂದರೆ ರಮಾ-ಬ್ರಹ್ಮಾದಿ ವಂದ್ಯನಾದ (ಕ್ಷರಾಕ್ಷರಪೂಜಿತಪಾದಪದ್ಮ) ಶ್ರೀಹರಿಯು **ಪರೇಶನು**.

**೪. ಅನಂತಾನಂತಗುಣಗಳೊಳು**

ಅಂಥಹ ಪರೇಶನ ಅನಂತಾನಂತಗುಣರಾಶಿಗಳಲ್ಲಿ ಒಂದು ಲೇಶಾಂಶವನ್ನೂ ಗಣಿಸೆ.

**೫. ಲೇಶಲೇಶಕೆ ಸರಿಯೆನಿಸಳು -**

ಅಂತಹ ಗುಣದ ಲೇಶಾಂಶಗಳಲ್ಲಿ ಅತ್ಯಲ್ಪ ಅಂಶಕ್ಕೂ ಅನಾದ್ಯನಂತ ಕಾಲದಿಂದ ಸರಿಸಮಳಲ್ಲ, ಶ್ರೀಇಂದಿರೆಯು. ಇನ್ನು ಅವನ ಅಪಾರ ಮಹಿಮೆಯನ್ನು ಅರಿಯುವುದೆಂತು ! ಸಾಕಲ್ಯೇನ ಶ್ರೀಹರಿಯ ಗುಣ ರೂಪ ಕ್ರಿಯಾದಿ ವಿಶೇಷಗಳನ್ನು ಎಂದೆಂದಿಗೂ ಅರಿಯಲು ಸಾಧ್ಯವಿಲ್ಲ. ಗುಣತಃ ಶ್ರೀಹರಿಗೆ ಅನಂತಾನಂತಕೋಟಿಗುಣಗಳಿಂದ (ಗಣನಾತೀತ) ಅತ್ಯಂತ ಅವರಳು.

**೬. ಆವಕಾಲದಲಿ -**

ಯಾವಾವ ಕಾಲದಲ್ಲಿಯಾಗಲೀ ದೇಶದಲ್ಲಿಯಾಗಲೀ ಶ್ರೀಹರಿಗೆ ಗುಣತಃ ಅವರಳು ಆತನ ಅಪಾರಗುಣಸ್ತೋಮಗಳ ಲೇಶಾಂಶದಲ್ಲಿ ಅಲ್ಪಾಂಶಕ್ಕೂ ದೇಶತಃ ಕಾಲತಃ ಸಮಳಲ್ಲ.

**೭. ದೇಶ ಕಾಲಾತೀತ -**

ಲಕ್ಷ್ಮಿಯ ವಿವಕ್ಷಾ ಶ್ರೀಹರಿಯು ದೇಶಾತೀತನೂ ಹಾಗೂ ಕಾಲಾತೀತನು. ಶ್ರೀಲಕ್ಷ್ಮಿಯು ಶ್ರೀಹರಿಗೆ ದೇಶತಃ ಮತ್ತು ಕಾಲತಃ ಸಮಳೆಂದು ಶಾಸ್ತ್ರೋಕ್ತಿ. ಇವರ ವ್ಯಾಪ್ತಿಗೂ ಪರಿಮಿತಿ ಇದೆ. ಶ್ರೀಹರಿಗೆ ಸ್ವಾವ್ಯಾಪ್ಯಪ್ರದೇಶವೆಂಬ ತನ್ನದೇ ಆದ ದೇಶವುಂಟು. ಅದೇ ಇಂದಿರೆಯ ಬಿಂಬರೂಪ. ಶ್ರೀಹರಿಯು ಲಕ್ಷ್ಮಿಗೆ ಬಿಂಬನು. ಲಕ್ಷ್ಮಿಯು ಪ್ರತಿಬಿಂಬಭೂತಳು. ಆದರಿಂದ ಅವನ ಪೂರ್ಣಾಧೀನಳು. ಶ್ರೀಲಕ್ಷ್ಮಿಯ ಬಿಂಬ ರೂಪದಲ್ಲಿ ಲಕ್ಷ್ಮಿಯ ವ್ಯಾಪ್ತಿ ಇಲ್ಲ. ಅದು ಶ್ರೀಹರಿಯ ಸ್ವಾವ್ಯಾಪ್ಯಪ್ರದೇಶ. ಪ್ರತಿಜೀವರ (ಬ್ರಹ್ಮಾದಿ ತೃಣಾಂತ ಪರ್ಯಂತ) ಸ್ವರೂಪದಲ್ಲಿ ಶ್ರೀಲಕ್ಷ್ಮೀನಾರಾಯಣರಿದ್ದಾರೆ.

## ೮. ಕೇಶವನ

ಕ + ಈಶ + ವ = ಕೇಶವ. ಕಂ ಎಂದರೆ ನೀರು. ತತ್ಸಂಬಂಧೀ ಕಮಲ. ಶ್ರೀಹರಿಯ ನಾಭೀಕಮಲಸಂಜಾತರು ಶ್ರೀಬ್ರಹ್ಮದೇವರು. ವ ಎಂದರೆ ಈ ಬ್ರಹ್ಮದೇವರಿಂದ ವರಿಷ್ಠನು (ಶ್ರೇಷ್ಠನು). ಬ್ರಹ್ಮರುದ್ರಾದಿಗಳಿಂದ ಶ್ರೇಷ್ಠನೆಂದರ್ಥ, ಅಂದರೆ ಸರ್ವೋತ್ತಮನಾದ ಶ್ರೀಹರಿಯು, **ಕೇಶವನಾಮಕನು.**

## ೯. ವಕ್ಷಸ್ಥಳವೆ ಅವಕಾಶವಾಯಿತು

ಕೇಶವನ ವಕ್ಷಸ್ಥಳನಿವಾಸಿ ಶ್ರೀಲಕ್ಷ್ಮೀದೇವಿ. ಶ್ರೀಹರಿಯ ನಿತ್ಯಾವಿಯೋಗಿನಿ. ತನ್ನ ಹೃದಯಸ್ಥಾನವನ್ನೇ ಶ್ರೀಹರಿಯು ಲಕ್ಷ್ಮಿಗೆ ಆವಾಸಸ್ಥಳವನ್ನಾಗಿ ಮಾಡಿಕೊಟ್ಟಿದ್ದಾನೆ. ಅದೆಂತಹ ಕರುಣಾಳು ಆ ಅಪಾರಮಹಿಮಾಸಂಪನ್ನನು!

## ೧೦. ಇವನ ಮಹಿಮೆ ವ್ಯಾಪ್ತಿಗೆ ಎಣೆಯುಂಟೆ

ಅನಂತಕಲ್ಯಾಣಗುಣ ಸ್ವರೂಪನೂ ನಿರ್ದೋಷನೂ ಆದ ಶ್ರೀಹರಿಯ ಮಹಿಮೆ ಅಗಾಧ, ಅಪಾರ, ಅನುಪಮ, ಅಪರಿಚ್ಛಿನ್ನ. ಅವನ ವ್ಯಾಪ್ತಿ ಸರ್ವತ್ರ. ಅವನಿಲ್ಲದ ಸ್ಥಳವಿಲ್ಲ. ಜಡ-ಚೇತನಗಳ ಅಸ್ತಿತ್ವಕ್ಕೆ ಶ್ರೀಹರಿಯ ಸನ್ನಿಧಾನವೇ ಕಾರಣವು. ಜಡಗಳಿಗೂ ಮತ್ತು ಸಕಲ ಚೇತನರಿಗೂ ನಿತ್ಯ ಸನ್ನಿಧಾನಯುಕ್ತನಾಗಿದ್ದಾನೆ, ಆ ಸತ್ಯಸಂಕಲ್ಪನು. ಅವನಿಲ್ಲದೆ ಅವುಗಳ ಅಸ್ತಿತ್ವವೇ ಇಲ್ಲ. ಬಿಂಬ-ಪ್ರತಿಬಿಂಬ ಸಂಬಂಧ ಅನಾದಿನಿತ್ಯ, ನಿತ್ಯಾವಿಯೋಗಿತ್ವ ಎಂದು ತಾತ್ಪರ್ಯ. ಇಂತಹ ಮಹಿಮಾತಿಶಯಗಳಿಗೂ, ವ್ಯಾಪ್ತಿಗೂ ಸರಿ ಸಮಾನವೆಂಬುದು ಅನ್ಯತ್ರ ಎಂದೆಂದಿಗೂ ಇಲ್ಲವೇ ಇಲ್ಲ ಎಂದು ತಾತ್ಪರ್ಯ ॥೧೩॥

### ಪದ್ಯ - ೧೪

ಮೂಲ -

**ಒಂದು ರೂಪದೊಳೊಂದವಯವದೊ।**
**ಳೊಂದು ರೋಮದೊಳೊಂದು ದೇಶದಿ।**
**ಪೊಂದಿಕೊಂಡಿಹರಜಭವಾದಿ ಸಮಸ್ತ ಜೀವಗಣ॥**

**ಸಿಂಧು ಸಪ್ತದ್ವೀಪ ಮೇರು ಸು|**
**ಮಂದರಾದ್ರ್ಯಾದಿಗಳು ಬ್ರಹ್ಮ ಪು|**
**ರಂದರಾದಿ ಸಮಸ್ತಲೋಕ ಪರಾಲಯಗಳೆಲ್ಲ ||೧೪||**

**ಅವತರಣಿಕೆ –**

ನಲವತ್ತೆಂಟನೆಯ ಕಕ್ಷಕ್ಕೆ ಸೇರಿದ ಸರ್ವೋತ್ತಮನಾದ ಶ್ರೀಪರಮಾತ್ಮನ ಮಹಾತ್ಮ್ಯ ವಿಚಾರವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ -**

**ಒಂದು ರೂಪದೊಳು** - ಅನಂತಾನಂತ ರೂಪಸಮೂಹಗಳಲ್ಲಿ ಒಂದು ರೂಪದಲ್ಲಿ, **ಒಂದವಯವದೊಳು** - ವಿದ್ಯಮಾನವಾದ ಒಂದು ಅವಯವದಲ್ಲಿ, **ಒಂದು ರೋಮದೊಳು** - ಅದರಲ್ಲಿ ವಿದ್ಯಮಾನವಾದ ಒಂದು ರೋಮದಲ್ಲಿ ಅವಕಾಶರೂಪವಾದ ಏಕದೇಶವಾದ ಪ್ರದೇಶದಲ್ಲಿ, **ಅಜಭವಾದಿ** - ಬ್ರಹ್ಮ ರುದ್ರಾದಿ, **ಸಮಸ್ತ ಜೀವಗಣ** - ಸಕಲಜೀವ ಸಮೂಹಗಳು. **ಪೊಂದಿಕೊಂಡಿಹರು** - ಆಶ್ರಯಿಸಿಕೊಂಡಿದ್ದಾರೆ. **ಸಿಂಧು** - ಸಪ್ತಸಮುದ್ರಗಳು. **ಸಪ್ತದ್ವೀಪ** - ಜಂಬೂ ಪ್ಲಕ್ಷಾದಿ ಸಪ್ತದ್ವೀಪಗಳೂ, **ಮೇರು** - ಮೇರು ಪರ್ವತ, **ಮಂದರಾದಿ ಅದ್ರಿಗಳು** - ಮಂದರಪರ್ವತವೇ ಮೊದಲಾದ ಸಕಲ ಪರ್ವತಗಳು, **ಬ್ರಹ್ಮಪುರಂದರಾದಿ** - ಬ್ರಹ್ಮ ಇಂದ್ರಾದಿ ದೇವರುಗಳು. **ಸಮಸ್ತಲೋಕ** - ಭೂರ್ಭುವಸ್ಸ್ವರ್ಗಾದಿ ಹದಿನಾಲ್ಕು ಲೋಕಗಳು. **ಪರಾಲಯಗಳೆಲ್ಲ** - ವೈಕುಂಠ, ಶ್ವೇತದ್ವೀಪ, ಅನಂತಾಸನಾದಿ ಮುಕ್ತಧಾಮಗಳು ಇವೆಲ್ಲವೂ ಒಂದು ರೋಮಗತ ಅವಕಾಶದಲ್ಲಿ ಆಪಗಿ ಆಶ್ರಯ ಹೊಂದಿವೆ ||೧೪||

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರವ್ಯಾಖ್ಯಾನ

ಶ್ರೀಪರಮಾತ್ಮನ ಮಹಾತ್ಮ್ಯ ಹೇಳುತ್ತಾರೆ. ೪೮ನೇ ಕಕ್ಷ ಶ್ರೀಪರಮಾತ್ಮ ರಮಾದೇವೇರಿಗಿಂತಲೂ ಉತ್ತಮನು. ಇವನ ಮಹಿಮೆ ಎಂಥಾದ್ದೆಂದರೆ.

ಅನಂತಾನಂತರೂಪಗಳೊಳಗೆ ಒಂದು ರೂಪ. ಆ ಒಂದು ರೂಪದೊಳಗೆ ವಿದ್ಯಮಾನವಾದ ಒಂದು ಅವಯವ. ಈ ಒಂದು ಅವಯವದಲ್ಲಿ ವಿದ್ಯಮಾನವಾದ ಒಂದು ರೋಮ. ಈ ರೋಮದಲ್ಲಿ ಅವಕಾಶರೂಪವಾದ ವಿಸ್ತಾರವಾದ ಪ್ರದೇಶವಿಶೇಷ. ಆ ಪ್ರದೇಶ ವಿಶೇಷದಲ್ಲಿ ಒಂದಾನೊಂದು ಏಕದೇಶವಾದ ಪ್ರದೇಶದಲ್ಲಿ ಬ್ರಹ್ಮರುದ್ರೇಂದ್ರಾದಿ ಯಾವತ್ತೂ ಜೀವಗಣಗಳು ಆಶ್ರಯ ಮಾಡಿಕೊಂಡು ಇದ್ದಾರೆ. ಇವರಲ್ಲದೆ, ಸಪ್ತಸಮುದ್ರಗಳು, ಜಂಬೂ ಪ್ಲಕ್ಷಾದಿ ಸಪ್ತದ್ವೀಪಗಳು, ಸಮೀಚೀನವಾದ ಸ್ವರ್ಣಾತ್ಮಕ ಮೇರುಪರ್ವತವೇನು ಮಂದರಪರ್ವತವೇನು ಇವೇ ಮೊದಲಾದ ಅನೇಕವಿಧವಾದ ಪರ್ವತಗಳು, ಬ್ರಹ್ಮದೇವರು ಇಂದ್ರದೇವರು ಇವರೇ ಮೊದಲಾದವರು ಆವಾಸವಾಗಿರತಕ್ಕ ಭೂರ್ಭುವಸ್ಸ್ವರ್ಗಾದಿ ಸಮಸ್ತವಾದ ಹದಿನಾಲ್ಕು ಲೋಕಗಳೇನೂ ಇನ್ನೂ ಅನ್ಯವಾದ ವೈಕುಂಠಾದಿ ಆಲಯತ್ರಯಗಳೇನು, ಇವುಗಳೆಲ್ಲ ರೋಮಗತ ಅವಕಾಶದಲ್ಲಿ ಒಂದು ಪ್ರದೇಶದಲ್ಲಿ ಇರೋವಾಗಿ ಅವೆ. ॥೧೪॥

## ೨. ಭಾವಪ್ರಕಾಶಿಕೆ

ಒಂದು ರೂಪದೊಳು, ಒಂದು ಅವಯವದೊಳಿರುವ, ಒಂದು ರೋಮದೊಳು, ಒಂದು ಭಾಗದಲ್ಲಿ, ಬ್ರಹ್ಮರುದ್ರಾದಿ ಸಮಸ್ತ ಜೀವಗಣಗಳು ಸಪ್ತ ಸಮುದ್ರಗಳು, ಸಪ್ತದ್ವೀಪಗಳು, ಮೇರುಪರ್ವತ, ಮಂದರ ಮೊದಲಾದ ಪರ್ವತಗಳು ಬ್ರಹ್ಮ ಇಂದ್ರಾದಿ ಲೋಕಪಾಲಕರು ಸೇರಿಕೊಂಡಿರುವವು ॥೧೪॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದಿ -

'ಒಂದು' ಇತಿ ॥ ಸ ಹರಿಃ ಮಧ್ವಹೃತ್ಪದ್ಮಸಂಸ್ಥಿತಃ ಜಯತಿ ಪ್ರಭುಃ ॥೧೪॥

**ಕನ್ನಡಾರ್ಥ -**

ಇಂಥ ಬ್ರಹ್ಮಾಂಡೋದರ ಶ್ರೀಹರಿಯು ಶ್ರೀಮನ್ಮಧ್ವಾಚಾರ್ಯರ ಹೃದಯಪದ್ಮದಲ್ಲಿ ಶೋಭಿಸುತ್ತಾನೆ. ಇದೇ ಶ್ರೀಮಧ್ವಾಚಾರ್ಯರ ಮತ ವೈಭವ. ಇಲ್ಲಿರುವ ಘನತೆ ಇನ್ನೆಲ್ಲಿಯೂ ಇರುವುದಿಲ್ಲ ॥೧೪॥

**೪. ಭಾವದರ್ಪಣ -**

ಒಂದು. ಸಿಂಧು-ಸಮುದ್ರ, ಪುರಂದರ-ಇಂದ್ರ, ಆಲಯ-ಮನೆ ॥೧೪॥

**೫. ಶ್ರೀಗುರುಹೃದಯಪ್ರಕಾಶಿಕೆ -**

ಒಂದು ರೂಪದಲ್ಲಿ ಒಂದು ಅವಯವದಲ್ಲಿ ಒಂದು ರೋಮದಲ್ಲಿ ಅದರಲ್ಲಿ ಒಂದು ಪ್ರದೇಶದಲ್ಲಿ ಅಜನೆಂಬ ಬ್ರಹ್ಮ, ಭವನೆಂಬ ರುದ್ರ ಮೊದಲಾದ ಸಮಸ್ತ ದೇವತಾದಿ ಸರ್ವಜೀವಗುಣವೂ ಆಶ್ರಯಿಸಿರುವುದು. ಸಿಂಧುವೆಂಬ ಸಮುದ್ರ, ಏಳು ದ್ವೀಪಗಳು, ಮೇರು ಮಂದರಾದಿ ಪರ್ವತಗಳು, ಬ್ರಹ್ಮ ಪುರಂದರನೆಂಬ ಇಂದ್ರಾದಿ ಲೋಕಪಾಲಕರ ಆಲಯಗಳೆಂಬ ಲೋಕಗಳೂ ಸಹ ಆಶ್ರಯಿಸಿರುವುವು ॥೧೪॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ಒಂದು ರೂಪದೊಳು -**

ಶ್ರೀಪರಮಾತ್ಮನ ರೂಪಗಳು ಅಪಾರ, ಅನಂತಾನಂತ. ಅಂಥಾ ಅನಂತಾನಂತ ಸಂಖ್ಯಾಕವಾದ ರೂಪಸಮುದಾಯಗಳಲ್ಲಿ ಒಂದು ರೂಪದಲ್ಲಿ.

**೨. ಒಂದು ಅವಯವದೊಳು -**

ಅಂಥಹ ಒಂದರಲ್ಲಿ ಗತವಾದ ಒಂದು ಅವಯವದಲ್ಲಿ,

**೩. ಒಂದೊಂದು ರೋಮದೊಳೊಂದು ದೇಶದಿ -**

ಒಂದು ಅವಯವದಲ್ಲಿ ಗತವಾದ ಒಂದು ರೋಮದ ಪ್ರದೇಶದಸ್ಥಳದಲ್ಲಿ (ಅವಕಾಶದಲ್ಲಿ),

**೪. ಅಜ ಭವಾದಿ ಸಮಸ್ತ ಜೀವಗಣ -**

ಬ್ರಹ್ಮ, ರುದ್ರಾದಿ ಸಕಲ ಜೀವರಾಶಿಗಳು,

**೫. ರೋಮಕೂಪಗಳು -**

ಆಶ್ರಯವನ್ನು ಪಡೆದಿದ್ದಾರೆ. ಅಂದರೆ ಶ್ರೀಪರಮಾತ್ಮನ ಅನಂತಾನಂತ ರೂಪಗಳಲ್ಲಿ, ಯಾವುದಾದರೊಂದು ರೂಪದಲ್ಲಿರುವ ಒಂದು ಅವಯವದಲ್ಲಿ ವಿದ್ಯಮಾನವಾದ ಒಂದು ರೋಮದಷ್ಟು ಅತ್ಯಂತ ಸೂಕ್ಷ್ಮವಾದ ಪ್ರದೇಶದಲ್ಲಿ, ಬ್ರಹ್ಮಾದಿ ತೃಣಾಂತ ಸಕಲ ಜೀವಗಣಗಳು ಆಶ್ರಯ ಪಡೆದಿವೆ. ಒಂದೊಂದು ರೋಮದಲ್ಲಿ ಬ್ರಹ್ಮಾಂಡವೇ ಅಡಗಿರುವುದು. ಇನ್ನು ಪುರುಷನಾಮಕ ಆ ವಿರಾಡ್ರೂಪಿಯ ಪರಮವ್ಯಾಪ್ತಿ ಅದೆಂತಹುದು !

**೬. ಸಿಂಧು -**

ಸಪ್ತ ಸಮುದ್ರಗಳು - ೧. ಲವಣಸಮುದ್ರ (ಕ್ಷಾರ), ೨. ಇಕ್ಷುಸಮುದ್ರ (ಕಬ್ಬಿನಹಾಲು), ೩. ಸುರಾಸಮುದ್ರ (ಮದ್ಯ), ೪. ಸರ್ಪಿಸ್ ಸಮುದ್ರ (ತುಪ್ಪ) ೫. ದಧಿ (ಮೊಸರು), ೬. ಕ್ಷೀರಸಮುದ್ರ (ಹಾಲು), ಮತ್ತು ೭. ಜಲಸಮುದ್ರ (ನೀರು).

**೭. ಸಪ್ತದ್ವೀಪಗಳು -**

ಏಳು ದ್ವೀಪಗಳು- ೧. ಜಂಬೂದ್ವೀಪ, ೨. ಪ್ಲಕ್ಷದ್ವೀಪ, ೩. ಕುಶದ್ವೀಪ, ೪. ಕ್ರೌಂಚದ್ವೀಪ, ೫. ಶಾಕಾದ್ವೀಪ, ೬. ಶಾಲ್ಮಲೀದ್ವೀಪ, ೭. ಪುಷ್ಕರದ್ವೀಪ ಎಂಬ ಸಪ್ತದ್ವೀಪಗಳು.

**೮. ಮೇರು -**

ಸುವರ್ಣಪರ್ವತ. ಶಂಕುವಿನ ಆಕಾರ. ಶೃಂಗಭಾಗ ಬುಡದಲ್ಲಿ, ವೃತ್ತಭಾಗ ಮೇಲೆ. ಮೇಲೆ ಮೇಲ್ಭಾಗದಲ್ಲಿ ಬ್ರಹ್ಮದೇವರ ಸತ್ಯಲೋಕವಿದೆ. ಇದೀ ಬ್ರಹ್ಮಾಂಡಕ್ಕೆ ಆಧಾರಪರ್ವತ. ಇದರ ಮೇಲೆ ಶಿಂಶುಮಾರರೂಪೀ ಶ್ರೀಪರಮಾತ್ಮನು ಕಾಲಚಕ್ರವನ್ನು ತನ್ನ ಕೊಂಡಿಗಳಿಂದ ತಿರುಗಿಸುತ್ತಾ ಕಾಲನಾಮಕನಾಗಿದ್ದಾನೆ.

ಮಂದರಪರ್ವತ ಮೇರು ಪುತ್ರ. ಸಮುದ್ರಮಥನದ ಸಮಯದಲ್ಲಿ ದೇವ-ದಾನವರು ಕ್ಷೀರಸಾಗರವನ್ನು ಮಂಥಿಸಲು, ಮಂದರಪರ್ವತವನ್ನು ಕಡಗೋಲಾಗಿ ಉಪಯೋಗಿಸಿದರು. ಅದು ಸಮುದ್ರಗರ್ಭದಲ್ಲಿ ಮುಳುಗುತ್ತಿರಲು ಶ್ರೀಹರಿಯು ಕೂರ್ಮಾವತಾರವನ್ನು ತಾಳಿ, ತನ್ನ ಬೆನ್ನಿನ ಮೇಲೆ ಪರ್ವತವನ್ನು ಧರಿಸಿ, ಮಂಥನಕಾರ್ಯಕ್ಕೆ ಸಹಾಯಮಾಡಿದನು. ಇದರಿಂದ ಕೂರ್ಮಾವತಾರಿ ಶ್ರೀಹರಿಗೆ 'ಮಂದರಗಿರಿಧರ' ಎಂದು ಹೆಸರು ಬಂದಿತು.

**೧೦. ಬ್ರಹ್ಮ ಪುರಂದರಾದಿ**

ಸತ್ಯಲೋಕಾಧಿಪತಿ ಶ್ರೀಬ್ರಹ್ಮದೇವರು, ಸ್ವರ್ಗಲೋಕಾಧಿಪತಿ ಇಂದ್ರದೇವರು ಇತ್ಯಾದಿ ದೇವತಾವರ್ಗ.

**೧೧. ಸಮಸ್ತಲೋಕ**

ಹದಿನಾಲ್ಕು ಲೋಕಾತ್ಮಕವಾದ ಸಮಗ್ರ ಬ್ರಹ್ಮಾಂಡ ಹಾಗೂ ಅದರಲ್ಲಿರುವ ಚರಾಚರ ಸಮಸ್ತ ವಸ್ತುಗಳು.

**೧೨. ಪರಾಲಯಗಳೆಲ್ಲ**

ಪರ-ಶ್ರೇಷ್ಠ. ಅಂದರೆ ಮುಕ್ತಿಧಾಮಗಳು (ಪರಲೋಕ). ವೈಕುಂಠ, ಶ್ವೇತದ್ವೀಪ ಅನಂತಾಸನಾದಿ ಪರಲೋಕಗಳು.

ಅಪಾರ ಮಹಿಮಾಸಂಪನ್ನನಾದ, ಅಪರಿಚ್ಛಿನ್ನ ವ್ಯಾಪ್ತನಾದ ಶ್ರೀಹರಿಯ ಒಂದು ರೂಪಗತ ಅವಯವಗತ ಒಂದೊಂದು ರೋಮ ಕೂಪ ಪ್ರದೇಶದಲ್ಲಿ ಸಪ್ತಸಮುದ್ರಗಳು, ಸಪ್ತದ್ವೀಪಗಳು, ನವಖಂಡಗಳು, ಚರಾಚರಾತ್ಮಕ ಸಮಗ್ರ ಬ್ರಹ್ಮಾಂಡ, ಬ್ರಹ್ಮಾದಿ ತೃಣಾಂತ ಸಮಸ್ತ ಜೀವಗಣಗಳು ಪರಲೋಕಗಳು ಎಲ್ಲಾ ಅಡಗಿ ಆಶ್ರಯ ಹೊಂದಿವೆ ಎಂತ ತಾತ್ಪರ್ಯ ॥೧೪॥

## ಪದ್ಯ - ೧೫

**ಮೂಲ -**

**ಸರ್ವದೇವೋತ್ತಮನು ಸರ್ವಗ |**
**ಸರ್ವಗುಣಸಂಪೂರ್ಣ ಸರ್ವದ |**
**ಸರ್ವತಂತ್ರಸ್ವತಂತ್ರ ಸರ್ವಾಧಾರ ಸರ್ವಾತ್ಮ ||**
**ಸರ್ವತೋಮುಖ ಸರ್ವನಾಮಕ |**
**ಸರ್ವಜನಸಂಪೂಜ್ಯ ಶಾಶ್ವತ |**
**ಸರ್ವಕಾಮದ ಸರ್ವಸಾಕ್ಷಿಗ ಸರ್ವಜಿತ್ಸರ್ವ ||೧೫||**

**ಅವತರಣಿಕೆ -**

ಶ್ರೀಪರಮಾತ್ಮನ ಮಹಾಮಹಿಮೆಗಳನ್ನೇ ವಿಸ್ತಾರವಾಗಿ ತಿಳಿಸುತ್ತಾರೆ.

**ಪ್ರತಿಪದಾರ್ಥ -**

**ಸರ್ವದೇವೋತ್ತಮ** - ಸಮಸ್ತ ದೇವತೆಗಳಿಗಿಂತಲೂ ಉತ್ತಮೋತ್ತಮನಾದವನು. **ಸರ್ವಗ** - ಸರ್ವತ್ರ ವ್ಯಾಪ್ತನು. **ಸರ್ವಗುಣಸಂಪೂರ್ಣ** - ಸಮಸ್ತಕಲ್ಯಾಣಗುಣಗಳಿಂದ ಪೂರ್ಣನಾಗಿರತಕ್ಕವನು. **ಸರ್ವದ** - ಸರ್ವ ಪ್ರಾಣಿಗಳ ಅಭೀಷ್ಟ ರೂಪವಾದ, ಲಿಂಗದೇಹನಾಶಮಾಡಿ ಅಪವರ್ಗಗತಿಯನ್ನು ಕೊಡತಕ್ಕವನು. **ಸರ್ವತಂತ್ರ ಸ್ವತಂತ್ರ** - ಅನ್ಯಾಧೀನವಲ್ಲದ ಸರ್ವ ಸ್ವಾತಂತ್ರ್ಯಗುಣವುಳ್ಳವನು. ಸ್ವಾತಂತ್ರ್ಯವು ಶ್ರೀಹರಿಯ ಸ್ವರೂಪಭೂತಗುಣ ಧರ್ಮವು. **ಸರ್ವಾಧಾರ** - ಸರ್ವಕ್ಕೂ ಆಧಾರಭೂತನು (ಆಶ್ರಯ ದಾತನು). **ಸರ್ವಾತ್ಮ** - ಸರ್ವಜೀವರ ಅಧಿಷ್ಠಾನದಲ್ಲಿ ತದಾಕಾರನಾಗಿ, ತದ್ವ್ಯಾಪ್ತನಾಗಿ, ತದ್ಭಿನ್ನನಾಗಿ ಇರತಕ್ಕವನು (ಆತ್ಮನಾಮಕ ಬಿಂಬರೂಪನು). **ಸರ್ವತೋಮುಖ** - ಸರ್ವತ್ರ ಕರಚರಣಾದ್ಯವಯವಗಳಿಂದ ಅಂತರ್ಯಾಮಿಯಾಗಿ ಇರತಕ್ಕವನು. **ಸರ್ವ ನಾಮಕ** - ಸರ್ವ ನಾಮ, ಶಬ್ದವಾಚ್ಯನು. 'ನಾಮಾನಿ ಸರ್ವಾಣಿ ಯಮಾ ವಿಶಂತಿ' ಇತ್ಯುಕ್ತೇಃ. **ಸರ್ವಜನ ಸಂಪೂಜ್ಯ** -

**ಕಾಮದ** - ತನ್ನ ಭಕ್ತರಿಗೆ ಸಮಸ್ತ ಇಷ್ಟಾರ್ಥಪ್ರದನು. **ಸರ್ವಸಾಕ್ಷಿಗ** - ಸರ್ವಪ್ರಾಣಿಗಳ ಸಾಕ್ಷೀಭೂತನು **ಸರ್ವಜಿತ್** - ಸರ್ವಚರಾಚರಗಳ ಜಯಿಸಿದವ (ಸರ್ವವೂ ಅವನ ಅಧೀನವಾಗಿವೆ). **ಸರ್ವ** - ಸೃಷ್ಟ್ಯಾದಿ ಅಷ್ಟಕರ್ತೃತ್ವ ಮಹಾಪ್ರಭು (ಸರ್ವಾಧಿಕಾರಿ) ॥೧೫॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನ ಮಹಿಮಾವನ್ನೇ ಹೇಳತಾರೆ.

ಸರ್ವದೇವತೆಗಳಿಗಿಂತಲೂ ಶ್ರೇಷ್ಠನಾದವನು. ಈ ದೇವರು ಸರ್ವತ್ರ ವ್ಯಾಪ್ತನಾಗಿರತಕ್ಕವನು. ಸಮಸ್ತ ಕಲ್ಯಾಣಗುಣಗಳಿಂದ ಚೆಂದಾಗಿ ಪೂರ್ಣನಾಗಿರತಕ್ಕವನು. ಸರ್ವಪ್ರಾಣಿಗಳ ಮನೋಭೀಷ್ಟರೂಪವಾದ - ಲಿಂಗದೇಹನಾಶಮಾಡಿ - ಸ್ವರೂಪಸುಖ ಕೊಡತಕ್ಕವನು. ಅನ್ಯಾಧೀನನಲ್ಲದ, ಸರ್ವಸ್ವಾತಂತ್ರ್ಯವುಳ್ಳವನು. ಸರ್ವಚರಾಚರ ವ್ಯಾಪಾರಗಳ ನಡಸತಕ್ಕವನು. ಸರ್ವಕ್ಕೂ ಆಧಾರಭೂತನಾದಂಥಾವನು ಸರ್ವಾಧಿಷ್ಠಾನದಲ್ಲಿ ತದಾಕಾರದಿಂದ ಶರೀರವುಳ್ಳವನು. ಸರ್ವತ್ರ ಪಾಣಿಪಾದಾದ್ಯವಯವಗಳಿಂದ ಅಂತರ್ಯಾಮಿ **ನಾಮಾನಿ ಸರ್ವಾಣಿ ಯಮಾ ವಿಶಂತಿ** ಇತ್ಯುಕ್ತ ಪ್ರಕಾರ ಸರ್ವಶಬ್ದವಾಚ್ಯನು. ಸಮಸ್ತರಿಂದಲೂ ಚೆಂದಾಗಿ ಪೂಜ್ಯನಾದವನು. ಸರ್ವಪದಾರ್ಥದಲ್ಲಿ ಅಂತರ್ಗತನಾಗಿ ಅಪಿಯೋಗನಾಗಿ ಶಾಶ್ವತನಾಗಿರತಕ್ಕವನು. ತನ್ನ ಭಕ್ತರಿಗೆ ಸಮಸ್ತ ಇಷ್ಟಾರ್ಥಗಳ ಕೊಡತಕ್ಕವನು. ಸರ್ವಪ್ರಾಣಿಗಳ ಸಾಕ್ಷಿ[illegible]ಯಕ್ಕೆ ಗೋಚರನಾಗತಕ್ಕವ. ಮಾಡತಕ್ಕ ದ್ವಂದ್ವಕರ್ಮಗಳಿಗೆ ಸಾಕ್ಷೀಭೂತನಾಗಿರತಕ್ಕವನು. ಸರ್ವ ಚರಾಚರಗಳ ಜಯಿಸಿದವ, ಎಂದರೆ ಪರಾಜಿತನಾಗದವ. ಸೃಷ್ಟ್ಯಾದಿ ಅಷ್ಟಕರ್ತೃತ್ವ ಉಳ್ಳ ಶ್ರೀಪರಮಾತ್ಮನೆಂದು ತಾತ್ಪರ್ಯ ॥೧೫॥

### ೨. ಜ್ಞಾನಪ್ರಕಾಶಿಕೆ

ಪರಮಾತ್ಮನು ಸರ್ವದೇವೋತ್ತಮನು. ಸರ್ವತ್ರದಲ್ಲಿರುವವನು. ಸರ್ವಗುಣಸಂಪೂರ್ಣನು. ಸರ್ವದಾ ಸರ್ವತಂತ್ರ ಸ್ವತಂತ್ರನು. ಸರ್ವರಿಗೂ ಆಧಾರ

ಭೂತನು. ಸರ್ವಾತ್ಮಕನು. ಸರ್ವತ್ರ ಮುಖವುಳ್ಳವನು. ಸರ್ವನಾಮ ಉಳ್ಳವನು. ಸರ್ವಜನರಿಂದಲೂ ಪೂಜ್ಯನು. ಶಾಶ್ವತನಾಗಿರುವವನು. ಸರ್ವರ ಮನೋಭೀಷ್ಟವನ್ನು ಪೂರೈಸುವವನು. ಸರ್ವರನ್ನೂ ಜಯಿಸಿದವನು. ಆದ್ದರಿಂದಲೇ 'ಸರ್ವ' ಎಂಬ ಹೆಸರುಳ್ಳವನು.

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದಿ -

'ಸರ್ವ' ಇತಿ ॥ ಸಾಕ್ಷಿತ್ವೇನ ಸ್ಥಿತಃ ॥ **ಸರ್ವಗಃ** ॥ ಓಂ ॥ ಪಿಕ್ಷಸ್ವ ಯಜ್ಞಾನ್ ಕಸೇಯಸೋಃ ದೇಕ್ಷ್ಣಂ ಅಮೃತಂ ಇತ್ಯುವಾಸಾತ್ರ ದೂರಮಾ ಚಿತ್ರ ಚಿತ್ರ್ಯಂ ಭರಾ ರಯಿಂ ನಃ ಯಸ್ತೇ ಇಂದ್ರ ॥ ಓಂ ॥ ಸರ್ವಜೀವಜಾತಂ ಧನಾದಿನಾ ಗಚ್ಛತಿ ಇತಿ ತಥೋಕ್ತಃ ॥ **ಸರ್ವತೋ ಮುಖಃ** ॥ ಓಂ ॥ ನಾಮಾ ಪುರುಹೂತಃ ಇಂದ್ರೋ ವಿಶ್ವಾ ಅರಾದ್ವಿಷಃ ಸತ್ವಂ ನ ಇಂದ್ರ. ವಾಜೀ ಭಿರ್ದಸಸ್ಯ ಚ ಗಾತು ಯಾ ಚ ಅಚ್ಛಾ ಚ ನ ಸುಮ್ನಂ ನೇಷಿ ॥ ಓಮ್ ॥ ಸರ್ವಾನ್ ದ್ವೇಷಿಜನಾಂಶ್ಚ ಮನತಿ - ದಾರಯತಿ ಇತಿ ತಥೋಕ್ತಃ ॥ **ಸರ್ವ ಜಿತ್** ಓಂ ॥ ಪ್ರಸೋತ್ರ ವಿದ್ವಾನ್ ಪುರಾ ವಾ ಯದಿ ವೇಳಸ ನೂನ ಇಷ ನೋ ಮಿತ್ರ. ವರುಣಾಕರ್ತನ ಪೀಪರೀ ಮಿಷಂ ಕೃಣುಹೀ ನ ಇಂದ್ರ. ॥ಓಂ॥ ಸರ್ವಂ ಜಯತಿ ಪ್ರಾಪ್ನೋತಿ ಇತಿ ಸರ್ವಜಿತ್ ॥ **ಸರ್ವ** ಓಂ ॥ ಯದಾಚರ ಸ್ತನ್ವಾ ವಾವೃಧಾನೋ ನದಾಂ ವ ಏದತೀನಾಂ ॥ ಬಲಾನೀಂದ್ರ ಪ್ರಬ್ರು ವಾಣೋ ಜನೇಷು ನದಾಂ(ಪ್ರ) ಯೋಯುವತೀ ನೋವವ್ ॥ ಸರ್ವಸ್ವಾಮಿ ತ್ವಾತ್ ಸರ್ವಃ ॥೧೫॥

**ಕನ್ನಡಾರ್ಥ –**

**ಸರ್ವಗ,** ಸರ್ವಜೀವರಲ್ಲಿ ಸಾಕ್ಷಿರೂಪದಿಂದ ಇರುವವನು. ಪ್ರುತಿೀ ಮಂತ್ರಾನುಸಾರವಾಗಿ - 'ಸರ್ವಜೀವ ಸಮೂಹವನ್ನು ಧನ ಮುಂತಾದವು ಗಳಿಂದ ಹೊಂದುವವನು' ಎಂದು ಅರ್ಥ.

**ಸರ್ವತೋಮುಖಃ,** ಸರ್ವ ವಿದ್ವೇಷಿಗಳನ್ನು ನಾಶ ಮಾಡುವವನು.

**ಸರ್ವಜಿತ್,** ಸರ್ವವನ್ನು ಜಯಿಸುವುದರಿಂದ ಸರ್ವಜಿತ್.

**ಸರ್ವ,** ಸರ್ವಕ್ಕೂ ಸ್ವಾಮಿಯಾದವನು ॥೧೫॥

## ೪. ಭಾವದರ್ಪಣ -

ಸರ್ವದೇವ. ಸರ್ವಗ. ಸರ್ವತ್ರವ್ಯಾಪ್ತ, ಸರ್ವಾಧಾರ-ಸಮಸ್ತ ಜಡ ಚೇತನಾತ್ಮಕ ಜಗತ್ತಿಗೆ ಆಶ್ರಯ ಎಂಬರ್ಥ. ಸರ್ವಾತ್ಮಾ-ಅನಂತರೂಪ ಉಳ್ಳವ, ಸರ್ವತೋಮುಖ-ಸಮಸ್ತ ಜಡಚೇತನರಲ್ಲಿ ಪರಿಪೂರ್ಣ, ಸರ್ವನಾಮಕ-ಸರ್ವಶಬ್ದವಾಚ್ಯ, ಶಾಶ್ವತ-ನಿತ್ಯ, ಸರ್ವಕಾಮದ-ಸಮಸ್ತ ಇಷ್ಟಪ್ರದ, ಸರ್ವಸಾಕ್ಷಿಗ-ಸಮಸ್ತ ಜನರ ಕರ್ಮಗಳಿಗೆ ಸಾಕ್ಷಿಯಾಗಿ ಇರುವ. "ಸಾಕ್ಷೀ ಚೇತೋ ಕೇವಲೋ ನಿರ್ಗುಣಶ್ಚೇತ್ಯುಕ್ತೇಃ". ಸರ್ವಜಿತ್ - ಸಮಸ್ತರನ್ನೂ ಜಯಿಸಿದವ. ಸರ್ವ-ತತ್ತ್ವಾಧಿಷ್ಠಾನಗಳ ನಾಮ ಉಳ್ಳವ ॥೧೫॥

## ೫. ಶ್ರೀ ಗುರುಹೃದಯಪ್ರಕಾಶಿಕೆ

ಶ್ರೀಹರಿಯು ದೇವೋತ್ತಮನು. ಸರ್ವವ್ಯಾಪ್ತ. ಸರ್ವಗುಣ ಪರಿಪೂರ್ಣ ಸರ್ವಫಲಪ್ರದ. ಸರ್ವತಂತ್ರಸ್ವತಂತ್ರ ಅಂದರೆ, ಸರ್ವತಂತ್ರಗಳೆಂಬ ಕ್ರಿಯೆಗಳಲ್ಲಿ ಸ್ವತಂತ್ರ ಅಂದರೆ, ಪರರ ಅಪೇಕ್ಷೆ ಇಲ್ಲದವನು. ಸರ್ವಾಧಾರ, ಸರ್ವಾತ್ಮ ಎಂದರೆ ಸರ್ವಕ್ಕೂ ಆಶ್ರಯನಾದಂಥವನು ಅಥವಾ ಸರ್ವಕ್ಕೂ ಸ್ವಾಮಿಯಾದಂಥಾವನು ಅಥವಾ ಸರ್ವವನ್ನೂ ಸ್ವೀಕರಿಸುವವನು. ಸರ್ವತೋಮುಖ ಎಂದರೆ ಜ್ಞಾನಾನಂದಾತ್ಮಕ ಅನಂತ ಮುಖಾದ್ಯವಯವವುಳ್ಳವನು. ಸರ್ವನಾಮಕ ಎಂದರೆ ಸರ್ವಶಬ್ದವಾಚ್ಯ. ಸರ್ವಜನ ಸಂಪೂಜ್ಯ ಎಂದರೆ, ರಜಸ್ತಮೋ ಜೀವರು ಇತರ ದೇವತೆಗಳನ್ನು ಸೇವಿಸಿದರೂ ಅಲ್ಲಿ ತಾನೆ ಇದ್ದು ಪೂಜೆ ತೆಗೆದುಕೊಳ್ಳುವನೆಂದರ್ಥ. ಶಾಶ್ವತ ಎಂದರೆ ಸದಾ ಇರುವಂಥಾವನು. ಸರ್ವಕಾಮದ ಎಂದರೆ ಸಮಸ್ತ ಇಷ್ಟಾರ್ಥಗಳನ್ನು ಕೊಡುವಂಥಾವನು. ಸರ್ವಸಾಕ್ಷಿಗ ಎಂದರೆ ನಿರ್ಲೇಪನಾಗಿ ಸರ್ವವನ್ನೂ ನೋಡುತ್ತಿರುವವನು.

## ೧. ಸರ್ವದೇವೋತ್ತಮ -

ಸಮಸ್ತ ದೇವತಾವರ್ಗಗಳಿಂದ ಉತ್ತಮೋತ್ತಮನು ಶ್ರೀಪರಮಾತ್ಮನು ಸರ್ವೋತ್ತಮ ಸಮಾಭ್ಯಧಿಕಶೂನ್ಯನು. ಅವನಿಗೆ ಸಮರ್ಯಾರೂ ಇಲ್ಲವೆಂದ ಮೇಲೆ ಅಧಿಕತ್ವ ಮತ್ತೆಲ್ಲಿಂದ ಬಂದೀತು ?

## ೨. ಸರ್ವಗೆ -

ಸರ್ವತ್ರವ್ಯಾಪ್ತನು, 'ಗ' ಅಕ್ಷರಕ್ಕೆ ಗಮನ, ಪ್ರದೇಶ, ವ್ಯಾಪ್ತಿ ಎಂದರ್ಥ. ಅಣುರೇಣುತೃಣಕಾಷ್ಠಪರಿಪೂರ್ಣನು. ಚೇತನರಲ್ಲಿ ಬಿಂಬರೂಪನಾಗಿಯೂ, ಜಡವಸ್ತುಗಳಲ್ಲಿ ಕಣಕಣಗಳಲ್ಲಿ ಸೂಕ್ಷ್ಮತಮನಾಗಿ ವ್ಯಾಪ್ತರೂಪಗಳಿಂದ ತುಂಬಿ ಹರಡಿದ್ದಾನೆ. ಶ್ರೀಪರಮಾತ್ಮನ ಅಂತಸ್ಥಿತ್ವ ಇಲ್ಲದಿದ್ದರೆ, ಚೇತನರಾಗಲೀ, ಜಡಗಳಾಗಲೀ ಅಸ್ತಿತ್ವವನ್ನು ಹೊಂದುವುದಿಲ್ಲ. ಸಕಲ ಚರಾತ್ಮಕವಾದ ಜಗತ್ತಿನ ಸ್ಥಿತ್ವಕ್ಕೆ ಶ್ರೀಪರಮಾತ್ಮ ವ್ಯಾಪ್ತಿಯೇ ಕಾರಣ.

## ೩. ಸರ್ವಗುಣ ಸಂಪೂರ್ಣ -

ಜ್ಞಾನ, ಆನಂದ, ಶಕ್ತಿ, ಸೌಂದರ್ಯ, ವೀರ್ಯ, ಈಶತ್ವ, ಸರ್ವತಂತ್ರ ಸ್ವಾತಂತ್ರ್ಯ........ಇತ್ಯಾದಿ ಸಕಲ ಸದ್ಗುಣಗಳಲ್ಲಿಯೂ ಪರಿಪೂರ್ಣನು. ಅನಂತಕಲ್ಯಾಣಗುಣಗಣಭರಿತನು. ನಿರ್ದೋಷವಸ್ತು. ಪ್ರತಿಗುಣವೂ ಪರಿಪೂರ್ಣ. ನ್ಯೂನಾತಿರೇಕಗಳೇ ಇಲ್ಲ. ಅನಾದ್ಯನಂತಕಾಲದಿಂದ ಗುಣಪೂರ್ಣತ್ವವೇ ಶ್ರೀಹರಿಯ ವೈಶಿಷ್ಟ್ಯ.

## ೪. ಸರ್ವದ -

ಸರ್ವಜೀವರಿಗೆ ಅವರವರಿಗೆ ಯೋಗ್ಯತಾನುಸಾರ, ಯಾವ ವಿಧವಾದ ವೈಷಮ್ಯವೂ ಇಲ್ಲದೆ ಅಭೀಷ್ಟಗಳನ್ನು ಕೊಡುವ ಉದಾರಮೂರ್ತಿ. ಇದರಿಂದ ಸತ್ಯಸಂಕಲ್ಪನು.

**೫. ಸರ್ವತಂತ್ರ ಸ್ವತಂತ್ರ -**

ತಂತ್ರ-ಜೀವಜಡಗಳ ಸಹಜವಾದ ಸ್ವಭಾವವನ್ನು (ಯೋಗ್ಯತಾ ಸಾಮರ್ಥ್ಯ) ಅಭಿವ್ಯಕ್ತಮಾಡುವ ತಂತ್ರವು. ಜೀವರದೇ ಆದ ಜ್ಞಾನಶಕ್ತಿ, ಇಚ್ಛಾಶಕ್ತಿ, ಕ್ರಿಯಾಶಕ್ತಿಗಳಲ್ಲಿ ಪ್ರವೇಶಿಸಿ ಅವುಗಳನ್ನು ಕ್ರಿಯಾತ್ಮಕವಾಗಿ ಮಾಡುವ ಕ್ರಿಯಾವಿಶೇಷಕ್ಕೆ **ತಂತ್ರ** ಎಂದು ಹೆಸರು. ಇತರರ ಯಾವ ಸಹಾಯವೂ ಇಲ್ಲದೇ ತಾನೇ ತಾನಾಗಿ ತನ್ನಲ್ಲಿರುವ ಶಕ್ತ್ಯಾತ್ಮಕವೃತ್ತಿಗಳನ್ನು ಕ್ರಿಯಾತ್ಮಕವಾಗಿ ಮಾಡಬಲ್ಲ ಸಾಮರ್ಥ್ಯರೂಪವಾದ ಧರ್ಮಕ್ಕೆ ಸ್ವಾತಂತ್ರ್ಯ ವೆಂದು ಹೆಸರು. ಈ ಧರ್ಮವು ಶ್ರೀಪರಮಾತ್ಮನ ಸ್ವರೂಪಗತ ಧರ್ಮವು. ಸಕಲ ಜೀವರ ಕರ್ತೃತ್ವಶಕ್ತಿ ಭಗವದಧೀನವಾಗಿದೆ. ಪರಮಾತ್ಮನ ಸ್ವಾತಂತ್ರ್ಯವು ಅನ್ಯಾಧೀನವಲ್ಲ. ಸಂಪೂರ್ಣವಾಗಿ ಸ್ವಾಧೀನವಾದದ್ದು. ಇದರಿಂದ ಸರ್ವತಂತ್ರ ಸ್ವತಂತ್ರನು.

**೬. ಸರ್ವಾಧಾರ -**

ಸಕಲ ಚರಾಚರಾತ್ಮಕವಾದ ಸಮಗ್ರ ಜಗತ್ತಿಗೇ ಆಧಾರಭೂತನು. ಆಶ್ರಯದಾತನು. ಸಕಲರಿಗೂ ಅವನ ಆಶ್ರಯ. ಅವನಿಗೆ ಇನ್ಯಾರ ಆಶ್ರಯವು ಇಲ್ಲ. ತನಗೆ ತಾನೇ ಆಶ್ರಯನು. ಸಕಲವೂ ಭಗವದಧೀನವಾಗಿದೆ.

**೭. ಸರ್ವಾತ್ಮ -**

ಆತ್ಮ ಶಬ್ದವು ಅನೇಕಾರ್ಥವಾಚೀ. ಜೀವನೂ ಚೇತನನಾದ್ದರಿಂದ ಆತ್ಮಶಬ್ದವಾಚ್ಯನು. ಸಕಲಜೀವರಲ್ಲಿ ಬಿಂಬರೂಪದಿಂದ ಅಂತರ್ಯಾಮಿಯಾಗಿ ಸಕಲಕ್ರಿಯೆಗಳನ್ನೂ ಜೀವರ ಪರವಾಗಿ ತಾನೇ ಮಾಡಿ, ಶ್ರೀಪ್ರಾಣದೇವರು, ತತ್ತ್ವಾಭಿಮಾನಿ ದೇವತೆಗಳು, ತತ್ತ್ವಾಭಿಮಾನಿದೈತ್ಯರ ದ್ವಾರಾ ಮಾಡಿ ಸುತ್ತಾ ಇರುವ ಸರ್ವಾಂತಸ್ಥಿತ ಭಗವದ್ರೂಪಕ್ಕೆ ಆತ್ಮ ಎಂತ ನಾಮ.

**೮. ಸರ್ವತೋಮುಖ -**

ಶ್ರೀಹರಿಯು ಸಹಸ್ರಪಾದ, ಕರ, ಅವಯವ, ಅಕ್ಷಿ ಮುಖಿವುಳ್ಳವನು. ಸಹಸ್ರ ಶಬ್ದಕ್ಕೆ ಅನಂತಾನಂತ ಎಂದು ಅರ್ಥ. (ಸಹಸ್ರಶೀರ್ಷಾ, ಸಹಸ್ರಾಕ್ಷಃ

ಸಹಸ್ರಪಾತ್-ಶ್ರುತಿವಚನ). ಸರ್ವತ್ರ ಇರುವವನು. ಅವನಿಲ್ಲದ ಸ್ಥಳವಿಲ್ಲ. ಅನಂತಾನಂತ ಮಹಿಮಾ ಸಂಪನ್ನನು.

**೯. ಸರ್ವನಾಮಕ -**

ಸರ್ವಶಬ್ದವರ್ಣವಾಚ್ಯನು. ಸಕಲಶಬ್ದಗಳೂ, ವರ್ಣಗಳೂ, ಹೆಸರುಗಳೂ ಅವನಲ್ಲಿಯೇ ತಾತ್ಪರ್ಯವು. ಸರ್ವಜೀವರ ಜಡಗಳ ನಾಮವಾಚ್ಯನಾಗಿದ್ದಾನೆ.

**೧೦. ಸರ್ವಜನಸಂಪೂಜ್ಯ -**

ಸಮಸ್ತ ಭಕ್ತಜನರಿಂದ ಚೆನ್ನಾಗಿ ಪೂಜಿತನಾದವನು. ಸಕಲಸಜ್ಜನರೂ ಅವನ ಪಾದಾರವಿಂದಗಳನ್ನೇ ಆಶ್ರಯಿಸಿ ಪೂಜಿಸುತ್ತಿರುವರು.

**೧೧. ಶಾಶ್ವತ -**

ಅನಾದ್ಯನಂತಕಾಲದಿಂದಲೂ ಜನನ-ಮರಣಾದಿಗಳಿಲ್ಲ. ಶಾಶ್ವತ ಸ್ವರೂಪನು. ಶಶ್ವದೇಕಪ್ರಕಾರವಾದ ಸ್ವರೂಪವುಳ್ಳವನು. ಚತುರ್ವಿಧನಾಶರಹಿತನು. ಈ ದೃಷ್ಟಿಯಿಂದ ಅನಾದಿನಿತ್ಯರಾದ ಜೀವರಿಂದ ಅತ್ಯಂತ ವಿಲಕ್ಷಣನು.

**೧೨. ಸರ್ವಕಾಮದ -**

ತನ್ನನ್ನೇ ನಂಬಿ ಸ್ತುತಿಸುವರ ಭಕ್ತರ ಸರ್ವವಿಧವಾದ ಮನಸ್ಸಿನ ಅಭಿಲಾಷೆಗಳನ್ನೂ ಪೂರೈಸುವ ಮಹಾಪ್ರಭುವು.

**೧೩. ಸರ್ವಸಾಕ್ಷಿಗ -**

ಜೀವರ ಸರ್ವಕರ್ಮಗಳಿಗೂ ಸಾಕ್ಷೀಭೂತನು. ಅವನಿಲ್ಲದೆ ಯಾವ ಕಾರ್ಯಗಳ ಅಭಿವ್ಯಕ್ತಿಯೂ ಆಗಲಾರದು.

**೧೪. ಸರ್ವಜಿತ್ -**

ಸರ್ವವನ್ನೂ ಜಯಿಸಿದವನು. ಅಜೇಯನು. ಸರ್ವಾಧಿಕಾರಿಯಾದ ಸಾರ್ವಭೌಮನು. ಇದರಿಂದ, **ಸರ್ವ** ಶಬ್ದವಾಚ್ಯನು ॥೧೫॥

## ಪದ್ಯ - ೧೬

**ಮೂಲ -**

**ತಾರತಮ್ಯಾರೋಹಣವ ಬರೆ ।**
**ದಾರು ಪಠಿಸುವರವರ ಲಕ್ಷ್ಮೀ ।**
**ನಾರಸಿಂಹ ಸಮಸ್ತ ದೇವಗಣಾಂತರಾತ್ಮಕನು ॥**
**ಪೂರೈಸುವ ಮನೋರಥಂಗಳ ।**
**ಕಾರುಣಿಕ ಕೈವಲ್ಯದಾಯಕ ।**
**ದೂರಗೈವ ಸಮಸ್ತ ದುರಿತವ ವಿಗತಭಯಶೋಕ ॥೧೬॥**

**ಅವತರಣಿಕೆ –**

ಪ್ರಸಕ್ತ ತಾರತಮ್ಯ ಆರೋಹಣಸಂಧಿಗತ ವಿಷಯಗಳನ್ನು ಯಾರು ಬರೆಯುವರೋ ಯಾರು ಪಠಿಸುವರೋ ಅವರಿಗೆ ಶ್ರೀಶನ ಕೃಪೆಯಿಂದ ಉಂಟಾಗುವ ಫಲವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ -**

**ತಾರತಮ್ಯ** - ತಾರತಮ್ಯೋಕ್ತವಾಗಿ, **ಆರೋಹಣವ** - ಆರೋಹಣ ಕ್ರಮದಿಂದ ಹೇಳಿದ (ಕೆಳಗಿನ ಕಕ್ಷದಿಂದ ಆರಂಭಿಸಿ, ಅತ್ಯುನ್ನತ ಕಕ್ಷ ಪರ್ಯಂತ) ಪ್ರಸಕ್ತ ಸಂಧಿಗತ ವಿಷಯವನ್ನು, **ಆರು ಬರೆದು** - ಯಾರು ಲೇಖನರೂಪ ದಲ್ಲಿ ಬರೆದು, **ಪಠಿಸುವರವರ** - ಆದರದಿಂದ ಓದುವರೋ (ಅಧ್ಯಯನ ಮಾಡುವರೋ) ಅಂಥವರನ್ನು, **ಲಕ್ಷ್ಮೀನಾರಸಿಂಹ** - ಗ್ರಂಥಪ್ರತಿಪಾದ್ಯ ದೇವತೆಯೂ, ಶ್ರೀದಾಸರಾಯರ ಕುಲದೈವನೂ, ಇಷ್ಟದೈವನೂ ಆದ ಶ್ರೀಲಕ್ಷ್ಮೀನರಸಿಂಹನು, **ಸಮಸ್ತದೇವಗಣಾಂತರಾತ್ಮಕನು** - ಸಕಲದೇವ ಗತರಾದ ತತ್ತ್ವದೇವತಾವರ್ಗದ ಅಂತರ್ಗತನಾಗಿ, ತದಾತ್ಮಕನಾಗಿದ್ದು, **ಮನೋರಥಂಗಳ** - ಮನಸ್ಸಿನ ಅಭಿಲಾಷೆಗಳನ್ನು, **ಪೂರೈಸುವ** - ಪೂರ್ಣ ಮಾಡುವವನು. **ಕಾರುಣಿಕ** - ದಯಾಸಮುದ್ರನಾದ, **ಕೈವಲ್ಯದಾಯಕ** -

ಮೋಕ್ಷಪ್ರದನು. **ವಿಗತಭಯಶೋಕ** - ನಿರ್ಭೀತನಾದ ಶ್ರೀಲಕ್ಷ್ಮೀನಾರಸಿಂಹನು, **ಸಮಸ್ತದುರಿತವ ದೂರಗೈವ** - ಭಕ್ತರ ಸಕಲ ಪಾಪಗಳನ್ನೂ ಪರಿಹಾರ ಮಾಡುವನು ॥೧೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರವ್ಯಾಖ್ಯಾನ

ಈ ತಾರತಮ್ಯವ ಪಠಿಸೋಣದರಿಂದ ಫಲವನ್ನ ಹೇಳತ್ತಾರೆ.

ವ್ಯುತ್ಕ್ರಮವಾಗಿ ಅವರೋಹಣಕ್ರಮದಿಂದ ಹೇಳಿದ ಹಾಗೂ ಆರೋಹಣ ಕ್ರಮದಿಂದ ಹೇಳಿದ ತಾರತಮ್ಯಾತ್ಮಕ ಈ ಸಂಧಿಯನ್ನ ದಾರಾದರೆ ಲೇಖನ ಮಾಡಿ ಆದರದಿಂದ ಪಠನ ಮಾಡುವರೋ, ಅಂಥಾವರನ್ನ ಲಕ್ಷ್ಮೀಸಮೇತನಾದ ಶ್ರೀನೃಸಿಂಹದೇವರು ಸಮಸ್ತರಾದ ದೇಹಗತ ತತ್ತ್ವದೇವತಾಗಣದ ಅಂತರ್ಗತದಲ್ಲಿ ತದಾತ್ಮಕನಾಗಿದ್ದು, ಇಂಥಾ ನೃಸಿಂಹದೇವರು ತತ್ತ್ವದೇವತೆಗಳ ದ್ವಾರಾ ಅಧಿಕಾರಿಗಳ ಇಂದ್ರಿಯಜಯರೂಪವಾದ ಮನೋರಥಂಗಳ ಪೂರ್ಣಮಾಡುವನು. ಸಮಸ್ತಕ್ಕೂ ನಿಮಿತ್ತಕಾರಣನಾದ ಶ್ರೀಪರಮಾತ್ಮ ಸಮಸ್ತ ಪಾಪಗಳ ನಾಶಮಾಡುವ. ಇಂಥಾ ತನ್ನ ಭಕ್ತರನ್ನು ಹೋಗಲ್ಪಟ್ಟ ಭಯಶೋಕರನ್ನಾಗಿ ಮಾಡಿ ಅವರಿಗೆ ತನ್ನ ಸಂದರ್ಶನ ಕೊಟ್ಟು ಮೋಕ್ಷಸ್ಥಾನವನ್ನು ಐದಿಸಿ ಸುಖಪಡಸುತಾನಂತ ತಾತ್ಪರ್ಯ ॥೧೬॥

### ೨. ಭಾವಪ್ರಕಾಶಿಕೆ–

ಈ ಆರೋಹಣ ತಾರತಮ್ಯವನ್ನು ಯಾರು ಬರೆಯುವರೋ ಯಾರು ಪಠಿಸುವರೋ ಅವರ ಮನೋರಥಗಳನ್ನು ಸಮಸ್ತ ದೇವಗಣಾಂತರಾತ್ಮಕನೂ ಕರುಣಾಸಮುದ್ರನೂ, ಮುಕ್ತಿದಾಯಕನೂ, ಭಯಶೋಕರಹಿತನೂ ಆದ ಶ್ರೀಲಕ್ಷ್ಮೀನರಸಿಂಹನು ಪೂರೈಸುವುದಲ್ಲದೆ, ಅವರಿಗೆ ಸಂಭವಿಸುವ ಸಮಸ್ತ ಪಾಪಗಳನ್ನೂ, ಸಮಸ್ತ ಕಷ್ಟಗಳನ್ನೂ ಪರಿಹರಿಸುವನು. ॥೧೬॥

### ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ –

**'ತಾರತಮ್ಯ' ಇತಿ** ॥೧೬॥

**ಕನ್ನಡಾರ್ಥ –**

ಈ ಆರೋಹಣ ತಾರತಮ್ಯಸಂಧಿಯನ್ನು ಬರೆಯುವವರಿಗೆ ಪಠಿಸುವವರಿಗೆ ಶ್ರೀಹರಿಯು ಕೊಡುವ ಫಲಗಳನ್ನು ಹೇಳುತ್ತಾರೆ, ಮುಂದಿನ ಪದ್ಯಗಳಿಂದ ॥೧೬॥

**೨. ಭಾವದರ್ಪಣ**

ತಾರತಮ್ಯ. ಸಮಸ್ತದೇವಗಣಾಂತರಾತ್ಮಕ - ಅಂತರ್ಯಾಮಿ. ಕೈವಲ್ಯದಾಯಕ - ಮೋಕ್ಷದಾಯಕ. ವಿಗತಭಯಶೋಕ - ಹೋಗಲ್ಪಟ್ಟ ಭಯಶೋಕ ಉಳ್ಳವ. ॥೧೬॥

**೩. ಶ್ರೀಗುರುಹೃದಯಪ್ರಕಾಶಿಕೆ**

ಈ ಮುಕ್ತಾಮುಕ್ತ ತಾರತಮ್ಯದ ಆರೋಹಣವೆಂಬ ಕ್ರಮವಾದ ಉತ್ತಮತ್ವವನ್ನು ಯಾರು ಬರೆದು ಪಠಿಸುವರೋ ಆ ಸಜ್ಜನರನ್ನು ಸಮಸ್ತ ದೇವಗಣಾಂತರಾತ್ಮಕ ಕಾರುಣ್ಯ ಮೂರ್ತಿ ಮೋದಪ್ರದ ಭಯಶೋಕಾದಿ ದೋಷದೂರ ಶ್ರೀನೃಸಿಂಹನು ಸಮಸ್ತ ದುರಿತರಹಿತರನ್ನು ಮಾಡಿ ಮನೋರಥಗಳನ್ನು ಪೂರ್ತಿ ಮಾಡುವನು. ೧೬॥

## ಸರ್ವವ್ಯಾಖ್ಯಾನಸಾರಸಂಗ್ರಹ

**೧. ತಾರತಮ್ಯಾರೋಹಣ**

ಭಜನಾಪದ್ಧತಿಯಲ್ಲಿ ಎರಡು ಪ್ರಕಾರಗಳಿವೆ. 1. ಆರೋಹಣಕ್ರಮ ಮತ್ತು 2. ಅವರೋಹಣಕ್ರಮ.

1. ಗುರುಗಳಿಂದ ಆರಂಭಿಸಿ ಕ್ರಮವಾಗಿ ದಾಸಕಕ್ಷ, ಯತಿಕಕ್ಷ, ದೇವತಾ ತಾರತಮ್ಯ, ಕೊನೆಯಲ್ಲಿ ಶ್ರೀಹರಿಯ ಪಾದಪದ್ಮಗಳನ್ನು ಕೊಂಡಾಡುವ ಕ್ರಮವು. ಆರೋಹಣಕ್ರಮ (ಕೆಳಗಿನಿಂದ ಕ್ರಮವಾಗಿ ಮೇಲಿನ ಕಕ್ಷೆಗೆ ಏರುವುದು).

2. ಶ್ರೀಹರಿಯಿಂದ ಆರಂಭಿಸಿ, ಕ್ರಮವಾಗಿ ತಾರತಮ್ಯಾನುಸಾರ ಅವರಕಕ್ಷಾಪನ್ನರಾದ (ಮಾನುಷೋತ್ತಮರಪರ್ಯಂತ) ದೇವತಾವರ್ಗವನ್ನು ಭಜಿಸುವಕ್ರಮ.

ಪ್ರಸಕ್ತ ಸಂಧಿಯಲ್ಲಿ ಅವರರಿಂದ ಆರಂಭಿಸಿ, ಕ್ರಮವಾಗಿ ಶ್ರೀಹರಿಯ ಪರ್ಯಂತ ಆರೋಹಣತಾರತಮ್ಯ ವಿಧಾನವನ್ನು ತಿಳಿಸಿದ್ದಾರೆ.

## ೩. ಬರೆದಾರು

ಈ ತಾರತಮ್ಯಾರೋಹಣಸಂಧಿಗತ ವಿಷಯಗಳನ್ನು ಯಾರು ಅತಿಶ್ರದ್ಧೆ ಯಿಂದ ಬರೆಯುತ್ತಾರೋ - ಪ್ರತಿಪದದ ಅರ್ಥವನ್ನು ಮಾಡಿಕೊಂಡು ಬರೆಯಬೇಕು, ಯಾಂತ್ರಿಕವಾಗಿ ಲೇಖಿಸುವುದಲ್ಲ.

## ೪. ಪಠಿಸುವವರ

ಬರೆದು, ಸಂಧಿಗತ ತತ್ತ್ವಾರ್ಥಗಳಿಂದ ಘಟಕವಾಗಿರುವ ವಿಷಯ ಗಳನ್ನು ಗುರುಗಳದ್ವಾರಾ ತಿಳಿದು ಅವನ್ನು ನಿತ್ಯವೂ ಪಾಠಮಾಡುವವರೂ ಮತ್ತು ಶಿಷ್ಯರಿಗೆ ಪ್ರವಚನರೂಪದಲ್ಲಿ ಪಾಠಹೇಳುವವರೂ ಅದಂಥ ಭಗವದ್ಭಕ್ತರನ್ನು.

## ೫. ಲಕ್ಷ್ಮೀನಾರಸಿಂಹನು

ಗ್ರಂಥಪ್ರತಿಪಾದ್ಯದೇವತೆಯಾದ ಶ್ರೀಲಕ್ಷ್ಮೀನರಸಿಂಹದೇವರು. 'ನಾರ ಸಿಂಹ' ಎಂಬ ಶಬ್ದಕ್ಕೆ, ಸರ್ವೋತ್ತಮನಾದ ಶ್ರೀಮನ್ನಾರಾಯಣನೆಂದರ್ಥ. ನಾರ - ನ+ಅರ ನಿರ್ದೋಷ. ಸಿಂಹ-ಮೃಗರಾಜನಾದ ಸಿಂಹ (ಶ್ರೇಷ್ಠ ವಾಚೀ). ಅಂದರೆ ಅತ್ಯಂತ ಶ್ರೇಷ್ಠನು. ಅಂದರೆ ನಿರ್ದೋಷನೂ, ಅನಂತ ಕಲ್ಯಾಣಗುಣಗಣಭರಿತನೂ, ಸರ್ವೋತ್ತಮನೂ ಆದ ಶ್ರೀಪರಮಾತ್ಮ ನೆಂದರ್ಥ.

## ೬. ಸಮಸ್ತದೇವಗಣಾಂತರಾತ್ಮಕನು -

ರಮಾದೇವಿಯಿಂದ ಆರಂಭಿಸಿ, ತೃಣಾಂತ ಸಕಲ ದೇವತಾವರ್ಗದವ

ರಲ್ಲಿ ಅಂತರ್ಯಾಮಿರೂಪದಿಂದ ಅಂತಸ್ಥಿತನಾಗಿದ್ದು, ಅವರ ದ್ವಾರಾ ಸಕಲ ವ್ಯಾಪಾರಗಳನ್ನೂ ಮಾಡಿ ಮಾಡಿಸುವ ಸರ್ವಕರ್ತನು.

**೬. ಮನೋರಥಂಗಳ ಪೂರೈಸುವವನು -**

ಸಕಲದುರಿತಪರಿಹಾರಕನಾದ ಶ್ರೀಲಕ್ಷ್ಮೀನರಸಿಂಹನಾಮಕ ಬಿಂಬ ಮೂರ್ತಿಯು ಸರ್ವದೇವತಾಂತರ್ಗತನಾಗಿದ್ದು, ಶ್ರೀವಾಯುದೇವರ ದ್ವಾರಾ, ಸಕಲ ತತ್ತ್ವದೇವತೆಗಳ ದ್ವಾರಾ, ತನ್ನ ಭಕ್ತರ ಸಕಲ ಮನೋಭಿಲಾಷೆಗಳನ್ನು ಸಲ್ಲಿಸಿ, ಪೂರೈಸುವನು. ಸಕಲ ಮನೋರಥಪ್ರದನು.

**೭. ಕಾರುಣಿಕ -**

ಭಕ್ತರ ವಿಷಯದಲ್ಲಿ ಪರಮದಯಾಳು. ಪ್ರಾಣೇಶನಾಮಕ ಶ್ರೀಹರಿಯು ಭಕ್ತವತ್ಸಲನು. ಸಕಲಕಾರ್ಯಗಳ ಅಭಿವ್ಯಕ್ತಿಗೆ ಕಾರಣೀಭೂತನೆಂದು ಶ್ರೀಸಂಕರ್ಷಣ ಒಡೆಯರು ತಮ್ಮ ವ್ಯಾಖ್ಯಾನದಲ್ಲಿ ನಿರೂಪಿಸಿರುತ್ತಾರೆ.

**೮. ಕೈವಲ್ಯದಾಯಕ -**

ಕೈವಲ್ಯ ಎಂದರೆ ಮುಕ್ತಿ ಎಂದರ್ಥ. (ಕೈವಲ್ಯಸ್ಯ ಭಾವ-ಕೈವಲ್ಯ). ಮುಕ್ತಿಯೋಗ್ಯಚೇತನರು ಶ್ರೀಹರಿಯ ಪರಮಪ್ರಸಾದದಿಂದ, ಸ್ವಸ್ವರೂಪಗತ ಆನಂದಾವಿರ್ಭಾವರೂಪವಾದ ನಿತ್ಯಸುಖವನ್ನು ಹೊಂದುವುದೇ ಮುಕ್ತಿಯು. ಅಂಥಹ ಮುಕ್ತಿಯ ಆನಂದವನ್ನು ಕೊಡುವವನು ಶ್ರೀಲಕ್ಷ್ಮೀನಾರಸಿಂಹನು.

**೯. ವಿಗತಭಯಶೋಕ -**

ಶ್ರೀಹರಿಗೆ ಯಾವವಿಧವಾದ ಶೋಕವಾಗಲೀ ಭಯವಾಗಲೀ ಎಂದೆಂದಿಗೂ ಇಲ್ಲವೇ ಇಲ್ಲ. ನಿತ್ಯಾನಂದಮಯನಾದ್ದರಿಂದ ಶೋಕರಹಿತನು.

**೧೦. ಸಮಸ್ತ ದುರಿತ ದೂರಗೈವ -**

ಭಕ್ತರಿಗೆ ಗುಣತ್ರಯಜನ್ಯವಾದ ಕರ್ಮಗಳನುಸಾರವಾಗಿ [illegible] [illegible]ಗಡಿಗೆ ಪರಂಪರಾರೂಪದಲ್ಲಿ ಬರುತ್ತಿರುವ ಸಕಲ ಪಾಪರಾಶಿಗಳನ್ನು

ಪರಿಹರಿಸಿ, ಶುದ್ಧಾತ್ಮರನ್ನಾಗಿ ಮಾಡಿ ಅಂತ್ಯದಲ್ಲಿ ಮೋಕ್ಷವನ್ನು ಕರುಣಿಸುವ ಕರುಣಾಸಾಗರನು ॥೧೬॥

## ಪದ್ಯ - ೧೭

**ಮೂಲ -**

**ಪ್ರಣತಕಾಮದನಂಘ್ರಿ ಸಂದರು ।**
**ಶನದಪೇಕ್ಷೆಗಳುಳ್ಳವಗೆ ನಿ ।**
**ಚ್ಚಣಿಕೆಯೆನಿಸುವುದು ಜಡ ಮೊದಲು ಬ್ರಹ್ಮಾಂತ ತರತಮವು॥**
**ಮನವಚನದಿಂ ಸ್ಮರಿಸುವರ ಭವ ।**
**ವನಧಿ ಶೋಷಿಸಿ ಪೋಗುವುದು ತಾ ।**
**ರಣವೆನಿಸುವುದು ಜ್ಞಾನ ಭಕ್ತಿ ವಿರಕ್ತಿ ಸಂಪದಕೆ ॥೧೭॥**

**ಅನವರತನಿಕೆ -**

ತಾರತಮ್ಯಾರೋಹಣಸಂಧಿಗತ ವಿಷಯದ ಫಲಸ್ತುತಿಯನ್ನು ಇಲ್ಲಿ ವಿವರಿಸುತ್ತಾರೆ.

**ಪ್ರತಿಪದಾರ್ಥ -**

**ಪ್ರಣತಕಾಮದನ** - ಮೊರೆಹೊಕ್ಕ ಜನರ ಇಷ್ಟಾರ್ಥಗಳನ್ನು ಸಲ್ಲಿಸುವ ಶ್ರೀಪರಮಾತ್ಮನ, **ಅಂಘ್ರಿ** - ಪಾದಗಳ, **ಸಂದರುಶನದ** - ಚೆನ್ನಾಗಿ ನೋಡಬೇಕೆಂಬ, **ಅಪೇಕ್ಷೆಗಳುಳ್ಳವಗೆ** - ಇಚ್ಛೆಯುಳ್ಳ ಅಧಿಕಾರಿಗೆ, **ಜಡ ಮೊದಲು** - ಶುದ್ಧ ಜಡ ಆರಂಭಿಸಿಕೊಂಡು, **ಬ್ರಹ್ಮಾಂತ** - ಗುಣಪೂರ್ಣನಾದ, ಬ್ರಹ್ಮಶಬ್ದ ವಾಚ್ಯನಾದ ಶ್ರೀಪರಮಾತ್ಮಪರ್ಯಂತ, **ತರತಮವು** - ತಾರತಮ್ಯಜ್ಞಾನವು, ಇದರಂತೆ ಧ್ಯಾನೋಪಾಸನೆಯು. **ನಿಚ್ಚಣಿಕೆಯೆನಿಸುವುದು** - ಮೇಲೆ ಮೇಲೆ ಏರಿಹೋಗಲು ಅನುಕೂಲ ಸಾಧನವಾಗಿರುವ ಏಣಿ ಎನಿಸುವುದು. **ಮನವಚನದಿಂ** - ಮನಸಾ ಮತ್ತು ವಾಚಾ, **ಸ್ಮರಿಸುವರ** - ಜ್ಞಾನಾನುಸಂಧಾನಪೂರ್ವಕ ಈ ತಾರತಮ್ಯ ವಿಷಯವನ್ನು ಧ್ಯಾನಿಸುವವರ,

**ಭವವನಧಿ** - ಸಮುದ್ರದಂತಿರುವ ಸಂಸಾರವು. **ಶೋಷಿಸಿ ಪೋಗುವುದು** - ಬತ್ತಿ ಹೋಗುವುದು. **ಜ್ಞಾನ** - ಸಮೀಚೀನವಾದ ಜ್ಞಾನ. **ಭಕ್ತಿ** - ಶ್ರೀಹರಿಯಲ್ಲಿ ದೃಢವಾದ ನಿರ್ಮಲಭಕ್ತಿ. **ವಿರಕ್ತಿ** - ವಿಷಯಾದಿಗಳಲ್ಲಿ ವೈರಾಗ್ಯ. **ಸಂಪದಕೆ** - ಈ ದೈವೀಸಂಪತ್ತುಗಳಿಗೆ (ಮಹದೈಶ್ವರ್ಯ). **ಕಾರಣವೆನಿಸುವುದು** - ಮುಖ್ಯಕಾರಣಗಳೆಂದು ಕರೆಯಲ್ಪಡುವುವು ॥೧೭॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಇನ್ನೂ ಫಲಸ್ತುತಿಯನ್ನೇ ಹೇಳತಾರೆ.

ಅಷ್ಟಾಂಗಪೂರ್ವಕ ನಮಸ್ಕಾರ ಮಾಡುವ ಭಕ್ತರಿಗೆ ಇಷ್ಟಗಳ ಕೊಡುವಂಥ ಶ್ರೀಪರಮಾತ್ಮನ ಪಾದಗಳ ಚಂದಾಗಿ ನೋಡಬೇಕು ಎಂತ ಇಚ್ಛಾ ಉಳ್ಳ ಅಧಿಕಾರಿಗಳಿಗೆ, ಮ್ಯಾಲೆ ಮ್ಯಾಲೆ ವರಿಹೋಗತಕ್ಕ ನಿಚ್ಚಣಿಕೆಯಂತ ಕರಸೋದಾಗತದೆ. ದಾವದು ಎಂದರೆ ಶುದ್ಧ ಜಡ ಆರಂಭಮಾಡಿ ಗುಣಪೂರ್ಣನಾದ ಬ್ರಹ್ಮಶಬ್ದವಾಚ್ಯನಾದ ಶ್ರೀಪರಮಾತ್ಮನವರಿಗೂ ಹೇಳಿದಂಥ ತಾರತಮ್ಯ ಎಂತ ತಾತ್ಪರ್ಯ. ಈ ತಾರತಮ್ಯ ವಿಷಯವನ್ನ ಮನಸಾ ವಾಚಾ ಸ್ಮರಣೆ ಮಾಡುವಂಥಾ ಭಕ್ತರ ಸಂಸಾರವೆಂಬ ಸಮುದ್ರಗತ ದುಃಖವೆಂಬ ಜಲ ಶೋಷಿಸಿ ಹೋಗೋದಾಗತದೆ. ಇನ್ನೂ ಜ್ಞಾನ ಭಕ್ತಿ ವೈರಾಗ್ಯವೆಂಬ ಐಶ್ವರ್ಯಕ್ಕೆ ಕಾರಣವಂತ ಕರಸೋದಾಗತದೆ ಎಂತ ತಾತ್ಪರ್ಯ ॥೧೭॥

### ೨. ಭಾವಪ್ರಕಾಶಿಕೆ

ನಮಸ್ಕರಿಸುವವರ ಮನೋಭೀಷ್ಟವನ್ನು ಪೂರೈಸುವ ಶ್ರೀಹರಿಯ ಸಂದರ್ಶನದ ಅಪೇಕ್ಷೆಯುಳ್ಳವರಿಗೆ, ಜಡಮೊದಲು ಬ್ರಹ್ಮದೇವರವರೆಗೂ ಹೇಳಿದ ತಾರತಮ್ಯಜ್ಞಾನವು ಮನಸ್ಸಿನಿಂದಲೂ, . ವಾಕ್ಯದಿಂದಲೂ ಸ್ಮರಿಸುವರಿಗೆ ಏಣಿಯಂತಿಪ್ಪುದು. ಅಂಥವರ ಸಂಸಾರಸಮುದ್ರವು ಶೋಷಿಸಿ ಹೋಗುವುದು. ಜ್ಞಾನ, ಭಕ್ತಿ, ವಿರಕ್ತಿಗೆ ಕಾರಣವೆನಿಸುವುದು. ॥೧೭॥

### ೩. ಶ್ರೀವ್ಯಾಸದಾಸಸಿದ್ಧಾಂತಕೌಮುದಿ -

ಪ್ರಣತ ಇತಿ ॥

**ಕನ್ನಡಾರ್ಥ**

ಪರಮಾತ್ಮನ ಸಾಕ್ಷಾತ್ಕಾರ, ವೈರಾಗ್ಯ, ಭಕ್ತಿಗಳಿಗೆ ಕಾರಣವೆಂದು ಹೇಳುತ್ತಾರೆ 'ಪ್ರಣತ' ಎಂಬ ಪದ್ಯದಿಂದ ॥೧೭॥

### ೪. ಭಾವದರ್ಪಣ -

ಪ್ರಣತಕಾಮದ - ಭಕ್ತಾಭೀಷ್ಟದಾತಾ. ಅಂಘ್ರಿ - ಪಾದ. ನಿಶ್ರೇಣಿಕೆ - ಏರಲಿಕ್ಕೆ ಅನುಕೂಲವಾದ ಬಿದರಿನ ಮೆಟ್ಟಲು ಎಂಬರ್ಥ.

### ೫. ಶ್ರೀಗುರುಹೃದಯಪ್ರಕಾಶಿಕೆ -

ಪ್ರಣತರಿಗೆ ಇಷ್ಟಾರ್ಥವನ್ನು ಕೊಡುವ ದೇವರ ಪಾದಸಂದರ್ಶನದ ಅಪೇಕ್ಷೆಯಿರುವ ಸಜ್ಜನಕ್ಕೆ, ಜಡ ಮೊದಲು ಬ್ರಹ್ಮಾಂತ ತಾರತಮ್ಯವು ನಿಶ್ರೇಣಿಕೆ ಎಂದರೆ ಸೋಪಾನದಂತೆ ಪ್ರಾಪ್ತಿಸಾಧನವು. ಮನಃಪೂರ್ವಕವಾಗಿ ವಾಕ್ಯದಿಂದ ಸ್ಮರಿಸುವವರಿಗೆ ಜನನಾದಿ ಸಂಸೃತಿ ಎಂಬ ಸಮುದ್ರವು ಹಿಂಗಿ ಮುಕ್ತಿದೊರಕುವುದು. ಜ್ಞಾನ ಭಕ್ತಿ ವೈರಾಗ್ಯಾದಿಗುಣಸಂಪತ್ತುಗಳಿಗೂ ಕಾರಣವಾಗುವವು ॥೧೭॥

## ಸರ್ವವ್ಯಾಖ್ಯಾನಸಾರಸಂಗ್ರಹ

### ೧. ಪ್ರಣತಕಾಮದನಂಘ್ರಿ

ಪ್ರಣತ - ತನ್ನನ್ನು ಮೊರೆಹೊಕ್ಕ (ಶರಣಾಗತರಾದ), ಕಾಮದ- ಇಷ್ಟಾರ್ಥಗಳನ್ನು ಸಲ್ಲಿಸುವ.

ತನ್ನನ್ನೇ ನಂಬಿ ಸ್ತೋತ್ರ ಮಾಡುತ್ತಾ, ಶರಣಾಗತರಾಗಿ ಬರುವ ಭಕ್ತಜನರ ಸರ್ವಮನೋಭೀಷ್ಟಗಳನ್ನೂ ಸಲ್ಲಿಸುವ ನಾರಾಯಣನಾದ ಶ್ರೀಪರಮಾತ್ಮನ ಪಾದಾರವಿಂದಗಳನ್ನು.

### ೨. ಸಂದರುಶನಾಪೇಕ್ಷೆಗಳುಳ್ಳವನಿಗೆ

ಶ್ರೀಹರಿಯ ಚರಣಕಮಲಗಳ ಸಂದರ್ಶನಭಾಗ್ಯವನ್ನು ಬಯಸುವ ಭಗವದ್ಭಕ್ತರಿಗೆ (ಅಪರೋಕ್ಷಾಪೇಕ್ಷಿಗಳು).

### ೩. ನಿಚ್ಚಣಿಕೆಯೆನಿಸುವುದು

ನಿಚ್ಚಣಿಕೆ - ಏರಲು ಉಪಯೋಗಿಸುವ ಏಣಿ. ಈ ತಾರತಮ್ಯಜ್ಞಾನವು ಪ್ರಣತಕಾಮದನ ಅಂಘ್ರಿ ಸಂದರ್ಶನಾಪೇಕ್ಷಿಗಳಾದ ಅಧಿಕಾರಿಗಳಿಗೆ ಮೋಕ್ಷ ಏರಲು, ಅಂದರೆ ಆತ್ಮೋದ್ಧಾರಮಾರ್ಗಕ್ಕೆ ಏಣಿಯಂತಿದೆ ಎಂದು ದಾಸರಾಯರ ಅಭಿಪ್ರಾಯ.

### ೪. ಜಡನೊದಲು ಬ್ರಹ್ಮಾಂತ ತರತಮವು

ಶುದ್ಧ ಜಡಗಳಿಂದ ಆರಂಭಿಸಿಕೊಂಡು ಸರ್ವೋತ್ತಮನಾದ ಶ್ರೀಹರಿಯ ಪರ್ಯಂತ ಇರುವ ತಾರತಮ್ಯಜ್ಞಾನವು (ಆರೋಹಣವಾಗಲೀ, ಅವರೋಹಣವಾಗಲೀ)

### ೫. ಮನವಚನದಿಂ -

ಧ್ಯಾನವಿಷಯದಲ್ಲಿ ಎರಡು ಪ್ರಕಾರ - 1. ಮಾನಸಿಕ ಮತ್ತು 2. ವಾಚನಿಕ. ಮನಸ್ಸಿನಿಂದ ಸ್ಮರಣಪೂರ್ವಕ ಧ್ಯಾನೋಪಾಸನೆ, ವಾಗ್ರೂಪವಾದ ಸಂವಾದ. ಜಿಜ್ಞಾಸ, ವಾಕ್ಯಪ್ರವಚನ ಇತ್ಯಾದಿ ಕ್ರಿಯಾವಿಶೇಷಗಳಿಂದಲೂ ತಾರತಮ್ಯಜ್ಞಾನವನ್ನು ವಿವೇಚಿಸಬಹುದು.

### ೬. ಭವವನಧಿ -

ಭವ - ಜನನ ಮರಣಾತ್ಮಕವಾದ ಸಂಸಾರ, ವನಧಿ - ಸಮುದ್ರ (ವನ- ನೀರು, ಧಿ- ನಿಕ್ಷೇಪ ಸ್ಥಳ). ಗುಣತ್ರಯಗಳಿಂದ ಜನಿತವಾದ ಕರ್ಮಪರಂಪರೆಯಿಂದ ಜೀವನಿಗೆ ಜನನಮರಣಾತ್ಮಕರೂಪವಾದ ಸಂಸಾರವು ಪ್ರಾಪ್ತಿಯಾಗುವುದು. ಸಂಸಾರವು ಸಮುದ್ರದಂತೆ ಅಪಾರ ಮತ್ತು ದುಸ್ತರ.

**೨. ಶೋಷಿಸಿ ಪೋಗುವುದು -**

ಶ್ರೀಪರಮಾತ್ಮನ ಸರ್ವೋತ್ತಮತ್ವವನ್ನು ಪ್ರತಿಪಾದಿಸುವ ತಾರತಮ್ಯ ಜ್ಞಾನವು ಜೀವರ ಸಂಸಾರಶರಧಿಯನ್ನು ಬತ್ತಿಸುವುದು. ಸಂಸಾರಬಂಧನದಿಂದ ಮುಕ್ತಿಗೊಳಿಸುವುದು.

**೩. ಜ್ಞಾನ ಭಕ್ತಿ ವಿರಕ್ತಿ ಸಂಪದಕೆ ಕಾರಣವೆನಿಸುವುದು -**

ಭಗವದ್ವಿಷಯದಲ್ಲಿ ಸಮೀಚೀನವಾದ ಜ್ಞಾನ, ಮಹಾತ್ಮ್ಯಜ್ಞಾನಪೂರ್ವಕವಾದ ಭಕ್ತಿ, ಅವುಗಳ ದ್ವಾರಾ ಪ್ರಾಪಂಚಿಕ ವಿಷಯಗಳಲ್ಲಿ ನಿರಾಸಕ್ತಿ ರೂಪವಾದ ವೈರಾಗ್ಯ ಇವು ಮೂರೂ ಸಾಧಕರಿಗೆ ಶ್ರೀಹರಿಯ ಪ್ರಸಾದ ಪ್ರಾಪ್ತಿಗೆ ಮುಖ್ಯಸಾಧನಗಳು ಇವುಗಳಿಗೆ "ದೈವೀಸಂಪತ್ತು" ಎನ್ನುವರು.

ಜ್ಞಾನ ಭಕ್ತಿ ವೈರಾಗ್ಯಗಳೆಂಬ ದೈವೀಸಂಪತ್ತಿನ ಪ್ರಾಪ್ತಿಗೆ ತಾರತಮ್ಯ ಜ್ಞಾನವು ಪ್ರಧಾನಕಾರಣವು.

ತಾರತಮ್ಯಜ್ಞಾನದಿಂದ -

1. ಆತ್ಮೋನ್ನತಿ - ಮೋಕ್ಷಪ್ರಾಪ್ತಿ, 2. ಸಂಸಾರಸಮುದ್ರದ ಶೋಷಣೆ, ಅಂದರೆ ಕರ್ಮಬಂಧನದಿಂದ ನಿವೃತ್ತಿ ಮತ್ತು 3. ಜ್ಞಾನ, ಭಕ್ತಿ ವೈರಾಗ್ಯಗಳ ಪ್ರಾಪ್ತಿ ಇವು ಉಂಟಾಗುವುವು.

ಈ ಕಾರಣಗಳಿಂದ ಪಂಚಭೇದ ಮತ್ತು ತಾರತಮ್ಯಜ್ಞಾನವು ಮುಮುಕ್ಷುಗಳಿಗೆ ಅತ್ಯಗತ್ಯ - ಇದೇ ಆಚಾರ್ಯ ಮಧ್ವರ ಸಿದ್ಧಾಂತದ ತಿರುಳು ॥೧೨॥

* * *

## ಪದ್ಯ - ೧೮

**ಮೂಲ -**

**ಅನಳನೊಳು ಹೋಮಿಸುವ ಹರಿಚಂ |**
**ದನವೆ ಮೊದಲಾದದರ ಸುವಾ |**
**ಸನೆಯು ಪೃಥಕ್ ಪ್ರತ್ಯೇಕ ತೋರ್ಪುದು ಎಲ್ಲ ಕಾಲದಲಿ ||**
**ದನುಜ ಮಾನವ ದಿವಿಜರವರವ |**
**ರನುಚಿತೋಚಿತಕರ್ಮ ವೃಜಿನಾ |**
**ರ್ದನನು ವ್ಯಕ್ತಿಯ ಮಾಳ್ಪ ತ್ರಿಗುಣಾತೀತ ವಿಖ್ಯಾತ ||೧೮||**

**ಅವತರಣಿಕೆ -**

ಶ್ರೀಪರಮಾತ್ಮನು ತ್ರಿವಿಧಜೀವರಿಗೆ ಅವರವರ ಯೋಗ್ಯತಾನುಸಾರ ಉಚಿತ ಮತ್ತು ಅನುಚಿತ ಕರ್ಮಗಳನ್ನು ಅಭಿವ್ಯಕ್ತ ಮಾಡುತ್ತಾನೆ. ಅವನಿಗೆ ವೈಷಮ್ಯವಿಲ್ಲವೆಂದು ಸುಂದರ ದೃಷ್ಟಾಂತಪೂರ್ವಕ ಹೇಳುತ್ತಾರೆ.

**ಪ್ರತಿಪದಾರ್ಥ -**

**ಅನಳನೊಳು** - ಅಗ್ನಿಯಲ್ಲಿ, **ಹೋಮಿಸುವ** - ಹೋಮ ಮಾಡುವ, **ಹರಿಚಂದನವೆ** - ಸುಗಂಧಯುಕ್ತವಾದ ಗಂಧ, **ಮೊದಲಾದ** - ಇವೇ ಮುಂತಾದ, **ಅದರ ಸುವಾಸನೆಯು** - ಸುವಾಸನೆಗಳು ಹಾಗೂ ದುರ್ವಾಸನೆಗಳು, **ಪೃಥಕ್ ಪ್ರತ್ಯೇಕ** - ಬೇರೆ ಬೇರೆಯಾಗಿ, **ಎಲ್ಲ ಕಾಲದಲಿ** - ಎಲ್ಲಾ ಕಾಲಗಳಲ್ಲಿ, **ತೋರ್ಪುದು** - ಅಭಿವ್ಯಕ್ತವಾಗುವುದು. **ದನುಜ** - ದುರ್ಗಂಧ ಸದೃಶರಾದ ದೈತ್ಯರು, **ಮಾನವ** - ಸುಗಂಧ ದುರ್ಗಂಧ ಮಿಶ್ರಿತ ಸದೃಶರಾದ ನಿತ್ಯಸಂಸಾರಿಗಳು (ಮಧ್ಯಮ ಜೀವರು), **ದಿವಿಜರ** - ಸುಗಂಧ ಸದೃಶರಾದ ದೇವತೆಗಳ, **ಅವರವರ** - ಆಯಾಯ ಜೀವರುಗಳ, **ಅನುಚಿತ ಉಚಿತ ಕರ್ಮ** - ಸ್ವರೂಪಸ್ವಭಾವಕ್ಕನುಗುಣವಾದ ಉಚಿತ (ಯೋಗ್ಯ) ಮತ್ತು ಅನುಚಿತ (ನಿಷಿದ್ಧ) ಕರ್ಮಗಳನ್ನು, **ವೃಜಿನಾರ್ದನನು** - ಪಾಪಪು ಹಾರಕನಾದ ಶ್ರೀಪರಮಾತ್ಮನು, **ವ್ಯಕ್ತಿಯ ಮಾಳ್ಪ** - ಇದ್ದುದನ್ನ ಸದಾ

ರೂಪದಲ್ಲಿಯೇ ವ್ಯಕ್ತಮಾಡುವನು. **ತ್ರಿಗುಣಾತೀತ ವಿಖ್ಯಾತ** - ಪ್ರಾಕೃತ ಗುಣತ್ರಯಗಳಿಂದ ದೂರನಾದವನೂ, ಸುಪ್ರಸಿದ್ಧನೂ, ಸರ್ವೋತ್ತಮನೂ ಆದ ಶ್ರೀಪರಮಾತ್ಮನು ॥೧೮॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನಿಗೆ ವೈಷಮ್ಯ ಇಲ್ಲೆಂದು ಹೇಳತಾರೆ.

ಅಗ್ನಿಯಲ್ಲಿ ಹೋಮಮಾಡತಕ್ಕ ಸುಗಂಧಯುಕ್ತವಾದ ದ್ರವ್ಯಗಳೇನು, ತದನ್ಯಗಳಾದ ದುರ್ಗಂಧಯುಕ್ತಗಳಾದ ದ್ರವ್ಯಗಳೇನು ಇವೇ ಮೊದಲಾದ ದ್ರವ್ಯಗಳು ಯಾವತ್ತೂ ಅಗ್ನಿಯೊಳಗೆ ಹೋಮಿಸಿದರೆ, ಆ ಅಗ್ನಿ ಆದವನು ಆಯಾ ಪದಾರ್ಥಗತ ಅವರದರ ಸುವಾಸನೆಗಳೇನು, ದುರ್ವಾಸನೆಗಳೇನು ಅಭಿವ್ಯಕ್ತಿ ಮಾಡತಾನೆ. ಅದರಿಂದ ಬಾಹ್ಯದಲ್ಲಿ ಪ್ರಜರಿಗೆ ಅವರವರ ವಾಸನೆ ಬ್ಯಾರೆ ಬ್ಯಾರೆ ತೋರೋದಾಗತದೆ. ಇದರೋಪಾದಿಯಲ್ಲಿ ಅಗ್ನಿಸದೃಶನಾದ ಪರಮಾತ್ಮ ಸುಗಂಧ ದುರ್ಗಂಧ ಸದೃಶ ಸ್ವಭಾವರಾದ ಜೀವರೆಂಬ ದ್ರವ್ಯಗಳು ಸದಾ ಸರ್ವಕಾಲದಲ್ಲಿ, ಜೀವಾಂತರ್ಗತನಾದ ಅವಿಯೋಗನಾದ. ಅಗ್ನಿಸದೃಶನಾದ ಬಿಂಬರೂಪಿಯಾದ ಪರಮಾತ್ಮ, ದುರ್ಗಂಧೋಪೇತರಾದ ಮೋಹಗುಣವುಳ್ಳ ಅಸುರರು, ತಮೋಯೋಗ್ಯರು, ಸುಗಂಧ-ದುರ್ಗಂಧೋಪೇತರಾದ ನಿತ್ಯಸಂಸಾರಿಗಳು, ಸುಗಂಧೋಪೇತರಾದ ದೇವತೆಗಳ, ಮುಕ್ತಿಯೋಗ್ಯರ, ಅವರವರ ಸ್ವರೂಪಸ್ವಭಾವಕ್ಕೆ ಅನುಸರಿಸಿದ ಅನುಚಿತೋಚಿತ ಕರ್ಮರೂಪವಾದ ಗಂಧಗಳ, ಬಾಹ್ಯವಾಪಗಳ ಪರಿಹರಿಸತಕ್ಕ ಪರಮಾತ್ಮನು ಇವುದರನ್ನ ವ್ಯಕ್ತಮಾಡತಾನೆ. ಶ್ರೀಪರಮಾತ್ಮನಾದ ತಾನು ಪ್ರಾಕೃತಿಕ ಗುಣತ್ರಯಗಳಿಂದ ಅತೀತನಾದವನು. ಸರ್ವೋತ್ತಮನೆಂದು ವಿಶೇಷಾಕಾರನಾಗಿ ಹೊಗಳಿಸಿಕೊಳ್ಳಲ್ಪಟ್ಟವನು. ಅಗ್ನಿಗೆ ವೈಷಮ್ಯ ದಾವರೀತಿಯಿಂದ ಇಲ್ಲವೋ ತದ್ವತ್ ಪರಮಾತ್ಮ ವೈಷಮ್ಯದಿಂದ ದೂರನಾದವನು ಎಂತ ತಾತ್ಪರ್ಯ ॥೧೮॥

## ೨. ಭಾವಪ್ರಕಾಶಿಕೆ

ಅಗ್ನಿಯಲ್ಲಿ ಚಂದನಕಾಷ್ಠ ಮೊದಲಾದವುಗಳನ್ನು ಹೋಮ ಮಾಡಿದರೆ, ಯಾವ ವಾಸನೆ ದ್ರವ್ಯಗಳನ್ನು ಆಹುತಿ ಕೊಟ್ಟಿದೆಯೋ ಆಯಾ ದ್ರವ್ಯದ ಸುವಾಸನೆಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ವ್ಯಕ್ತಿ ಮಾಡಿ ಕೊಡುವುದು, ಅದರಂತೆಯೇ ದೈತ್ಯರು, ಮನುಷ್ಯರು, ದೇವತೆಗಳು ಮಾಡುವ ಪಾಪ - ಪುಣ್ಯಾದಿ ಕರ್ಮಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ವ್ಯಕ್ತಿಮಾಡಿ ತೋರುವನು ॥೧೮॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ –

ಅನಲ ಇತಿ ॥

### ಕನ್ನಡಾರ್ಥ –

ಜೀವರ ಸ್ವಭಾವ, ಕರ್ಮಗಳಿಗನುಸಾರವಾಗಿ ಅವರಿಗೆ ಕರ್ಮಫಲಗಳನ್ನು ಶ್ರೀಹರಿಯು ವ್ಯಕ್ತಮಾಡುವನು. ಈ ವಿಷಯವನ್ನು, ವಿವಿಧ ಅನಂತವು ವಾಸನೆಯನ್ನು ಆ ದ್ರವ್ಯದ ಅನುಗುಣವಾಗಿ ಹೊರಗೆಡಹುವ ಅಗ್ನಿಯ ದೃಷ್ಟಾಂತದಿಂದ ತಿಳಿಸುತ್ತಾರೆ, 'ಅನಲ' ಎಂಬ ಪದ್ಯದಿಂದ ॥೧೮॥

## ೪. ಭಾವದರ್ಪಣ

ಈಗ್ಗೆ ತ್ರಿವಿಧರ ಸ್ವಭಾವವ ವ್ಯಕ್ತಿಮಾಡುತ್ತಾನೆಂದು ಹೇಳುತ್ತಾರೆ. ಅನಲ-ಅಗ್ನಿ, ಅನುಚಿತೋಚಿತ - ಕೆಟ್ಟಕರ್ಮ, ಒಳ್ಳೇಕರ್ಮ.

## ೫. ಶ್ರೀಗುರುಹೃದಯಪ್ರಕಾಶಿಕೆ

ತತ್ತದ್ಯೋಗತಾ ವ್ಯಕ್ತಿ ಮಾಡುವ ದೇವರಿಗೆ ದೃಷ್ಟಾಂತವನ್ನಿಲ್ಲಿ ಸದೃಷ್ಟಾಂತ ಬೋಧಿಸುತ್ತಾರೆ. ಅನಲ ಎಂದು. ಅನಲವೆಂಬ ಅಗ್ನಿಯಲ್ಲಿ ಹೋಮ ಮಾಡುವ ಪರಿಚಂದನವೆಂಬ ಮಹಾಶ್ರೀಗಂಧ ಮೊದಲಾದ ವಸ್ತುಗಳ ವಾಸನೆಯು ಅಗ್ನಿಯಿಂದ ಪ್ರತ್ಯೇಕ ವ್ಯಕ್ತಿಯಾಗುವಂತೆ. ಸದಾ ದಾನವರು ಮಾನವರು ದಿವಿಜರು ಎಂಬ ತ್ರಿವಿಧಜೀವರ ಸ್ವಾಭಾವಿಕ, ಅನಾದಿಯ

ದುಷ್ಕರ್ಮ, ಉಚಿತವೆಂಬ ಸತ್ಕರ್ಮ ಸಹ ವೃಜಿನಾರ್ಜನೆಂಬ ದುರಿತ ಬಂಧಕ ಸ್ವಾಮಿ ವ್ಯಕ್ತಿಮಾಡಿ ಕೊಡುವನು. ಆದರೂ ತ್ರಿಗುಣಾತೀತನೆಂದು ಶ್ರುತ್ಯಾದಿಗಳಲ್ಲಿ ಪ್ರಸಿದ್ಧನು ॥೧೮॥

## ಸರ್ವವ್ಯಾಖ್ಯಾನಸಾರಸಂಗ್ರಹ

ನಿರ್ದೋಷಿಯಾದ ಶ್ರೀಪರಮಾತ್ಮನಿಗೆ ಜೀವರ ವಿಷಯದಲ್ಲಿ ಯಾವ ವಿಧವಾದ ಪಕ್ಷಪಾತವೂ ಇಲ್ಲವೆಂದು ಸುಂದರವಾದ ದೃಷ್ಟಾಂತದಿಂದ ತಿಳಿಸುತ್ತಾರೆ.

**೧. ಅನಳನೊಳು -**

ಅನಳ ಎಂದರೆ ಅಗ್ನಿ ಎಂದರ್ಥ. ಅಗ್ನಿಯಲ್ಲಿ ಯಾವ ವಸ್ತು ಹಾಕಿದರೂ ಅದನ್ನು ಸುಟ್ಟು, ವೈಷಮ್ಯವಿಲ್ಲದೆ ಭಸ್ಮೀಭೂತವನ್ನಾಗಿ ಮಾಡಿಬಿಡುತ್ತದೆ.

**೨. ಹರಿಚಂದನವೆ -**

ಚಂದನ ಎಂದರೆ ಗಂಧದ ಮರದ ಕಾಷ್ಠ. ಗಂಧದ ಮರವು ಸುಗಂಧಯುಕ್ತವಾದದ್ದು. ಪರಿಮಳಯುಕ್ತವಾದ ಗಂಧದ ಚಕ್ಕೆಗಳನ್ನು ಅಗ್ನಿಯಲ್ಲಿ ಹೋಮಿಸಿದರೆ, ಗಂಧದ ಕಾಷ್ಠವು ಸುಟ್ಟು, ಸುಗಂಧಯುಕ್ತವಾದ ಹೊಗೆಯನ್ನು ಕೊಡುವುದು. ಅದೇ ದುರ್ಗಂಧಯುಕ್ತವಾದ ದ್ರವ್ಯಗಳನ್ನು ಅಗ್ನಿಯಲ್ಲಿ ಹಾಕಲು ದುರ್ಗಂಧವೇ ಪ್ರಾಪ್ತಿ.

ಇದರಿಂದ ಸುಡುವ ಅಗ್ನಿಗೆ (ಅನಳನಿಗೆ) ಇದು ಸುಗಂಧ, ಇದು ದುರ್ಗಂಧ ಎಂದು ತಾರತಮ್ಯ ಭೇದವಿಲ್ಲ. ಆಯಾಯ ವಸ್ತುಗಳ ಸ್ವಭಾವಕ್ಕನುಗುಣವಾಗಿ ಭಸ್ಮದ ವಾಸನೆಯು ಅಭಿವ್ಯಕ್ತವಾಗುವುದು.

**೩. ಪೃಥಕ್ ಪ್ರತ್ಯೇಕವಾಗಿ ತೋರ್ಪುದು -**

ದ್ರವ್ಯಗತ ಗಂಧವು ಪ್ರತ್ಯೇಕ ಪ್ರತ್ಯೇಕವಾಗಿ ವ್ಯಕ್ತವಾಗುವುದು. ಇದು ಸಾರ್ವಕಾಲಿಕವಾದ ಸತ್ಯ.

೪. **ದನುಜ ಮಾನವ ದಿವಿಜರ -**

**ತಮೋಯೋಗ್ಯರಾದ** ದೈತ್ಯವರ್ಗದವರು, ನಿತ್ಯ ಸಂಸಾರಿಗಳಾದ ಮಾನವರು ಮಧ್ಯಮರು, ಮುಕ್ತಿಯೋಗ್ಯಚೇತನರಾದವರು ದೇವತೆಗಳ (ದಿವಿಜರು).

೫. **ಅವರವರ ಉಚಿತ ಅನುಚಿತ ಕರ್ಮವ -**

ಇಂತು ದೇವ, ಮಾನವ, ದಾನವರೆಂಬ ತ್ರಿವಿಧಚೇತನರ ಸ್ವರೂಪ ಯೋಗ್ಯತಾನುಸಾರ ಕರ್ಮಾಭಿವ್ಯಕ್ತಿ. ಅದಕ್ಕನುಸಾರವಾಗಿ ಫಲಪ್ರಾಪ್ತಿ. ಭಿನ್ನ ಜೀವರು, ಭಿನ್ನ ಕರ್ಮಗಳು, ಭಿನ್ನ ಫಲಪ್ರಾಪ್ತಿ. ವಿಧಿಪೂರ್ವಕವಾದ ಪುಣ್ಯ ಕಾರ್ಯಗಳು **ಉಚಿತ ಕರ್ಮಗಳು.** ನಿಷೇಧರೂಪವಾದ ಪಾಪಕಾರ್ಯಗಳು **ಅನುಚಿತಕರ್ಮಗಳು.** ನಿತ್ಯಸಂಸಾರಿಗಳಲ್ಲಿ ಅಭಿವ್ಯಕ್ತವಾಗುವ ಪುಣ್ಯ-ಪಾಪ ರೂಪವಾದ ಕರ್ಮಗಳು **ಮಿಶ್ರಕರ್ಮಗಳು.**

೬. ವೃಜಿನ ಎಂದರೆ ಪಾಪಗಳು. ಅರ್ದನ ಎಂದರೆ ಸಂಹರಿಸುವವನು. ಅಂದರೆ, ಭಕ್ತರಿಗೆ ಒದಗುವ ಪಾಪಪರಿಹಾರಕನು ವೃಜಿನಾರ್ದನ.

೭. **ತ್ರಿಗುಣಾತೀತ-**

ಪ್ರಾಕೃತಗುಣತ್ರಯಗಳಾದ ಸತ್ತ್ವ, ರಜ ತಮೋಗುಣಗಳಿಂದ ದೂರನು. ಪ್ರಕೃತಿಯು ಜಡ. ಈಶನು ಜಡದಿಂದ ಅತ್ಯಂತ ಭಿನ್ನನು. ಇದರಿಂದ **ತ್ರಿಗುಣಾತೀತನು**. ಗುಣತ್ರಯಗಳಲ್ಲಿ ಅಂತಸ್ಥಿತನಾಗಿ ತತ್ತತ್ಕಾರ್ಯಾಭಿವ್ಯಕ್ತಿ ಮಾಡುತ್ತಿದ್ದಾಗ್ಯೂ, ಗುಣ-ಕರ್ಮಸಂಬಂಧವಾದ ಲೇಪ ಜಗದ್ವಿಲಕ್ಷಣನಾದ ಜಗದೀಶನಿಗೆ ಎಂದೆಂದಿಗೂ ಇಲ್ಲ. ಈ ದೃಷ್ಟಿಯಿಂದ ನಿರ್ಗುಣನು. ಸ್ವಸ್ವರೂಪ ಭೂತವಾದ ಅಪ್ರಾಕೃತ ಸತ್ತ್ವಗುಣಭರಿತನು.

೮. **ವಿಖ್ಯಾತ -**

ಅಪಾರಮಹಿಮಾಸಂಪನ್ನನಾದ ತ್ರಿಗುಣಾತೀತ ತ್ರಿವಿಕ್ರಮನು ಜಗತ್ತಿನಲ್ಲಿ ಸುಪ್ರಸಿದ್ಧ ಪುರುಷನು. ಅವನಿಲ್ಲದ ಜೀವಜಡವಿಲ್ಲ. ಜಡವಸ್ತುಗಳ ಸಹಜವಾದ ಗುಣ - ಧರ್ಮಗಳ ಅಭಿವ್ಯಕ್ತಿ, ಚೇತನರಾದ ತ್ರಿವಿಧ ಜೀವರುಗಳ ಸ್ವರೂಪಯೋಗ್ಯತಾ ರೂಪವಾದ ಗುಣಗಳ ಅಭಿವ್ಯಕ್ತಿ, ಈತನ ಸ್ವತ್ತದಿಂದಲೇ ಆಗುವುದು ॥೧೮॥

## ಪದ್ಯ - ೧೯

**ಮೂಲ -**

**ಭಕ್ತವತ್ಸಲ ಭಾಗ್ಯಪುರುಷ ವಿ ।**
**ವಿಕ್ತ ವಿಶ್ವಾಧಾರ ಸರ್ವೋ ।**
**ದ್ರಿಕ್ತ ದೋಷವಿದೂರ ದುರ್ಗಮ ದುರ್ವಿಭಾವ್ಯ ಸ್ವಹಿ ॥**
**ಶಕ್ತ ಶಾಶ್ವತ ಸಕಲ ವೇದ್ಯೈ ।**
**ಕೋಕ್ತ ಮಾನದ ಮಾನ್ಯ ಮಾಧವ ।**
**ಸೂಕ್ತ ಸೂಕ್ಷ್ಮ ಸ್ಥೂಲ ತ್ರಿಜಗನ್ನಾಥ ವಿಠ್ಠಲನು ॥೧೯॥**

**ಅವತರಣಿಕೆ -**

ಶ್ರೀಪರಮಾತ್ಮನ ಮಹಾಮಹಿಮೆಗಳನ್ನು ಮುಂದುವರಿಸುತ್ತಾ ಪ್ರಸಕ್ತ ಅಂತ್ಯ ಪದ್ಯದಿಂದ, ಸಂಧಿಗತ ವಿಷಯವನ್ನು ಉಪಸಂಹಾರ ಮಾಡುತ್ತಾರೆ.

**ಪ್ರತಿಪದಾರ್ಥ -**

**ಭಕ್ತವತ್ಸಲ** - ಸ್ವರೂಪಭೂತ ಭಗವದ್ಭಕ್ತರಾದವರಲ್ಲಿ ಆದರವುಳ್ಳವನು. **ಭಾಗ್ಯ**- ಪೂರ್ಣ ಐಶ್ವರ್ಯವಂತನು (ಷಡ್ಗುಣೈಶ್ವರ್ಯ ಸಂಪೂರ್ಣನು). **ಪುರುಷ** - ಕ್ಷರಾಕ್ಷರ ಪುರುಷರುಗಳಿಗಿಂತ ಅತ್ಯಂತ ಶ್ರೇಷ್ಠನಾದವನು. **ವಿವಿಕ್ತ**- ನಿರ್ಲಿಪ್ತನು ಸ್ವರಮಣನು. ಸಕಲಜೀವ-ಜಡರುಗಳಿಂದ ವಿಲಕ್ಷಣನು. **ವಿಶ್ವಾಧಾರ** - ಚರಾಚರಾತ್ಮಕ ಸಮಗ್ರ ಜಗತ್ತಿಗೆ ಆಧಾರ ಭೂತನು. **ಸರ್ವೋದ್ರಿಕ್ತ** - ಸರ್ವಪ್ರಕಾರಗಳಿಂದಲೂ ಉತ್ತಮೋತ್ತಮನು. (ಗುಣಪರಿಪೂರ್ಣನು). **ದೋಷವಿದೂರ** - ನಿರ್ದೋಷನಾದವನು. **ದುರ್ಗಮ** - ಸಾಕಲ್ಯೇನ ಯಾರಿಂದಲೂ ಅರಿಯಲಸಾಧ್ಯನು. **ದುರ್ವಿಭಾವ್ಯ** - ಇಂಥವನೇ ಇವನು ಎಂದು ಭಾವನಾ ಮಾಡಲಿಕ್ಕೆ ಅಶಕ್ಯನಾದವನು (ಭಾವನಾತೀತನು). **ಸ್ವಹಿ** - ತನ್ನಿಂದ ತಾನೇ ಪ್ರಸಿದ್ಧನಾದವನು (ಸ್ವಖ್ಯಾತನು). **ಶಕ್ತ** - ಸರ್ವಶಕ್ತನು. ಜೀವರ ಶಕ್ತಿಗೆ

ಸತ್ತಾಪ್ರದನು. **ಶಾಶ್ವತ** - ಚತುರ್ವಿಧನಾಶರಹಿತನು. ನಿತ್ಯನು **ಸಕಲ ವೇದ ವಿತ ಉಕ್ತ** - ಸರ್ವವೇದಗಳಿಂದ ಮುಖ್ಯಪ್ರತಿಪಾದ್ಯನು (ಸಕಲಶಾಸ್ತ್ರ ಸಾರಭೂತನು). **ಮಾನದ**-ತನ್ನ ಭಕ್ತರಿಂದ ಪೂಜ್ಯನು. ಗೌರವಾನ್ವಿತನು. **ಮಾಧವ**-ಶ್ರೀಲಕ್ಷ್ಮೀಪತಿಯು. ಮಾ-ಜ್ಞಾನಾಭಿಮಾನಿಯಾದ ಲಕ್ಷ್ಮೀ. ಧವ-ಪತಿ. ನಿಯಾಮಕ. **ಸೂಕ್ತ**- ಪುರುಷಸೂಕ್ತ ಪ್ರತಿಪಾದ್ಯನು. **ಸೂಕ್ಷ್ಮ** - ಅತಿಸೂಕ್ಷ್ಮನಾದ ಜೀವನಲ್ಲಿ ಅಂತರ್ಯಾಮಿಯು. **ಸ್ಥೂಲ**- ಬ್ರಹ್ಮಾಂಡಕ್ಕೆ ಆಧಾರ ರೂಪನಾಗಿ ಬೃಹದಾಕಾರ ರೂಪದಲ್ಲಿರುವವನು. **ತ್ರಿಜಗತ್** - ಮೂರುಲೋಕಗಳ, **ನಾಥ** ಪ್ರಭು. **ವಿಠ್ಠಲನು**- ವಿಠ್ಠಲರೂಪಿಯು ॥೯॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

**ಶ್ರೀಪರಮಾತ್ಮನ ಮಹಿಮೆ ಹೇಳತಾರೆ.**

ಸ್ವರೂಪಸ್ವಭಾವದಲ್ಲಿ ಭಕ್ತಿ ಉಳ್ಳವರಲ್ಲಿ ಕೇವಲ ಆದರ ಉಳ್ಳವನು. ಪೂರ್ಣ ಐಶ್ವರ್ಯೋಪೇತನಾದವನು. ಕ್ಷರಾಕ್ಷರಪುರುಷರುಗಳಿಗೆ ಶ್ರೇಷ್ಠನಾದವನು ನಿರ್ಲಿಪ್ತ. ಸ್ವರಮಣನಾದವನು. ಚರಾಚರ ಜಗತ್ತಿಗೆ ಆಧಾರನಾದವನು. ಸರ್ವಶ್ರೇಷ್ಠನಾದವನು. ನಿರ್ದೋಷನಾದವನು. ಸಾಕಲ್ಯೇನ ತಿಳಿಕೊಂಡೋದಕ್ಕೆ ಸಾಧ್ಯನಲ್ಲದವನು. ಇಂಥಾವನೆಂದು ಭಾವನಾ ಮಾಡೋದಕ್ಕೆ ಅಶಕ್ಯನಾದವನು. ತನ್ನಿಂದ ತಾನೇ ಪ್ರಸಿದ್ಧನಾದವನು. ಸರ್ವಶಕ್ತಿ ಉಳ್ಳವನು. ನಿತ್ಯನಾದವನು. ಸರ್ವವೇದಗಳಿಂದ ಸರ್ವೋತ್ತಮನು ಇವನೊಬ್ಬನೆಂದು ಹೇಳಿಸಿಕೊಳ್ಳಲ್ಪಟ್ಟವನು. ತನ್ನ ನಂಬಿದವರಿಗೆ ದೇವತೆಗಳಿಂದ ಮರ್ಯಾದಾ ಕೊಡಿಸತಕ್ಕವನು. ಭಕ್ತರಿಂದ ಪೂಜಿತನಾದವನು. ಶ್ರೀಲಕ್ಷ್ಮೀದೇವೇರಿಗೆ ಪತಿಯಾದವನು. ಪುರುಷಸೂಕ್ತಪ್ರತಿಪಾದ್ಯನಾದವನು. ಅತಿಸೂಕ್ಷ್ಮವಾಗಿ ಇರತಕ್ಕ ಜೀವನಲ್ಲಿ ಅಂತರ್ಯಾಮಿಯಾಗಿ ಸೂಕ್ಷ್ಮದಿಂದ ಇರತಕ್ಕವನು. ಬ್ರಹ್ಮಾಂಡಾಕಾರನಾಗಿ ದೊಡ್ಡ ಆಕಾರದಿಂದ ಸ್ಥೂಲವಾಗಿರತಕ್ಕವನು. ಬೃಹದಾಕಾರನಾಗಿ, ತ್ರಿಜಗದ

ಹದಿನಾಲ್ಕು ಲೋಕವೂ ಗ್ರಾಹ್ಯ. ಈ ಹದಿನಾಲ್ಕು ಲೋಕಕ್ಕೆ ಸ್ವಾಮಿಯಾದ ವಿಠ್ಠಲನಾಮಕನಾದ ಶ್ರೀಪರಮಾತ್ಮನು ಎಂತ ತಾತ್ಪರ್ಯ ॥೧೯॥

**ಶ್ರೀಮತ್ಸತ್ಯಪರಾಯಣತೀರ್ಥ ಕರಕಮಲಸಂಜಾತ ಶ್ರೀಸಂಕರ್ಷಣತೀರ್ಥ ವಿರಚಿತಾಯಾಂ ಶ್ರೀಮದ್ಧರಿಕಥಾಮೃತಸಾರ ಕನ್ನಡಭಾಷಾಟೀಕಾಯಾಂ ಆರೋಹಣತಾರತಮ್ಯಸಂಧಿ ವ್ಯಾಖ್ಯಾನಂ ಸಂಪೂರ್ಣ**

**॥ ಶ್ರೀಕೃಷ್ಣಾರ್ಪಣಮಸ್ತು ॥**

## ೨. ಭಾವಪ್ರಕಾಶಿಕೆ-

ಭಕ್ತವತ್ಸಲನೂ, ಭಾಗ್ಯಪುರುಷನೂ, ಏಕಾಂತವಾಸಿಯೂ, ಪ್ರಪಂಚಕ್ಕೆ ಆಧಾರಭೂತನಾದವನೂ, ಸರ್ವೋತ್ತಮನೂ, ದೋಷರಹಿತನೂ, ಮೋದ ಲಕ್ಷ್ಯನೂ, ತಿಳಿಯಲಶಕ್ಯನೂ, ತನ್ನಿಂದ ತಾನೇ ಪ್ರಖ್ಯಾತನು, ಸ್ವತಂತ್ರನೂ, ಸಮರ್ಥನೂ, ನಿತ್ಯನೂ, ಎಲ್ಲಾ ವೇದಗಳಿಂದಲೂ ಮುಖ್ಯವಾಗಿ ಸರ್ವೋತ್ತಮನೆಂದು ಹೇಳಿಕೊಳ್ಳಲ್ಪಡುವವನು. ಭಕ್ತಜನರಿಗೆ ಬಹುಮಾನವನ್ನು ಕೊಡುವವನು, ಮರ್ಯಾದಾರ್ಹನು. ಲಕ್ಷ್ಮೀಪತಿಯೂ, ಚೆನ್ನಾಗಿ ಹೊಗಳಿಸಿಕೊಳ್ಳಲ್ಪಡುವವನೂ, ಪರಮಾಣುರೂಪನು, ಬ್ರಹ್ಮಾಂಡಕ್ಕಿಂತಲೂ ಬೃಹದಾಕಾರವುಳ್ಳವನು. ಇಂಥಹ ಮಹಾಮಹಿಮೆಯುಳ್ಳ ಶ್ರೀಜಗನ್ನಾಥವಿಠ್ಠಲನು.

"ಇಂತು ಭಾವಪ್ರಕಾಶಿಕೆಯಲ್ಲಿ ೨೫ನೆಯ ಆರೋಹಣ ತಾರತಮ್ಯ ಸಂಧಿಯ ವ್ಯಾಖ್ಯಾನವು ಸಮಾಪ್ತವಾದುದು"

॥ ಶ್ರೀಕೃಷ್ಣಾರ್ಪಣಮಸ್ತು ॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ-

**ಉಪಸಂಹರತಿ** ಭಕ್ತ ಇತಿ॥ ಪವಿತ್ರ- ॥ಟಿ॥ **ಅಧಿದೇಹಿ** ಪ್ರಕೃಷ್ಟಃ ಪಿಪಿಹೀಪಃ ಸುಮಧಾ (ಘಾಂ) ಮಂತ್ರ, ಧೇನಾಂ ಭಂದ್ವಾಜೇಷು ಸುರುಚೋರುರುಚ್ಯಾಃ ತಮಾನೂನಂ ಪ ಜಿನಂ ॥ಟಿ॥ ಪಾಪಪಿಯೋಗ ಕರ್ತಾ॥ **ದುರ್ಗಮಃ**- ॥ಟಿ॥

ವಿದ್ಯಾಮ ಶೂರನಸ್ಯಸಃ ವಸೋಃ ಸ್ವಾರ್ಹಸ್ಯ ಪುರುಹೂತ ರಾಧಸಃ॥ ಇಂದ್ರ ಯಥಾ ಹ್ಯಸ್ತಿ ತೇಽಪರೀತಂ ನೃತೋ ಶವಃ ॥೬೦॥ ಸುಖ ಸಪಾದ್ಯಜ್ಞಾನ ಧನಾಖ್ಯಂ ವಸು ಗಮಯತಿ ಪ್ರಾಪಯತಿ ಇತಿ ತಥೋಕ್ತಃ ॥೧೯॥

॥ ಇತಿ ಆರೋಹಣ ಸಂಧಿಃ ಸಮಾಪ್ತಃ ॥

**ಕನ್ನಡಾರ್ಥ-**

ಆರೋಹಣ ಸಂಧಿಯನ್ನು ಉಪಸಂಹರಿಸುತ್ತಾರೆ, 'ಭಕ್ತವತ್ಸಲ' ಎಂಬ ಪದ್ಯದಿಂದ.

**ವಿವಿಕ್ತ** - ಭಕ್ತರನ್ನು ಪಾಪಗಳಿಂದ ವಿಯೋಗ ಮಾಡುವವನು.
**ದುರ್ಗಮ**- ಮೋಕ್ಷಸುಖಕ್ಕೆ ಸಾಧನವಾದ ಜ್ಞಾನವೆಂಬ ದ್ರವ್ಯವನ್ನು ಹೊಂದಿಸುವವನು ॥೧೯॥

ಇಲ್ಲಿಗೆ ಆರೋಹಣತಾರತಮ್ಯಸಂಧಿಯ ಕನ್ನಡಾರ್ಥಾನುವಾದವು ಮುಗಿದುದು.

**೪. ಭಾವ ದರ್ಪಣ**

ಭಕ್ತವತ್ಸಲ-ಭಕ್ತರಲ್ಲಿ ಸ್ನೇಹ ಉಳ್ಳವ. ವಿವಿಕ್ತ - ಏಕಾಂತದಲ್ಲಿರುವ- ಸರ್ವೋದ್ರಿಕ್ತ-ಸರ್ವೋತ್ತಮ. ತಿಳಿಯಲಿಕ್ಕೆ ಅಶಕ್ಯ. ದುರ್ವಿಭಾವ್ಯ-ಧ್ಯಾನ ಮಾಡಲಿಕ್ಕೆ ಅಶಕ್ಯ. ಶಕ್ತ - ಸಮರ್ಥ. ಶಾಶ್ವತ - ನಿತ್ಯ. ಸಕಲವೇದ್ಯೈಕೋಕ್ತ - ಸಕಲವೇದಗಳಿಂದ ಪೊಗಳಲ್ಪಟ್ಟ. ಮಾನದ - ಜ್ಞಾನವನ್ನು ಕೊಡತಕ್ಕವ. ಮಾನ್ಯ - ಪೂಜ್ಯ ॥೧೯॥

**೫. ಶ್ರೀಗುರುಹೃದಯಪ್ರಕಾಶಿಕೆ**

ಆದ್ದರಿಂದ ಭಕ್ತವತ್ಸಲನು, ಸರ್ವೈಶ್ವರ್ಯನಿಧಿ. ವಿವಿಕ್ತವೆಂಬ ಸರ್ವವಿಲಕ್ಷಣ. ಜಗದಾಧಾರ. ಸರ್ವೋತ್ತಮ. ದೋಷದೂರ. ಇತರರಿಂದ ಹೊಂದುವುದಕ್ಕೆ ಅಸಾಧ್ಯ. ಅಚಿಂತ್ಯ. ಸ್ವಭೂ ಎಂದರೆ ತನ್ನಿಂದ ತಾನೇ ವ್ಯಕ್ತನಾಗುವಂಥಾವನು. ಸಂಪೂರ್ಣಶಕ್ತನು. ಸದೈಕಪ್ರಕಾರನು. ಸಕಲವೇದದಿಂದಲೇ ಮುಖ್ಯವಾಗಿ ಹೇಳಿಸಿಕೊಳ್ಳುವವನು. ಸರ್ವಜ್ಞಾನಪ್ರದನು. ಸರ್ವಪೂಜ್ಯ.

ಲಕ್ಷ್ಮೀಪತಿ. ಸೂಕ್ಷ್ಮ ಸ್ಥೂಲಾದಿ ವಿರುದ್ಧ ಗುಣ ಉಳ್ಳವನೆಂದು ಸೂಕ್ತಗಳಲ್ಲಿ ಹೇಳಿಸಿಕೊಳ್ಳುವಂಥಾ ಶ್ರೀಜಗನ್ನಾಥ ವಿಠಲನೇ ಗತಿ ಎಂದು ಸ್ಮರಿಸಬೇಕೆಂದರ್ಥ ॥೧೮॥

**ಇಂತು ಗುರುಹೃದಯಪ್ರಕಾಶಿಕಾ ಎಂಬ ವ್ಯಾಖ್ಯಾನ ಸಹಿತ ಶ್ರೀಹರಿಕಥಾಮೃತಸಾರದಲ್ಲಿ ಆರೋಹಣಾನುಕ್ರಮಣಿಕಾ ಸಂಧಿ ಎಂಬ ೨೫ ನೇ ಸಂಧಿ ಸಂಪೂರ್ಣಂ**

**॥ ಶ್ರೀಕೃಷ್ಣಾರ್ಪಣಮಸ್ತು ॥**

# ಸರ್ವವ್ಯಾಖ್ಯಾನಸಾರಸಂಗ್ರಹ

**೧. ಭಕ್ತವತ್ಸಲ-**

ತನ್ನ ಜನರಲ್ಲಿ ಕರುಣಾಮಯವಾದ ಆದರ ವಿಶ್ವಾಸಗಳುಳ್ಳವನು. ಭಕ್ತ್ಯೈಕಲಭ್ಯನಾದದ್ದರಿಂದ. ಭಕ್ತಿಭಾವಕ್ಕೆ ಒಲಿಯುವ ಭಾಗ್ಯಪುರುಷನು. ಭಕ್ತರಲ್ಲಿ ಶ್ರೀಪರಮಾತ್ಮನು ಇಟ್ಟಿರುವ ವಾತ್ಸಲ್ಯವೆಂಬ ಗುಣಧರ್ಮದಿಂದಲೇ ಆವನು ಭಕ್ತರ ವಶನು.

**೨. ಭಾಗ್ಯಪುರುಷ-**

ಪೂರ್ಣ ಐಶ್ವರ್ಯ ಸಂಪನ್ನನಾದದ್ದರಿಂದ. ಎಂದರೆ ಭಾಗ್ಯ ಎಂದರ್ಥ. ಕ್ಷರಾಕ್ಷರ ಪುರುಷರಿಂದ ಪೂಜ್ಯನು. ಆದ್ದರಿಂದ ಪುರುಷ ನಾಮಕನು.

**೩. ವಿವಿಕ್ತ-**

ನಿರ್ಲಿಪ್ತನು. ಸ್ವರಮಣನಾದ್ದರಿಂದ. ಸಕಲ ಜೀವಜಡರಿಂದ ಅತ್ಯಂತ ವಿಲಕ್ಷಣನು. ಏಕಾಂತವಾಸಿಯಾದ್ದರಿಂದ ವಿವಿಕ್ತನು (ಭಾವಪ್ರಕಾಶಿಕೆ ವ್ಯಾಖ್ಯಾನದ ಪ್ರಕಾರ). ವಿವಿಕ್ತನೆಂದರೆ ಸರ್ವವಿಲಕ್ಷಣನೆಂದರ್ಥ.

**೪. ವಿಶ್ವಾಧಾರ-**

ತನ್ನಿಂದ ಸೃಷ್ಟವಾದ ಚರಾಚರಾತ್ಮಕ ವಿಶ್ವಕ್ಕೆ ಆಧಾರ ಭೂತನಾಗಿದ್ದಾನೆ. ಅವನ ಆಶ್ರಯದಲ್ಲಿ ಸಮಗ್ರ ಜಗತ್ತಿದೆ.

**೫. ಸರ್ವೋದ್ರಿಕ್ತ-**

ಸರ್ವಪ್ರಕಾರಗಳಿಂದಲೂ ಉತ್ತಮೋತ್ತಮನು. ಗುಣಪರಿಪೂರ್ಣವಾದ ಸರ್ವೋತ್ತಮ ವಸ್ತು. ಉದ್ರಿಕ್ತ ಎಂದರೆ ಹೆಚ್ಚಾಗಿರುವುದು ಎಂದರ್ಥ. ಸರ್ವಗುಣಗಳಲ್ಲಿಯೂ ಅತಿಶಯವುಳ್ಳವನು(ಪೂರ್ಣತ್ವ).

**೬. ದೋಷವಿದೂರ-**

ಸಮಸ್ತ ದೋಷಗಳಿಂದಲೂ ರಹಿತನು. ದೋಷಗಳಲೇಶ ಸ್ಪರ್ಶವೂ ಇಲ್ಲ.

**೭. ದುರ್ಗಮ-**

ಯಾರಿಂದಲೂ ಹೊಂದಲು ಅಶಕ್ಯನು.

**೮. ದುರ್ವಿಭಾವ್ಯ-**

ಭಾವನಾತೀತನು. ಇಂಥವನೇ ಎಂದು ಭಾವನಾಮಾಡಲಿಕ್ಕೆ ಅಶಕ್ಯನಾದವನು. ಅಚಿಂತ್ಯನು.

**೯. ಸ್ವಹಿ-**

ತನ್ನಿಂದ ತಾನೇ ಪ್ರಖ್ಯಾತನಾದವನು. ಅವನ ಖ್ಯಾತಿಗೆ ಅನ್ಯರ ಸಹಕಾರ ಬೇಕಿಲ್ಲ.

**೧೦. ಶಕ್ತ-**

ಸಕಲ ಜೀವರಿಗೆ ಶಕ್ತಿಪ್ರದನಾಗಿ ಸತ್ತಾಪ್ರದನಾಗಿದ್ದಾನೆ. ಅವನ ಶಕ್ತಿರೂಪವಾದ ಪ್ರೇರಣೆಯಿಲ್ಲದೆ ಜೀವರ ಶಕ್ತಿ ಅಭಿವ್ಯಕ್ತಿಯಾಗಲಾರದು.

**೧೧. ಶಾಶ್ವತ-**

ಚತುರ್ವಿಧನಾಶರಹಿತನು. ನಿತ್ಯನು. ಶಬ್ದದೇಕ ಪ್ರಕಾರನು.

## ಸಕಲ ವೇದೈಕೋಕ್ತ-

ಅನಂತಾನಂತ ವೇದಗಳಿಂದ ಸಂಸ್ತುತ್ಯಮಾನನು. ಸಕಲ ವೇದಗಳಿಂದ ಪ್ರತಿಪಾದ್ಯನು. ಸಕಲ ಸಚ್ಛಾಸ್ತ್ರಸಾರಭೂತನು.

## ಮಾನದ-

ಮಾನ ಎಂದರೆ ಗೌರವ. ಸಕಲ ಜೀವರಿಗೆ ಗೌರವಪ್ರದನು, ಜೀವರಿಗೆ ಕೀರ್ತಿ, ಗೌರವಗಳು ಅವನ ದ್ವಾರವೇ ಪ್ರಾಪ್ತವಾಗುವುವು.

## ಮಾನ್ಯ-

ತಾನಾದರೋ ಗೌರವಾರ್ಹನು. ಸರ್ವರಿಂದ ಸಂಪೂಜ್ಯನು.

## ಮಾಧವ-

ಶ್ರೀಲಕ್ಷ್ಮೀ ಪತಿಯು. ಮಾ ಎಂದರೆ ಜ್ಞಾನಾಭಿಮಾನಿಯಾದ ಶ್ರೀಲಕ್ಷ್ಮೀ. ಎಂದರೆ ಪತಿ ಮತ್ತು ನಿಯಾಮಕನೆಂದರ್ಥ.

ಸಕಲ ವೇದಸೂಕ್ತಗಳಿಂದ ಪ್ರತಿಪಾದ್ಯನು. ಪುರುಷಸೂಕ್ತ ಯನು.

## ಸೂಕ್ಷ್ಮ-

ಸೂಕ್ಷ್ಮ ವಸ್ತುಗಳಲ್ಲಿ ಸೂಕ್ಷ್ಮತರ ರೂಪದಿಂದ ವ್ಯಾಪ್ತನಾಗಿದ್ದಾನೆ. ಜೀವರ ಸ್ವರೂಪವೇ ಅತ್ಯಂತ ಸೂಕ್ಷ್ಮ. ಅಂಥಹ ಸೂಕ್ಷ್ಮ ದಲ್ಲಿ ಅಂತರ್ಗತನಾಗಿ ಶ್ರೀಹರಿಯು ಇದ್ದಾನೆ. ಜಡವಸ್ತುಗಳಲ್ಲಿ ಟ್ಯಾನ್ ಎಂಬ ಅತ್ಯಂತ ಸೂಕ್ಷ್ಮಕಣಗಳಿಗಿಂತಲೂ ಸೂಕ್ಷ್ಮತಮನಾಗಿ ಮಾನ ನಾಗಿದ್ದಾನೆ.

೧೯. ಶ್ರೀ ಜಗನ್ನಾಥವಿಠ್ಠಲನು -

ಶ್ರೀ ಎಂದರೆ ತ್ರಿಲೋಕಾತ್ಮಕವಾದ ಬ್ರಹ್ಮಾಂಡಕ್ಕೆ ಸ್ವಾಮಿಯಾದ ಶ್ರೀಜಗತ್ಪತಿಯು ॥೧೯॥

ಇಂತು ೧೯ನೆಯ ಅಂತ್ಯಪದ್ಯದ **ಸರ್ವವ್ಯಾಖ್ಯಾನಸಾರಸಂಗ್ರಹವು ಸಮಾಪ್ತಿಯಾಯಿತು.**

॥ ಶ್ರೀಮಧ್ವೇಶಾರ್ಪಣಮಸ್ತು ॥

# ಆರೋಹಣತಾರತಮ್ಯಸಂಧಿ

(ಭಾವದರ್ಪಣ ವ್ಯಾಖ್ಯಾನ ೧ನೇ ಶ್ಲೋಕದಿಂದ ೬ನೇ ಶ್ಲೋಕದವರೆಗೆ ಬಿಟ್ಟು ಹೋದ ಭಾಗ)

## ಸಂಧಿಸೂಚನೆ + ಪದ್ಯ ೧

**೪. ಭಾವದರ್ಪಣ**

ವೈಕುಂಠಕ್ಕೆ ಸೋಪಾನರೂಪವಾದಂಥ ಆರೋಹಣತಾರತಮ್ಯಸಂಧಿ ಉಪಕ್ರಮಿಸುತ್ತಾರೆ. ಹರಿಕಥಾ, ಇದರ ಹಿಂದೆ ತಾರತಮ್ಯಗಳನ್ನು ಸಪ್ರಮಾಣಕವಾಗಿ ವಿಶದ ಮಾಡಿರುತ್ತೇವೆ. ಈಗ ಗ್ರಂಥಗೌರವ ಭೀತಿಯಿಂದ ಸಂಕ್ಷೇಪದಿಂದ ಹೇಳುತ್ತದೆ - ಸ್ಥಾವರ. ಯಥಾಹಭಗವಾನ್ ಶಾಂಡಿಲ್ಯಃ. "ತತ್ರ ಸ್ಥಾವರ ಮುಕ್ತೇಭ್ಯೋವರಾಜಂಗಮಮುಕ್ತಿಗಾಃ । ತೇಭ್ಯೋಮಾನುಷಮಾನುಷಮುಕ್ತಾಸ್ತು ತೇಭ್ಯೋ ಮುಕ್ತಾದ್ವಿಜಾಃ ವರೇ। ತತ್ತ್ವೋಪದೇಶಕರ್ತಾರೋ ಮುಕ್ತೇಭ್ಯೋ ಹ್ಯಧಿಕಾ ಮತಾಃ।ತೇಭ್ಯೋಧಿಕಾಸ್ತು ಭೂಪಾಲಮುಕ್ತಿಗಾಃ ಪರಿಕೀರ್ತಿತಾಃ। ಅಧಿಕಾಪಿತರೋಭೂಪೈರ್ಮುಕ್ತಿಗಾಸ್ತೇಭ್ಯ ಏವಹಿ। ಮನುಷ್ಯೋಽಪ್ಯಧಿಕಾ ಪ್ರೋಕ್ತಾಸ್ತೇಭ್ಯಃಸ್ತು ಕರ್ಮಜಾಃ ವರೇ । ತೇಭ್ಯೋ ಆಜಾನಜಾದೇವಾಸ್ತೇಭ್ಯಃ ಸಪ್ತರ್ಷಯಃ ವರೇ । ತೇಭ್ಯಃ ವಹ್ನಿಸ್ತತಃ ಸೂರ್ಯಸ್ತಸ್ಮಾದ್ವಾಚಸ್ಪತಿಃ ಪರಃ। ತಸ್ಮಾದಿಂದ್ರಃ ಪರೋವಮುಕ್ತಸ್ತಸ್ಮಾತ್

೧ಃ ಶತೋಃ ಪರಃ।ಪರಾದ್ಬುದ್ಧಿಸ್ತತೋ ಬ್ರಹ್ಮಾಮುಕ್ತೌಜೀವಾಧಿಕೋಃ ಮತಃ। ಬ್ರಹ್ಮಣಃ ಪರಮವ್ಯಕ್ತಂ ತಸ್ಮಾದ್ವಿಷ್ಣುರ್ಮಹಾಪ್ರಭುರಿತಿ" । ಅತ್ರೈವಪ್ರಕರಣೋ ಮುಕ್ತತಾರತಮ್ಯೋಕ್ತೇ । "ಬ್ರಹ್ಮಾದಿಮಾನುಷಾಂತಾಶ್ಚ ಜ್ಞೇಯಾಸ್ತರತಮಕ್ರಮಾತ್ । ಜ್ಞಾತೇ ತರತಮೇಃಭಾವೇ ವಿಷ್ಣೋರ್ಮಾಹಾತ್ಮ್ಯಮಂಜಸಾ। ಜಾಯತೇ ನಿಷ್ಫಲಂ ನೋಚೇತ್ಸರ್ವಮೇತನ್ನಿಶಾಮ್ಯತಾಮಿತಿ" । ಸ್ಥಾಣು ಎಂದರೆ ಜಡ. ತೃಣ-ಜೀವ. ಅಜಾ-ಮೇಕೆ . ಅವಿ-ಕುರಿ . ಗೋ-ಆಕಳು. ಶೂದ್ರಾದಿ ಎಂದರೆ-ಶೂದ್ರರು, ವೈಶ್ಯರು, ಕ್ಷತ್ರಿಯರು ಎಂಬರ್ಥ. ಭೂದೇವ - ಬ್ರಾಹ್ಮಣ. ಕೋವಿದ. ಜ್ಞಾನಿ. ಕ್ಷಿತಿಪ-ರಾಜ ॥೧॥

## ಪದ್ಯ ೨

ಧರಣೀ. ಗಣ-ಸಮೂಹ. ಶತೋನ ಎಂದರೆ ನೂರು ಕಡಿಮೆ ಎಂಬರ್ಥ ॥೨॥

## ಪದ್ಯ ೩

ಎರಡ್ಯೆದು. ಎರಡ್ಯೆದುಐಂಬತ್ತು ಎಂದರೆ ತೊಂಭತ್ತು ಎಂಬರ್ಥ ॥೩॥

## ಪದ್ಯ ೪

.ಸರಿಯೆನಿಪ. ವ್ರಜೌಕಸ-ವ್ರಜ ಎಂದರೆ ಗೋಕುಲವೇ, ಓಕಸ-ಸ್ಥಾನವಾಗಿ ಉಳ್ಳವರು ॥೪॥

## ಪದ್ಯ ೫

ಅನಳಭಾರ್ಯೆ-ಸ್ವಾಹಾ ಎಂಬರ್ಥ. ಅನಿಮಿಷರು - ದೇವತೆಗಳು. ಧನಪ-ಕುಬೇರ. ದ್ಯುನದಿ-ಗಂಗಾ ॥೫॥


## ಪದ್ಯ ೬

ಪೃಥು. ಇಂದ್ರಸಪ್ತಕರು ಅಂದರೆ ಬಲಿ-೧, ಅದ್ಭುತ-೨, ಶಂಭು-೩, ವಿಧೃತ-೪, ಶ್ರುತಧಾಮಕ-೫, ದಿವಸ್ಪತಿ-೬, ಋತು-೭, ಈ ಏಳುಮಂದಿ ಇಂದ್ರರು. ಎಂಬರ್ಥ. ಪಾವನ ಶುಕ ಉಚಿಷ್ಯ ಬೃಹಸ್ಪತ್ಯನುಜ ॥೬॥

* * *

॥ ಶ್ರೀ ಹರಿಃ ಓಂ ॥

ಶ್ರೀಹರಿದಾಸ ಸಾಹಿತ್ಯ ಪ್ರಚಾರ ಗ್ರಂಥಮಾಲೆ



ಶ್ರೀಜಗನ್ನಾಥದಾಸವರ್ಯಕೃತ

# ಶ್ರೀಮದ್ಹರಿಕಥಾಮೃತಸಾರ

## ಸರ್ವವ್ಯಾಖ್ಯಾನಸಾರಸಂಗ್ರಹ

## ಅಪರೋಕ್ಷತಾರತಮ್ಯಸಂಧಿ

(ಸಂಧಿ - ೨೧)

॥ ಶ್ರೀಃ ಹರಿಃ ಓಂ ॥

ಶ್ರೀಲಕ್ಷ್ಮೀನರಸಿಂಹಾಭಿನ್ನ ಶ್ರೀಜಗನ್ನಾಥವಿಠ್ಠಲಾಯ ನಮಃ

# ಅವರೋಹಣತಾರತಮ್ಯಸಂಧಿ

**ಹರಿಕಥಾಮೃತಸಾರ ಗುರುಗಳ ।**
**ಕರುಣದಿಂದಾಪನಿತು ಪೇಳುವೆ ।**
**ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ ಪಲ್ಲವಿ ॥**

**ಶ್ರೀರಮಣ ನಿಜಭಕ್ತರೆನಿಸುವ ।**
**ವಾರಿಜಾಸನ ಮುಖ್ಯ ನಿರ್ಜರ ।**
**ತಾರತಮ್ಯವ ಪೇಳ್ವೆ ಸಂಕ್ಷೇಪದಲಿ ಗುರುಬಲದಿ ॥ ಸಂಧಿ ಸೂಚನೆ ॥**

ಕರ್ತೃಗಳಾದ ಶ್ರೀಜಗನ್ನಾಥದಾಸರಾಯರು ಶ್ರೀಪರಮಾತ್ಮನ ಭಕ್ತರಾದ ಬ್ರಹ್ಮದೇವರ ಆರಂಭಮಾಡಿ ಮನುಷ್ಯೋತ್ತಮರ ಪರ್ಯಂತ, ತಾರತಮ್ಯವನ್ನು ತಮ್ಮ ಗುರುಗಳ ಅನುಗ್ರಹಬಲದಿಂದ ಸಂಕ್ಷೇಪವಾಗಿ ಹೇಳುತ್ತೇವೆಂತ ಹೇಳಿ, ಶ್ರೀಪರಮಾತ್ಮ ಆರಂಭ ಮಾಡಿ ಇಂದ್ರ-ಕಾಮರ ಪರ್ಯಂತ ತಾರತಮ್ಯ ಈ ಶ್ಲೋಕದಿಂದ ಹೇಳುತ್ತಾರೆ.

## ಪದ್ಯ ೧

**ಮೂಲ–**

**ಕೇಶವನಿಗೆ ನಾರಾಯಣಗೆ ಕಮ ।**
**ಲಾಸನ ಸಮೀರರಿಗೆ ವಾಣೀ ।**
**ವೀಶ ಫಣಿಪ ಮಹೇಶರಿಗೆ ಷಣ್ಮಹಿಷಿಯರ ಪದಕೆ ॥**

**ಶೇಷ ರುದ್ರರ ಪತ್ನೀರಿವರಿಗೆ ।**
**ವಾಸವ ಪ್ರದ್ಯುಮ್ನರಿಗೆ ಸಂ ।**
**ತೋಷದಲಿ ವಂದಿಸುವೆ ಭಕ್ತಿಜ್ಞಾನ ಕೊಡಲೆಂದು ॥೧॥**

**ಪ್ರತಿಪದಾರ್ಥ-**

**ಕೇಶವಗೆ** - ಗುಣಪೂರ್ಣನಾದ, ಬ್ರಹ್ಮ-ರುದ್ರಾದಿಗಳಿಗೆ ಪ್ರಭುವಾದ ಶ್ರೀಮನ್ನಾರಾಯಣದೇವರಿಗೆ **ನಾರಾಯಣಿಗೆ** - ಶ್ರೀಲಕ್ಷ್ಮೀದೇವಿಯರಿಗೆ **ಕಮಲಾಸನ** - ಕಮಲಪೀಠಸ್ಥರಾದ ಬ್ರಹ್ಮದೇವರಿಗೆ, **ಸಮೀರರಿಗೆ** - ಶ್ರೀವಾಯುದೇವರಿಗೆ, **ವಾಣೀ** - ಶ್ರೀಸರಸ್ವತೀದೇವಿಯರಿಗೆ (ತಥಾ ಶ್ರೀಭಾರತಿದೇವಿಯರೂ ಗ್ರಾಹ್ಯಾ), **ವೀಶ** - ಪಕ್ಷಿಶ್ರೇಷ್ಠರಾದ ಶ್ರೀಗರುಡ ದೇವರು, **ಫಣಿಪ** - ಸರ್ಪಶ್ರೇಷ್ಠರಾದ ಶೇಷದೇವರಿಗೆ, **ಮಹೇಶರಿಗೆ** - ಶ್ರೀರುದ್ರದೇವರಿಗೆ, **ಷಣ್ಮಹಿಷಿಯರ ಪದಕೆ** - ನೀಲಾದಿ ಷಣ್ಮಹಿಷಿಯರ ಚರಣಗಳಿಗೆ, **ಶೇಷ ರುದ್ರರ ಪತ್ನೀರಿವರಿಗೆ**- ಶೇಷಪತ್ನಿ ಶ್ರೀವಾರುಣೀದೇವಿ, ಗರುಡದೇವರ ಪತ್ನಿ -ಶ್ರೀಸೌಪರ್ಣೀದೇವಿ ಮತ್ತು ರುದ್ರ ಪತ್ನಿ - ಶ್ರೀಪಾರ್ವತೀ ದೇವಿ ಈ ಮೂವರಿಗೆ **ವಾಸವ ಪ್ರದ್ಯುಮ್ನರಿಗೆ** - ಇಂದ್ರದೇವರು, ಕಾಮದೇವರು ಇವರಿಬ್ಬರಿಗೆ **ಸಂತೋಷದಲಿ ವಂದಿಸುವೆ** - ಅತ್ಯಾದರ ಪೂರ್ವಕವಾಗಿ ನಮಸ್ಕರಿವೆನು. **ಭಕ್ತಿ ಜ್ಞಾನ ಕೊಡಲೆಂದು** - ಶ್ರೀಹರಿಯಲ್ಲಿ ಅವಿಚ್ಛಿನ್ನಭಕ್ತಿಯನ್ನೂ, ಭಗವದ್ವಿಷಯದಲ್ಲಿ ಸಮೀಚೀನವಾದ ಜ್ಞಾನವನ್ನು ನೀಡಲಿ ಎಂದು ಪ್ರಾರ್ಥಿಸುತ್ತೇನೆ ॥೧॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

**ಸಂಧಿಸೂಚನೆ** -

ಮೂಲಕರ್ತೃಗಳಾದ ಶ್ರೀಜಗನ್ನಾಥ ದಾಸರಾಯರು ಶ್ರೀಪರಮಾತ್ಮನ ಭಕ್ತರಾದ ಬ್ರಹ್ಮದೇವರ ಆರಂಭಮಾಡಿ ಮನುಷ್ಯೋತ್ತಮರ ಪರಿಯಂತ ತಾರತಮ್ಯವನ್ನು ತಮ್ಮ ಗುರುಗಳ ಅನುಗ್ರಹ ಬಲದಿಂದ ಸಂಕ್ಷೇಪವಾಗಿ ಹೇಳುತ್ತೇವೆಂತ ಹೇಳಿ, ಶ್ರೀಪರಮಾತ್ಮನ ಆರಂಭ ಮಾಡಿ ಇಂದ್ರ ಕಾಮರ ಪರಿಯಂತ ಈ ಶ್ಲೋಕದಲ್ಲಿ ಹೇಳಿದ್ದಾರೆ.

ಗುಣಪೂರ್ಣನಾದ, ಬ್ರಹ್ಮರುದ್ರಾದಿಗಳಿಗೆ ಸ್ವಾಮಿಯಾದ ಶ್ರೀನಾರಾಯಣ ದೇವರಿಗೆ, ಲಕ್ಷ್ಮೀದೇವೇರಿಗೆ, ಬ್ರಹ್ಮವಾಯುಗಳಿಗೆ ಸರಸ್ವತೀದೇವರು ತಥಾ ಭಾರತೀದೇವೇರು, ಪಕ್ಷಿಶ್ರೇಷ್ಠರಾದ ಗರುಡದೇವರು, ಶೇಷದೇವರು, ರುದ್ರದೇವರಿಗೆ, ನೀಲಾದಿ ಷಣ್ಮಹಿಷಿಯರ ಪಾದಗಳಿಗೆ, ಸೌಪರ್ಣೀ ವಾರುಣೀ ಪಾರ್ವತೀ ಈ ಮೂರು ಮಂದಿಯರಿಗೆ, ಇಂದ್ರದೇವರಿಗೆ ಮನ್ಮಥ ಇವರಿಬ್ಬರಿಗೆ ಅತ್ಯಾದರಪೂರ್ವಕ ನಮಸ್ಕಾರ ಮಾಡುವೆ. ಶ್ರೀಪರಮಾತ್ಮನಲ್ಲಿ ಅವಿಚ್ಛಿನ್ನ ಭಕ್ತಿಯನ್ನೂ, ಸಮೀಚೀನ ಜ್ಞಾನವನ್ನೂ, ವಿಷಯದಲ್ಲಿ ವಿರಕ್ತಿ ಇವುಗಳ ಪರಮಾನುಗ್ರಹ ಮಾಡಿ ಕೊಡಲೆಂದು ಈ ಕಾರಣದಿಂದ ಪ್ರಾರ್ಥಿಸಿ ವಂದನಾ ಮಾಡಿದ್ದೇನೆ ಎಂದು ತಾತ್ಪರ್ಯ ॥೧॥

**೨. ಭಾವಪ್ರಕಾಶಿಕೆ-**

**ಸಂಧಿಸೂಚನೆ**

ಲಕ್ಷ್ಮೀ ಪತಿಯಾದ ಶ್ರೀಪರಮಾತ್ಮನ ನಿಜ ಭಕ್ತರಾದ ಬ್ರಹ್ಮದೇವರ್ಮೊದಲಾದ ದೇವತೆಗಳ ತಾರತಮ್ಯವನ್ನು ಗುರುಕೃಪಾಕಟಾಕ್ಷದಿಂದ ಸಂಕ್ಷೇಪವಾಗಿ ಹೇಳುವೆನು, ಎಂದು ಸಂಧಿಯ ಅಭಿಪ್ರಾಯವನ್ನು ಸೂಚಿಸಿರುತ್ತಾರೆ.

॥ಸಂ.ಸೂ॥

ಶ್ರೀಮನ್ನಾರಾಯಣದೇವರಿಗೂ, ಅವನ ಪತ್ನಿಯರಾದ ಲಕ್ಷ್ಮೀದೇವಿಯರಿಗೂ, ಬ್ರಹ್ಮವಾಯುಗಳಿಗೂ, ಸರಸ್ವತೀ ಭಾರತೀಯರಿಗೂ, ಗರುಡ, ಶೇಷ, ರುದ್ರ, ಕೃಷ್ಣನ ಷಣ್ಮಹಿಷಿಯರು ಇವರುಗಳ ಪಾದಕಮಲಗಳಿಗೂ, ಸೌಪರ್ಣೀ, ವಾರುಣೀ, ಪಾರ್ವತಿಯರಿಗೆ, ಇಂದ್ರ-ಕಾಮರಿಗೆ ಭಕ್ತಿಜ್ಞಾನ ಕೊಡಲೆಂದು ಸಂತೋಷದಿಂದ ನಮಸ್ಕರಿಸುವೆನು. ॥೧॥

**೩. ಶ್ರೀವ್ಯಾಸದಾಸ ಸಿದ್ಧಾಂತ ಕೌಮುದೀ-**

ಮಂದಸುಬೋಧಾರ್ಥಂ ಚತುರ್ವಾರ್ಗಂ ಸಿದ್ಧಾಂತ ಪ್ರಣಾಷ್ಯಾ ಸ್ತೋತ್ರ ಸಂಧಿಮುಖ ಹಿರಣ್ಯರೌಪ್ಯಶೃಂಗ ಮಂಡಿತಂ ತಾರತಮ್ಯಾದ್ರಿಂ ಆರುಹ್ಯ॥ ತದ್ವಿಲಾಸಿ ಶ್ರೀಕಲತ್ರಮಾಹಾತ್ಮ್ಯ, ವೈಕುಂಠಗೋತ್ರಾರೋಹ ಏವ ಪರಮ ದುರ್ಘಟಃ ॥ ತದ್ದಾಸ ಶ್ರೀನಿವಾಸ ದಯಯಾ ಯಥೇಷ್ಟಂ ಪರಿವರ್ತಂತೇ

ತಸ್ಯೈವ ಅನುಗ್ರಹೇರಿತಾಃ ॥' ಇತ್ಯುಕ್ತೇಃ ಅವರೋಹಃ ಅತೀವ ಸುಲಭಃ ಇತಿ ದ್ಯೋತಯಿತುಂ ಮಾನಾಂತರ ಸಂವಾದಿ(ದ) ಲಘುಸಂಧಿಂ ಉಪಕ್ರಮತೇ 'ಶ್ರೀರಮಣ' ಇತಿ॥ ವಿಷ್ಣುಃ ಸರ್ವೋತ್ತಮೋಽಥ ಪ್ರಕೃತಿರಥ ವಿಧಿ ಪ್ರಾಣನಾಥಾವಥೋಕ್ತೇ ಬ್ರಹ್ಮಾಣೀ ಭಾರತೀ ಚ ದ್ವಿಜ ಫಣಿಪಮೃಡಾಶ್ಚ ಸ್ತ್ರಿಯಃ ಷಟ್ ಚ ವಿಷ್ಣೋಃ ॥ ಸೌಪರ್ಣೀ ವಾರುಣೀ ಪರ್ವತಪತಿತನಯಾಚೇಂದ್ರಕಾಮಾ ಇತ್ಯುಕ್ತಮಾಹ - 'ಕೇಶವ' ಇತಿ ॥೧॥

**ಕನ್ನಡಾರ್ಥ-**

'ವಕ್ತವ್ಯಂ ಬ್ರಹ್ಮಗುರುಣಾಂ ಚತುರ್ವಾರಮಥಾಪಿ ವಾ' ಎಂಬ ಪ್ರಮಾಣದಂತೆ, ಮಂದಜನರ ಸಲುವಾಗಿ ನಾಲ್ಕು ಸಲ ಉಪದೇಶಿಸಬೇಕು. ಈ ಯುಕ್ತಿಯನ್ನು ಅನುಸರಿಸಿ, ಸ್ತೋತ್ರಸಂಧಿ ಮುಂತಾದ ಹಿರಣ್ಮಯ ರಜತ ಮಣಿಶೃಂಗಭೂಷಿತವಾದ ತಾರತಮ್ಯಪರ್ವತವನ್ನು ಆರೋಹಣ ಮಾಡಿ ಅಲ್ಲಿ ಶೋಭಿಸುವ ಶ್ರೀಹರಿಯನ್ನು ಮಾತನಾಡಿಸಿ, 'ವೈಕುಂಠಪರ್ವತಾರೋಹಣವು ಬಹಳ ದುರ್ಘಟ. ಅಲ್ಲಿ ನಿವಾಸಿಸುವ ಶ್ರೀಹರಿ ಶ್ರೀನಿವಾಸನ ದಯೆಯಿಂದಲೇ ಅಲ್ಲಿಗೆ ಹೋಗಿ, ಅವನ ಅನುಗ್ರಹದಿಂದಲೇ ಯಥೇಷ್ಟವಾಗಿ ಅಲ್ಲಿ ವಿಹರಿಸುವುದು ಸಾಧ್ಯ. ಹೀಗೆ ವಚನವಿರುವುದರಿಂದ, ಆರೋಹಣಕ್ಕಿಂತ ಅವರೋಹಣವು ಸುಲಭವೆಂದು ತೋರಿಸಲು ಪ್ರಮಾಣಾಂತರ ಸಂವಾದವುಳ್ಳ ಈ ಚಿಕ್ಕಸಂಧಿಯನ್ನು 'ಶ್ರೀರಮಣ' ಈ ಪಲ್ಲವಿ ಪದ್ಯದಿಂದ ಉಪಕ್ರಮಿಸುತ್ತಾರೆ.

ತಾರತಮ್ಯ ಸ್ತೋತ್ರದ 'ವಿಷ್ಣುಃ ಸರ್ವೋತ್ತಮೋಽಥ' ಎಂಬ ಪ್ರಥಮ ಶ್ಲೋಕದಲ್ಲಿ ಹೇಳಿದ ಪ್ರಮೇಯವನ್ನು 'ಕೇಶವ' ಎಂಬ ೧ನೆಯ ಪದ್ಯದಿಂದ ಹೇಳುತ್ತಾರೆ. ॥೧॥

**ಸೂಚನೆ.** ಶ್ಲೋಕವನ್ನು ಮೂಲದಲ್ಲಿಯೆ ಉದಾಹರಿಸಿದ್ದಾರೆ. ಅದರ ಅರ್ಥವೇ ಈ ಪ್ರಥಮ ಪದ್ಯದಲ್ಲಿ ಇದೆ. ಅದು ಸುಲಭವಾಗಿದ್ದುದರಿಂದ ಅದನ್ನುದಾಹರಿಸಿ, ಅರ್ಥ ಬರೆಯುವ ಕಾರಣವಿಲ್ಲ.

೪. ಭಾವದರ್ಪಣ-

ಸಂಧಿ ಸೂಚನೆ-

ಕೇಶವ। ಕಸ್ತು ಈಶಶ್ಚ ಕೇಶೌ, ಕೇಶೌ ವರ್ತಯತೀತಿ ಕೇಶವಃ । ಬ್ರಹ್ಮ ರುದ್ರರನ್ನು ಪ್ರೇರಣೆ ಮಾಡತಕ್ಕವನೆಂಬರ್ಥ ।

ನಾರಾಯಣ-ಲಕ್ಷ್ಮ್ಯಾದಿ ಸಮಸ್ತ ಸ್ವೀಯುರಂತರ್ಯಾಮಿ ರೂಪ ॥೧॥

೫. ಶ್ರೀಗುರುಹೃದಯಪ್ರಕಾಶಿಕೆ-

ಶ್ರೀರಮಣನೆಂಬ ದೇವರು ಮೊದಲುಮಾಡಿ, ತದ್ಭಕ್ತರಾದ ಬ್ರಹ್ಮಾದಿ ಜೀವರ ಅವರೋಹಣತಾರತಮ್ಯವನ್ನ ಸಂತೋಷಾತಿಶಯದಿಂದ ಗುರುಕೃಪಾ ಬಲದಿಂದ ಹೇಳುವ ಪರಿಕಥೆ ಎಂಬ ವೇದಾಂತ ಅಮೃತದ ಸಾರವಾದ ಸಂಗ್ರಹತಾರತಮ್ಯ ಸ್ತುತಿಯನ್ನು ಮುಕ್ತಿ ಸಜ್ಜನರು ಕೇಳಬೇಕು. ॥ಸ೦॥ಸೂ॥

ಕೇಶವನೆಂಬ ಬ್ರಹ್ಮರುದ್ರಾದಿ ನಿಯಾಮಕ ಶ್ರೀಹರಿಗೆ, ಆ ನಾರಾಯಣನ ಪತ್ನಿ ಶ್ರೀಲಕ್ಷ್ಮಿಗೆ, ಕಮಲಾಸನನೆಂಬ ಬ್ರಹ್ಮನಿಗೆ, ಸೂತ್ರನಾಮಕ ಸಮೀರನೆಂಬ ಮುಖ್ಯಪ್ರಾಣನಿಗೆ, ವಾಣಿ ಎಂಬ ಸರಸ್ವತಿಗೆ, ವೀಶನೆಂಬ ಪಕ್ಷೀಂದ್ರ ಗರುಡ, ಫಣಿಪನೆಂಬ ಶೇಷ, ಮಹೇಶನೆಂಬ ರುದ್ರದೇವರಿಗೆ, ಕೃಷ್ಣಪತ್ನ್ಯಷ್ಟಕರ ಪಾದಗಳಿಗೆ, ಶೇಷ ರುದ್ರರ ಪತ್ನಿಯರಾದ ವಾರುಣೀ ಪಾರ್ವತೀದೇವಿಗೆ, ವಾಸವನೆಂಬ ಇಂದ್ರನಿಗೆ, ಪ್ರದ್ಯುಮ್ನನೆಂಬ ಕಾಮನಿಗೆ ಸಹ ಸಂತೋಷಾತಿಶಯದಿಂದ, ಭಕ್ತಿ ಜ್ಞಾನವನ್ನು ಕೊಡಬೇಕೆಂದು ನಮಸ್ಕರಿಸುವೆನು ॥೧॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಸಂಧಿಯಲ್ಲಿ ದಾಸರಾಯರು ಶ್ರೀಮನ್ನಾರಾಯಣನಿಂದ ಪ್ರಾರಂಭಿಸಿ, ದೇವತಾ ತಾರತಮ್ಯ ಕ್ರಮವನ್ನು **ಅವರೋಹಣದಲ್ಲಿ** ವಿವರಿಸುತ್ತಾರೆ.

೧. ಕಂ-ನೀರು. ತತ್ಸಂಬಂಧಿ ಕಮಲಪುಷ್ಪ. ಶ್ರೀಪದ್ಮನಾಭಮೂರ್ತಿಯ ನಾಭೀಕಮಲಸಂಜಾತರಾದ ಬ್ರಹ್ಮದೇವರಿಗೆ ಸಾಂಕೇತವು (ಕಂ). ಈಶ-

ಈಶಾನ್ಯ ಕೋಣಾಧಿಪತಿಯಾದ ಶ್ರೀ ರುದ್ರದೇವರು, ವ-ವರ ಎಂದರೆ ಶ್ರೇಷ್ಠ. ಬ್ರಹ್ಮ-ರುದ್ರಾದಿ ಸಮಸ್ತ ದೇವತೆಗಳಿಂದಲೂ ಉತ್ತಮೋತ್ತಮನಾದ ಶ್ರೀಪರಮಾತ್ಮನು ಕೇಶವನಾಮಕನು.

ಬ್ರಹ್ಮ-ರುದ್ರಾದಿಗಳಿಗೆ ಪ್ರಭುವಾದ, ಗುಣಪೂರ್ಣನಾದ ಶ್ರೀಮನ್ನಾರಾಯಣನೇ ಕೇಶವನು.

೨. **ನಾರಾಯಣನ ಪತ್ನಿಯಾದ** ಶ್ರೀಲಕ್ಷ್ಮೀದೇವಿಗೆ, **ನಾರಾಯಣಿ** ಎಂಬ ಹೆಸರು.

೩. ಶ್ರೀಪರಮಾತ್ಮನ ನಾಭೀಕಮಲಸಂಜಾತರಾಗಿ ಕಮಲಪೀಠಸ್ಥರಾದ ಬ್ರಹ್ಮದೇವರು **ಕಮಲಾಸನರು.**

೪. ಮಹಾಪ್ರಳಯಕಾಲದಲ್ಲೂ ಜಾಗ್ರತರಾಗಿದ್ದು, ಭಗವದ್ವಿಷಯದಲ್ಲಿ ಅತಿರೋಹಿತವಿಮಲವಿಜ್ಞಾನಿಗಳಾದ ಶ್ರೀವಾಯುದೇವರು **ಸಮೀರರು.**

೫. ವಾಗಭಿಮಾನಿಗಳೂ, ವೇದಾಭಿಮಾನಿಗಳೂ, ಚತುರ್ಮುಖಬ್ರಹ್ಮದೇವರ ಪತ್ನಿಯರೂ ಆದ ಶ್ರೀಸರಸ್ವತೀದೇವಿಯರು **ವಾಣಿನಾಮಕರು.**

೬. ವಿ- ಪಕ್ಷಿಗಳು (ಆಕಾಶ ಸಂಚಾರಿಗಳು). **ಈಶ**- ಅಧಿಪತಿ. ಅಂದರೆ ಪಕ್ಷಿಶ್ರೇಷ್ಠರಾದ ಶ್ರೀಗರುಡದೇವರು **ವೀಶ.**

೭. ಫಣಾ ಎಂದರೆ ಹೆಡೆ. ಹೆಡೆಯುಳ್ಳದ್ದು ಫಣೀ, ಅಂದರೆ ಸರ್ಪಗಳು. ಸರ್ಪಶ್ರೇಷ್ಠರಾದ ಶ್ರೀಶೇಷದೇವರು **ಫಣಿಪನಾಮಕರು.**

೮. ಪ್ರಳಯಕಾರಕರಾದ ಶ್ರೀರುದ್ರದೇವರು **ಮಹೇಶರು.** ಮಹ-ಪ್ರಮಥಗಣಗಳು. ಅವುಗಳಿಗೆ ಅಧಿಪತಿಗಳಾದ್ದರಿಂದ ಮಹೇಶರು.

೯. **ಷಣ್ಮಹಿಷಿಯರ ಪದಕ-**

ಶ್ರೀಕೃಷ್ಣನ ಆರುಮಂದಿ ಪತ್ನಿಯರು, ನೀಲಾದಿ ಷಣ್ಮಹಿಷಿಯರು. ಅವರ ಚರಣಗಳಿಗೆ ನಮನವು.

೧೦. **ಶೇಷಪತ್ನಿ-**

ಶೇಷದೇವರ ಪತ್ನಿಯಾದ ವಾರುಣೀದೇವಿ.

೧೧. **ರುದ್ರಪತ್ನಿ-**

ರುದ್ರಪತ್ನಿಯಾದ ಶ್ರೀಪಾರ್ವತೀ. ಹಾಗೆಯೇ ಗರುಡಪತ್ನಿ ಸೌಪರ್ಣೀ-ಗ್ರಾಹ್ಯ.

೧೨. **ಶ್ರೀವಾಸವ-**

ಇಂದ್ರದೇವರು.

೧೪. **ಪ್ರದ್ಯುಮ್ನ-**

ಶ್ರೀಕೃಷ್ಣನಪುತ್ರ ಪ್ರದ್ಯುಮ್ನನು ಕಾಮನ ಅವತಾರ. ಅಂದರೆ, ಇಂದ್ರ ಕಾಮರೆಂದರ್ಥ.

**ತಾರತಮ್ಯಾರೋಹಣ ಕ್ರಮದಲ್ಲಿ-**

೧. ಪರಮಾತ್ಮನಾದ ಶ್ರೀಮನ್ನಾರಾಯಣ (ಕಕ್ಷ ೧).

೨. ನಾರಾಯಣನ ಪತ್ನಿ ಶ್ರೀಲಕ್ಷ್ಮೀದೇವಿಯರು (ಕಕ್ಷ ೨).

೩. ಬ್ರಹ್ಮ-ವಾಯು (ಕಕ್ಷ ೩).

೪. ಸರಸ್ವತೀ-ಭಾರತೀ (ಕಕ್ಷ ೪).

೫. ಗರುಡ(ವೀಶ), ಶೇಷ(ಫಣಿಪ), ರುದ್ರ (ಮಹೇಶ). (ಕಕ್ಷ ೫).

೬. ಷಣ್ಮಹಿಷಿಯರು (ಕಕ್ಷ ೬).

೭. ಗರುಡಪತ್ನಿ ಸೌಪರ್ಣಿ, ಶೇಷಪತ್ನಿ ವಾರುಣಿ, ರುದ್ರಪತ್ನಿ ಶ್ರೀಪಾರ್ವತಿ (ಕಕ್ಷ ೭)

೮. ಇಂದ್ರ (ವಾಸವ), ಕಾಮ (ಪ್ರದ್ಯುಮ್ನ) (ಕಕ್ಷ ೮).

ಈ ದೇವತಾವರ್ಗಕ್ಕೆ ಭಕ್ತಿಪೂರ್ವಕವಾಗಿ ನಮಸ್ಕರಿಸುವೆನು. ಅವರು ನನಗೆ ಶ್ರೀವಿಷ್ಣುವಿನಲ್ಲಿ ದೃಢವಾದ ಭಕ್ತಿ, ಸಮೀಚೀನವಾದ ಜ್ಞಾನ ದಯಪಾಲಿಸಲೆಂದು ದಾಸವರ್ಯರು ಪ್ರಾರ್ಥಿಸುತ್ತಾರೆ ॥೧॥

* * *

## ಪದ್ಯ ೨

**ಮೂಲ -**

**ಪ್ರಾಣದೇವನಿಗೆ ನಮಿಪೆ ಕಾಮನ ।**
**ಸೂನು ಮನು ಗುರು ದಕ್ಷ ಶಚಿ ರತಿ ।**
**ಮಾನಿನಿಯರಿಗೆ ಪ್ರವಹದೇವಗೆ ಸೂರ್ಯ ಸೋಮ ಯಮ ॥**
**ಮಾನವಿಗೆ ವರುಣನಿಗೆ ವೀಣಾ ।**
**ಪಾಣಿ ನಾರದಮುನಿಗೆ ನಮಿಸುವೆ ।**
**ಜ್ಞಾನ ಭಕ್ತಿ ವಿರಕ್ತಿ ಮಾರ್ಗವ ತಿಳಿಸಲೆನಗೆಂದು ॥೨॥**

**ಅವತರಣಿಕೆ -**

ಅಹಂಕಾರಪ್ರಾಣದೇವರಿಂದ ಪ್ರಾರಂಭಿಸಿ, ನಾರದಮುನಿ ಪರ್ಯಂತ ತಾರತಮ್ಯ ಅವರೋಹಣಕ್ರಮದಿಂದ ತಿಳಿಸುತ್ತಾರೆ.

**ಪ್ರತಿಪದಾರ್ಥ-**

**ಪ್ರಾಣದೇವಗೆ-** ಅಹಂಕಾರಪ್ರಾಣದೇವರಿಗೆ, **ನಮಿಪೆ**- ವಂದಿಸುತ್ತೇನೆ. **ಕಾಮನ ಸೂನು** - ಕಾಮಪುತ್ರನಾದ ಅನಿರುದ್ಧನಿಗೆ, **ಮನು**- ಸ್ವಾಯಂಭುವಮನುವಿಗೆ, **ಗುರು**- ಬೃಹಸ್ಪತ್ಯಾಚಾರ್ಯರಿಗೆ, **ದಕ್ಷ**- ದಕ್ಷಪ್ರಜಾಪತಿಗೆ, **ಶಚಿ ರತಿ ಮಾನಿನಿಯರಿಗೆ**- ಇಂದ್ರಪತ್ನಿ ಶಚೀದೇವಿ, ಮನ್ಮಥನ ಪತ್ನಿ ರತಿ ದೇವಿ ಎಂಬ ಸ್ತ್ರೀಯರಿಗೆ, **ಪ್ರವಹದೇವಗೆ**- ಪ್ರವಹವಾಯುದೇವರಿಗೆ, **ಸೂರ್ಯ**- ವಿವಸ್ವಾನ್ ನಾಮಕ ಸೂರ್ಯದೇವರಿಗೆ, **ಸೋಮ**- ಚಂದ್ರದೇವರಿಗೆ, **ಯಮ**- ಯಮಧರ್ಮರಾಯನಿಗೆ, **ಮಾನವಿಗೆ** - ಸ್ವಾಯಂಭುವಮನುವಿನ ಪತ್ನಿ ಶತರೂಪಾದೇವಿಗೆ, **ವರುಣನಿಗೆ**- ವರುಣದೇವರಿಗೆ, **ವೀಣಾಪಾಣಿ ನಾರದ ಮುನಿಗೆ-** ಮಹತೀ ಎಂಬ ವೀಣೆಯನ್ನು ಕರದಲ್ಲಿ ಧರಿಸಿರುವ ನಾರದಮುನಿಗೆ. **ಜ್ಞಾನ ಭಕ್ತಿ ವಿರಕ್ತಿ ಮಾರ್ಗವ**- ಜ್ಞಾನ ಭಕ್ತಿ ವೈರಾಗ್ಯಗಳ ಸುಪಥವನ್ನು **ತಿಳಿಸಲಿ ಎಮಗೆ**- ನಮಗೆ ಉಪದೇಶಿಸಲಿ, **ಎಂದು ನಮಿಸುವೆ** - ಎಂದು ಪ್ರಾರ್ಥಿಸುತ್ತಾ ಸಾಷ್ಟಾಂಗಪೂರ್ವಕ ನಮಸ್ಕರಿಸುತ್ತೇನೆ ॥೧॥.

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅಹಂಕಾರಪ್ರಾಣದೇವರ ಆರಂಭಮಾಡಿ ನಾರದರ ಪರಿಯಂತ ತಾರತಮ್ಯವನ್ನು ಹೇಳುತ್ತಾರೆ.

ಅಹಂಕಾರಪ್ರಾಣದೇವರಿಗೆ ವಂದನಾ ಮಾಡುವೆನು. ಕಾಮಪುತ್ರ ಅನಿರುದ್ಧ, ಸ್ವಾಯಂಭುವಮನು, ಬೃಹಸ್ಪತ್ಯಾಚಾರ್ಯರು, ದಕ್ಷಪ್ರಜೇಶ್ವರನು; ಇಂದ್ರದೇವರ ಪತ್ನಿ ಶಚೀದೇವಿ, ಮನ್ಮಥನ ಪತ್ನಿ ರತೀದೇವಿ, ಈ ಉಭಯ ಸ್ತ್ರೀಯರಿಗೆ, ತದನ್ಯರಿಗೆ, ಪ್ರವಹವಾಯುದೇವರಿಗೆ, ವಿವಸ್ವಾನ್ ನಾಮಕ ಸೂರ್ಯ, ಚಂದ್ರದೇವರು, ಯಮಧರ್ಮರಾಜನು, ಸ್ವಾಯಂಭುವಮನುಪತ್ನಿ ಶತರೂಪದೇವಿ, ವರುಣದೇವರಿಗೆ, ಮಹತೀನಾಮಕ ವೀಣಾ ಕರದಲ್ಲುಳ್ಳ ನಾರದಮುನಿಗೆ, ಜ್ಞಾನ ಭಕ್ತಿ, ವೈರಾಗ್ಯಮಾರ್ಗವನ್ನು ಎನಗೆ ತಿಳಿಸೋವರಾಗಬೇಕೆಂದು ಸಾಷ್ಟಾಂಗ ನಮಸ್ಕಾರ ಮಾಡುವನಾಗಿದ್ದೇನೆಂತ ತಾತ್ಪರ್ಯ||೨||

### ೨. ಭಾವಪ್ರಕಾಶಿಕೆ-

ಅಹಂಕಾರಿಕ ಪ್ರಾಣದೇವರಿಗೆ ನಮಸ್ಕರಿಸುವೆನು. ಮನ್ಮಥಪುತ್ರ ಅನಿರುದ್ಧ, ಮನು, ಗುರು, ದಕ್ಷ, ಶಚಿ, ರತಿ ಇವರಾರು ಮಂದಿಗಳಿಗೆ, ಪ್ರವಹವಾಯುವಿಗೆ, ಸೂರ್ಯ, ಚಂದ್ರ, ಯಮ, ಶತರೂಪ ಇವರು ನಾಲ್ವರಿಗೆ, ವರುಣನಿಗೆ, ನಾರದರಿಗೆ, ಜ್ಞಾನ ಭಕ್ತಿ ವಿರಕ್ತಿ ಮಾರ್ಗವನ್ನು ಎನಗೆ ತಿಳಿಸಲೆಂದು ನಮಸ್ಕರಿಸುವೆನು. ||೨||

### ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

'ಅಥಾऽಸ್ಮಾನ್' || ಪ್ರಾಣೋऽಥೋ ಯೋऽನಿರುದ್ಧೋ ರತಿ ಮನು ಗುರುರ್ವೋ ದಕ್ಷ ಶಚ್ಯೌ ಚ ಪಾಂತು || ತ್ರಾಯಂತಾಂ ನಃ ಸದೈತೇ ಪ್ರವಹ ಉತ ಯಮೋ ಮಾನವೀ ಚಂದ್ರ ಸೂರ್ಯೌ ಚಾಪ್ಯೋऽಥೋ ನಾರದೋऽಥೋ ಭೃಗುಃ ಇತ್ಯುಕ್ತಮಾಹ - 'ಪ್ರಾಣದೇವಗೆ' ಇತಿ ||೨||

**ಕನ್ನಡಾರ್ಥ**

'ಪ್ರಾಣೋಽಥೋ' ಎಂಬ ತಾರತಮ್ಯಶ್ಲೋಕದಲ್ಲಿ ಹೇಳಿದ ಪ್ರಮೇಯವನ್ನು 'ಪ್ರಾಣದೇವಗೆ' ಎಂಬ ಪದ್ಯದಿಂದ ತಿಳಿಸುತ್ತಾರೆ ॥೨॥

**೪. ಭಾವದರ್ಪಣ -**

ಪ್ರಾಣದೇವ । ಅಹಂಕಾರಿಕಪ್ರಾಣ ಎಂಬರ್ಥ । ಕಾಮಸೂನು - ಅನಿರುದ್ಧ, ಮಾನವಿ-ಮನುಪತ್ನಿ ॥೨॥

**೫. ಶ್ರೀಗುರುಹೃದಯಪ್ರಕಾಶಿಕೆ**

ಸರ್ವಶರೀರಾಭಿಮಾನಿ ಅಹಂಕಾರಿಕಪ್ರಾಣದೇವರಿಗೆ, ಕಾಮಪುತ್ರ ಅನಿರುದ್ಧ, ಸ್ವಾಯಂಭುವಮನು, ಬೃಹಸ್ಪತಿ, ದಕ್ಷಪ್ರಜೇಶ್ವರ, ಶಚಿ, ರತಿ ಈ ಆರು ಜನಗಳಿಗೆ, ನಂತರ ಪ್ರವಹವಾಯುದೇವರಿಗೆ, ಸೂರ್ಯ, ಸೋಮ, ವರುಣನಿಗೆ, ವೀಣಾಪಾಣಿ ನಾರದಮುನಿಗೆ ಸಹ ಜ್ಞಾನ ಭಕ್ತಿ ವಿರಕ್ತಿ ಮಾರ್ಗವನ್ನು ನನಗೆ ತಿಳಿಸಬೇಕೆಂದು ನಮಸ್ಕರಿಸುವೆನು ॥೨॥

## ಸರ್ವವ್ಯಾಖ್ಯಾನಸಾರಸಂಗ್ರಹ

ಅಹಂಕಾರಪ್ರಾಣನಿಂದ ಪ್ರಾರಂಭಿಸಿ, ನಾರದಮುನಿ ಪರ್ಯಂತ ಅವರೋಹಣತಾರತಮ್ಯ ಕ್ರಮವನ್ನು ತಿಳಿಸುತ್ತಾರೆ ಪ್ರಸಕ್ತ ಪದ್ಯದಿಂದ.

**೧. ಪ್ರಾಣದೇವಗೆ ನಮಿಪೆ -**

ಅಹಂಕಾರ ಪ್ರಾಣದೇವನಿಗೆ ನಮಸ್ಕರಿಸುತ್ತೇನೆ. ಇವನು ತತ್ತ್ವೇಶನು. ತ್ವಗಭಿಮಾನಿಯೂ, ೪೯ ಮರುದ್ಗಣಗಳಲ್ಲಿ ಒಬ್ಬನು (ಕಕ್ಷ ೯).

**೨. ಕಾಮನ ಸೂನು -**

ಮನ್ಮಥನ ಪುತ್ರನಾದ ಅನಿರುದ್ಧನು. (ಕಕ್ಷ ೧೦)

**೩. ಮನು -**

ಸ್ವಾಯಂಭುವಮನು. ಮನ್ವಂತರಾಧಿಪತಿ. ತತ್ತ್ವೇಶನು. ಗುಹ್ಯಾಭಿಮಾನಿದೇವತಾ. (ಕಕ್ಷ ೧೦).

**೪. ಗುರು -**

ಸುರಗುರುಗಳಾದ ಬೃಹಸ್ಪತ್ಯಾಚಾರ್ಯರು. (ಕಕ್ಷ ೧೧)

**೫. ದಕ್ಷ**

ದಕ್ಷಪ್ರಜಾಪತಿಯು. ತತ್ತ್ವೇಶನು. ಹಸ್ತಾಭಿಮಾನಿದೇವತಾ. (ಕಕ್ಷ ೧೦)

**೬. ಶಚೀ -**

ಇಂದ್ರದೇವರ ಪತ್ನಿ. ಮನೋಭಿಮಾನಿ. (ಕಕ್ಷ ೧೧).

**೭. ರತೀ -**

ಮನ್ಮಥನ ಪತ್ನಿ. ಮನೋಭಿಮಾನಿ. (ಕಕ್ಷ ೧೦).

**೮. ಪ್ರವಹ ದೇವಗೆ -**

ಪ್ರವಹವಾಯುವಿಗೆ. ವಾಯವ್ಯದಿಕ್ಕಿನ ಅಧಿಪತಿ. (ಕಕ್ಷ ೧೧).

**೯. ಸೂರ್ಯ**

ವಿವಸ್ವಾನ್‌ಸೂರ್ಯ ದ್ವಾದಶಾದಿತ್ಯರಲ್ಲಿ ಒಬ್ಬ. (ಕಕ್ಷ ೧೨).

**೧೦. ಸೋಮ -**

ಚಂದ್ರದೇವರು. ವನಸ್ಪತಿಯ ಅಧಿಪತಿ. ದಿಗ್ದೇವತೆ. ಕರ್ಣಾಭಿಮಾನಿ ದೇವತಾ (ಕಕ್ಷ ೧೩).

**೧೩. ವರುಣನಿಗೆ -**

ಸಮುದ್ರರಾಜನಾದ ವರುಣನಿಗೆ. ರಸಾಭಿಮಾನಿ ಮತ್ತು ಅಪ್‌ತತ್ತ್ವಾಭಿಮಾನಿದೇವತಾ (ಕಕ್ಷ ೧೨).

**೧೪. ವೀಣಾಪಾಣಿ ನಾರದಮುನಿಗೆ -**

ಮಹತೀ ಎಂಬ ವೀಣೆಯನ್ನು ಕೈಯಲ್ಲಿ ಧರಿಸಿರುವ ನಾರದಋಷಿಗಳಿಗೆ. ಇವರು ದೇವಋಷಿಗಳು. (ಕಕ್ಷ ೧೪)

**ಅವರೋಹಣ ತಾರತಮ್ಯ -**

೧. ಅಹಂಕಾರ ಪ್ರಾಣ (ಕಕ್ಷ ೯).

೨. ಅನಿರುದ್ಧ, ಬೃಹಸ್ಪತ್ಯಾಚಾರ್ಯರು, ಸ್ವಾಯಂಭುವಮನು, ದಕ್ಷಪ್ರಜಾಪತಿ, ಶಚೀ, ರತೀ (ಕಕ್ಷ ೧೦)

೩. ಪ್ರವಹವಾಯು (ಕಕ್ಷ ೧೧)

೪. ಸೂರ್ಯ, ಚಂದ್ರ, ಶತರೂಪಾದೇವಿ, ಯಮ (ಕಕ್ಷ ೧೨)

೫. ವರುಣ (ಕಕ್ಷ ೧೩).

೬. ನಾರದಮುನಿ (ಕಕ್ಷ ೧೪)

*** * ***

## ಪದ್ಯ - ೨

**ಮೂಲ -**

> **ಅನಲ ಭೃಗು ದಾಕ್ಷಾಯಣಿಯರಿಗೆ ।**
> **ಕನಕಗರ್ಭಜ ಸಪ್ತಋಷಿಗಳಿ ।**
> **ಗೆಣೆಯೆನಿಪ ವೈವಸ್ವತಮನು ಗಾಧಿ ಸಂಭವಗೆ ॥**
> **ದನುಜ ನಿರಯುತಿ ತಾರ ಪ್ರಾವಹಿ ।**
> **ವನಜಮಿತ್ರಗೆ ಅಶ್ವಿನಿ ಗಣಪ ।**
> **ಧನಪ ವಿಷ್ವಕ್ಸೇನರಿಗೆ ವಂದಿಸುವೆನನವರತ ॥೨॥**

**ಅವತರಣಿಕೆ -**

ಅಗ್ನಿಯಿಂದ ವಿಷ್ವಕ್ಸೇನನವರೆಗೆ ಅವರೋಹಣ ತಾರತಮ್ಯ ಹೇಳುತ್ತಾರೆ.

**ಪ್ರತಿಪದಾರ್ಥ -**

**ಅನಲ** - ಅಗ್ನಿದೇವರು, **ಭೃಗು** - ಭೃಗುಋಷಿಗಳು, **ದಾಕ್ಷಾಯಣಿಯರಿಗೆ** - ದಕ್ಷಪ್ರಜಾಪತಿಯ ಪತ್ನಿ ಪ್ರಸೂತಿದೇವಿಯರಿಗೆ, **ಕನಕಗರ್ಭಜ ಸಪ್ತಋಷಿಗಳಿಗೆ** - ಹಿರಣ್ಯಗರ್ಭನಾಮಕರಾದ ಬ್ರಹ್ಮದೇವರ ಪುತ್ರರಾದ ಮರೀಚ್ಯಾದಿ ಸಪ್ತಋಷಿಗಳಿಗೆ, ಈ ಸಪ್ತಋಷಿಗಳಿಗೆ, **ಎಣೆಯೆನಿಪ** - ಸಮಾನರಾಗಿರತಕ್ಕ, **ವೈವಸ್ವತಮನು** - ವೈವಸ್ವತಮನು, **ಗಾಧಿಸಂಭವಗೆ** - ಗಾಧಿರಾಜನ ಮಗನಾದ ವಿಶ್ವಾಮಿತ್ರಋಷಿಗೆ, **ದನುಜ ನಿರಯುತಿ** - ದನು ದೇವಿಯ ಪುತ್ರನಾದ ನಿರ್ಋತಿಗೆ, **ತಾರ** - ಬೃಹಸ್ಪತ್ಯಾಚಾರ್ಯರ ಪತ್ನಿ ತಾರಾದೇವಿಗೆ, **ಪ್ರಾವಹೀ** - ಪ್ರವಹಮರುತನ ಪತ್ನಿ ಪ್ರಾವಹೀದೇವಿಗೆ, **ವನಜಮಿತ್ರಗೆ** - ಮಿತ್ರನಾಮಕ ಸೂರ್ಯನಿಗೆ, **ಅಶ್ವಿನಿ** - ಅಶ್ವಿನೀದೇವತೆಗಳಿಗೆ, **ಗಣಪ** - ವಿಘ್ನೇಶ್ವರನಿಗೆ, **ಧನಪ** - ಕುಬೇರನಿಗೆ, **ವಿಷ್ವಕ್ಸೇನರಿಗೆ** - ವಾಯುಪುತ್ರ ವಿಷ್ವಕ್ಸೇನ ಇವರುಗಳಿಗೆ, **ಅನವರತ ವಂದಿಸುವೆ** - ನಿರಂತರದಲ್ಲಿಯೂ ನಮಸ್ಕರಿಸುತ್ತೇನೆ ॥೨॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅಗ್ನಿದೇವರು ಆರಂಭಮಾಡಿ ಶತಸ್ಥರ ಪರಿಯಂತ ತಾರತಮ್ಯವನ್ನು ಹೇಳತಾರೆ.

ಅಗ್ನಿದೇವರು, ಭೃಗುಋಷಿಗಳು, ದಕ್ಷಪುತ್ರಿ ದಾಕ್ಷಾಯಿಣಿ, ಉಪನಾಮ ಪ್ರಸೂತಿದೇವೀರು, ಹಿರಣ್ಯಗರ್ಭನಾದ ಬ್ರಹ್ಮನ ಪುತ್ರರಾದ ಸಪ್ತಸಂಖ್ಯಾಕ ಮರೀಚ್ಯಾದಿ ಋಷಿಗಳು, ಇವರಿಗೆ ಸಮಾನರು ಎಂತ ಕರಸತಕ್ಕ ವೈವಸ್ವತಮನು, ವಿಶ್ವಾಮಿತ್ರಋಷಿಗೆ, ಅಂತು ಒಂಭತ್ತು ಮಂದಿ ಆಯಿತು; ದನುದೇವೀರ ಪುತ್ರನಾದ ನಿರಋತಿ, ಗುರುಪತ್ನಿಯಾದ ತಾರಾದೇವಿ, ಪ್ರವಹ ಮರುತನ ಪತ್ನಿ ಪ್ರಾವಹಿ, ಮಿತ್ರನಾಮಕ ಸೂರ್ಯ, ಅಶ್ವಿನೀದೇವತೆಗಳು, ವಿಘ್ನೇಶ್ವರ, ಧನಪ, ಕುಬೇರ, ವಾಯುಪುತ್ರ ವಿಷ್ವಕ್ಸೇನ ಈ ಯಾವತ್ತು ಮಂದಿಗಳಿಗೆ ನಿರಂತರದಲ್ಲೂ ನಮಸ್ಕಾರ ಮಾಡೋಣವಾಗಿದ್ದೇನೆಂತ ತಾತ್ಪರ್ಯ ॥೩॥

## ೨. ಭಾವಪ್ರಕಾಶಿಕೆ -

ಅಗ್ನಿದೇವರಿಗೆ, ಭೃಗುಋಷಿಗಳಿಗೆ, ದಾಕ್ಷಾಯಣಿಯಾದ ಪ್ರಸೂತಿ ದೇವಿಯರಿಗೆ, ಬ್ರಹ್ಮದೇವರ ಮಕ್ಕಳಾದ ಏಳು ಋಷಿಗಳಿಗೆ, ಇವರಿಗೆ ಸಮಾನರಾದ ವೈವಸ್ವತಮನುವಿಗೂ, ವಿಶ್ವಾಮಿತ್ರರಿಗೂ, ರಾಕ್ಷಸನಾದ ನಿರಋತಿ, ತಾರೆ, ಪ್ರಾವಹಿ, ಮಿತ್ರನೆಂಬ ಸೂರ್ಯ ಇವರುಗಳಿಗೆ, ಅಶ್ವಿನಿ, ಗಣಪತಿ, ಕುಬೇರ, ವಿಷ್ವಕ್ಸೇನ ಇವರೆಲ್ಲರಿಗೂ ಸರ್ವದಾ ನಮಿಸುವೆನು ॥೩॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

'ಅನಲಕುಲೇಂದ್ರಾ ಪ್ರಸೂತಿಶ್ಚ ನಿತ್ಯವಾನ್॥' ವಿಶ್ವಾಮಿತ್ರೋ ಮರೀಚಿ ಪ್ರಮುಖ ವಿಧಿಸುತಾಃ ಸಪ್ತ ವೈವಸ್ವತಾಖ್ಯಶ್ಚೈವಂ ವೈ ಮಿತ್ರ ತಾರಾ

ವರುಣರಯುತಿನಾಮಾ ಪ್ರಾವಹೀ ಚ ಪ್ರಸನ್ನಾಃ । ವಿಷ್ವಕ್ಸೇನೋऽಶ್ವಿನೌ ತೌ ಗಣಪತಿ ಧನಪೌ ಇತ್ಯಸ್ಯ ಅರ್ಥಮಾಹ-'ಅನಲ' ಇತಿ॥ ಪ-ಅ 'ಅನಲಕುಲೇಂದ್ರಃ ಪ್ರಸೂತಿಶ್ಚ ನಿತ್ಯಮಃ' ॥ ವಿಶ್ವಾಮಿತ್ರ ॥೫॥

**ಕನ್ನಡಾರ್ಥ**

ಈ ಪದ್ಯದಲ್ಲಿ ಹೇಳಿದ ತಾರತಮ್ಯ ಪ್ರಮೇಯವನ್ನು 'ಅನಲ' ಈ ಪದ್ಯದಿಂದ ಹೇಳುತ್ತಾರೆ ॥೫॥

**೪. ಭಾವದರ್ಪಣ -**

ಅನಲ-ಅಗ್ನಿ । ದಾಕ್ಷಾಯಣೀ-ದಕ್ಷಪ್ರಜೇಶ್ವರ ಪತ್ನಿ, ಪ್ರಸೂತಿ ವಿಯಾರ್ಥಾ। ಗಾಧಿಸಂಭವ-ವಿಶ್ವಾಮಿತ್ರನು ॥೫॥

**೫. ಶ್ರೀಗುರುಹೃದಯಪ್ರಕಾಶಿಕೆ**

ಅನಳನೆಂಬ ಅಗ್ನಿಗೆ, ಭೃಗುಮಹರ್ಷಿಗೆ, ದಕ್ಷಪತ್ನಿ ಪ್ರಸೂತೀದೇವಿಗೆ, ಕನಕಗರ್ಭಜನೆಂಬ ಬ್ರಹ್ಮನ ಪುತ್ರರಾದ ಮರೀಚ್ಯಾದಿ ಸಪ್ತಋಷಿಗಳಿಗೆ, ಇವರಿಗೆ ಸಮರಾದ ವೈವಸ್ವತಮನು, ವಿಶ್ವಾಮಿತ್ರರಿಗೆ, ದನುಜನೆಂಬ ನಿರಋತಿಗೆ, ಬೃಹಸ್ಪತಿ ಪತ್ನಿ ತಾರೆಗೆ, ಪ್ರಾವಹೀದೇವಿಗೆ, ವನಜಮಿತ್ರನೆಂಬ ಕಮಲ ಮಿತ್ರನಾದ ಮಿತ್ರನಾಮಕ ಸೂರ್ಯನಿಗೆ, ಅಶ್ವಿನಿದೇವತೆಗಳಿಗೆ, ಗಣಪತಿಗೆ, ಧನಪನೆಂಬ ಕುಬೇರನಿಗೆ, ವಿಷ್ವಕ್ಸೇನನೆಂಬ ದೇವರ ದ್ವಾರಪಾಲಕಾಧಿಪತಿಗೆ ಸಹ ಸದಾ ವಂದಿಸುವೆನು ॥೫॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಪದ್ಯದಲ್ಲಿ ಅಗ್ನಿದೇವರಿಂದ ಆರಂಭಿಸಿ ವಿಷ್ವಕ್ಸೇನನ ಪರ್ಯಂತ ಅವರೋಹಣ ತಾರತಮ್ಯಕ್ರಮವನ್ನು ತಿಳಿಸುತ್ತಾರೆ.

೧. **ಅನಲ** - ಅಗ್ನಿದೇವರು. ಆಗ್ನೇಯಕೋಣಾಧಿಪತಿ. ವಾಗಿಂದ್ರಿಯಾಭಿಮಾನಿ. ತೇಜೋತತ್ತ್ವಾಭಿಮಾನಿ. (ಕಕ್ಷೆ ೧೫).

೩. **ಭೃಗು** - ಋಷಿಶ್ರೇಷ್ಠರು. ತೈತರೀಯ ಉಪನಿಷತ್ತಿಗೆ ಮಂತ್ರ ದ್ರಷ್ಟಾರರು. ಯೋಗಬುದ್ಧ ಮುನಿವರೇಣ್ಯರು. ಹರಿಸರ್ವೋತ್ತಮತ್ವವನ್ನು ಸಾಧಿಸಿ, ಜಗತ್ತಿಗೆ ತೋರಿಸಿದ ಭಾಗವತಶಿಖಾಮಣಿಗಳು. (ಕಕ್ಷ ೧೫).

೪. **ದಾಕ್ಷಾಯಣಿ** - ದಕ್ಷಪ್ರಜೇಶ್ವರನ ಪತ್ನಿ ದಾಕ್ಷಾಯಣೀ (ಪಾರ್ವತಿ ಅಲ್ಲ). ಇವಳಿಗೆ ಪ್ರಸೂತಿದೇವಿ ಎಂತನಾಮ. (ಕಕ್ಷ ೧೫).

೫. **ಕನಕಗರ್ಭಜ** - ಪದ್ಮನಾಭರೂಪೀಶ್ರೀಹರಿಯ ನಾಭಿಕಮಲಸಂಜಾತರಾದ ಬ್ರಹ್ಮದೇವರಿಗೆ ಹಿರಣ್ಯಗರ್ಭಜರೆಂದು ಹೆಸರು(ಕನಕಗರ್ಭ) ಅವರ ಪುತ್ರರು ಮರೀಚ್ಯಾದಿ ಸಪ್ತಋಷಿಗಳು. (ಕಕ್ಷ ೧೬).

೬. **ವೈವಸ್ವತಮನು** - ಪ್ರಸಕ್ತ ಮನ್ವಂತರಾಧಿಪತಿ. (ಕಕ್ಷ ೧೬).

೭. **ಗಾಧಿಸಂಭವ** - ಗಾಧೀರಾಜನ ಪುತ್ರನಾದ ವಿಶ್ವಾಮಿತ್ರಋಷಿಯು. ಅಂತು ಬ್ರಹ್ಮಪುತ್ರರಾದ ಮರೀಚ್ಯಾದಿ ಸಪ್ತಋಷಿಗಳು (ಕಕ್ಷ ೧೬) ವೈವಸ್ವತ ಮನು, ವಿಶ್ವಾಮಿತ್ರ ಈ ಒಂಭತ್ತುಮಂದಿ ೧೬ನೆಯ ಕಕ್ಷದವರು.

೮. **ದನುಜನಿರಋತಿ** - ದನುವಿನ ಪುತ್ರ ನಿರಋತಿ. ಈತನು ರಾಕ್ಷಸ ಕುಲಸಂಜಾತನು. ಆದರೂ ಪ್ರಹ್ಲಾದ, ವಿಭೀಷಣರಂತೆ ದೇವತಾವರ್ಗಕ್ಕೆ ಸೇರಿದವನು. ನೈರುತ್ಯದಿಗಭಿಮಾನಿ. (ಕಕ್ಷ ೧೭).

೯. **ತಾರೆ** - ಬೃಹಸ್ಪತ್ಯಾಚಾರ್ಯರ ಪತ್ನೀ ತಾರದೇವಿ. (ಕಕ್ಷ ೧೭).

೧೦. **ಪ್ರಾವಹೀ** - ಪ್ರವಹವಾಯುವಿನ ಪತ್ನೀ ಪ್ರಾವಹೀದೇವಿ. (ಕಕ್ಷ ೧೭)

೧೧. **ವನಜಮಿತ್ರಗೆ** - ಮಿತ್ರನಾಮಕಸೂರ್ಯನಿಗೆ (ಕರ್ಮೇಂದ್ರಿಯಾಭಿಮಾನಿ) (ಕಕ್ಷ ೧೭).

೧೧. **ಅಶ್ವಿನೀ** - ನಾಸತ್ಯ ಮತ್ತು ದಸ್ರರೆಂಬ ಅವಳೀ ದೇವತೆಗಳು. ನಾಸಿಕೇಂದ್ರಿಯಕ್ಕೆ ಅಭಿಮಾನಿಗಳು. ಗಂಧಗುಣಗ್ರಾಹಕದೇವತೆಗಳು.

೧೨. **ಗಣಪ** - ವಿಘ್ನೇಶ್ವರನು. ಪಾರ್ವತೀಪುತ್ರ. ಕುಮಾರನ ಅನುಜನು, ಭೂತಾಕಾಶಪತಿ. ಶಬ್ದಗುಣಗ್ರಾಹಕನು. ಆದಿಪೂಜ್ಯದೇವತೆ.(ಕಕ್ಷ ೧೮).

೧೩. **ಧನಪ** - ಧನಾಧಿಪತಿಯಾದ ಕುಬೇರ. ಯಕ್ಷರಿಗೆ ಅಧಿಪತಿ. ಉತ್ತರದಿಕ್ ಅಧಿಪತಿ. (ಕಕ್ಷ ೧೮).

೧೪. **ವಿಷ್ವಕ್ಸೇನ** - ಶ್ರೀವಾಸುದೇವರ ಪುತ್ರನಾದ ವಿಷ್ವಕ್ಸೇನ (ಕಕ್ಷ ೧೮) ಅಂತೂ ಅಶ್ವಿನೀದೇವತೆಗಳು, ಗಣಪತಿ, ಕುಬೇರ, ವಿಷ್ವಕ್ಸೇನ, ಈ ನಾಲ್ವರೂ ೧೮ನೆಯ ಕಕ್ಷದವರು.

ಈ ಮೇಲ್ಕಂಡ ದೇವತಾವರ್ಗಕ್ಕೆ ತಾರತಮ್ಯಾನುಸಾರ ನಿರಂತರವೂ ನಮಸ್ಕರಿಸುತ್ತೇನೆ.

೧. ಅಗ್ನಿದೇವರು, ಭೃಗು, ಪ್ರಸೂತಿ (ಕಕ್ಷ ೧೫).

೨. ಬ್ರಹ್ಮನ ಪುತ್ರರಾದ ಮರೀಚ್ಯಾದಿ ಸಪ್ತಋಷಿಗಳು, ವೈವಸ್ವತ, ವಿಶ್ವಾಮಿತ್ರ ಈ ಒಂಭತ್ತು ಮಂದಿ. (ಕಕ್ಷ ೧೬).

೩. ನಿರಋತಿ, ತಾರೆ, ಪ್ರಾವಹೀ, ಮಿತ್ರನಾಮಕಸೂರ್ಯ (ಕಕ್ಷ ೧೭).

೪. ಅಶ್ವಿನೀದೇವತೆಗಳು, ಗಣಪತಿ, ಕುಬೇರ, ವಿಷ್ವಕ್ಸೇನ (ಕಕ್ಷ ೧೮).

ಈ ದೇವತಾವರ್ಗಕ್ಕೆ ಭಕ್ತಿಪೂರ್ವಕವಾಗಿ ನಮಸ್ಕಾರ ಮಾಡುತ್ತೇನೆ ॥೬॥.

## ಪದ್ಯ ೪

**ಮೂಲ -**

ಉಕ್ತದೇವರ್ಕಳನುಳಿದು ಎಂ ।
ಭತ್ತೈದು ಜನರುಗಳು ಮನುಗಳು ।
ಉಚಥ್ಯ ಚ್ಯಾವನ ಯಮಳರಿಗೆ ಕರ್ಮಜರೆನಿಸುತಿಪ್ಪ ॥
ಕಾರ್ತವೀರ್ಯಾರ್ಜುನ ಪ್ರಮುಖ ಶ ।
ತಸ್ಥರಿಗೆ ಪರ್ಜನ್ಯ ಗಂಗಾ ।
ದಿತ್ಯ ಯಮ ಸೋಮಾನಿರುದ್ಧರ ಪತ್ನಿಯರ ಪದಕೆ ॥೪॥

**ಅವತರಣಿಕೆ -**

೧೮ನೆಯ ಕಕ್ಷ ಅವಶಿಷ್ಟ ಆರಂಭಿಸಿಕೊಂಡು ಗಂಗಾ ಪರ್ಜನ್ಯರ ಪರ್ಯಂತ ತಾರತಮ್ಯಾರೋಹಣಕ್ರಮವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ-**

**ಉಕ್ತದೇವರ್ಕಳನುಳಿದು** - ೧೮ನೇ ಕಕ್ಷಕ್ಕೆ ಸೇರಿದ ಶತಸ್ಥರ ಪೈಕಿ, ಉತ್ತಮಕಕ್ಷದಲ್ಲಿ ಉಕ್ತರಾದ ದೇವತೆಗಳು ಹೋಗತಾ ಉಳಿದವರು. **ಎಂಭತ್ತೈದು ಜನರುಗಳು** - ೮೫ ಮಂದಿ (೧೮ನೆಯ ಕಕ್ಷ). **ಮನುಗಳು** - ಸ್ವಾರೋಚಿಷಾದಿ ಮನುಗಳು, **ಚ್ಯಾವನ** - ಚ್ಯವನ ಋಷಿಗಳು, **ಉಚಥ್ಯ** - ಉಚಥ್ಯಮುನಿಗಳು, **ಯಮಳರಿಗೆ** - ಋಷಿಗಳು, ಮನುಗಳು, ಈ ಉಭಯರಿಗೆ, **ಕರ್ಮಜರು ಎನಿಸುತಿಪ್ಪ** - ಕರ್ಮಜ ದೇವತೆಗಳು ಎನಿಸುತ್ತ, **ಕಾರ್ತವೀರ್ಯಾರ್ಜುನ ಪ್ರಮುಖ** - ಕಾರ್ತವೀರ್ಯಾರ್ಜುನನೇ ಮೊದಲಾದ, **ಶತಸ್ಥರಿಗೆ** - ನೂರುಮಂದಿ ಅರಸರಿಗೆ, **ಪರ್ಜನ್ಯ** - ಪರ್ಜನ್ಯನಾಮಕ ಸೂರ್ಯ, **ಗಂಗಾ**- ವರುಣಪತ್ನಿ ಗಂಗಾದೇವಿ, **ಆದಿತ್ಯ**- ಸೂರ್ಯದೇವರ ಪತ್ನಿ ಶ್ರೀಸಂಜ್ಞಾದೇವಿ, **ಯಮ** - ಯಮದೇವರ ಪತ್ನಿ ಶ್ರೀಶ್ಯಾಮಲಾದೇವಿಯರು, **ಸೋಮ** - ಚಂದ್ರನ ಪತ್ನಿ ಶ್ರೀರೋಹಿಣೀದೇವಿ, **ಅನಿರುದ್ಧರ** -

ಕಾಮಪುತ್ರ ಅನಿರುದ್ಧನ ಪತ್ನೀ ಉಷಾದೇವಿಯರು (ವಿರಾಟ್‌ದೇವಿ), **ಪತ್ನಿಯರ ಪದಕೆ** - ಪೂರ್ವೋಕ್ತ ದೇವತೆಗಳ ಪತ್ನಿಯರ ಚರಣಗಳಿಗೆ, ನಮಸ್ಕರಿಸುತ್ತೇನೆಂದು ಅಧ್ಯಾಹಾರ ॥೪॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

೧೮ನೇ ಕಕ್ಷ ಅವಶಿಷ್ಟ ಆರಂಭಮಾಡಿ, ಗಂಗಾಪರ್ಜನ್ಯವರೆಗೂ ತಾರತಮ್ಯ ಹೇಳುತ್ತಾರೆ.

೧೮ನೇ ಕಕ್ಷದಲ್ಲಿ ಸೇರಿದವರಾದ ಶತಸ್ಥರೊಳಗೆ ಉತ್ತಮಕಕ್ಷದಲ್ಲಿ ಉಕ್ತರಾದ ದೇವತೆಗಳು ಹೋಗುತ್ತಾ ಉಳಿದವರು ೮೫ ಜನರುಗಳು ೧೮ನೇ ಕಕ್ಷದವರು ಎಂತ ತಾತ್ಪರ್ಯ. ಎರಡು ವಿಧ. ಸ್ವಾರೋಚಿಷಾದಿ ಮನುಗಳು, ಚ್ಯವನಋಷಿಗಳು, ಉಚಥ್ಯಋಷಿಗಳು, ಮನುಗಳು ಋಷಿಗಳು ಈ ಉಭಯರಿಗೆ ಕರ್ಮಜದೇವತೆಗಳು ಎನಿಸತಕ್ಕ ಕಾರ್ತವೀರ್ಯಾರ್ಜುನನೇ ಮೊದಲಾದ ನೂರು ಮಂದಿ ಅರಸರಿಗೆ ಪರ್ಜನ್ಯನಾಮಕ ಸೂರ್ಯ, ವರುಣದೇವರಪತ್ನಿ ಗಂಗಾದೇವೇರು, ಸೂರ್ಯದೇವರಪತ್ನಿ ಸಂಜ್ಞಾದೇವೇರು, ಯಮದೇವರಪತ್ನಿ ಶಾಮಲಾದೇವೇರು, ಚಂದ್ರದೇವರ ಪತ್ನಿ ರೋಹಿಣೀದೇವೇರು, ಉಷಾದೇವೇರು ಕಾಮಪುತ್ರ ಅನಿರುದ್ಧನಪತ್ನಿ (ಪ್ರತಿನಾಮ ವಿರಾಟ್). ಈ ಪತ್ನೀರಾದ ಪೂರ್ವೋಕ್ತರ ಪಾದಕ್ಕೆ ವಂದನ ಮಾಡಿದ್ದೇನೆಂತ ತಾತ್ಪರ್ಯ ॥೪॥

### ೨. ಭಾವಪ್ರಕಾಶಿಕೆ-

ಉಕ್ತಶೇಷಶತಸ್ಥರು, ಉತ್ತಮ ಕಕ್ಷದಲ್ಲಿ ಸೇರಿದವರು ೧೫ಮಂದಿ ಹೋಗುತ್ತಾ ಉಳಿದ ೮೫ಜನರು, ಮನುಗಳು, ಉಚಥ್ಯರು ಚ್ಯವನ ಇಬ್ಬರಿಗೆ, ಕರ್ಮದೇವರೆನಿಸುವ ಕಾರ್ತವೀರ್ಯಾರ್ಜುನ ಮೊದಲಾದ ಮುಖ್ಯರಾದ ೧೦೦ ಜನರಿಗೆ, ಪರ್ಜನ್ಯನೆಂಬ ಸೂರ್ಯ, ಗಂಗಾ, ಸಂಜ್ಞಾ, ರೋಹಿಣೀ, ಶಾಮಲೆ, ಅನಿರುದ್ಧನ ಪತ್ನಿ ಉಷೆ ಇವರುಗಳ ಪಾದಗಳಿಗೆ ನಮಸ್ಕರಿಸುವೆನು ॥

### ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ-

'ಉಕ್ತಶೇಷಾಃ ಶತಸ್ಥಾಃ' ॥೩॥ ದೇವಾಶ್ಚೋಕ್ತೇತರಾ ಯೇ ತದವರ ಮನವಃ ಚ್ಯಾವನೋಽಥ ಸಂಜ್ಞಾ । ವೈನ್ಯೋ ಯಃ ಕಾರ್ತವೀರ್ಯಃ ಕ್ಷಿತಿಪತಿ ಶಶಿಬಿಂದುಃ ಪ್ರಿಯಾದಿವ್ರತೋಽಥೋ॥ ಗಂಗಾ ಪರ್ಜನ್ಯ ಸಂಜ್ಞೇ ಶಶಿ ಯಮ ದಯಿತೇ ಮಾ ವಿರಾಟ್ ಚಾಶುಪಾಂತು ॥ ಇತ್ಯಸ್ಯ ಅರ್ಥಂ ಬ್ರೂತೇ - 'ಉಕ್ತ' ಇತಿ ॥೪॥

### ೪. ಕನ್ನಡಾರ್ಥ.

'ಉಕ್ತಶೇಷಾ। ಶತಸ್ಥಾಃ' ಈ ಪದ್ಯಗಳ ಪ್ರಮೇಯುಗಳನ್ನು 'ಉಕ್ತ ದೇವರ್ಕಳನು' ಎಂಬ ಪದ್ಯದಿಂದ ಹೇಳುತ್ತಾರೆ ॥೪॥

### ೫. ಭಾವದರ್ಪಣ-

ಉಕ್ತದೇವ - ಉಕ್ತರು ಎಂದರೆ ಪೂರ್ವದಲ್ಲಿ ಹೇಳಿದವರು ಎಂಬರ್ಥ । ಉಳಿದವರು ಎಂದರೆ ಎಂಭತ್ತೈದುಜನ ಈ ಕಕ್ಷೆಯವರು ಎಂಬರ್ಥ ॥೪॥

### ೬. ಶ್ರೀಗುರುಹೃದಯಪ್ರಕಾಶಿಕೆ-

ಉಕ್ತದೇವರ್ಕಳು ಎಂದರೆ ಮೇಲೆ ಹೇಳಿದ ಮುಖ್ಯವಾಯು ರುದ್ರ, ಮಿತ್ರ ಮೊದಲಾದ ಸೂರ್ಯ ಪರ್ಯಂತಾದವರು ೧೫ ಜನರುಳಿದು ಅಂದರೆ ಬಿಟ್ಟು, ಶತಸೋಮಪಾನಾರ್ಹ ದೇವತೆಗಳಲ್ಲಿ ಉಳಿದ ೮೫ ಜನ ಶೇಷಶತಸ್ಥರೆಂಬ ದೇವತೆಗಳಿಗೂ, ಏಕಾದಶಮನುಗಳಿಗೂ, ಉಚಥ್ಯ, ಚ್ಯವನಪುತ್ರ ಚ್ಯಾವನ ರೆಂಬ ಈ ಋಷಿಗಳಿಗೆ ಎಂದರೆ, ಈ ಇಬ್ಬರಿಗೂ ಕರ್ಮಜರೆಂದು ಕರಸುವ ಕಾರ್ತವೀರ್ಯಾರ್ಜುನ ಮೊದಲಾದ ಶತಸ್ಥರಾಜ ಋಷಿಗಣಕ್ಕೆ, ಪರ್ಜನ್ಯನೆಂಬ ಸೂರ್ಯ, ಗಂಗಾದೇವಿ (ಆದಿತ್ಯನೆಂಬ ಸವಿತ್ರನಾಮಕ ಸೂರ್ಯ ಸೋಮನೆಂಬ ಚಂದ್ರ, ಯಮ ಅನಿರುದ್ಧ ಇವರ ಹೆಂಡತಿಯರು) ಸಂಜ್ಞಾ, ರೋಹಿಣಿ, ಶ್ಯಾಮಲಾ, ಉಷಾ ಇವರ ಪಾದಗಳಿಗೆ ಸದಾ ನಮಿಸುವೆನು ॥೪॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಪದ್ಯದಲ್ಲಿ ಶ್ರೀದಾಸರಾಯರು, ಶೇಷಶತಸ್ಥರಿಂದ ಆರಂಭ ಮಾಡಿಕೊಂಡು, ಅನಿರುದ್ಧಪತ್ನೀ ಶ್ರೀವಿರಾಟ್‌ದೇವಿಯ ಪರ್ಯಂತ ತಾರತಮ್ಯ ಅವರೋಹಣಕ್ರಮದಲ್ಲಿ ತಿಳಿಸುತ್ತಾರೆ.

**೧. ಉಕ್ತದೇವತೆಗಳನು ಉಳಿದು-**

ಶತಸ್ಥರ ಸಂಖ್ಯೆ ೧೦೦. ಇವರ ಪೈಕಿ ಉತ್ತಮಪದಕ್ಕೆ ಸೇರಿದ ೧೫ ಮಂದಿ ಹೋಗತಾ, ಉಳಿದಿರುವರ ಸಂಖ್ಯೆ. ೮೫. ಇವರಿಗೆ **ಶೇಷಶತಸ್ಥರೆಂದು** ಹೆಸರು. (ಶತ-ನೂರು, ಶೇಷ-೧೫ ಮಂದಿ ಹೋಗತಾ ಉಳಿದವರು). ಈ ಶೇಷಶತಸ್ಥರೆಲ್ಲರೂ ೧೮ನೆಯ ಕಕ್ಷದವರು.

**೨ ಮನುಗಳು-ಉಚಥ್ಯ ಚ್ಯವನ -**

ಮನುಗಳ ವರ್ಗ, ಉಚಥ್ಯ ಮತ್ತು ಚ್ಯವನ ಎಂಬ ಋಷಿಗಳು, ಈ ಎರಡು ವರ್ಗದವರಿಗೆ (ಯಮಳರಿಗೆ)

**೩. ಕರ್ಮಜರೆನಿಸುತಿಪ್ಪ ಕಾರ್ತವೀರಾರ್ಜುನನ ಪ್ರಮುಖ-**
ಕರ್ಮಜದೇವತೆಗಳು ಎಂದೆನಿಸತಕ್ಕ ಕಾರ್ತವೀರ್ಯಾರ್ಜುನನೇ ಮೊದಲಾದ,

**೪. ಶತಸ್ಥರಿಗೆ -**
ಶತಸ್ಥ ದೇವತೆಗಳಿಗೆ,

**೫. ಪರ್ಜನ್ಯ -**
ಪರ್ಜನ್ಯನಾಮಕನಾದ ಸೂರ್ಯ,

**೬. ಗಂಗಾ -**
ವರುಣನಪತ್ನಿ ಗಂಗಾದೇವಿ,

**೭. ಆದಿತ್ಯ -**
ಸೂರ್ಯನ ಪತ್ನೀ ಸಂಜ್ಞಾದೇವಿ,

**೮. ಯಮ -**
ಯಮಧರ್ಮರಾಜನ ಪತ್ನಿ ಶಾಮಲಾದೇವಿ.

**೯. ಸೋಮ -**
ಚಂದ್ರನ ಪತ್ನಿ ಶ್ರೀರೋಹಿಣೀದೇವಿ.

**೧೦. ಅನಿರುದ್ಧ -**
ಕಾಮಪುತ್ರ ಅನಿರುದ್ಧನ ಪತ್ನಿ ವಿರಾಟ್‌ದೇವಿ.

ಅಂತೂ ೮೫ ಮಂದಿ ಶೇಷಶತಸ್ಥರಿಗೆ, ಮನುಗಳಿಗೆ, ಉಚಥ್ಯ, ಚ್ಯವನ ಋಷಿಗಳಿಗೆ, ಪರ್ಜನ್ಯನಾಮಕಸೂರ್ಯ, ಗಂಗಾದೇವಿ, ಸಂಜ್ಞಾದೇವಿ, ಶಾಮಲಾದೇವಿ, ರೋಹಿಣೀ, ವಿರಾಟ್‌ದೇವಿಯರಿಗೆ (೧೯ನೆಯ ಕಕ್ಷ) ಭಕ್ತಿಪೂರ್ವಕವಾಗಿ ನಮಸ್ಕರಿಸುತ್ತೇನೆ. ॥೪॥

❋ ❋ ❋

## ಪದ್ಯ-೫

**ಮೂಲ -**

**ಹುತವಹನರ್ಧಾಂಗಿನಿಗೆ ಚಂದ್ರನ ।**
**ಸುತ ಬುಧಗೆ ನಾಮಾತ್ಮಕೋಷಾ ।**
**ಶನಿಗೆ ಛಾಯಾತ್ಮಜ ಶನೈಶ್ಚರಗಾನಮಿಪೆ ಸತತ ।**
**ಪ್ರತಿದಿವಸದಲಿ ಬಿಡದೆ ಜೀವ ।**
**ಪ್ರತತಿ ಮಾಡುವ ಕರ್ಮಗಳಿಗಧಿ ।**
**ಪತಿಯೆನಿಪ ಪುಷ್ಕರನ ಪಾದಾಂಬುಜಗಳಿಗೆ ನಮಿಪೆ** ॥೫॥

**ಅವತರಣಿಕೆ -**

ಅಗ್ನಿಪತ್ನಿ ಶ್ರೀಸ್ವಾಹಾದೇವಿಯಿಂದ ಆರಂಭಿಸಿ, ಕರ್ಮಾಭಿಮಾನಿ ಪುಷ್ಕರ ಪರ್ಯಂತ ತಾರತಮ್ಯದ ಅವರೋಹಣಕ್ರಮವನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ -**

**ಹುತವಹನರ್ಧಾಂಗಿನಿಗೆ-** ಅಗ್ನಿ ದೇವರ ಭಾರ್ಯಾ ಶ್ರೀಸ್ವಾಹಾದೇವಿಗೆ, **ಚಂದ್ರನ ಸುತ ಬುಧಗೆ -** ಚಂದ್ರನ ಮಗನಾದ ಬುಧನಿಗೆ, **ನಾಮಾತ್ಮಕ ಉಷಾಸತಿಗೆ -** ಭಗವನ್ನಾಮಗಳಿಗೆ ಅಭಿಮಾನಿನಿಯಾದ ಅಶ್ವಿನೀದೇವತೆಗಳ ಪತ್ನಿ ಶ್ರೀಉಷಾದೇವಿಗೆ, **ಛಾಯಾತ್ಮಜ ಶನೈಶ್ಚರಗೆ -** ಸೂರ್ಯನ ಪತ್ನಿ ಛಾಯಾದೇವಿಯರ ಪುತ್ರನಾದ ಶನೈಶ್ಚರನಿಗೆ, **ಸತತ ಅನಮಿಪೆ -** ನಿರಂತರ ವಲ್ಲಿಯೂ ವಂದಿಸುತ್ತೇನೆ. **ಜೀವಪ್ರತತಿ -** ತ್ರಿವಿಧಜೀವರುಗಳ ಸಮೂಹವು, **ಮಾಡುವ ಕರ್ಮಗಳಿಗೆ -** ಮಾಡತಕ್ಕ ಕರ್ಮಗಳಿಗೆ, **ಅಧಿಪತಿಯೆನಿಪ -** ಅಭಿಮಾನಿ ಎನಿಸುವ, **ಪುಷ್ಕರನ -** ಪುಷ್ಕರನೆಂಬ ದೇವತೆಯು, **ಪಾದಾಂಬುಜಗಳಿಗೆ -** ಚರಣಕಮಲಗಳಿಗೆ, **ಪ್ರತಿದಿವಸದಲಿ ಬಿಡದೆ -** ಕ್ಷಣಕಾಲವಾದರೂ ಬಿಡದ, **ನಮಿಪೆ -** ನಮಸ್ಕರಿಸುತ್ತೇನೆ. ॥೫॥

※ ※ ※

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಸ್ವಾಹಾದೇವಿ ಆರಭ್ಯ ಪುಷ್ಕರನ ಪರ್ಯಂತ ತಾರತಮ್ಯವನ್ನ ಹೇಳುತಾರೆ.

ಅಗ್ನಿ ದೇವರ ಭಾರ್ಯ ಸ್ವಾಹಾದೇವೀರಿಗೆ, ಚಂದ್ರನ ಪುತ್ರನಾದ ಬುಧನಿಗೆ, ಭಗವನ್ನಾಮಗಳಿಗೆ ಅಭಿಮಾನಿಯಾದ ಅಶ್ವಿನೀಭಾರ್ಯರಾದ ಉಷಾದೇವೀರು, ಸೂರ್ಯಗೆ ದ್ವಿತೀಯಪತ್ನಿಯಾದ ಛಾಯಾದೇವೀರ ಪುತ್ರನಾದ ಶನೈಶ್ಚರನಿಗೆ, ಇವರುಗಳಿಗೆ ಚೆಂದಾಗಿ ವಂದನಾ ಮಾಡುವೆನು. ನಿರಂತರದಲ್ಲೂ ಪ್ರತಿದಿನದಲ್ಲೂ ಕ್ಷಣಲವಕಾಲವಾದರೂ ಬಿಡದೆ, ತ್ರಿವಿಧ ಜೀವಸಮೂಹ ಮಾಡತಕ್ಕ ಕರ್ಮಗಳಿಗೆ ಅಭಿಮಾನಿ ಎನಿಸತಕ್ಕ ಪುಷ್ಕರನ ಪಾದಕಮಲಗಳಿಗೆ ವಂದನ ಮಾಡಿದ್ದೇನೆ ಎಂತ ತಾತ್ಪರ್ಯ. ಈ ರೀತಿ ಪ್ರಾರ್ಥನೀಯರಾಗಬೇಕು ಎಂತ ತಾತ್ಪರ್ಯ ॥೫॥

**೨. ಭಾವಪ್ರಕಾಶಿಕೆ -**

ಅಗ್ನಿಪುರುಷದೇವರು. ಇವರ ಹೆಂಡತಿ ಸ್ವಾಹಾದೇವಿ. ಬುಧ, ಅಶ್ವಿನೀ ಭಾರ್ಯಾ ಉಷಾ, ಶನೈಶ್ಚರ, ಇವರಿಗೆ ಸರ್ವದಾ ನಮಸ್ಕರಿಸುವೆನು. ಪ್ರತಿ ಜೀವರು ಮಾಡುವ ಕರ್ಮಗಳಿಗೆ ಅಭಿಮಾನಿ ಪುಷ್ಕರನ ಪಾದಾಂಬುಜಗಳಿಗೆ ನಮಸ್ಕರಿಸುವೆನು. ॥೫॥

**೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ-**

'ಏಭ್ಯೋಽನ್ಯೇ ಚಾಗ್ನಿಜಾಯಾ ಚ ಜಲಮಯ ಬುಧಸ್ತ್ವಾಪಿ ನಾಸತ್ಯ ಕೋಷಾಃ ಚೈವಂ ಛಾಯಾ ತಥಾತ್ಮಾ ಶನಿರಪಿ ಕಥಿತಃ ಪುಷ್ಕರಃ ಕರ್ಮಪೋಽಪಿ ॥೪॥ 'ಇತ್ಯುಕ್ತಮಾಹ' 'ಹುತವಹ' ಇತಿ ॥೫॥

**೪. ಕನ್ನಡಾರ್ಥ -**

'ಏಭ್ಯೋಽನ್ಯೇ' ಈ ಪದ್ಯದಿಂದ ಹೇಳಿದ ಪ್ರಮೇಯವಿಶೇಷವನ್ನು ಮೇಲೆ ಹೇಳಿದ 'ಹುತವಹಾದಿ ಎಲ್ಲ ದೇವತೆಗಳನ್ನು ಈ ಪದ್ಯದಿಂದ ಹೇಳುತ್ತಾರೆ. ॥೫॥

**೫. ಭಾವದರ್ಪಣ-**

ಹುತವಹ-ಅಗ್ನಿ, ಅರ್ಧಾಂಗಿನಿ-ಹೆಂಡತಿ ॥೫॥

**೬. ಶ್ರೀಗುರುಹೃದಯಪ್ರಕಾಶಿಕೆ-**

ಹುತವಹನರ್ಧಾಂಗಿನಿ ಎಂಬ ಸ್ವಾಹಾದೇವಿಗೆ, ಚಂದ್ರಪುತ್ರ ಬುಧನಿಗೆ, ದೇವರನಾಮಾಭಿಮಾನಿ ಅಶ್ವಿನೀಪತ್ನೀ ಉಷಾದೇವಿಗೆ, ಛಾಯಾಪುತ್ರ ಶನೈಶ್ಚರನಿಗೆ ಸಹ ವಂದಿಸುವೆನು. ಪ್ರತಿದಿನದಲ್ಲೂ ಜನರು ಮಾಡುವ ಸರ್ವ ಕರ್ಮಗಳಿಗೆ ಅಧಿಪತಿಯಾದ ಪುಷ್ಕರನ ಪಾದಕಮಲಗಳಿಗೆ ನಮಿಸುವೆನು ॥೫॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಪದ್ಯದಲ್ಲಿ ಅಗ್ನಿಪತ್ನಿ ಶ್ರೀಸ್ವಾಹಾದೇವಿಯವರಿಂದ ಆರಂಭಿಸಿ, ಪುಷ್ಕರನ ಪರ್ಯಂತ ದೇವತಾತಾರತಮ್ಯ ಅವರೋಹಣಕ್ರಮವನ್ನು ತಿಳಿಸುತ್ತಾರೆ.

**೧. ಹುತವಹನ ಅರ್ಧಾಂಗಿನಿಗೆ -**

ಯಜ್ಞ-ಯಾಗಾದಿಗಳಲ್ಲಿ ದೇವತೆಗಳಿಗೆ ಕೊಡುವ ಹವಿಸ್ಸು ಅಗ್ನಿ ಪುರುಷದೇವರ ದ್ವಾರಾ ಸೇರುವುದರಿಂದ ಅಗ್ನಿಗೆ **ಹುತವಹನ** ಎಂದು ಹೆಸರು. ಹುತ-ಯಜ್ಞದ ಹವಿಸ್ಸನ್ನು. ವಹನ-ತೆಗೆದುಕೊಂಡು ಆಯಾಯಾ ದೇವತೆಗಳಿಗೆ ಅರ್ಪಿಸುವವನು ಅಗ್ನಿಯು. ಇದರಿಂದ ಅವನಿಗೆ ಅಮರಾಸ್ಯ ಅಥವಾ ದೇವ ಮುಖನೆಂತಲೂ ಹೆಸರು. ಅಂಥಹ ಹುತವಹನ ನಾಮಕನಾದ ಅಗ್ನಿಯ ಭಾರ್ಯೆ ಶ್ರೀಸ್ವಾಹಾದೇವಿ(ಅರ್ಧಾಂಗಿ) (ಕಕ್ಷೆ ೨೨).

**೨. ಚಂದ್ರಸುತ ಬುಧನಿಗೆ -** ಚಂದ್ರನಿಂದ ತಾರಾದೇವಿಯಲ್ಲಿ ಜನಿಸಿದ ಬುಧನು ಚಂದ್ರಪುತ್ರನು. ಜಲಾಭಿಮಾನಿದೇವತಾ. ನವಗ್ರಹಗಳಲ್ಲಿ ಒಬ್ಬನು. (ಕಕ್ಷ ೨೩).

**೩. ನಾಮಾತ್ಮಿಕಾ ಉಷಾಸತಿಗೆ -**

ನಾಮಾತ್ಮಿಕಾ-ಭಗವನ್ನಾಮಗಳಿಗೆ ಅಭಿಮಾನಿನಿಯಾದ ಶ್ರೀಉಷಾದೇವಿಗೆ(ಅಶ್ವಿನೀದೇವತೆಗಳ ಪತ್ನಿ) ಭಗವನ್ನಾಮಗಳನ್ನು ಉಚ್ಚರಿಸುವವರಿಗೆ, ಧ್ಯಾನಮಾಡುವವರಿಗೆ ತತ್ಫಲವನ್ನು ಶ್ರೀಹರಿಯು ಉಷಾದೇವಿಯ ದ್ವಾರಾ ನೀಡುವನು. (ಕಕ್ಷ ೨೪)

**೪. ಛಾಯಾತ್ಮಜ ಶನೈಶ್ವರಗೆ -**

ಸೂರ್ಯನಿಗೆ ಇಬ್ಬರು ಪತ್ನಿಯರು. ೧. ಸಂಜ್ಞಾದೇವಿ. ೨. ಛಾಯಾದೇವಿ. ದ್ವಿತೀಯಪತ್ನಿ ಶ್ರೀಛಾಯಾದೇವಿಯಲ್ಲಿ ಸೂರ್ಯನಿಂದ ಜನಿಸಿದವನು, ಶನೈಶ್ವರನು. ಪೃಥ್ವೀತತ್ತ್ವಕ್ಕೆ ಅಭಿಮಾನಿ. ನವಗ್ರಹಗಳಲ್ಲಿ ಒಬ್ಬನು. (ಕ.೨೫).

**೫. ಜೀವಪ್ರತತಿ ಮಾಡುವ -**

ಭಗವತ್ಸೃಷ್ಟಿಯಲ್ಲಿ ಸಕಲ ತ್ರಿವಿಧಜೀವರ ಸಮೂಹವು ಕ್ಷಣಕಾಲವಾದರೂ ಬಿಡದೆ ಅನೇಕ ಕರ್ಮಗಳನ್ನು ಮಾಡುತ್ತಿರುವರು. (ಸಂಕರ್ಮ, ಮಿಶ್ರಕರ್ಮ, ದುಷ್ಕರ್ಮ). ಹೀಗೆ ಮಾಡುತ್ತಿರುವ ಜೀವರ,

**೬. ಕರ್ಮಗಳಿಗಧಿಪತಿಯೆನಿಪ -**

ಸಕಲ ಕರ್ಮಗಳಿಗೆ ಅಭಿಮಾನಿಯಾದ

**೭. ಪುಷ್ಕರನ ಪಾದಾಂಬುಜಗಳಿಗೆ ನಮಿಪೆ -**

ಪುಷ್ಕರದೇವನ ಪಾದಕಮಲಗಳಿಗೆ ನಮಸ್ಕರಿಸುತ್ತೇನೆ. (ಕ.೨೬).

ಇಂತು, ೧. ಶ್ರೀಸ್ವಾಹಾದೇವಿ (ಕ. ೨೨).

೨. ಶ್ರೀಚಂದ್ರನಪುತ್ರ ಬುಧ (ಕ. ೨೩).

೩. ಶ್ರೀಉಷಾದೇವಿ (ಕ. ೨೪).

೪. ಶನೈಶ್ಚರ (ಕ. ೨೫).

೫. ಪುಷ್ಕರ (ಕ. ೨೬).

ಈ ದೇವತಾವರ್ಗಕ್ಕೆ ತಾರತಮ್ಯಾನುಸಾರ ನಮಸ್ಕರಿಸುತ್ತೇನೆ. ॥೫॥

* * *

## ಪದ್ಯ - ೬

ಮೂಲ -

ಅನಮಿಷ ಅಜಾನಜರಿಗೆ ಕೃ
ಶಾನುಸುತರಿಗೆ ಗೋವ್ರಜದೊಳಿಹ ।
ಮಾನಿನಿಯರಿಗೆ ಚಿರಪಿತರು ಶತನ್ಯೂನ ಶತಕೋಟಿ ॥
ಮೌನಿಜನರಿಗೆ ದೇವ ಮಾನವ ।
ಗಾನಪ್ರೌಢರಿಗವನಿಪರಿಗೆ ರ ।
ಮಾನಿವಾಸನ ದಾಸವರ್ಗಕೆ ನಮಿಪೆನನವರತ ॥೬॥

**ಅವತರಣಿಕೆ -**

ಅಜಾನಜದೇವತೆಗಳಿಂದ ಆರಂಭಮಾಡಿ, ನಿರಂಶಮುಕ್ತಿಯೋಗ್ಯ ಜೀವವರ್ಗ ಪರ್ಯಂತ ತಾರತಮ್ಯಕ್ರಮವನ್ನು ಹೇಳುತ್ತಾರೆ.

**ಪ್ರತಿಪದಾರ್ಥ -**

**ಅಜಾನಜರಿಗೆ** - ೨೬ನೆಯ ಕಕ್ಷದಿಂದ ಆರಂಭಿಸಿ, ೩೦ನೆಯ ಕಕ್ಷದವರೆವಿಗೂ ಇರುವ ಅಜಾನಜದೇವತೆಗಳಿಗೆ, **ಅನಮಿಷೆ**- ಚೆಂದಾಗಿ ನಮನ ಮಾಡುವೆನು. **ಕೃಶಾನುಸುತರಿಗೆ**- ಅಗ್ನಿದೇವರ ಪುತ್ರರಿಗೆ, **ಗೋವ್ರಜದೊಳಿಹ ಮಾನಿನಿಯರಿಗೆ** - ೧೬,೦೦೦ ಮಂದಿ ಗೋಪಸ್ತ್ರೀಯರಿಗೆ, **ಚಿರಪಿತರು**- ಚಿರಪಿತೃದೇವತೆಗಳಿಗೆ, **ಶತನ್ಯೂನ ಶತಕೋಟಿ**- ನೂರು ಕಡಿಮೆ ನೂರುಕೋಟಿಸಂಖ್ಯಾಕರಾದ, **ಮೌನಿಜನರಿಗೆ** - ಋಷಿವರ್ಗಕ್ಕೆ, **ದೇವ ಮಾನವ** - ದೇವಸಾಂಕೇತರಾದ ಮತ್ತು ಮಾನವಸಾಂಕೇತರಾದ, **ಗಾನ ಪ್ರೌಢರಿಗೆ** - ಗಾನವಿಶಾರದರಾದ, ದೇವ ಮತ್ತು ಮನುಷ್ಯಗಂಧರ್ವರಿಗೆ, **ರಮಾನಿವಾಸನ ದಾಸವರ್ಗಕೆ** - ಶ್ರೀಪರಮಾತ್ಮನ ಭಕ್ತರಾದ ಮಾನುಷೋತ್ತಮರಾದ ಹರಿದಾಸವರ್ಗಕ್ಕೆ, **ಅನವರತ ಅನಮಿಷೆ** - ನಿರಂತರದಲ್ಲೂ ವಂದನೆ ಮಾಡುತ್ತೇನೆ. ॥೬॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಅಜಾನಜರ ಆರಂಭಮಾಡಿ ನಿರಂಶರವರೆಗೂ ತಾರತಮ್ಯವನ್ನ ಹೇಳತಾರೆ.

ಅಗ್ನಿದೇವರಪುತ್ರರಿಗೆ, ಗೋಕುಲದಲ್ಲಿರತಕ್ಕ ೧೬,೦೦೦ ಮಂದಿ ಗೋಪಸ್ತ್ರೀಯರಿಗೆ, ಚಿರಪಿತರು, ನೂರುಕಡಿಮೆ ನೂರುಕೋಟಿ ಋಷಿಗಳಿಗೆ. ಗಾನಶೂರರಾದ ದೇವಗಂಧರ್ವರಿಗೆ, ೨೬ನೇ ಕಕ್ಷದಾರಭ್ಯ ೩೦ನೇ ಕಕ್ಷದವರೆಗೂ ಆಜಾನಜರು, ಈ ಆಜಾನಜರಿಗೆ ಚೆಂದಾಗಿ ವಂದನ ಮಾಡುವೆನು. ಮಾನವ ಸಾಂಕೇತರಾದ ಗಾನದಲ್ಲಿ ಪ್ರೌಢರಾದ ಮನುಷ್ಯಗಂಧರ್ವರಿಗೆ, ಮಾನುಷ ಚಕ್ರವರ್ತಿಗಳಿಗೆ, ರಮಾದೇವೇರಿಗೆ ಆವಾಸಕ್ಕೆ ಯೋಗ್ಯವಾದ ವಕ್ಷಸ್ಥಳಯುಕ್ತ

ನಾದ ಶ್ರೀಪರಮಾತ್ಮನ ದಾಸರ ಸಮೂಹಕ್ಕೆ ಎಂದರೆ, ಭಗವದ್ಭಕ್ತರಾದ ಮಾನುಷೋತ್ತಮರು ಎಂತ ಅರ್ಥ. ಇವರುಗಳಿಗೆ ನಿರಂತರವನ್ನೂ ವಂದನೆ ಮಾಡಿದ್ದೇನೆ ಎಂತ ತಾತ್ಪರ್ಯ ॥೬॥

## ೨. ಭಾವಪ್ರಕಾಶಿಕೆ-

ಆಜಾನಜದೇವತೆಗಳಿಗೆ, ಅಗ್ನಿಪುತ್ರರಾದ ೧೬,೦೦೦ ಮಂದಿಯಾಗಿ, ಕೃಷ್ಣಾಂಗಸಂಗ ಹೊಂದಿದ ಗೋಪಿಕಾಸ್ತ್ರೀಯರಿಗೆ, ಪಿತೃಗಳಿಗೆ, ೧೦೦ ಕಮ್ಮಿ ೧೦೦ಕೋಟಿ ಸಂಖ್ಯಾತರಾದ ಋಷಿಗಳಿಗೆ, ದೇವಗಂಧರ್ವ, ಮನುಷ್ಯಗಂಧರ್ವರಿಗೆ, ಚಕ್ರವರ್ತಿಗಳಿಗೆ, ರಮಾಪತಿಯಾದ ಶ್ರೀಪರಮಾತ್ಮನ ದಾಸರಾದ ಮನುಷ್ಯೋತ್ತಮರಿಗೆ ಇವರೆಲ್ಲರಿಗೂ ಸರ್ವದಾ ನಮಸ್ಕಾರ ಮಾಡುವೆನು. ॥೬॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ

ಯೇsಥಾಥೋ ಆಜ್ಯತಾನಾಮಿಕ ಕಥಿತ ಸುರಾಃ ಮಧ್ಯಭಾಗೇ ಸಮಾಸ್ತೇ ಪಿಷ್ಟ್ವಾದ್ಯಾಃ ನಃ ಪುನಂತು ಕ್ರಮಗದಿತ ಮಹಾಭಾರತಮ್ಯಾ ಯುಕ್ತಾಃ ॥೧॥ ಇತ್ಯೇತದ್ ವಿಪ್ರಸೋತಿ ಅನಮಿಪೆ ಇತಿ ॥೬॥

### ಕನ್ನಡಾರ್ಥ

'ಯೇsಥಾಥೋ' ಈ ಪದ್ಯಭಾವವನ್ನು 'ಅನಮಿಪೆ' ಈ ಪದ್ಯದಿಂದ ವಿವರಿಸುತ್ತಾರೆ. ॥೬॥

## ೪. ಭಾವದರ್ಪಣ -

ಅನಮಿಪೆ । ಕೃಶಾನುಸುತರು-ಅಗ್ನಿಪುತ್ರರು ॥೬॥

## ೫. ಶ್ರೀಗುರುಹೃದಯಪ್ರಕಾಶಿಕೆ -

ಆಜಾನಜ ದೇವತೆಗಳಿಗೆ ನಾನು ನಮಿಸುವೆನು. ಅಗ್ನಿಪುತ್ರರಾದ ೧೬,೦೦೦ ಜನ ಕೃಷ್ಣಪತ್ನಿಯರಿಗೆ ಗೋಕುಲದ ಗೋಪಸ್ತ್ರೀಯರಿಗೆ, ಪಿತೃಗಳಿಗೆ, ನೂರುಕಡಿಮೆ ಶತಕೋಟಿ ವಾನಿಜನರೆಂಬ ಋಷಿಗಳಿಗೆ, ದೇವಮಾನವ

ಗಾನಪ್ರೌಢರೆಂಬ ದೇವಗಂಧರ್ವರಿಗೆ, ಮನುಷ್ಯಗಂಧರ್ವರಿಗೆ, ಅವನಿಪರೆಂಬ ದೊರೆಗಳಿಗೆ, ರಮಾಸಿವಾಸನಾದ ದೇವರ ದಾಸವರ್ಗವೆಂಬ ಮನುಷ್ಯೋತ್ತಮರಿಗೆ ಸದಾ ನಮಿಸುವೆನು. ॥೬॥

## ಸರ್ವವ್ಯಾಖ್ಯಾನ ಸಾರಸಂಗ್ರಹ

ಪ್ರಸಕ್ತ ಪದ್ಯದಿಂದ ದಾಸವರ್ಯರು ಅಜಾನಜದೇವತಾರಭ್ಯ ನಿರಂಶ ಮಾನುಷೋತ್ತಮಪರ್ಯಂತ ತಾರತಮ್ಯ ಅವರೋಹಣಕ್ರಮವನ್ನು ತಿಳಿಸುತ್ತಾರೆ.

೧. **ಅಜಾನಜರಿಗೆ ಅನೆಮಿಷೆ-**

ಅಜಾನಜದೇವತಾವರ್ಗಕ್ಕೆ ನಮಸ್ಕರಿಸುತ್ತೇನೆ. (ಕ. ೨೭).

೨. **ಕೃಶಾನುಸುತರಿಗೆ-**

ಕೃಶಾನು-ಅಗ್ನಿದೇವರು. ಅಗ್ನಿದೇವರ ಪುತ್ರರಾದ ೧೬,೦೦೦ ಮಂದಿ ಶ್ರೀಕೃಷ್ಣನ ಪತ್ನಿಯರಿಗೆ, (ಕ. ೨೭).

೩. **ಗೋವ್ರಜದೊಳಿಹ ಮಾನಿನಿಯರಿಗೆ-**

ಗೋವ್ರಜ-ನಂದಗೋಕುಲ. ನಂದಗೋಕುಲದ ನಿವಾಸಿಗಳಾದ ಗೋಪಿಕಾಸ್ತ್ರೀಯರಿಗೆ, (ಕ. ೨೮).

೪. **ಶತನ್ಯೂನ ಶತಕೋಟಿ ಮೌನಿಜನರಿಗೆ-**

ಶತನ್ಯೂನ-೧೦೦ಕಡಿಮೆಯಾದ, ಶತಕೋಟಿ, ಅಂದರೆ ತೊಂಭತೊಂಭತ್ತು ಕೋಟಿ ಸಂಖ್ಯಾತರಾದ ಋಷಿಗಳಿಗೆ (ಮೌನಿಜನರಿಗೆ). (ಕ.೨೯).

೫. **ಚಿರಪಿತರು-**

ಚಿರಪಿತೃದೇವತಾವರ್ಗಕ್ಕೆ. (ಕ. ೩೦).

೬. **ದೇವಗಾನಪ್ರೌಢರಿಗೆ-**

ಗಾನವಿಶಾರದರಾದ ದೇವಗಂಧರ್ವರ್ಗಕ್ಕೆ. (ಕ. ೩೧).

**೭. ಮಾನವಗಾನಸ್ಪೃಧರಿಗೆ-**

ಗಾನವಿಶಾರದರಾದ ಮಾನುಷಗಂಧರ್ವರಿಗೆ, (ಕ. ೩೨).

**೮. ಅವನಿಪರಿಗೆ-**

ಚಕ್ರವರ್ತಿಗಳಿಗೆ, (ಕ. ೩೩).

**೯. ರಮಾನಿವಾಸನ ದಾಸವರ್ಗಕೆ-**

ರಮಾ-ಶ್ರೀಲಕ್ಷ್ಮೀದೇವಿ, ನಿವಾಸ-ಶ್ರೀಲಕ್ಷ್ಮಿಯನ್ನು ತನ್ನ ವಕ್ಷಸ್ಥಳದಲ್ಲಿ ಧರಿಸಿರುವ ಶ್ರೀಧರನಾಮಕ ಶ್ರೀಪರಮಾತ್ಮ. ದಾಸವರ್ಗಕೆ-ಶ್ರೀಲಕ್ಷ್ಮೀನಿವಾಸನ ದಾಸಸಮೂಹಕ್ಕೆ ಸೇರಿದ ಉಳಿದ ಮಾನುಷೋತ್ತಮರಿಗೆ (ಕ. ೩೪)

**೧೦. ನಮಿಪೆನನವರತ-**

ಸರ್ವಕಾಲಗಳಲ್ಲಿಯೂ ಭಕ್ತಿಪೂರ್ವಕ ಪ್ರಣಮಿಸುವೆನು.

ಅಂತು, ೧. ಅಜಾನಜ ದೇವತೆಗಳಿಗೆ (ಕ. ೨೭).

೨. ೧೬,೧೦೦ಮಂದಿ ಶ್ರೀಕೃಷ್ಣಪತ್ನಿಯರಿಗೆ (ಅಗ್ನಿಪುತ್ರರು) (ಕ, ೨೭).

೩. ನಂದಗೋಕುಲದ ಗೋಪಿಕಾಸ್ತ್ರೀಯರಿಗೆ (ಕ. ೨೮).

೪. ಚಿರಪಿತೃಗಳಿಗೆ (ಕ. ೨೯).

೫. ೯೯ಕೋಟಿಋಷಿವರ್ಗಕ್ಕೆ (ಕ.೩೦).

೬. ದೇವಗಂಧರ್ವರಿಗೆ (ಕ. ೩೧).

೭. ಮಾನುಷಗಂಧರ್ವರಿಗೆ (ಕ. ೩೨).

೮. ಚಕ್ರವರ್ತಿಗಳಿಗೆ (ಕ. ೩೩).

೯. ಮಾನುಷೋತ್ತಮರಾದ ಶ್ರೀಹರಿಯ ದಾಸವರ್ಗಕ್ಕೆ (ಕ. ೩೪)

ಈ ರೀತಿಯಲ್ಲಿ ಅಜಾನಜ ದೇವತೆಗಳಿಂದ ಆರಂಭಿಸಿ, ಇತರೆಯ ಕಕ್ಷಾಪನ್ನರಾದ ಮಾನುಷೋತ್ತಮರಿಗೆ ಕ್ರಮವಾಗಿ ಅವರೋಹಣ ತಾರತಮ್ಯ

ಶ್ರೇಣಿಯಲ್ಲಿ ಭಕ್ತಿಭಾವದಿಂದ ನಮಸ್ಕರಿಸುತ್ತೇನೆ ಎಂದು ದಾಸರಾಯರು ತಿಳಿಸುತ್ತಾರೆ. ॥೬॥

※ ※ ※

## ಪದ್ಯ ೭

**ಮೂಲ-**

**ಅನುಕ್ರಮಣಿಕ ತಾರತಮ್ಯವ ।**
**ನನುದಿನದಿ ಸದ್ಭಕ್ತಿಪೂರ್ವಕ ।**
**ನೆನೆವರಿಗೆ ಧರ್ಮಾರ್ಥಕಾಮಾದಿಗಳು ಫಲಿಸುವುವು ॥**
**ವನಜಸಂಭವ ಮುಖ್ಯರವಯವ ।**
**ರೆನಿಸುವರು ಜಗನ್ನಾಥವಿಠಲಗೆ ।**
**ವಿನಯದಿಂದಲಿ ನೆಮಿಸಿ ಕೊಂಡಾಡುತಿರು ಮರೆಯದಲೆ ॥೭॥**

**ಅವತರಣಿಕೆ-**

ಪ್ರಸಕ್ತ ಸಂಧಿಗತ **ಅವರೋಹಣತಾರತಮ್ಯ ವಿಷಯವನ್ನು ಈ** ಪದ್ಯದಿಂದ ಉಪಸಂಹರಿಸುತ್ತಾರೆ, ಫಲಶ್ರುತಿ ದ್ವಾರಾ.

**ಪ್ರತಿಪದಾರ್ಥ-**

**ಅನುಕ್ರಮಣಿಕಾ ತಾರತಮ್ಯವ-** ಪ್ರಸಕ್ತ ಸಂಧಿಗತ ವಿಷಯವಾದ ಅನುಕ್ರಮಣಿಕಾ ತಾರತಮ್ಯವನ್ನು, **ಅನುದಿನದಿ-** ಪ್ರತಿದಿವಸದಲ್ಲೂ, **ಸದ್ಭಕ್ತಿ ಪೂರ್ವಕದಿ-** ಸಮೀಚೀನವಾದ, ನಿಷ್ಕಾಮವಾದ, ಭಕ್ತಿಭಾವದಿಂದ, **ನೆನೆವರಿಗೆ-** ಸ್ಮರಣೆಮಾಡುವವರಿಗೆ. **ಧರ್ಮ ಅರ್ಥ ಕಾಮಾದಿಗಳು-** ಚತುರ್ವಿಧ ಪುರುಷಾರ್ಥಗಳಲ್ಲಿ ಧರ್ಮ, ಅರ್ಥ, ಕಾಮಗಳು, **ಫಲಿಸುವುವು-** ಸಿದ್ಧಿಸುವುವು. (ಇದರಿಂದ ಮೋಕ್ಷವೆಂಬ ಪರಮಪುರುಷಾರ್ಥರೂಪವಾದ ಸಿದ್ಧಿಯೂ ಲಭಿಸುವುದೆಂದು ಗ್ರಾಹ್ಯ). **ವನಜಸಂಭವ ಮುಖ್ಯರು-** ಬ್ರಹ್ಮದೇವರೇ ಮೊದಲಾದ ದೇವತೆಗಳು, **ಅವಯವರೆನಿಸುವರು-** ಶ್ರೀಪರಮಾತ್ಮನಿಗೆ ಅಂಗಭೂತರೆನಿಸುವರು. **ಜಗನ್ನಾಥವಿಠಲಗೆ-** ಜಗತ್ತಿಗೇ ಪ್ರಭುವಾದ

ದಾಸವರ್ಯರ ನಾಮಾಂಕಿತನಾದ ಶ್ರೀಜಗನ್ನಾಥವಿಠಲಸ್ವಾಮಿಗೆ. **ವಿನಯದಿಂದಲಿ** - ಸ್ವಾಮಿ-ಭೃತ್ಯನ್ಯಾಯದಿಂದ, ಅತ್ಯಂತ ನಮ್ರತೆಯಿಂದ, ನಮಿಸಿ- ಸಾಷ್ಟಾಂಗಪೂರ್ವಕವಾಗಿ ನಮಸ್ಕಾರ ಮಾಡಿ. **ಮರೆಯದಲೆ**- ಮರೆಯದಂತೆ (ಸರ್ವದಾ). **ಕೊಂಡಾಡುತಿರು** - ಪ್ರಸಕ್ತಸಂಧಿಯಲ್ಲಿ ಹೇಳಿದಂತೆ ತಾರತಮ್ಯಜ್ಞಾನಪೂರ್ವಕವಾಗಿ. ಅವನೇ ಸರ್ವೋತ್ತಮನೆಂದು ತಿಳಿದು ಭಜಿಸುತ್ತಿರಬೇಕೆಂದು ಹೇಳುತ್ತಾ, ದಾಸರಾಯರು ಈ ಸಂಧಿಗತ ವಿಷಯವನ್ನು ಉಪಸಂಹರಿಸುತ್ತಾರೆ ॥೭॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಈ ಸಂಧಿಯ ಫಲಶ್ರುತಿ ಹೇಳುತಾರೆ.

ಈ ಅನುಕ್ರಮಣಿಕಾ ತಾರತಮ್ಯವನ್ನು ಪ್ರತಿದಿನದಲ್ಲೂ ಸಮೀಚೀನ ಭಕ್ತಿಯಿಂದ ಸ್ಮರಣೆ ಮಾಡತಕ್ಕವರಿಗೆ ಹಾಗೂ ಪಠಣಮಾಡುವವರಿಗೆ ಕ್ರಮಾತ್ ಧರ್ಮ. ಅರ್ಥ,ಕಾಮ, ಮೋಕ್ಷ ಇವೆ ಮೊದಲಾದ ಯಾವತ್ತೂ ಸಿದ್ಧಿಸೋವಾಗತವೆ. ಬ್ರಹ್ಮದೇವರೇ ಮೊದಲಾದ ದೇವತೆಗಳು ಶ್ರೀಪರಮಾತ್ಮಗೆ ಅಂಗಭೂತರು ಎಂತೆನಿಸುತಾರೆ. ಜಗತ್ತಿಗೇ ಸ್ವಾಮಿಯಾದ ವಿಠ್ಠಲಶಬ್ದವಾಚ್ಯನಾದ ಶ್ರೀಪರಮಾತ್ಮನಿಗೆಂದು ಅರ್ಥ. ಈ ಪೂರ್ವೋಕ್ತರಂತರ್ಗತದಲ್ಲಿ ಶ್ರೀಪರಮಾತ್ಮನ್ನ ತಿಳಿದು ಆಯಾ ದೇವತೆಗಳ ವಿನಯದಿಂದಲಿ ಕೊಂಡಾಡಿ ವಂದನಾ ಮಾಡತಾ ಇರು. ವಿಸ್ಮೃತನಾಗದೆ ಅವಶ್ಯವಾಗಿ ದೇವತೆಗಳ ತಾರತಮ್ಯವನ್ನು ತಿಳಕೊಂಡು ನಡೀಬೇಕೆಂತ ತಾತ್ಪರ್ಯ ॥೭॥

**॥ಶ್ರೀಮತ್ಸತ್ಯಪರಾಯಣತೀರ್ಥಕರಕಮಲಸಂಜಾತ ಶ್ರೀಮತ್ಸಂಕರ್ಷಣತೀರ್ಥ ವಿರಚಿತಾಯಾಂ ಶ್ರೀಮದ್ಧರಿಕಥಾಮೃತಸಾರ ಕನ್ನಡ ಭಾಷಾಟೀಕಾಯಾಂ ಆರೋಹಣ ತಾರತಮ್ಯಸಂಧಿ ವ್ಯಾಖ್ಯಾನಂ ಸಂಪೂರ್ಣಂ॥**

**॥ ಶ್ರೀಕೃಷ್ಣಾರ್ಪಣಮಸ್ತು ॥**

**ಭಾವಪ್ರಕಾಶಿಕೆ-**

ಅನುಕ್ರಮಣಿಕಾ ತಾರತಮ್ಯವನ್ನು ಪ್ರತಿದಿವಸದಲ್ಲೂ ಪಠಿಸುವವರಿಗೆ ಧರ್ಮಾರ್ಥಕಾಮ ಮೋಕ್ಷಗಳೆಂಬ ಪುರುಷಾರ್ಥಗಳು ಸಿದ್ಧಿಸುವವು. ಬ್ರಹ್ಮಾದಿ ದೇವತೆಗಳೆಲ್ಲರೂ ಶ್ರೀಜಗನ್ನಾಥವಿಠ್ಠಲನಿಗೆ ಅಂಗಭೂತರಾಗಿರುವರು. ಆದುದರಿಂದ ಅವರೆಲ್ಲರಿಗೂ ವಿನಯದಿಂದ ನಮಸ್ಕಾರವನ್ನು ಮಾಡಿ ಮರೆಯದೆ ಪ್ರತಿದಿವಸದಲ್ಲೂ ಸ್ತುತಿಸುತ್ತಿರು ॥೭॥

ಇಂತಿ ಭಾವಪ್ರಕಾಶಿಕೆಯಲ್ಲಿ ೨೬ನೆಯ ಅನುಕ್ರಮಣಿಕಾ ಅವರೋಹಣ ತಾರತಮ್ಯಸಂಧಿಯು ಸಮಾಪ್ತವಾದುದು.

॥ ಶ್ರೀಕೃಷ್ಣಾರ್ಪಣಮಸ್ತು ॥

೩. **ಶ್ರೀವ್ಯಾಸದಾಸಸಿದ್ಧಾಂತಕೌಮುದೀ-**

ಉಪಸಂಹರತಿ ಫಲೋಕ್ತ್ಯಾ ಮಹಾನುಭಾವಃ 'ಅನುಕ್ರಮಣಿಕಾ' ಇತಿ ॥೭॥

**ಕನ್ನಡಾರ್ಥ-**

ಫಲವನ್ನು ನಿರೂಪಿಸುತ್ತಾ, ಮಹಾನುಭಾವರಾದ ದಾಸರಾಯರು ಈ ಸಂಧಿಯನ್ನು 'ಅನುಕ್ರಮಣಿಕಾ' ಈ ಪದ್ಯದಿಂದ ಮುಗಿಸುತ್ತಾರೆ ॥೭॥

ಇಲ್ಲಿಗೆ ಅವರೋಹಣತಾರತಮ್ಯ ಸಂಧಿಯು ಮುಗಿದುದು.

॥ ಶ್ರೀಮದ್ವೇಶಕೃಷ್ಣಾರ್ಪಿತಮಸ್ತು ॥

೪. **ಭಾವದರ್ಪಣ-**

ಅನುಕ್ರಮಣಿಕೆ ॥೭॥ ಇತಿ ಶ್ರೀಮತ್ಕವಿಕುಲತಿಲಕ ಶ್ರೀಮಜ್ಜಗನ್ನಾಥ ದಾಸರಾಜವಿರಚಿತ ಶ್ರೀಮದ್ಧರಿಕಥಾಮೃತಸಾರಸ್ಯ ಭಾವದರ್ಪಣ ಟೀಕಾಯಾಂ ಕಮಲಾಪತಿದಾಸ ಹೃದ್ಗತೇನ ಶ್ರೀಹರಿಣಾ ಕೃತಯಾಂ ಅವರೋಹಣಾ ನುಕ್ರಮಣಿಕಾಸಂಧಿಃ ಪರ್ಯವಸಿತಃ ॥

**೫. ಶ್ರೀಗುರುಹೃದಯಪ್ರಕಾಶಿಕೆ-**

ಈ ಅನುಕ್ರಮಣಿಕಾತಾರತಮ್ಯ ಸ್ತೋತ್ರವನ್ನು ಸದಾ ಸದ್ಭಕ್ತಿಯಿಂದ ಸ್ಮರಿಸುವವರಿಗೆ ಧರ್ಮಾರ್ಥಾದಿ ಪುರುಷಾರ್ಥಗಳು ಫಲಿಸುವವು. ವನಜಸಂಭವನೆಂಬ ಬ್ರಹ್ಮ ಮೊದಲಾದ ದೇವತೆಗಳು ಯಾವ ಜಗನ್ನಾಥವಿಠಲಸ್ವಾಮಿಗೆ ಮುಖಾದಿ ಅವಯುವಗಳಲ್ಲಿದ್ದು ಅವಯವರೆನಿಸಿಕೊಳ್ಳುವರೋ ಅಂಥಾ ಪರಿವಾರತ್ವೇನ ಈ ದೇವತೆಗಳನ್ನು ಮರೆಯದೆ ವಿನಯದಿಂದ ನಮಿಸಿ ಸ್ತುತಿಸುತ್ತಿರಬೇಕು ॥೭॥

**॥ಇಂತು ಗುರುಹೃದಯಪ್ರಕಾಶಿಕಾ ಎಂಬ ವ್ಯಾಖ್ಯಾನ ಸಹಿತ ಶ್ರೀಮದ್ಹರಿಕಥಾಮೃತಸಾರದಲ್ಲಿ ಅವರೋಹಣ ಅನುಕ್ರಮಣಿಕಾ ತಾರತಮ್ಯಸಂಧಿ ಎಂಬ ೨೬ನೇ ಸಂಧಿಗೆ ಮಂಗಳಂ ॥**

## ಸರ್ವವ್ಯಾಖ್ಯಾನಸಾರಸಂಗ್ರಹ

೭ನೆಯ ಈ ಅಂತ್ಯಪದ್ಯದಿಂದ ಶ್ರೀಜಗನ್ನಾಥದಾಸವರ್ಯರು ಸಂಧಿಗತ ವಿಷಯವನ್ನು ಉಪಸಂಹರಿಸುತ್ತಾರೆ.

**೧. ಅನುಕ್ರಮಣಿಕಾ ತಾರತಮ್ಯತ-**

ಪ್ರಸಕ್ತ ಸಂಧಿಗತ ವಿಷಯವು ಅನುಕ್ರಮಣಿಕಾ ತಾರತಮ್ಯವು. ಅಂದರೆ ಶ್ರೀಪರಮಾತ್ಮನಿಂದ ಆರಂಭ ಮಾಡಿಕೊಂಡು, ತೃಣಾಂತ ಮುಕ್ತಿಯೋಗ್ಯ ಚೇತನರ ಪರ್ಯಂತ ಅವರೋಹಣಕ್ರಮದಲ್ಲಿ ತಾರತಮ್ಯವಿಚಾರವು.

**೨. ಅನುದಿನದಿ ಸದ್ಭಕ್ತಿಪೂರ್ವಕ-**

ಪ್ರಸಕ್ತಸಂಧಿಗತ ವಿಚಾರವನ್ನು ಸಮೀಚೀನವಾದ ನಿಷ್ಕಾಮವಾದ ಭಕ್ತಿಯಿಂದ ಅಧ್ಯಯನ ಮಾಡಬೇಕು. ಅಧ್ಯಯನಕ್ಕೆ ಮುಖ್ಯಸಾಧನವು ಭಕ್ತಿಯು. ಅಂಥಹ ಭಕ್ತಿಯು ಸಮೀಚೀನವಾಗಿರಬೇಕು. ಅಂದರೆ ಗುರೂಪದೇಶ ದ್ವಾರಾ

ಮಹಾತ್ಮ್ಯಜ್ಞಾನ ಪೂರ್ವಕ ಇರಬೇಕು. ಮನಸ್ಸಿನಲ್ಲಿ ಯಾವ ಪ್ರತಿಫಲ ರೂಪವಾದ ಕಾಮನೆಗಳೂ ಇರಬಾರದು. ಕೇವಲ ಶ್ರೀಹರಿವಾಯುಗುರುಗಳ ಪ್ರೀತ್ಯರ್ಥವಾಗಿ ಪಠಿಸಬೇಕು.

೩. **ಧರ್ಮಾರ್ಥಕಾಮಾದಿಗಳು-** ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬುವ ನಾಲ್ಕುವಿಧವಾದ ಪುರುಷಾರ್ಥಗಳು. ವರ್ಣಾಶ್ರಮೋಚಿತವಾದ ಧರ್ಮ, ತದನು ಗುಣವಾದ ಕರ್ಮಾಚರಣೆ, ಸತ್ಪಾದನೆಗೆ ಸಹಕಾರಿಯಾದದ್ದು ಧರ್ಮದಲ್ಲಿ ವಿನಿಯೋಗಿಸುವ ಆರ್ಥಿಕ ಸಂಪತ್ತು, ಶ್ರೀಹರಿಯ ಅನುಗ್ರಹಪ್ರಾಪ್ತಿಗಾಗಿ ಹಂಬಲವೇ ಸರಿಯಾದ ಕಾಮ ಅಥವಾ ಅಪೇಕ್ಷೆಯು. ಇದಿ ಕಟ್ಟದಿಂದ ಮೋಕ್ಷಾನಂದ ಪ್ರಾಪ್ತಿ. ಹೀಗೆ ಭಕ್ತಿಪೂರ್ವಕ ಸಂಧಿಗತವಿಷಯಗಳನ್ನು ಸರ್ವ ಕಾಲದಲ್ಲೂ ಪಠಿಸಿ, ಅದರಂತೆ ಅನುಷ್ಠಾನ ಮಾಡುವವರಿಗೆ ಧರ್ಮ, ಅರ್ಥಾದಿ ಚತುರ್ವಿಧ ಪುರುಷಾರ್ಥಗಳು ಪ್ರಾಪ್ತವಾಗುವುವು. ಇಹದಲ್ಲಿ ಸುಖ, ಪರದಲ್ಲಿ ನಿತ್ಯಾನಂದರೂಪವಾದ ಮೋಕ್ಷ ಪ್ರಾಪ್ತಿಯಾಗುವುದು.

೪. **ವನಜಸಂಭವ-**

ವನಜ- ಕಮಲ. ಸಂಭವ- ಜನಿಸಿದವನು. ಶ್ರೀಪದ್ಮನಾಭನ ನಾಭೀ ಕಮಲಸಂಜಾತರು **ಶ್ರೀಚತುರ್ಮುಖಬ್ರಹ್ಮದೇವರು-**

೫. **ಮುಖ್ಯರು ಅವಯವರೆನಿಸುವರು-**

ಬ್ರಹ್ಮದೇವರೇ ಮೊದಲಾದ ಸಕಲ ದೇವತೆಗಳು ಶ್ರೀಪರಮಾತ್ಮನಿಗೆ ಅಂಗಭೂತರೆನಿಸುತ್ತಾರೆ. ವಿರಾಡ್ರೂಪಿ ಶ್ರೀಮನ್ನಾರಾಯಣನ ವಿವಿಧ ಅವಯವಗಳಿಂದ ಉತ್ಪತ್ತಿಯಾದವರು.

೬. **ಶ್ರೀಜಗನ್ನಾಥವಿಠಲನೆ-**

ದಾಸವರ್ಯರ ಅಂಕಿತನಾಮಾತ್ಮಕನು, ಶ್ರೀಜಗನ್ನಾಥವಿಠಲನು. ಅಂದರೆ ಜಗತ್ಪ್ರಭುವಾದ ಶ್ರೀಹರಿಯು.

## ೭. ವಿನಯದಿಂದಲಿ-

ತಾರತಮ್ಯಜ್ಞಾನವನ್ನು ತಿಳಿದರೆ ನಿಜೋಚ್ಚಭಾವದ ಜ್ಞಾನವು ಸರಿಯಾಗಿ ಸ್ಪಷ್ಟವಾಗಿ ತಿಳಿಯುವುದು. ಇದರಿಂದ ಬಿಂಬ - ಪ್ರತಿಬಿಂಬಭಾವದ ಅರಿವು ಸ್ಪಷ್ಟವಾಗುವುದು. ಈ ಜ್ಞಾನದ ದ್ವಾರಾ ಜೀವನು ತನ್ನ ಅಪೂರ್ಣತೆಯನ್ನು ಅಲ್ಪತ್ವವನ್ನು, ಹಾಗೆಯೇ ಶ್ರೀಹರಿಯ ಸರ್ವೋತ್ತಮತ್ವವನ್ನೂ ಸರಿಯಾಗಿ ನಿಸ್ಸಂದೇಹವಾಗಿ ತಿಳಿಯಲು ಸಾಧ್ಯ. ಈ ಭಾವನೆಯಿಂದ ಶ್ರೀಹರಿಗುರುಗಳಲ್ಲಿ, ಸ್ವೋತ್ತಮರಲ್ಲಿ ವಿನಯ ಮತ್ತು ಭಕ್ತಿ ಉಂಟಾಗುವುದು.

## ೮. ಮರೆಯದಲೆ-

ಸರ್ವಕಾಲಗಳಲ್ಲಿಯೂ ಈ ತಾರತಮ್ಯಜ್ಞಾನಪ್ರೇರಕನು ಅದನ್ನು ಮರೆಯದೇ, ಜಗತ್ಪತಿಯಾದ, ಪರಾತ್ಪರವಸ್ತುವಾದ, ಜಗದಾದಿವಂದ್ಯನಾದ, ಕ್ಷರಾಕ್ಷರಪುರುಷಪೂಜಿತನಾದ, ರಮಾಬ್ರಹ್ಮಾದಿವಂದ್ಯನಾದ ರಮಾರಮಣನನ್ನು ನಿತ್ಯದಲ್ಲಿ ಸ್ಮರಿಸಿ, ಅವನ ಅನುಗ್ರಹವನ್ನು ಸಂಪಾದಿಸು ಎಂದು ದಾಸರಾಯರು ಸಂಧಿಗತ ವಿಷಯವನ್ನು ಉಪಸಂಹರಿಸುತ್ತಾರೆ.

॥ ಇಂತು ಅವರೋಹಣತಾರತಮ್ಯವೆಂಬ ಸಂಧಿಯ ಸರ್ವ ವ್ಯಾಖ್ಯಾನಸಾರಸಂಗ್ರಹವು ಪರಿಸಮಾಪ್ತಿಯಾಯಿತು ॥

॥ ಶ್ರೀಲಕ್ಷ್ಮೀರಮಣಾರ್ಪಣಮಸ್ತು ॥

॥ ಶ್ರೀ ಹರಿಃ ಓಂ ॥

ಶ್ರೀಹರಿದಾಸಸಾಹಿತ್ಯ ಪ್ರಚಾರ ಗ್ರಂಥಮಾಲೆ



ಶ್ರೀಜಗನ್ನಾಥದಾಸವರ್ಯಕೃತ

# ಶ್ರೀಮದ್ಹರಿಕಥಾಮೃತಸಾರ

## ಸರ್ವವ್ಯಾಖ್ಯಾನಸಾರಸಂಗ್ರಹ

## ಅನುಕ್ರಮಣಿಕಾತಾರತಮ್ಯಸಂಧಿ

(ಸಂಧಿ - ೨೭)

॥ ಶ್ರೀಃ ಹರಿಃ ಓಂ ॥

॥ ಗರುಡವಾಹನ ಶ್ರೀಲಕ್ಷ್ಮೀನರಸಿಂಹಾಭಿನ್ನ
ಶ್ರೀಜಗನ್ನಾಥವಿಠ್ಠಲಾಯ ನಮಃ ॥

# ಅನುಕ್ರಮಣಿಕಾತಾರತಮ್ಯಸಂಧಿ

## ಸಂಧಿ - ೨೭

ಪಲ್ಲವಿ -

ಹರಿಕಥಾಮೃತಸಾರ ಗುರುಗಳ ।
ಕರುಣದಿಂದಾಪನಿತು ಪೇಳುವೆ ।
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥

ಸಂಧಿಸೂಚನೆ -

ಮಾನುಷೋತ್ತಮವಿಡಿದು ಶಂಕರು ।
ಪಣನ ಪರಿಯಂತರದಿ ಪೇಳಿದ ।
ಅನುಕ್ರಮಣಿಕ ಪದ್ಯವನು ಕೇಳುವುದು ಸಜ್ಜನರು ॥

## ಪದ್ಯ - ೧

ಮೂಲ -

ಶ್ರೀಮದಾಚಾರ್ಯರ ಮತಾನುಗ ।
ಧೀಮತಾಂವರರಂಘ್ರಿಕಮಲಕೆ ।
ಸೋಮಪಾನಾರ್ಹರಿಗೆ ತಾತ್ತ್ವಿಕದೇವತಾಗಣಕೆ ॥
ಹೈಮವತಿ ಷಣ್ಮಹಿಷಿಯರ ಪದ ।
ವ್ಯೋಮಕೇಶಗೆ ವಾಣಿ ವಾಯು ಸು ।
ತಾಮರಸಭವ ಲಕುಮಿ ನಾರಾಯಣರಿಗಾನಮಿಪೆ ॥೧॥

**ಅವತರಣಿಕೆ -**

**ಮಾನುಷೋತ್ತಮರ ಕಕ್ಷದಿಂದ ಪ್ರಾರಂಭಿಸಿಕೊಂಡು** ಉತ್ತಮೋತ್ತಮನಾದ ಶ್ರೀಮನ್ನಾರಾಯಣನ ಪರ್ಯಂತ ತಾರತಮ್ಯವನ್ನು ಆರೋಹಣಕ್ರಮದಲ್ಲಿ ತಿಳಿಸುತ್ತಾರೆ.

**ಪ್ರತಿಪದಾರ್ಥ -**

**ಶ್ರೀಮತ್** - ಪರಮಪೂಜ್ಯರಾದ, **ಆಚಾರ್ಯರ** - ತ್ರೈಲೋಕ್ಯಾಚಾರ್ಯರಾದ ಶ್ರೀಮನ್ಮಧ್ವಾಚಾರ್ಯರ, **ಮತಾನುಗ** - ಮತವನ್ನು ಅನುಸರಿಸಿದ (ದ್ವೈತಮತಾನುಯಾಯಿಗಳಾದ), **ಧೀಮತಾಂ** - ಜ್ಞಾನವಂತರಾದ, ಪ್ರತೀಕಾಲಂಬನರಾದ, ತೃಣಾದಿ, ಮಾನುಷಗಂಧರ್ವರಾದ ಚಕ್ರವರ್ತ್ಯಾದಿ ಪರ್ಯಂತ ಅನಾಖ್ಯಾತ ಅಜಾನಜರು, ತದನಂತರ ೧೬,೦೦೦ ಮಂದಿ ಆಖ್ಯಾತ ಗೋಪಿಕಾಸ್ತ್ರೀಯರು ಇವರೆಲ್ಲರೂ ಪ್ರತೀಕಾಲಂಬನರು. **ವಶರ** - ಇವರಿಗಿಂತಲೂ ಅಧಿಕರಾದ ಅಮುಖ್ಯ ತತ್ತ್ವಾಭಿಮಾನಿದೇವತೆಗಳಾದ ಪುಷ್ಕರ, ಬಲ್ಯಾದಿ ಪರ್ಯಂತ ಕರ್ಮಜದೇವತೆಗಳು, **ಸೋಮಪಾನಾರ್ಹರಿಗೆ** - ೧೮ನೆಯ ಕಕ್ಷಾಪನ್ನರಾದ ಶೇಷಶತಸ್ಥರೆಂಬ ಪೃಥ್ವೀ-ಪರ್ಜನ್ಯರೆಂಬ ಅವರ ಕಕ್ಷದವರನ್ನು ಬಿಟ್ಟು. ೮೦ ಮಂದಿ ಸೋಮಪಾನಾರ್ಹರು (ಸೋಮರಸಪಾನಿಗಳು). **ತಾತ್ತ್ವಿಕದೇವತಾಗಣಕೆ** - ೧೮ನೆಯ ಕಕ್ಷದ ಕುಬೇರ, ಗಣಪತಿ, ವಿಷ್ವಕ್ಸೇನಾರಭ್ಯ ಇಂದ್ರ-ಕಾಮರ ಪರ್ಯಂತ ಇರುವ ತತ್ತ್ವಾಭಿಮಾನಿಗಳಿಗೆ, **ಹೈಮವತಿ** - ಹಿಮವಂತಪುತ್ರಿಯಾದ ಪಾರ್ವತೀದೇವಿ. **ಷಣ್ಮಹಿಷಿಯರ** - ಶ್ರೀಕೃಷ್ಣನ ಪತ್ನಿಯರಾದ ನೀಳಾದಿ ೬ ಮಂದಿ ಮಹಿಷಿಯರಿಗೆ, **ವ್ಯೋಮಕೇಶಗೆ** - ಶ್ರೀರುದ್ರದೇವರಿಗೆ, **ವಾಣಿ** - ವಾಗಭಿಮಾನಿಯಾದ ಶ್ರೀಸರಸ್ವತೀದೇವಿ, (ಭಾರತೀದೇವಿಯರು ಸಹಾ ಗ್ರಾಹ್ಯ), **ವಾಯು** - ಶ್ರೀವಾಯುದೇವರು, **ಸುತಾಮರಸಭವ** - ಪದ್ಮನಾಭರೂಪೀ ಶ್ರೀಪರಮಾತ್ಮನ ಅಪ್ರಾಕೃತವಾದ ನಾಭೀಕಮಲದಲ್ಲಿ ಸಂಜಾತರಾದ ಶ್ರೀಬ್ರಹ್ಮದೇವರು, **ಲಕುಮಿ** - ಶ್ರೀಲಕ್ಷ್ಮೀದೇವಿಯರು. **ನಾರಾಯಣಗೆ** - ಶ್ರೀಮನ್ನಾರಾಯಣದೇವರಿಗೆ, ಇವರೇ ಮೊದಲಾದ ದೇವತೆಗಳ, **ಪದ** - ಅಸ್ವತಂತ್ರರಾದ ತೃಣಾದಿಲಕ್ಷ್ಮ್ಯಂತ ಇವರ, ಅಂಘ್ರಿ

**ಕಮಲಕೆ** - ಚರಣಾರವಿಂದಗಳಿಗೆ, **ಅನಿಮಿಷ** - ಭಕ್ತಿಯಿಂದ, ಸಾಷ್ಟಾಂಗ ಪೂರ್ವಕ ನಮಸ್ಕರಿಸುತ್ತೇನೆ. ॥೧॥

# ವ್ಯಾಖ್ಯಾನಗಳು

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಪೂಜ್ಯರಾದ, ಜೀವೋತ್ತಮರಾದ ವಾಯುದೇವರ ಅಂಶಸಂಭೂತರಾದ, ಮೂಲಾವತಾರಗಳಿಗೆ ಸರ್ವವಿಷಯದಿಂದಲೂ ಅಭೇದರಾದ ಮಧ್ವಾಚಾರ್ಯರಿಂದ ವಿರಚಿತವಾದ ಶಾಸ್ತ್ರಗಳ ಅನುಸರಿಸಿ ತಾರತಮ್ಯ, ಪಂಚಭೇದ ಸತ್ಯವೆಂದು, ಸ್ವರೂಪಸ್ವಭಾವವನ್ನನುಸರಿಸಿ, ಪೃಥಗಾಗಿ ನಂಬಿ ಅನುಷ್ಠಿಸತಕ್ಕ, ಜ್ಞಾನದಿಂದ ಕುಶಲರಾದ, ಪ್ರತೀಕಾಲಂಬನರಾದ, ೧. ತೃಣಾದಿ, ಮಾನುಷಗಂಧರ್ವರು, ೨. ದೇವಗಂಧರ್ವರು ಆರಂಭಮಾಡಿ ವಿಬುಧಾದಿಗಳ ಪರ್ಯಂತ ಅನಾಖ್ಯಾತ ಆಜಾನಜನರು, ೩. ತದನಂತರ ಗೋಪಿಕಾಸ್ತ್ರೀಯರಾದ ೧೬,೦೦೦ ಮಂದಿ ಆಖ್ಯಾತ ಆಜಾನಜನರು ಇಷ್ಟು ಮಂದಿ ಗ್ರಾಹ್ಯ. ಇವರು ಪ್ರತೀಕಾಲಂಬನರು; ಇವರ ಸಮೂಹ ಒಂದು. ಇವರಿಗಿಂತಲೂ ಅಧಿಕರಾದವರು ಅಮುಖ್ಯ ತತ್ತ್ವಾಭಿಮಾನಿಗಳಾದ ಪುಷ್ಕರಾದಿ ಬಲ್ಯಾದಿಗಳ ಪರ್ಯಂತ ಕರ್ಮಜದೇವತೆಗಳು ಇವರು, ಮತ್ತು ಪದಿನೆಂಟನೇ ಕಕ್ಷದಲ್ಲಿ ವಿದ್ಯಮಾನರಾದ ಸೋಮಪಾನಾರ್ಹರಾದ ಶೇಷಶತಸ್ಥರಂತ ಕರಸತಕ್ಕ ಪೃಥ್ವೀ-ಪರ್ಜನ್ಯರೆಂಬ ಅವರ ಕಕ್ಷದವರು ಹೋಗತಾ ಎಂಭತ್ತುಮೂರುಜನ ಸೋಮಪಾನಾರ್ಹರು. ಇವರಿಗೆ ಮತ್ತು ಪದಿನೇಟನೇ ಕಕ್ಷದಲ್ಲಿ ಸೇರಿದ ತಾತ್ತ್ವಿಕರಾದ ಧನಪ ವಿಷ್ವಕ್ಸೇನಾರಭ್ಯ ಇಂದ್ರ-ಕಾಮರಿಗೆ, ತತ್ತ್ವಾಭಿಮಾನಿದೇವತಾಗಣಕ್ಕೆ, ಹಿಮಾಚಲನ ಪುತ್ರಿಯಾದ ಪಾರ್ವತೀದೇವೇರು, ಸೌಪರ್ಣೀ, ವಾರುಣೀ ಈ ಮೂರುಜನಕ್ಕೆ, ಶ್ರೀಪರಮಾತ್ಮನ ಹೆಂಡತಿಯರಾದ ನೀಲಾದಿ ಷಣ್ಮಹಿಷಿಯರಿಗೆ, ರುದ್ರದೇವರು ಮೊದಲಾದ ಮೂರುಮಂದಿಗೆ, ಸರಸ್ವತೀ, ಭಾರತೀದೇವೇರು, ಅಜ್ಞಾನ ಅಸುರಾವೇಶದೋಷರಹಿತರಾದ ಬ್ರಹ್ಮ-ವಾಯುಗಳು, ಶ್ರೀಲಕ್ಷ್ಮೀದೇವೇರು, ಶ್ರೀನಾರಾಯಣದೇವರು ಈ ಯಾವತ್ತೂ ಮಂದಿಯು, ಅಸ್ವತಂತ್ರರಾದ ತೃಣಾದಿ ಲಕ್ಷ್ಮ್ಯಂತ ಇವರ ಪಾದಗಳಿಗೆ, ನಾರಾಯಣನ ಪಾದಕಮಲಕ್ಕೆ, ಚೆಂದಾಗಿ ವಂದನ ಮಾಡುವನು ಎಂತ ತಾತ್ಪರ್ಯ ॥೧॥

೨. **ಭಾವಪ್ರಕಾಶಿಕೆ -**

ಶ್ರೀಮದಾಚಾರ್ಯರ ಮತಾನುಗರಾದ, ಜ್ಞಾನಿಗಳಾದ ಮಾನುಷೋತ್ತಮರು ಮೊದಲು ಕರ್ಮಜದೇವತಾವರೆಗೂ ಇರುವ ಎಲ್ಲರ ಪಾದಕಮಲಗಳಿಗೂ, ಸೋಮಪಾನಾರ್ಹರು ೯ ಕೋಟಿದೇವತೆಗಳ ಪೈಕಿ ೧೦೦ಮಂದಿಗಳೇ ಸೋಮಪಾನಾರ್ಹರು. ಇವರಲ್ಲಿ ಮೇಲಿನ ಕಕ್ಷಾದಲ್ಲಿ ಸೇರಿದ ಇಂದ್ರಾದಿ ೧೫ ಜನಗಳನ್ನು ಬಿಟ್ಟು ಉಕ್ತಶೇಷಶತಸ್ಥರೆಂದು ೮೫ ಜನರು, ಅವರ ಪಾದಗಳಿಗೂ, ತತ್ತ್ವಾಭಿಮಾನಿದೇವತೆಗಳಿಗೂ, ಪಾರ್ವತೀ ಮೊದಲಾದ ಮೂವರಿಗೂ, ಕೃಷ್ಣನ ಮಹಿಷಿಯರು ಜಾಂಬವತೀ ಮೊದಲಾದ ೬ ಮಂದಿಯರಿಗೂ, ರುದ್ರದೇವರಿಗೂ, ಸರಸ್ವತೀ-ಭಾರತೀಯರಿಗೂ, ವಾಯುದೇವರಿಗೂ, ಕಮಲಸಂಭವರಾದ ಬ್ರಹ್ಮದೇವರಿಗೂ, ಲಕ್ಷ್ಮೀದೇವಿಯರಿಗೂ, ನಾರಾಯಣ ಇವರೆಲ್ಲರಿಗೂ ಚೆನ್ನಾಗಿ ಕಾಯೇನ ವಾಚಾ ಮನಸಾ ನಮಸ್ಕರಿಸುವೆನು ॥೧॥

೩. **ಶ್ರೀವ್ಯಾಸದಾಸಸಿದ್ಧಾಂತಕೌಮುದೀ -**

'ಆದಾವಂತೇ ಚ ಮಧ್ಯೇ ಚ' ಇತಿ ವಚನಾತ್, ಸ್ವಗ್ರಂಥಸ್ಯ ಅತಿ ಮಹತ್ತ್ವಾತ್ ಗಹನಾರ್ಥತ್ವಾತ್ ದುರ್ವಿದತ್ವಾಚ್ಚ, ಅಂತರಾಯವ್ರಾತ್ಯ ಕವಲೀಕೃತತ್ವಾತ್ ವಕ್ತೃಶ್ರೋತೃಭಿಃ ಅನುಪಾದೇಯಃ ನ ಸ್ಯಾತ್ ಇತ್ಯಾಲೋಚ್ಯ, ಆಯುಷ್ಮತ್ಪುರುಷಕಾಣಿ ಮಂಗಳಲಾಚರಣಪುರಃಸರ ತಮಾರ್ಗ್ಯೇವ ನಿರಂತರಾಯಂ ಪರಿಸಮಾಪ್ತ್ಯಂತೇ ಪ್ರಚೀಯಂತೇ ಚೇತಿ ಪೂರ್ವಾಚಾರ್ಯವಾಚಮನುಚಿಂತಯಂತಃ ಷಟ್ಸು ಏಕಪದ್ಯೋಕ್ತತಾರತಮ್ಯಂ ವದನ್ ಸ್ಮರತಿ ಪದ್ಮೇಶಂ ಚ ಖಲು ಶ್ರೀಹರಿಪ್ರಿಯಃ ॥ ಶ್ರೀಃ ಇತಿ ॥ 'ವಂದೇ ವಿಷ್ಣುಂ ನಮಾಮಿ ಶ್ರಿಯಮಥ' ಇತ್ಯುಕ್ತಮಿದಮ್ ॥೧॥

**ಕನ್ನಡಾರ್ಥ -**

'ಆದಾವಂತೇ ಚ ಮಧ್ಯೇ ಚ ವಿಷ್ಣುಃ ಸರ್ವತ್ರ ಗೀಯತೇ' ಎಂಬ ವಚನವಿದ್ದುದರಿಂದ, ಅತಿ ಮಹತ್ತರವೂ, ಗಹನಾರ್ಥವಾದುದರಿಂದ ತಿಳಿಯಲು ಕಷ್ಟಸಾಧ್ಯವೂ ಆದುದರಿಂದ ಅನೇಕ ವಿಘ್ನಗಳಲ್ಲಿ ಸಿಲುಕಿ ಈ ಗ್ರಂಥವನ್ನು ವಕ್ತೃ-ಶ್ರೋತೃಗಳು ಸ್ವೀಕರಿಸಲಿಕ್ಕಿಲ್ಲವೆಂದು ತಿಳಿದು, 'ಮಂಗಲಾ

ಚರಣಪೂರ್ವದಿಂದ ಕರ್ಮಗಳು ಆಯುಷ್ಯಶಾಲಿಯನ್ನು ಮಾಡುವುವು. ಮತ್ತು ಅವೇ ಕರ್ಮಗಳು ಶೀಘ್ರವಾಗಿ ವಿಘ್ನಗಳಿಲ್ಲದೇ ಮುಗಿದು, ಪಾಠ-ಪ್ರವಚನ ಪರಂಪರೆಯಲ್ಲಿ ಬರುವುವು' ಹೀಗೆ ಹೇಳಿದ ಪೂರ್ವಾಚಾರ್ಯರ ವಚನವನ್ನು ಸ್ಮರಿಸಿ, ಒಂದು ಪದ್ಯದಿಂದ ಹೇಳಲಾಗಿದ್ದ ತಾರತಮ್ಯವನ್ನು ಹೇಳಲು ರಮಾಪತಿಯ ಸ್ಮರಣರೂಪವಾದ ಮಂಗಲವನ್ನು ಶ್ರೀಜಗನ್ನಾಥದಾಸರು ಈ ಸಂಧಿ ಪ್ರಾರಂಭದಲ್ಲಿ ಮಾಡುತ್ತಾರೆ, 'ಶ್ರೀ' ಎಂಬ ಪದ್ಯದಿಂದ ॥೧॥

೪. **ಭಾವದರ್ಪಣ -**

**ಸಂಧಿಸೂಚನೆ -**

ಮಾನುಷೋತ್ತಮೇಶ ।

ಶ್ರೀಮದಾಚಾರ್ಯರ । ಹೈಮವತಿ-ಪಾರ್ವತಿ ॥೧॥

**೫. ಶ್ರೀಗುರುಹೃದಯಪ್ರಕಾಶಿಕೆ-**

ಶ್ರೀಮದಾಚಾರ್ಯರ ಮತಾವಲಂಬಿಗಳಾದ, ಧೀಮತಾಂವರರೆಂಬ ಜ್ಞಾನ್ಯುತ್ತಮರ ಪಾದಕಮಲಕ್ಕೆ, ಸೋಮಪಾನಾರ್ಹರೆಂಬ ಶತಸ್ಥದೇವ ಗಣಕ್ಕೆ, ತತ್ತ್ವಾಭಿಮಾನಿದೇವತೆಗಳಿಗೆ, ಹೈಮವತಿ ಎಂಬ ಪಾರ್ವತೀದೇವಿಗೆ, ಕೃಷ್ಣನ ಷಣ್ಮಹಿಷಿಯರ ಪಾದಕ್ಕೆ, ವ್ಯೋಮಕೇಶನೆಂಬ ರುದ್ರದೇವನಿಗೆ, ವಾಣಿ ಎಂಬ ಸರಸ್ವತಿಗೆ, ತಾಮರಸಭವನೆಂಬ ಬ್ರಹ್ಮದೇವರಿಗೆ, ಲಕ್ಷ್ಮೀನಾರಾಯಣರ ಪಾದಕ್ಕೆ ಸಹ ಸದಾ ವಂದಿಸುವನು ॥೧॥

## ಸರ್ವವ್ಯಾಖ್ಯಾನಸಾರಸಂಗ್ರಹ

ಪ್ರಸಕ್ತ ಪದ್ಯದಿಂದ ಅನುಕ್ರಮಣಿಕಾಸಂಧಿಯನ್ನು ಉಪಕ್ರಮಿಸುತ್ತಾರೆ. ಮಾನುಷೋತ್ತಮರಿಂದ ಪ್ರಾರಂಭಿಸಿ, ಲಕ್ಷ್ಮೀ-ನಾರಾಯಣರ ಪರ್ಯಂತ ಆರೋಹಣ ತಾರತಮ್ಯ ಕ್ರಮವನ್ನು ತಿಳಿಸುತ್ತಾರೆ.

## ೧. ಶ್ರೀಮದಾಚಾರ್ಯರ -

ಅತಿರೋಹಿತವಿಮಲಜ್ಞಾನಿಗಳೂ, ಶ್ರೀಹರಿಯ ಪ್ರಥಮಾಂಗಭೂತರೂ, ಆಖಿಲಾಶ್ರಸಮರೂ ಆದ ಶ್ರೀವಾಯುದೇವರ ತೃತೀಯಾವತಾರಸಂಭೂತರಾದ ಶ್ರೀಮನ್ಮಧ್ವಮುನಿಗಳು. ಅವರ ಮತವನ್ನು ಅನುಸರಿಸಿ, ಅದರಂತೆ ಅನುಷ್ಠಾನಪರರಾದ, ಜ್ಞಾನಿಗಳಾದ ಮಾನುಷೋತ್ತಮರೂ,

## ೨. ಮತಾನುಗ ಧೀಮತಾಂ -

ಧೀಃ - ಬುದ್ಧಿ, ಧೀಮತಾಂ - ಬುದ್ಧಿಶಾಲಿಗಳಾದ, ಅಂದರೆ ಜ್ಞಾನಿಗಳಾದವರು. ಪಂಚಭೇದ, ತಾರತಮ್ಯ, ಜಗತ್ಸತ್ಯತ್ವ, ಶ್ರೀಹರಿ ಸರ್ವೋತ್ತಮ, ವಾಯು ಜೀವೋತ್ತಮ ಇತ್ಯಾದಿ, ಮೋಕ್ಷಮಾರ್ಗಕ್ಕೆ ಸುಪಥವೆನಿಸುವ ಸಕಲ ಸಚ್ಛಾಸ್ತ್ರಗಳ ಸಾರರೂಪವಾದ ಶ್ರೀಮಧ್ವಸಿದ್ಧಾಂತವೇ ಶ್ರೀಮದಾಚಾರ್ಯರ ಮತವು. ಅಂಥವ ಆಚಾರ್ಯ ಶ್ರೀಮಧ್ವರ ಮತಾನುಯಾಯಿಗಳಾದ ಜ್ಞಾನಿಗಳ ಚರಣಾರವಿಂದಕ್ಕೆ ನಮಸ್ಕರಿಸುತ್ತಾರೆ.

## ೩. ಸೋಮಪಾನಾರ್ಹರಿಗೆ -

೧೯ನೆಯ ಕಕ್ಷಾಪನ್ನರಾದ ೧೦೦ ಮಂದಿ ದೇವತೆಗಳ ಪೈಕಿ, ಉತ್ತಮ ಕಕ್ಷಕ್ಕೆ ಸೇರಿದ ೧೫ ಮಂದಿ ಹೋಗತಾ ಉಳಿದವರ ಸಂಖ್ಯೆ ೮೫. ಇವರಲ್ಲಿ ಪೃಥ್ವೀ ಮತ್ತು ಪರ್ಜನ್ಯರೆಂಬ ಇಬ್ಬರು ಅವರ ಕಕ್ಷಕ್ಕೆ ಸೇರಿದವರು. ೮೫ರಲ್ಲಿ ಇವರಿಬ್ಬರೂ ಹೋಗತಾ ಉಳಿದ ೮೩ ಮಂದಿ ಸೋಮಪಾನಾರ್ಹರು. ಸೋಮ ಎಂಬುದು ಒಂದು ರಸವಿಶೇಷವು. ಅದನ್ನು ಕುಡಿಯುವವರು ಸೋಮಪಾನಿಗಳು. ಈ ೮೫ಮಂದಿಗೆ ಶೇಷಶತಸ್ಥರೆಂದು ಹೆಸರು. ಇವರೆಲ್ಲರೂ ಸೋಮರಸಪಾನಾರ್ಹರು. ೧೦೦ಮಂದಿದೇವತೆಗಳಲ್ಲಿ,
೧. ೧೫ಮಂದಿ ಉತ್ತಮ ಕಕ್ಷಕ್ಕೆ ಸೇರಿದ ಸೋಮಪಾನಿಗಳು. ೨. ೮೩ ಮಂದಿ ಮಧ್ಯಮ ಕಕ್ಷಕ್ಕೆ ಸೇರಿದ ಸೋಮಪಾನಾರ್ಹರು. ೩. ಇಬ್ಬರು ಅವರ ಕಕ್ಷಕ್ಕೆ ಸೇರಿದವರು.

**೪. ತಾತ್ತ್ವಿಕದೇವತಾಗಣಕೆ -**

ಕುಬೇರ, ಗಣಪತಿ, ವಿಷ್ವಕ್ಸೇನ ಇವರಿಂದ ಆರಂಭಿಸಿ, ಉತ್ತಮ ಕಕ್ಷಾಪನ್ನರಾದ ಇಂದ್ರ-ಕಾಮರ ತನಕ ಇರುವ ತತ್ತ್ವಾಭಿಮಾನಿದೇವತಾ ವರ್ಗಕ್ಕೆ ನಮಸ್ಕರಿಸುತ್ತೇನೆ.

**೫. ಹೈಮವತಿ -**

ಹಿಮವಂತನಪುತ್ರಿ ಶ್ರೀಪಾರ್ವತೀದೇವಿ. ಹಿಮವಂತನ ಪುತ್ರಿಯಾದ್ದರಿಂದ ಅವಳಿಗೆ 'ಹೈಮವತೀ' ಎಂದು ಹೆಸರು. ಹಿಮವಂತ-ಮೇನಕಾ ಪುತ್ರಿಯು. ಇಂದ್ರ-ಕಾಮರಿಗಿಂತ ಉತ್ತಮರಾದ ಶ್ರೀಪಾರ್ವತೀದೇವಿಯವರಿಗೆ ನಮನ.

**೬. ಷಣ್ಮಹಿಷಿಯರ -**

ಶ್ರೀಕೃಷ್ಣನ ಆರುಮಂದಿ ಪತ್ನಿಯರಾದ ನೀಳಾ, ಲಕ್ಷಣಾ, ಕಾಳಿಂದೀ, ಮಿತ್ರವಿಂದಾ, ಭದ್ರಾ, ಜಾಂಬವತೀ ಎಂಬ ಆರುಮಂದಿ. ಇವರೇ ಷಣ್ಮಹಿಷಿಯರು. ಇವರ ಚರಣಕಮಲಗಳಿಗೆ ನಮಸ್ಕಾರ.

**೭. ವ್ಯೋಮಕೇಶಗೆ -**

ಶ್ರೀರುದ್ರದೇವರಿಗೆ 'ವ್ಯೋಮಕೇಶ' ಎಂದು ಹೆಸರು. ಮೇಲಿಂದ ಧುಮ್ಮಿಕ್ಕಿ ಇಳಿದು ಬರುತ್ತಿರುವ ಗಂಗೆಯನ್ನು ತನ್ನ ಬಿಂಬಮೂರ್ತಿ ಶ್ರೀಸಂಕರ್ಷಣನ ದಯದಿಂದ ತಲೆಯಲ್ಲಿ ಧರಿಸಲು, ಮಹರುದ್ರದೇವರು ತಮ್ಮ ಕೆಂಪಾದ ಜಟೆಯನ್ನು (ಧೂರ್ಜಟಿ) ಆಕಾಶದ ಅಗಲಕ್ಕೂ ಹರಡಿದರು. ಇದರಿಂದ ವ್ಯೋಮಕೇಶ ಎಂಬ ಹೆಸರು ಬಂದಿತು. (ವ್ಯೋಮ-ಆಕಾಶ, ಕೇಶ-ಜಟೆ, ಕೂದಲು). ಜಟೆಯಲ್ಲಿ ಗಂಗೆಯನ್ನು ಧರಿಸಿ ಗಂಗಾಧರನೆಂದು ಪ್ರಸಿದ್ಧರಾದರು.

**೮. ವಾಣೀ -**

ವಾಗಭಿಮಾನಿಗಳೂ, ವೇದಾಭಿಮಾನಿಗಳೂ ಆದ ಶ್ರೀಸರಸ್ವತೀದೇವಿಗೆ ವಾಣಿ ಎಂತನಾಮ. ಇದರಿಂದ ಭಾರತೀದೇವಿಯರಿಗೆ ಗ್ರಾಹ್ಯ.

**೯. ವಾಯು -**

ಭಾರತೀರಮಣರಾದ ಪ್ರಧಾನವಾಯುದೇವರು, ಮುಖ್ಯಪ್ರಾಣದೇವರು.

**೧೦. ಸುತಾಮರಸಭವ -**

ತಾಮರಸ-ಪದ್ಮನಾಭರೂಪೀ ಶ್ರೀಪರಮಾತ್ಮನ ನಾಭಿಯಲ್ಲಿ ಉತ್ಪತ್ತಿಯಾದ ಕಮಲ. ಭವ-ಆ ಕಮಲದಲ್ಲಿ ಉದ್ಭವರಾದ ಚತುರ್ಮುಖಬ್ರಹ್ಮದೇವರು. ಸು ಶಬ್ದದಿಂದ ಸಮೀಚೀನವಾದ, ಅಪ್ರಾಕೃತವಾದ ಶ್ರೀಹರಿಯ ನಾಭೀಕಮಲವೆಂದರ್ಥ.

**೧೧. ಲಕುಮೀ -**

ಜಗಜ್ಜನನಿಯಾದ ಶ್ರೀಲಕ್ಷ್ಮೀದೇವಿ. ಈಶಕೋಟಿಪ್ರವಿಷ್ಟಳು. ಬ್ರಹ್ಮ-ವಾಯುಗಳಿಗಿಂತ ಕೋಟಿಗುಣಗಳಿಂದ ಉತ್ತಮಳು.

**೧೨. ನಾರಾಯಣರಿಗೆ ಅನಮಿಪೆ - -**

ಸರ್ವೋತ್ತಮನಾದ, ಜಗದಾದಿವಂದ್ಯನಾದ, ಸಕಲಗುಣಗಣಪೂರ್ಣನಾದ, ನಿರ್ದೋಷನಾದ ಶ್ರೀಮನ್ನಾರಾಯಣನ ದಿವ್ಯಪಾದಕಮಲಗಳಿಗೆ ಚಂದಾಗಿ ಭಕ್ತಿಪೂರ್ವಕ, ತಾರತಮ್ಯೋಕ್ತಜ್ಞಾನದಿಂದ, ಸಾಷ್ಟಾಂಗಪೂರ್ವಕ ನಮಸ್ಕಾರ ಮಾಡುತ್ತೇನೆ, ಎಂದು ಶ್ರೀದಾಸರಾಯರು ಈ ಪ್ರಥಮ ಪದ್ಯದಿಂದ ಅನುಕ್ರಮಣಿಕಾತಾರತಮ್ಯವನ್ನು ಸೂಚಿಸುತ್ತಾರೆ.

**ಕ್ರಮ -**

ಮಾನುಷೋತ್ತಮರು (ಶ್ರೀಮದಾಚಾರ್ಯರ ಮತಾನುಗರು), ಸೋಮಪಾನಾರ್ಹರು, ಪಾರ್ವತಿ (ಸೌಪರ್ಣೀ, ವಾರುಣೀ), ಷಣ್ಮಹಿಷಿಯರು, ರುದ್ರದೇವರು (ಇದರಿಂದ ಗರುಡ-ಶೇಷರೂ ಗ್ರಾಹ್ಯ), ಶ್ರೀಸರಸ್ವತೀ (ಭಾರತಿಯೂ ಗ್ರಾಹ್ಯ), ಶ್ರೀಮುಖ್ಯಪ್ರಾಣ ದೇವರು, ಶ್ರೀಹರಿಯ ನಾಭೀಕಮಲಸಂಜಾತರಾದ ಶ್ರೀಬ್ರಹ್ಮದೇವರು. ಲಕ್ಷ್ಮೀದೇವಿಯರು, ಶ್ರೀಮನ್ನಾರಾಯಣ ॥೧॥

## ಪದ್ಯ - ೧

**ಮೂಲ -**

ಶ್ರೀಮುಕಾಂವರ ಶ್ರೀಪತೇ ಸ।
ತ್ಕಾಮಿತಪ್ರದ ಸೌಮ್ಯ ತ್ರಿಕಕು।
ದ್ಧಾಮ ತ್ರಿಚತುಷ್ಪಾದ ಪಾವನಚರಿತ ಚಾರ್ವಂಗ॥
ಗೋಮತಿಪ್ರಿಯ ಗೌಣ ಗುರುತಮ।
ಸಾಮಗಾಯನಲೋಲ ಸರ್ವ।
ಸ್ವಾಮಿ ಮಮಕುಲದೈವ ಸಂತೈಸುವುದು ಸಜ್ಜನರ ॥೧॥

**ಅವತರಣಿಕೆ -**

ಅನಂತಮಹಿಮಾಸಂಪನ್ನನಾದ ಶ್ರೀಪರಮಾತ್ಮನನ್ನು, ಸಜ್ಜನರನ್ನು ಸದಾ ರಕ್ಷಿಸೆಂದು ಪ್ರಾರ್ಥಿಸುತ್ತಾರೆ.

**ಪ್ರತಿಪದಾರ್ಥ -**

**ಶ್ರೀಮುಕಾಂ**-ಶ್ರೀ-ವೇದಶಾಸ್ತ್ರಾನುಸಾರ ಐಶ್ವರ್ಯ, ಅಂದರೆ ತಾರತಮ್ಯ ಪಂಚಭೇದಗಳೆಂಬ ಸಮೀಚೀನವಾದ ಜ್ಞಾನವೆಂಬ ಐಶ್ವರ್ಯದಿಂದ ಯುಕ್ತರಾದ ರಮಾ-ಬ್ರಹ್ಮಾದಿಗಳಿಗಿಂತಲೂ, **ವರ** - ಅತ್ಯಂತ ಶ್ರೇಷ್ಠನಾದ (ಸರ್ವೋತ್ತಮನಾದ), **ಶ್ರೀಪತೇ** - ಲಕ್ಷ್ಮೀಪತಿಯೇ, **ಸತ್** - ಸ್ವರೂಪಸ್ವಭಾವದಲ್ಲಿ ಭಕ್ತರಾದ ಸಜ್ಜನರಿಗೆ, **ಕಾಮಿತ** - ಅಪೇಕ್ಷಿತವಾದುದನ್ನು, **ಪ್ರದ** - ಕೊಡುವ (ಅವರ ಮನೋಭೀಷ್ಟದಾಯಕ), **ಸೌಮ್ಯ** - ತನ್ನ ಭಕ್ತರ ವಿಷಯದಲ್ಲಿ ಸುಮುಖನಾದವನೇ (ಶಾಂತಸ್ವರೂಪನೇ), **ತ್ರಿಕಕುತ್ ಧಾಮ** - ಮೂರು ಮಹೋನ್ನತವಾದ (ಕಕುತ್-ವೃಷಭಸ್ಕಂಧದಂತೆ). ಶ್ವೇತದ್ವೀಪ, ಅನಂತಾಸನ, ವೈಕುಂಠಗಳೆಂಬ ಧಾಮತ್ರಯಗಳುಳ್ಳವನೇ, **ತ್ರಿಚತುಷ್ಪಾದ** - ಅಂದರೆ, ಒಳಗೆ ಒಂದು ರೂಪದಿಂದಲೂ. ಶ್ವೇತದ್ವೀಪಾದಿ ಧಾಮತ್ರಯಗಳಲ್ಲಿ ಮೂರು ರೂಪಗಳಿಂದಲೂ, ಅಂತು ಅನಿರುದ್ಧಾದಿ ನಾಲ್ಕುರೂಪಗಳಿಂದಲೂ, ನಾಲ್ಕು ಪಾದಸಾಂಕೇತದಿಂದ ನಾಲ್ಕುಸ್ಥಾನಗಳಲ್ಲಿ ವ್ಯಾಪ್ತನಾದವನೇ. **ಪಾವನ ಚರಿತ**- ಪರಮಪವಿತ್ರ ಚರಿತ್ರೆಯುಳ್ಳವನೇ (ನಿರ್ದೋಷನೇ), **ಚಾರ್ವಂಗ** - ಅತ್ಯಂತ

ಸುಂದರವಾದ ಅಪ್ರಾಕೃತಶರೀರ ಉಳ್ಳವನೇ, **ಗೋಮತಿಪ್ರಿಯ** - ವೇದವಿದರಾದ ಜ್ಞಾನಿಗಳಿಗೆ ಅತ್ಯಂತಪ್ರಿಯನೇ, **ಗೌಣ** - ಗೌಣಜ್ಞಾನಿಗಳಾದ (ಮಿಶ್ರಜ್ಞಾನಿಗಳಾದ) ನಿತ್ಯಸಂಸಾರಿಗಳು, **ಗುರುತಮ** - ಶ್ರೇಷ್ಠರೊಳಗೆ ಶ್ರೇಷ್ಠನಾದವನೇ, **ಸಾಮಗಾಯನಲೋಲ** - ಸಾಮಗಾನದಲ್ಲಿ ಅತ್ಯಂತ ಪ್ರಿಯನೇ, **ಸರ್ವಸ್ವಾಮಿ** - ಸಕಲ ಚರಾಚರಾತ್ಮಕವಾದ ಜಗತ್ತಿಗೆ ಪ್ರಭುವಾದವನೇ, **ಮಮಕುಲದೈವ** - ನನ್ನ ಕುಲದೈವನೇ, **ಸಜ್ಜನರ** - ಸಜ್ಜನರಾದ ಸಾತ್ತ್ವಿಕಜೀವರನ್ನು, **ಸಂರಕ್ಷಿಸುವುದು** - ಸಂರಕ್ಷಿಸುವವನಾಗು ॥೨॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀ ಎಂದರೆ ವೇದಶಾಸ್ತ್ರಾನುಸಾರ ಐಶ್ವರ್ಯ. ಅಂದರೆ, ಉಕ್ತಾನುಸಾರ ತಾರತಮ್ಯ, ಪಂಚಭೇದವೆಂಬ ಐಶ್ವರ್ಯದಿಂದ ಯುಕ್ತರಾದ, ರಮಾ-ಬ್ರಹ್ಮಾದಿಗಳಿಗಿಂತಲೂ ಸರ್ವೋತ್ತಮನಾದ ಶ್ರೀಲಕ್ಷ್ಮೀಪತಿಯಾದವನೇ, ಸ್ವರೂಪಸ್ವಭಾವದಲ್ಲಿ ಭಕ್ತರಾದ ಸಜ್ಜನರಿಗೆ ಅಪೇಕ್ಷಿತವಾದ ಅವರವರ ಹೃದಯಾಂತರ್ಗತ ಬಿಂಬರೂಪವನ್ನು, ಅಪರೋಕ್ಷಾದಿಂದ ಸಂದರ್ಶನ ಕೊಡತಕ್ಕವನೇ, ತನ್ನ ಭಕ್ತರಿಗೆ ಸುಮುಖನಾದವನೇ, ಮೇರುಮಂಥಾ ವೃಷಭಸ್ಕಂಧದೋಪಾದಿಯಲ್ಲಿ ಉನ್ನತವಾದ, ಶ್ರೇಷ್ಠವಾದ ಶ್ವೇತದ್ವೀಪಾದಿ ಧಾಮತ್ರಯವುಳ್ಳವನೇ. ಅಂಡದ ಒಳಗೆ ಒಂದು ರೂಪದಿಂದಲೂ, ಶ್ವೇತದ್ವೀಪಾದಿ ಮೂರರಲ್ಲಿ ಮೂರು ರೂಪದಿಂದಲೂ, ಅಂತು ಅನಿರುದ್ಧಾದಿ ನಾಲ್ಕುರೂಪಗಳು ನಾಲ್ಕಾದ ಸಾಂಕೇತದಿಂದ ನಾಲ್ಕು ಸ್ಥಾನಗಳಲ್ಲಿ ವ್ಯಾಪ್ತನಾದವನೇ. **'ಪಾದೋಽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ - ಇತಿ ಪುರುಷಸೂಕ್ತೇ.** ತನ್ನ ಗುಣಚರಿತ್ರೆಗಳ ತಿಳಿದು ಉಪಾಸನಾಮಾಡತಕ್ಕವರನ್ನು ದೋಷದೂರರನ್ನಾಗಿ ಮಾಡಿ, ಪವಿತ್ರರನ್ನ ಮಾಡತಕ್ಕವನೇ, ರಮಾದೇವೇರೂ ಭ್ರಮಿಸತಕ್ಕ ಮನೋಹರವಾದ ಸುಂದರತರವಾದ ಶರೀರವುಳ್ಳವನೇ, ವೇದಗಳು, ವೇದಗಳ ಸತ್ಯವಾದ ಅರ್ಥಗಳ ತಿಳಿದು, ಜ್ಞಾನಶ್ರೇಷ್ಠರಾದ ಜ್ಞಾನವಂತರಿಗೆ, ಪ್ರೀತಿವಿಷಯನಾದವನೇ, ಗೌಣಜ್ಞಾನಿಗಳಾದ,

ಮಿಶ್ರಜ್ಞಾನಿಗಳಾದ ನಿತ್ಯಸಂಸಾರಿಗಳು, ಶ್ರೇಷ್ಠರೊಳಗೆ ಶ್ರೇಷ್ಠನೆಂದು ಹೇಳತಕ್ಕ ಶ್ರೀಪರಮಾತ್ಮನೇ, 'ನಾನು' ಎಂಬ ತಮೋಯೋಗ್ಯರು ಇವರುಗಳಿಗೆ ಅಪ್ರಿಯನೆಂದು ತಾತ್ಪರ್ಯ. ಮುಕ್ತರಾದವರು ಸಾಮಗಾನರತರು. ಅವರಲ್ಲಿ ಲೋಲನಾಗಿ ಇರತಕ್ಕವನೇ, ಸರ್ವ ಚರಾಚರಕ್ಕೂ ಪ್ರಭುವಾದಂಥಾವನೇ, ನನ್ನ ಕುಲದೈವನಾದವನೇ, ಇಂಥಾ ಶ್ರೀಪರಮಾತ್ಮನೇ ಸಜ್ಜನರಾದ ನಿನ್ನ ಭಕ್ತರನ್ನು ಸಂರಕ್ಷಣಮಾಡೋವನಾಗು ಎಂತ ಪ್ರಾರ್ಥನಾ ಮಾಡಿದ್ದಾರೆಂದು ತಾತ್ಪರ್ಯ ॥೨॥

## ೨. ಭಾವಪ್ರಕಾಶಿಕೆ-

ಶ್ರೀಮಂತರಾದ ಸತ್ಯಲೋಕಾಧಿಪತಿಯಾದ ಬ್ರಹ್ಮದೇವರು ಮೊದಲಾದವರಕಿಂತಲೂ ಉತ್ತಮವಾದ ಐಶ್ವರ್ಯವಂತನಾದ, ಸಜ್ಜನರ ಮನೋಭೀಷ್ಟವನ್ನು ಪೂರೈಸುವವನಾದ, ಮಾರ್ದವ ಸ್ವಭಾವವುಳ್ಳ, ಶ್ವೇತ ದ್ವೀಪ, ಅನಂತಾಸನ, ವೈಕುಂಠವೆಂದು ಮೂರು ಉತ್ತಮ ಸ್ಥಾನವುಳ್ಳ, ತ್ರ್ಯಗ್ನ್ಯಂತರ್ಯಾಮಿಯಾಗಿ ಅಗ್ನಿರೂಪದಿಂದ ಪ್ರಾತಃ ಸವನ, ಮಾಧ್ಯಂದಿನ ಸವನ, ಸಾಯಂ ಸವನವೆಂಬ ಮೂರು ಪಾದಗಳುಳ್ಳ. 'ಚತ್ವಾರಿಶೃಂಗಾಸ್ತ್ರಯೋಸ್ಯ ಪಾದಾಃ' ಎಂಬ ಶ್ರುತಿಯಿಂದ ಮೂರುಪಾದಗಳುಳ್ಳವನೆಂಬ ಅರ್ಥವು ಸಿದ್ಧಿಯಾಗುವುದು. ಚತುಷ್ಪಾದ - ಇಲ್ಲಿ ಪಾದವೆಂದರೆ ಅಂಶವೆಂದು ಹೆಸರು; 'ಪಾದೋಽಸ್ಯವಿಶ್ವಾಭೂತಾನಿ ತ್ರಿಪಾದಸ್ಯಾಮೃತಂ ದಿವಿ' ಎಂಬ ಶ್ರುತಿವಾಕ್ಯದಿಂದ ಈ ಪ್ರಪಂಚದಲ್ಲಿರುವ ಸರ್ವಪ್ರಾಣಿಗಳು ಒಂದು ಪಾದವು. ಆಂದರೆ ಪರಮಾತ್ಮನ ಭಿನ್ನಾಂಶರೆಂದು ತಾತ್ಪರ್ಯ. ಅವಶಿಷ್ಟ 2 ಪಾದಗಳು. 'ಪಾದಾಸ್ತ್ರಯೋಬಹಿಸ್ತ್ವಾಸನ್' ಎಂಬ ಭಾಗವತವಚನದಿಂದ, ಅನಂತಾಸನ, ವೈಕುಂಠ, ನಾರಾಯಣರೆಂಬ ಮೂರು ಪಾದಗಳು ಬ್ರಹ್ಮಾಂಡಕ್ಕೆ ಹೊರಗೆ ಇರುವವು. ಇಲ್ಲಿ ಪಾದವೆಂದರೆ ಸ್ವರೂಪಾಂಶವೆಂದರ್ಥ. ಆದುದರಿಂದ ಚತುಷ್ಪಾದ ಎಂದು ಪರಮಾತ್ಮನಿಗೆ ಹೆಸರು. ಪವಿತ್ರಕರವಾದ ಮಹಿಮೆಯುಳ್ಳವನು. ಅವನ ಮಹಿಮೆಯ ಶ್ರವಣ ಪಠನ ಮಾಡುವವರನ್ನು ಪವಿತ್ರರನ್ನಾಗಿ ಮಾಡುವನೆಂಬ ಭಾವ: ಮನೋಹರವಾದ ಅಂಗಗಳುಳ್ಳವನು. ಗೋಮತಿ ಎಂಬ ನದಿಯ ತೀರದಲ್ಲಿ ಶ್ರೀಕೃಷ್ಣದೇವಾಲಯ ಉಂಟು. ಅಲ್ಲಿ

ಶ್ರೀಕೃಷ್ಣನ ವಿಶೇಷ ಸನ್ನಿಧಾನವಿದ್ದು ಆ ನದಿಯಲ್ಲಿ ಸ್ನಾನಮಾಡುವವರಿಗೆ ಮುಕ್ತಿಯನ್ನು ಕೊಡುವನೆಂದು ಪುರಾಣಪ್ರಸಿದ್ಧಿಯಾಗಿರುವುದು. ಭಾಗವತ ಪ್ರಥಮಸ್ಕಂಧದ ಮೊದಲನೆಯ ಅಧ್ಯಾಯ ೪ನೆಯ ಶ್ಲೋಕದ ವ್ಯಾಖ್ಯಾನಾರಂಭದಲ್ಲಿ, ಆ ಶ್ಲೋಕದ ಅವತಾರಿಕೆಯಲ್ಲಿರುವ ಶ್ಲೋಕ - 'ಬ್ರಹ್ಮಜ್ಞಾನೇನ ವಾ ಮುಕ್ತಿಃ ಪ್ರಯಾಗಮರಣೇನ ವಾ ॥ ಅಥವಾ ಸ್ನಾನ ಮಾತ್ರೇಣ ಗೋಮತ್ಯಾಂ ಕೃಷ್ಣ ಸನ್ನಿಧೌ ॥' ಮುಕ್ತಿಯಾಗಬೇಕಾದರೆ ಬ್ರಹ್ಮಜ್ಞಾನದಿಂದಲಾಗುವುದು; ಅಥವಾ ಪ್ರಯಾಗದಲ್ಲಿ ಗಂಗಾ-ಯಮುನೆಯ ಸಂಗಮದಲ್ಲಿ ದೇಹ ತ್ಯಾಗ ಮಾಡಿದರೂ ಮುಕ್ತಿಯಾಗುವುದು. 'ಅಥವಾ ಕೃಷ್ಣನ ಸನ್ನಿಧಾನದಲ್ಲಿ ಗೋಮತೀನದಿಯಲ್ಲಿ ಸ್ನಾನ ಮಾತ್ರ ಮಾಡಿದರೆ ಸಾಕು ಮುಕ್ತಿಯಾಗುವುದೆಂದು, ಪ್ರಯಾಗಮರಣಕ್ಕೆ ಸಮನಾಗಿ ಗೋಮತೀ ಸ್ನಾನದ ಫಲವನ್ನು ಹೇಳಿರುವರು. ಅದಕ್ಕೆ ಕಾರಣ 'ಗೋಮತ್ಯಾಂ ಕೃಷ್ಣ ಸನ್ನಿಧೌ' ಎಂದು ಕೃಷ್ಣಸನ್ನಿಧಾನದ ಮಹಿಮೆಯನ್ನು ಹೇಳಿರುವರು. ಇದರಿಂದ ಶ್ರೀಕೃಷ್ಣನಿಗೆ ಗೋಮತೀನದಿಯಲ್ಲಿ ಹೆಚ್ಚು ಪ್ರೀತಿ ಇದ್ದಂತೆ ಸ್ಪಷ್ಟವಾಗುವುದು. ಆದುದರಿಂದ ದಾಸಾರ್ಯರು ಗೋಮತೀಪ್ರಿಯನೆಂದು ಹೇಳಿದರು. ಅಗೌಣ ಎಂದರೆ, ತ್ರಿಗುಣಬದ್ಧನಲ್ಲವೆಂದು ತಾತ್ಪರ್ಯ. ಸತ್ತ್ವ ಮೊದಲಾದ ಪ್ರಾಕೃತಗುಣರಹಿತನೆಂದರ್ಥ. ಲೋಕಗುರು ಬ್ರಹ್ಮದೇವರು' ಗುರುತಮ ಎಂದರೆ ಬ್ರಹ್ಮಾದಿಗಳಿಗೂ ಗುರುವೆಂದರ್ಥ. ಅಥವಾ ತ್ರಿಗುಣಾತೀತರು ಮುಕ್ತರು. ಅವರಿಗೆ ಅಗೌಣರೆಂದು ಹೆಸರು. ಮುಕ್ತರೆಲ್ಲರಕಿಂತಲೂ ಗುರುತಮನೆಂದರೆ ಉತ್ತಮನೆಂದರ್ಥ. ಮುಕ್ತರಾದವರು 'ಏತತ್ಸಾಮಗಾಯನ್ನಾಸ್ತೆ । ಹಾ ಉಹಾ ಉಹಾ' ಇತ್ಯಾದಿ ಸಾಮವನ್ನು ಗಾನಮಾಡುತ್ತಾ ಸ್ವರೂಪಸುಖವನ್ನು ಅನುಭವಿಸುತ್ತಿರುವರೆಂದು, ತೈತ್ತರೀಯ ಉಪನಿಷದ್ವಾಕ್ಯದಂತೆ ಸಾಮಗಾನರು ಮುಕ್ತರೆಂದು ವರ್ಣಿಸುತ್ತದೆ. ಅವರು ಮಾಡುವ ಗಾಯನದಲ್ಲಿ ಪ್ರೀತಿ ಉಳ್ಳವನೆಂದರ್ಥ. ಅಥವಾ ಸಾಮಗಾಯನರು ಮುಕ್ತರು. ಅವರಲ್ಲಿ ಲೋಲನಾಗಿರುವವನು; ಅಥವಾ 'ವೇದಾನಾಂ ಸಾಮವೇದೋಸ್ಮಿ' ಎಂಬ ಗೀತಾವಾಕ್ಯದಿಂದ ವೇದಗಳಲ್ಲಿ ಸಾಮವೇದವನ್ನು ಭಗವದ್ವಿಭೂತಿ ರೂಪನ್ನಾಗಿ ತಿಳಿಯಬೇಕೆಂದು ಹೇಳಿರುವುದರಿಂದ ಸಾಮಗಾನಲೋಲನೆಂದೂ [illegible]ಹುದು. ರಮಾ-ಬ್ರಹ್ಮಾದಿ ಸರ್ವ ಜನರಿಗೂ ಪ್ರಭುವಾದವನು. ನಮ್ಮ

ಕುಲದೈವನಾದ, ಶ್ರೀಲಕ್ಷ್ಮೀಪತಿಯಾದ ಶ್ರೀನರಸಿಂಹನೇ ! ಸಜ್ಜನರನ್ನು ಸಂತೈಸಬೇಕೆಂದು ಪ್ರಾರ್ಥಿಸುತ್ತೇನೆ ॥೨॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ -

'ಶ್ರೀಮತಾಂವರ' ಇತಿ॥ **ಶ್ರೀಮತಾಂ ವರಃ** ॥ ಓಂ ॥ ವಾಜಯಂತ್ರೋಃ ಹವಾಮಹೇ ಅಸ್ಮೋ ವಿಶ್ವೇ ಸ್ತೇಷಾಂ ರಸಂ(ಸಾ) ಮಧ್ವಃ॥ ಸಿಂಹಂತ್ವದ್ರ್ಯುಃ ೨ಸೀ ಪರಾವತಿ ಸುನ್ವಿರೇ ಜನೇಷ್ವಾವೇಂದ್ರಃ ಪರಾವತಿ ॥ ಓಂ ॥ಶ್ರೀಮಂತಃ ಜಲಮಿಶ್ರಿತ ಸೋಮರಸಾಃ ॥ ತೇಷಾಂ ವರಂ ವರೇಣ್ಯಃ ಸ್ವೀಕರ್ತಾ ॥ **ಶ್ರೀಪತೇ** ॥ ಓಂ ॥ ಸೋಮಾ ಇಂದ್ರಂ ಮಮಂದಿಷುಃ ಉಪಮತ್ಸ್ವಾ ಮಘೋನಾಂ ಜ್ಯೇಷ್ಠಂ ಚ ವೃಷಭಾಣಾಂ ಪೂರ್ಭಿತಮಂ ಮಘವನ್ನಿಂದ್ರ ಗೋವಿದಮ್ ॥ ಓಂ ॥ ಭಗವಂತಂ ಶ್ರಯಾತೇ ಇತಿ ಶ್ರಿಯಃ ॥ ತಾನ್ ಸ್ವಾಶ್ರಿತಾನ್ ರಕ್ಷತೀತಿ **ಶ್ರೀಪತಿಃ** ॥ ಸ್ವರೂಪಭೂತಭಿನ್ನಗ್ರಹಣೇ (ನ) ಚತುಷ್ಪಾತ್ತ್ವಮ್ ॥ ತದುಕ್ತಂ ಛಾಂದೋಗ್ಯಭಾಷ್ಯೇ 'ತ್ರಿಭಿಃ ಸ್ವರೂಪಾದ್ಯೈಸ್ತು ಭಿನ್ನೇನೈಕೇನ ನೈವ ಹಿ ॥ ಗಾಯತ್ರೀನಾಮಕೋ ವಿಷ್ಣುಃ ಚತುಷ್ಪಾತ್ ಸಂಪ್ರಕೀರ್ತಿತಃ ॥ **ಗೋಮತೀಪ್ರಿಯ** - ಗೋಮತೀ ಭೂಃ ॥ ಗೌಣಾಃ ॥ ಗುಣದೇಹಾಃ । ಅಜಾದ್ಯಾಃ । ತೇಷಾಂ ಗುರುತಮಃ ॥೨॥

### ಕನ್ನಡಾರ್ಥ-

**ಶ್ರೀಮತಾಂ ವರಃ** - 'ಶ್ರೀಮತಾಂ'-ಜಲಮಿಶ್ರಿತ ಸೋಮರಸವುಳ್ಳವರಿಗೆ, 'ವರಃ - ವರೇಣ್ಯನು (ಭಜನೀಯನು) **ಶ್ರೀಪತಿಃ** - ತನ್ನನ್ನು ಆಶ್ರಯಿಸಿದವರನ್ನು ಪಾಲನ ಮಾಡುವವನು.

ಸ್ವರೂಪಭೂತವಾದ ಅಂಶ ಹಾಗೂ ಭಿನ್ನಪಾದ ಇವುಗಳನ್ನು ಸೇರಿಸಿ ಚತುಷ್ಪಾತ್ (ನಾಲ್ಕುಪಾದಗಳುಳ್ಳವನು) ಹೀಗೆ ಅರ್ಥ. ಛಾಂದೋಗ್ಯಭಾಷ್ಯದಲ್ಲಿ- 'ಮೂರು ಸ್ವರೂಪಭೂತಪಾದ(ಅಂಶ)ಗಳಿಂದಲೂ, ಒಂದು ಭಿನ್ನಪಾದದಿಂದಲೂ ಗಾಯತ್ರೀನಾಮಕ ಹರಿಯು 'ಚತುಷ್ಪಾತ್' ಎನಿಸಿರುತ್ತಾನೆ.

**ಗೋಮತೀಪ್ರಿಯ** - 'ಗೋಮತೀ' - ಭೂಮಿ, ಅದಕ್ಕೆ ಪ್ರಿಯತಮ,

'ಗೌಣ' - ಗುಣಾತ್ಮಕವಾದ ದೇಹವುಳ್ಳ ಅಜಾದಿಗಳು. ಅವರಿಗೆ ಗುರುಶ್ರೇಷ್ಠನು ॥೨॥

**೪. ಭಾವದರ್ಪಣ-**

ಶ್ರೀಮತಾಂವರ । ಚತುಷ್ಪಾತ್ ॥ "ಪಾದೋಽಸ್ಯವಿಶ್ವಾಭೂತಾನಿ ತ್ರಿಪಾದಸ್ಯಾಮೃತಂ ದಿವಿ" ಶ್ರುತೇಃ ॥ಗೋಮತೀ - ಭೂಮಿ। ಅಗೌಣ-ಗುಣಬದ್ಧೋ ಗೌಣಃ, ಸ ಸ ಭವತೀತ್ಯ ಗೌಣಃ, ಸತ್ವಾದಿಗುಣತ್ರಯ ಶೂನ್ಯನೆಂಬರ್ಥ ॥೨॥

**೫. ಶ್ರೀಗುರುಹೃದಯಪ್ರಕಾಶಿಕೆ-**

ಶ್ರೀಮಂತರಾದ ಸಕಲದೇವತೆಗಳಿಗೂ ಉತ್ತಮನೆ, ಶ್ರೀದೇವಿಗೆ ಅರಸನೆ, ಸಜ್ಜನರಿಗೆ ಇಷ್ಟಪ್ರದನೇ, ಸೌಮ್ಯವೆಂಬ ಕೋಮಲಗುಣಸ್ವಭಾವನೆ, ತ್ರಿಕಕುದ್ಧಾಮವೆಂಬ ವೈಕುಂಠಾದಿ ಮೂರು ಸ್ವರೂಪಾಂಶಗಳಿಂದ ಆ ಲೋಕಗಳಲ್ಲಿರುವವನೇ, ಭಿನ್ನಾಂಶ ಜೀವರಲ್ಲಿದ್ದು ಚತುಷ್ಪಾತ್ ಎಂದು ಕರೆಸುವವನೆ, ಲೋಕಪವಿತ್ರಕರಚರಿತ್ರನೆ, ಮನೋಹರರೂಪನೇ, ಗೋಮತಿಪ್ರಿಯ ಎಂದರೆ ಗೋ ಎಂಬ ವೇದಾನುಗತ ಬುದ್ಧಿಗೆ ಪ್ರಿಯನಾದವನೆ, ಗೌಣ ಎಂದರೆ ಕಲ್ಯಾಣಗುಣಗಳುಳ್ಳವನೆ, ಗುರುತಮನೆಂಬ ಸರ್ವೋತ್ತಮೋತ್ತಮನೆ, ಸಾಮವೇದಗಾನಪ್ರಿಯನೆ, ಸರ್ವಾಧ್ಯಕ್ಷನೆ, ನಮ್ಮ ಕುಲದೇವ ಶ್ರೀಹರಿಯೇ, ಸಜ್ಜನರನ್ನು ರಕ್ಷಿಸು ॥೨॥

## ಸರ್ವವ್ಯಾಖ್ಯಾನ ಸಾರಸಂಗ್ರಹ

೧. ಶ್ರೀ ಎಂದರೆ ವೇದಶಾಸ್ತ್ರಾನುಸಾರ ಐಶ್ವರ್ಯ ಎಂದರ್ಥ. ಅದರಿಂದ ವೇದಾಧ್ಯಯನಸಂಪನ್ನರಾದ ಸಜ್ಜನರು - **ಶ್ರೀಮತಾಂ**

ಐಶ್ವರ್ಯಸಂಪನ್ನರಾದ, ಸತ್ಯಲೋಕಾಧಿಪತಿಯಾದ ಶ್ರೀಬ್ರಹ್ಮದೇವರೇ ಆದಿಯಾಗಿ ದೇವತಾವರ್ಗ. ಇವರಿಗಿಂತ ಉತ್ತಮೋತ್ತಮನಾದ ಶ್ರೀಹರಿಯು **ಶ್ರೀಮತಾಂವರನು**.

ಇನ್ನೊಂದರ್ಥದಲ್ಲಿ ಜಲಮಿಶ್ರಿತ ಸೋಮರಸಪಾನಾರ್ಹರು **ಶ್ರೀಮತಾಂ**-ಅಂಥಹವರಿಂದ ಭಜನೀಯನಾದ್ದರಿಂದ (ವರೇಣ್ಯನಾದ್ದರಿಂದ) ಶ್ರೀಪರಮಾತ್ಮನು **ಶ್ರೀಮತಾಂವರನು**. ಅಂದರೆ ಶ್ರೀಮಂತರಾದ ಸರ್ವ ದೇವತೆಗಳಿಗೂ ಉತ್ತಮೋತ್ತಮನೆಂದರ್ಥ.

೨. ಸತ್ತ್ವಗುಣಾಭಿಮಾನಿಯಾದ ಮಂಗಳಪ್ರದಳಾದ ಶ್ರೀಲಕ್ಷ್ಮೀದೇವಿಗೆ **ಶ್ರೀ** ಎಂಬ ಹೆಸರು. ಶ್ರೀನಾಮಕಳಾದ ಲಕ್ಷ್ಮೀದೇವಿಗೆ ಸ್ವಾಮಿಯೂ ಮತ್ತು ನಿಯಾಮಕನೂ ಆದ ಶ್ರೀಹರಿಯು **ಶ್ರೀಪತಿಯು.**

೩. ಶ್ರೀಮತಾಂವರನೂ, ಶ್ರೀಪತಿಯೂ ಆದ ಶ್ರೀಪರಮಾತ್ಮನು ಸಜ್ಜನರ ಮನೋಭಿಲಾಷೆಗಳನ್ನು ಈಡೇರಿಸುವ ಸರ್ವಾಭೀಷ್ಟಪ್ರದನು. **ಕಾಮ** - ಎಂದರೆ ಮನಸ್ಸಿನ ಇಷ್ಟಗಳು. **ಸತ್ಕಾಮ** - ಎಂದರೆ, ಸ್ವರೂಪಸ್ಥಭಾವದಲ್ಲಿ ಸಜ್ಜನರಾದವರು ಮಾಡುವ ಭಗವದ್ವಿಷಯಕವಾದ ಕಾಮಿತಾರ್ಥಗಳು. ಅವುಗಳನ್ನು ನೀಡುವವನಾದ್ದರಿಂದ. **ಸತ್ಕಾಮಿತಪ್ರದನು.**

೪. ತನ್ನ ಭಕ್ತರ ವಿಷಯದಲ್ಲಿ ಶ್ರೀಹರಿಯು ಸುಮುಖನು. ಅತ್ಯಂತ ಕೋಮಲ ಹಾಗೂ ಮೃದುಸ್ವಭಾವವುಳ್ಳವನು. ಪರಮ ಶಾಂತಮೂರ್ತಿ. ಇದರಿಂದ **ಸೌಮ್ಯನು.**

೫. ಸತ್ಕಾಮಿತಪ್ರದನೂ, ಸೌಮ್ಯನೂ ಆದ ಶ್ರೀಪರಮಾತ್ಮನು. **ತ್ರಿ**- ಅಂದರೆ ಮೂರು, **ಕಕುದ್ಧಾಮ** - ಉನ್ನತವಾದ ಮುಕ್ತಿಧಾಮಗಳು ವೈಕುಂ[illegible] ಅನಂತಾಸನ ಮತ್ತು ಶ್ವೇತದ್ವೀಪದಲ್ಲಿ ನಿವಾಸಿಯು. ಲಕ್ಷ್ಮ್ಯಾತ್ಮಕವಾದ [illegible] ಮುಕ್ತಿಧಾಮತ್ರಯಗಳು ಸಾತ್ತ್ವಿಕರಿಗೆ ಲಭ್ಯವಾಗುವ ಅತ್ಯುನ್ನತ (ಶ್ರೇಷ್ಠ) ಸ್ಥಾನಗಳು. **ಕಕುತ್** - ಎಂದರೆ ಗೂಳಿಯ ಬೆನ್ನು ಮೇಲಿನ ಡುಬ್ಬ (ವೃಷಭ ಸ್ಕಂಧ), ಅದು ಉನ್ನತವಾಗಿರುವುದು. ತ್ರಿಧಾಮಗಳು ವೃಷಭಸ್ಕಂಧದೋಪಾದಿಗಳು. ಅತ್ಯುನ್ನತ ಸ್ಥಾನಗಳಾದ್ದರಿಂದ **ತ್ರಿಕಕುದ್ಧಾಮನು.**

'ಗೌಣ' - ಗುಣಾತ್ಮಕವಾದ ದೇಹವುಳ್ಳ ಅಜಾದಿಗಳು. ಅವರಿಗೆ ಗುರುಶ್ರೇಷ್ಠನು ॥೨॥

೪. ಭಾವದರ್ಪಣ-

ಶ್ರೀಮತಾಂವರ । ಚತುಷ್ಪಾತ್ ॥ "ಪಾದೋಸ್ಯವಿಶ್ವಾಭೂತಾನಿ ತ್ರಿಪಾದಸ್ಯಾಮೃತಂ ದಿವಿ" ಶ್ರುತೇಃ ॥ಗೋಮತೀ - ಭೂಮಿ। ಅಗೌಣ-ಗುಣ ಬದ್ಧೋ ಗೌಣಃ, ಸ ನ ಭವತೀತ್ಯ ಗೌಣಃ, ಸತ್ವಾದಿಗುಣತ್ರಯ ಶೂನ್ಯ ನೆಂಬರ್ಥ ॥೨॥

೫. ಶ್ರೀಗುರುಹೃದಯಪ್ರಕಾಶಿಕೆ-

ಶ್ರೀಮಂತರಾದ ಸಕಲದೇವತೆಗಳಿಗೂ ಉತ್ತಮನೆ, ಶ್ರೀದೇವಿಗೆ ಅರಸನೆ, ಸಜ್ಜನರಿಗೆ ಇಷ್ಟಪ್ರದನೇ, ಸೌಮ್ಯವೆಂಬ ಕೋಮಲಗುಣಸ್ವಭಾವನೆ, ತ್ರಿಕಕುದ್ಧಾಮವೆಂಬ ವೈಕುಂಠಾದಿ ಮೂರು ಸ್ವರೂಪಾಂಶಗಳಿಂದ ಆ ಲೋಕ ಗಳಲ್ಲಿರುವವನೇ, ಭಿನ್ನಾಂಶ ಜೀವರಲ್ಲಿದ್ದು ಚತುಷ್ಪಾತ್ ಎಂದು ಕರೆಸುವವನೆ, ಲೋಕಪವಿತ್ರಕರಚರಿತ್ರನೆ, ಮನೋಹರರೂಪನೇ, ಗೋಮತಿಪ್ರಿಯ ಎಂದರೆ ಗೋ ಎಂಬ ವೇದಾನುಗತ ಬುದ್ಧಿಗೆ ಪ್ರಿಯನಾದವನೆ, ಗೌಣ ಎಂದರೆ ಕಲ್ಯಾಣ ಗುಣಗಳುಳ್ಳವನೆ, ಗುರುತಮನೆಂಬ ಸರ್ವೋತ್ತಮೋತ್ತಮನೆ, ಸಾಮವೇದ ಗಾನಪ್ರಿಯನೆ, ಸರ್ವಾಧ್ಯಕ್ಷನೆ, ನಮ್ಮ ಕುಲದೇವ ಶ್ರೀಹರಿಯೇ, ಸಜ್ಜನರನ್ನು ರಕ್ಷಿಸು ॥೨॥

## ಸರ್ವವ್ಯಾಖ್ಯಾನ ಸಾರಸಂಗ್ರಹ

೧. ಶ್ರೀ ಎಂದರೆ ವೇದಶಾಸ್ತ್ರಾನುಸಾರ ಐಶ್ವರ್ಯ ಎಂದರ್ಥ. ಆದರಿಂದ ವೇದಾಧ್ಯಯನಸಂಪನ್ನರಾದ ಸಜ್ಜನರು - **ಶ್ರೀಮತಾಂ**

ಐಶ್ವರ್ಯಸಂಪನ್ನರಾದ, ಸತ್ಯಲೋಕಾಧಿಪತಿಯಾದ ಶ್ರೀಬ್ರಹ್ಮದೇವರೇ ಆದ್ಯರಾಗಿ ದೇವತಾವರ್ಗ. ಇವರಿಗಿಂತ ಉತ್ತಮೋತ್ತಮನಾದ ಶ್ರೀಹರಿಯು **ಶ್ರೀಮತಾಂವರನು**.

ಇನ್ನೊಂದರ್ಥದಲ್ಲಿ ಜಲಮಿಶ್ರಿತ ಸೋಮರಸಪಾನಾರ್ಹರು **ಶ್ರೀಮತಾಂ**-**ಅಂಥಹವರಿಂದ** ಭಜನೀಯನಾದ್ದರಿಂದ (ವರೇಣ್ಯನಾದ್ದರಿಂದ) ಶ್ರೀಪರಮಾತ್ಮನು **ಶ್ರೀಮತಾಂವರನು**. ಅಂದರೆ ಶ್ರೀಮಂತರಾದ ಸರ್ವ ದೇವತೆಗಳಿಗೂ ಉತ್ತಮೋತ್ತಮನೆಂದರ್ಥ.

೨. ಸತ್ತ್ವಗುಣಾಭಿಮಾನಿಯಾದ ಮಂಗಳಪ್ರದಳಾದ ಶ್ರೀಲಕ್ಷ್ಮೀದೇವಿಗೆ **ಶ್ರೀ** ಎಂದು ಹೆಸರು. ಶ್ರೀನಾಮಕಳಾದ ಲಕ್ಷ್ಮೀದೇವಿಗೆ ಸ್ವಾಮಿಯೂ ಮತ್ತು ನಿಯಾಮಕನೂ ಆದ ಶ್ರೀಹರಿಯು **ಶ್ರೀಪತಿಯು**.

೩. ಶ್ರೀಮತಾಂವರನೂ, ಶ್ರೀಪತಿಯೂ ಆದ ಶ್ರೀಪರಮಾತ್ಮನು ಸಜ್ಜನರ ಮನೋಭಿಲಾಷೆಗಳನ್ನು ಈಡೇರಿಸುವ ಸರ್ವಾಭೀಷ್ಟಪ್ರದನು. **ಕಾಮ** - ಎಂದರೆ ಮನಸ್ಸಿನ ಇಷ್ಟಗಳು. **ಸತ್ಕಾಮ** - ಎಂದರೆ, ಸ್ವರೂಪಸ್ವಭಾವದಲ್ಲಿ ಸಜ್ಜನರಾದವರು ಮಾಡುವ ಭಗವದ್ವಿಷಯಕವಾದ ಕಾಮಿತಾರ್ಥಗಳು. ಅವುಗಳನ್ನು ನೀಡುವವನಾದ್ದರಿಂದ. **ಸತ್ಕಾಮಿತಪ್ರದನು**.

೪. ತನ್ನ ಭಕ್ತರ ವಿಷಯದಲ್ಲಿ ಶ್ರೀಹರಿಯು ಸುಮುಖನು. ಅತ್ಯಂತ ಕೋಮಲ ಹಾಗೂ ಮೃದುಸ್ವಭಾವವುಳ್ಳವನು. ಪರಮ ಶಾಂತಮೂರ್ತಿ. ಇದರಿಂದ **ಸೌಮ್ಯನು**.

೫. ಸತ್ಕಾಮಿತಪ್ರದನೂ, ಸೌಮ್ಯನೂ ಆದ ಶ್ರೀಪರಮಾತ್ಮನು, **ತ್ರಿ**- ಅಂದರೆ ಮೂರು, **ಕಕುದ್ಧಾಮ** - ಉನ್ನತವಾದ ಮುಕ್ತಿಧಾಮಗಳು ವೈಕುಂಠ, ಅನಂತಾಸನ ಮತ್ತು ಶ್ವೇತದ್ವೀಪದಲ್ಲಿ ನಿವಾಸಿಯು. ಲಕ್ಷ್ಮ್ಯಾತ್ಮಕವಾದ ಈ ಮುಕ್ತಿಧಾಮತ್ರಯಗಳು ಸಾತ್ತ್ವಿಕರಿಗೆ ಲಭ್ಯವಾಗುವ ಅತ್ಯುನ್ನತ (ಶ್ರೇಷ್ಠ) ಸ್ಥಾನಗಳು. **ಕಕುತ್** - ಎಂದರೆ ಗೂಳಿಯ ಬೆನ್ನು ಮೇಲಿನ ಡುಬ್ಬ (ವೃಷಭ ಸ್ಕಂಧ), ಅದು ಉನ್ನತವಾಗಿರುವುದು. ತ್ರಿಧಾಮಗಳು ವೃಷಭಸ್ಕಂಧದೋಪಾದಿಗಳು. ಅತ್ಯುನ್ನತ ಸ್ಥಾನಗಳಾದ್ದರಿಂದ **ತ್ರಿಕಕುದ್ಧಾಮನು**.

೬. **ತ್ರಿ** - ಎಂದರೆ ವೈಕುಂಠ, ಅನಂತಾಸನ, ಶ್ವೇತದ್ವೀಪಗಳೆಂಬ ಧಾಮ ತ್ರಯಗಳು. ಮತ್ತು ಪ್ರಾತಃಸವನ, ಮಾಧ್ಯಂದಿನಸವನ, ಮತ್ತು ಸಾಯಂಸವನ ಗಳೆಂಬ ಕಾಲತ್ರಯರೂಪವಾದ ಮೂರು ಪಾದಗಳುಳ್ಳವನು. ಇದರಿಂದ **ತ್ರಿಪಾತ್** ಎಂದು ಕರೆಸುತ್ತಾನೆ.

೭. **ಚತುಷ್ಪಾತ್** - ಬ್ರಹ್ಮಾಂಡದ ಒಳಗೆ ಒಂದು ರೂಪ (ಸರ್ವಚೇತನ ರಲ್ಲಿ ಭಿನ್ನಾಂಶ ರೂಪ), ವೈಕುಂಠಾದಿ ತ್ರಿಧಾಮಗಳಲ್ಲಿ ಮೂರು ರೂಪಗಳು (ಸ್ವರೂಪಾಂಶ). ಹೀಗೆ ನಾಲ್ಕು ರೂಪಗಳಿಂದ ವಿದ್ಯಮಾನನಾಗಿ **ಚತುಷ್ಪಾತ್** ಎಂದು ಕರೆಸಿಕೊಳ್ಳುವನು. (ಪಾತ್-ಅಂಶ, ನಾಲ್ಕು ಅಂಶಗಳು - ಭಿನ್ನಾಂಶ ಒಂದು + ಸ್ವರೂಪಾಂಶಗಳು ಮೂರು). **ಪ್ರಮಾಣ** - 'ಪಾದೋಽಸ್ಯ ವಿಶ್ವಾಭೂತಾನಿ ತ್ರಿಪಾದಸ್ಯಾಮೃತಂ ದಿವಿ' - **ಪುರುಷ ಸೂಕ್ತವಾಕ್ಯ.**

ಗಾಯತ್ರೀಮಂತ್ರವು ೨೪ ಅಕ್ಷರಗಳಿಂದ ಯುಕ್ತವಾದದ್ದು. ಪ್ರತಿ ೮ ಅಕ್ಷರಗಳಿಗೆ ಒಂದು ಪಾದ. ಗಾಯತ್ರೀಮಂತ್ರಪ್ರತಿಪಾದ್ಯನಾದ ಶ್ರೀಪರಮಾತ್ಮನು ತ್ರಿಪಾತ್.

೮. ಶ್ರೀಪರಮಾತ್ಮನ ಚರಿತ್ರೆ ಪರಮಪಾವನವು. ಸಮಸ್ತ ದೋಷಗಳಿಂದ ದೂರವಾದದ್ದು. ಅಲ್ಲದೇ ಶ್ರೀಹರಿಯ ಸಂಸ್ಮರಣೆಯಿಂದ ಭಕ್ತಜನರ ಸಕಲ ಪಾಪಗಳು ಪರಿಹಾರ. ಅವರನ್ನು ಪವಿತ್ರೀಕರಿಸಿ ಶುದ್ಧಗೊಳಿಸುವುದು. ಇದರಿಂದ **ಪಾವನಚರಿತನು.**

೯. ಪಾವನಚರಿತನಾದ ಪವಿತ್ರವಸ್ತು ಪರಮಾತ್ಮನು ಅಪ್ರಾಕೃತವಾದ ಮನೋಹರವಾದ ಅವಯುವಗಳುಳ್ಳ ಶರೀರವುಳ್ಳವನು. ಇದರಿಂದ **ಚಾರ್ವಂಗನು.** (ಚಾರು-ಸುಂದರವಾದ, ಮನೋಹರವಾದ, ಅಂಗ-ಅವಯುವ ವಿಶೇಷನು).

**೧೦.** ಚಾರ್ವಂಗನಾದ ಚಾರುಚರಿತನು **ಗೋ** - ವೇದಗಳು, **ಮತಿ** - ಬುದ್ಧಿಯಲ್ಲಿ ಉಳ್ಳವರು. ವೇದಾಧ್ಯಯನ ಸಂಪನ್ನರಾಗಿ, ವೇದಪ್ರತಿಪಾದ್ಯನಾದ ಆ ವೇದಾಂತಸ್ವರೂಪನನ್ನು ಉಪಾಸಿಸುತ್ತಿರುವ ಭಕ್ತಜನರಿಗೆ ಅತ್ಯಂತಪ್ರಿಯನಾದ್ದರಿಂದ **ಗೋಮತಿಪ್ರಿಯನು**.

ಅಲ್ಲದೇ, ಗೋಮತಿಯು ಪವಿತ್ರವಾದ ತರಂಗಿಣಿ. ಆ ನದಿಯ ತೀರದಲ್ಲಿ ಶ್ರೀಕೃಷ್ಣದೇವಾಲಯವಿದೆ. ಇದರಿಂದ ಗೋಮತೀನದಿಯಲ್ಲಿ ಕೃಷ್ಣನ ವಿಶೇಷ ಸನ್ನಿಧಾನವುಂಟು. ಆ ನದಿಯಲ್ಲಿ ಸ್ನಾನಮಾಡುವವರಿಗೆ ಶ್ರೀಕೃಷ್ಣಾನುಗ್ರಹವಾಗಿ, ಮುಕ್ತಿಫಲವನ್ನು ಪಡೆಯುವರು. ಇದರಿಂದಲೂ ಗೋಮತಿಪ್ರಿಯನು.

ಇನ್ನೊಂದರ್ಥ- ಗೋಮತಿ ಎಂದರೆ ಭೂಮಿ. ಭೂವಲ್ಲಭನಾದ್ದರಿಂದ ಗೋಮತಿಪ್ರಿಯನು.

**೧೧. ಗೌಣ -**

ಪ್ರಾಕೃತಗುಣಗಳಿಂದ ದೂರನು. ಅಪ್ರಾಕೃತವಾದಗುಣಗಳುಳ್ಳವನು. ತ್ರಿಗುಣಾತೀತನಾದ್ದರಿಂದ ಗೌಣ ಶಬ್ದವಾಚ್ಯನು. (ಜೀವರಂತೆ ತ್ರಿಗುಣಬದ್ಧನಲ್ಲ). ತ್ರಿಗುಣಾತ್ಮಕವಾದ ಲಿಂಗಶರೀರವುಳ್ಳ ಬ್ರಹ್ಮಾದಿ ಚೇತನರಿಗೂ ಗೌಣ ಎಂತ ನಾಮ.

**೧೨. ಗುರುತಮ -**

ಜಗದಾದಿಗುರುವು ಪ್ರಪ್ರಥಮದಲ್ಲಿ ಬ್ರಹ್ಮದೇವರಿಗೆ ಉಪದೇಶಿಸಿದ ಹಯಗ್ರೀವರೂಪೀ ಶ್ರೀಹರಿ. ಬ್ರಹ್ಮಾದಿಗಳಿಗೆ ಶ್ರೇಷ್ಠ ಗುರುವೆಂದರ್ಥ.

**೧೩. ಸಾಮಗಾಯನಲೋಲ -**

ಸಾಮವೇದಗಾನದಿಂದ ಸಂತೋಷವನ್ನು ಹೊಂದುವನು. ಸಾಮ[illegible] ಗಾನವು ಶ್ರೀಹರಿಗೆ ಅತ್ಯಂತ ಪ್ರೀತಿಕರವು.

೧೪. **ಸರ್ವಸ್ವಾಮಿ -**
ಸರ್ವೋತ್ತಮನಾದ್ದರಿಂದ ಎಲ್ಲರಿಗೂ ಒಡೆಯ,

೧೫. **ಮಮಕುಲದೈವ -**
ನನ್ನ ಕುಲಕ್ಕೆ ದೇವರಾದ ಶ್ರೀಲಕ್ಷ್ಮೀನರಸಿಂಹಸ್ವಾಮಿ.

೧೬. **ಸಜ್ಜನರ -**
ಸಾತ್ತ್ವಿಕ ಪ್ರವೃತ್ತಿಯುಳ್ಳ ನಿನ್ನ ಭಕ್ತರನ್ನು

೧೭. **ಸಂಶೈಸುವುದು -**
ಕಾಪಾಡಬೇಕೆಂದು ಪ್ರಾರ್ಥಿಸುತ್ತಾರೆ. ಅಪರೋಕ್ಷೀಕೃತಶ್ರೀಶರಾದ ಶ್ರೀಜಗನ್ನಾಥದಾಸವರೇಣ್ಯರು ॥೨॥

※ ※ ※

## ಪದ್ಯ - ೩

**ಮೂಲ -**

**ರಾಮ ರಾಕ್ಷಸ ಕುಲಭಯಂಕರ ।**
**ಸಾಮಜೇಂದ್ರಪ್ರಿಯ ಮನೋವಾ ।**
**ಚಾಮಗೋಚರ ಚಿತ್ಸುಖಪ್ರದ ಚಾರುತರ ಚರಿತ ।**
**ಭೂಮ ಭೂ ಸ್ವರ್ಗಾಪವರ್ಗದ ।**
**ಕಾಮಧೇನು ಸುಕಲ್ಪತರು ಚಿಂ ।**
**ತಾಮಣಿಯು ಎಂದೆನಿಪ ನಿಜಭಕ್ತರಿಗೆ ಸರ್ವತ್ರ ॥೩॥**

**ಅವತರಣಿಕೆ -**

ಶ್ರೀಹರಿಯ ಅನಂತ ಮಹಿಮೆಗಳನ್ನು ತಿಳಿಸುತ್ತಾರೆ.

**ಪ್ರತಿಪದಾರ್ಥ -**

**ರಾಮ** - ಶ್ರೀರಾಮಾವತಾರದಲ್ಲಿ, **ಭಯಂಕರ** - ಅತ್ಯಂತ ಕ್ರೂರಿಗಳಾದ, **ರಾಕ್ಷಸಕುಲ** - ರಾವಣಾದಿ ದೈತ್ಯರನ್ನು ಸಂಹರಿಸಿದನು. **ಸಾಮಜೇಂದ್ರಪ್ರಿಯ** - ನಕ್ರನಿಂದ ಪೀಡಿತನಾಗಿದ್ದ ಗಜೇಂದ್ರನನ್ನು ಸಲಹಿದ ಶ್ರೀಚಕ್ರಧರನು. **ಮನೋವಾಚಾಂ** - ಮನಸ್ಸಿಗೆ ಮತ್ತು ವಾಕ್ಕುಗಳಿಗೆ, **ಅಗೋಚರ** - ಗೋಚರನಾಗದವನು. (ರಮಾ-ಬ್ರಹ್ಮಾದಿಗಳಿಗೂ ಸಾಕಲ್ಯೇನ ಅಗೋಚರನು). **ಚಿತ್ಸುಖಪ್ರದ** - ಸ್ವರೂಪಸುಖ ವ್ಯಕ್ತಮಾಡುವ, **ಚಾರು ಚರಿತ** - ಮನೋಹರವಾದ ಲೀಲಾವಿಲಾಸಗಳುಳ್ಳವನು. **ಭೂಮ** - ಪರಿಪೂರ್ಣನಾದವನು. **ಭೂ ಸ್ವರ್ಗ** - ಅಪಕ್ವ - ದಶೆಯಲ್ಲಿರತಕ್ಕ ತನ್ನ ಭಕ್ತರನ್ನು, ಭೂಮಿಯಲ್ಲಿ, ಸ್ವರ್ಗದಲ್ಲಿ ಸಂಚಾರಮಾಡಿಸಿ, **ಅಪವರ್ಗದ** - ಬ್ರಹ್ಮಕಲ್ಪಾಂತ್ಯದಲ್ಲಿ ಲಿಂಗಭಂಗದ್ವಾರಾ, ಕರ್ಮವಿಮೋಚನೆಗೈಸಿ, ವೈಕುಂಠಾದಿ ಮುಕ್ತಿಧಾಮಗಳಲ್ಲಿಡತಕ್ಕವನು. **ಕಾಮಧೇನು ಕಲ್ಪತರು ಚಿಂತಾಮಣಿಯು** - ಇಂದ್ರಲೋಕದಲ್ಲಿರುವ ಸುರಧೇನುವಾದ ಕಾಮಧೇನುವೆಂಬ ಆಕಳು, ಕಲ್ಪವೃಕ್ಷವೆಂಬ ವೃಕ್ಷ, ಚಿಂತಾಮಣಿ ಎಂಬ ಅನ್ಯಮೂಲ್ಯಹರಳಿನಂತೆ ಭಕ್ತರ ಮನೋಭೀಷ್ಟಗಳನ್ನು ಸಲ್ಲಿಸುವವನು, **ಎಂದೆನಿಪ** - ಎಂದು ಕರೆಯಿಸಲ್ಪಡುವವ, **ಸರ್ವತ್ರ** - ಸರ್ವದೇಶಕಾಲಾದಿಗಳಲ್ಲಿ, **ನಿಜಭಕ್ತರಿಗೆ** - ತನ್ನನ್ನೇ ಶರಣ್ಯನೆಂದು ದೃಢವಾಗಿ ನಂಬಿ ಉಪಾಸನಾಮಾಡುತ್ತಿರುವ ಭಕ್ತಜನರಿಗೆ ॥೩॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನನ್ನೇ ಸ್ತೋತ್ರ ಮಾಡತಾರೆ.

ಶ್ರೀರಾಮಾವತಾರ ಮಾಡಿ, ಭಯಂಕರರಾದ ದ್ವೇಷಿಗಳಾದ ರಾವಣಾದಿ ರಾಕ್ಷಸರು, ಅವರ ಸಮೂಹವನ್ನು ನಾಶಮಾಡಿದವ. ನಕ್ರದಿಂದ ಪೀಡಿತನಾದ ಗಜರಾಜನ ಸ್ತುತಿಗೆ ಸಂತೋಷಪಟ್ಟು ಬಂದು ನಕ್ರಬಾಧಾ ಪರಿಹರಿಸಿದವ. ಮನೋವಾಕ್ಕುಗಳಿಗೆ, ರಮಾಬ್ರಹ್ಮಾದಿಗಳಿಗೆ ಸಾಕಲ್ಯೇನ ಗೋಚರನಾಗದವ,

ಸ್ವರೂಪಸುಖ ವ್ಯಕ್ತಮಾಡಿಕೊಡತಕ್ಕವ. ರಮಾದೇವೇರಿಗೆ ಮನೋಹರತರ
ವಾದ ಚರಿತ್ರೆಗಳ ತೋರಿಸಿ ಆನಂದಸಮುದ್ರದಲ್ಲಿ ಮುಳುಗಿಸಿದವ. ಪೂರ್ಣ
ನಾದವ. ಸಾರ್ವಭೌಮನಾದವ. ಅಪಕ್ವದಶಾದಲ್ಲಿ ತನ್ನ ಭಕ್ತರನ್ನು ಭೂಮಿ
ಯಲ್ಲಿ, ನರಕದಲ್ಲಿ, ಸ್ವರ್ಗದಲ್ಲಿ ಸಂಚಾರ ಮಾಡಿಸಿ ಅಂತ್ಯಕ್ಕೆ ವೈಕುಂಠಲೋಕ
ವನ್ನು ಕೊಡತಕ್ಕವ. ತನ್ನ ಭಕ್ತರನ್ನು ಸ್ವರ್ಗದಲ್ಲಿ ಇಟ್ಟ ಕಾಲದಲ್ಲಿ ಇಷ್ಟಾರ್ಥಗಳ
ಸಿದ್ಧಿಗೋಸುಗ ಕಾಮಧೇನ್ವಾದಿಗಳ ಅಂತರ್ಗತನಾಗಿದ್ದು ಅವರುಗಳ
ಇಷ್ಟಾರ್ಥಗಳ ಪೂರ್ಣಮಾಡತಕ್ಕವ. ಅಪವರ್ಗಗತರಾದ ಮುಕ್ತರಿಗೆ
ಕಾಮಧೇನ್ವಾದಿರೂಪ ತಾನೇ ಎಂತ ಎನಿಸತಕ್ಕವ. ಸರ್ವತ್ರ ಉಪಾಸನ
ಮಾಡತಕ್ಕ ನೈಜಭಕ್ತರಾದವರಿಗೆ ಸರ್ವ ಇಷ್ಟಾರ್ಥಗಳ ಪೂರ್ಣಮಾಡಿಸಿ
ಸಂರಕ್ಷಣ ಮಾಡೋವನಾಗಬೇಕು ಎಂತ ಶ್ರೀದೇವರನ್ನು ಪ್ರಾರ್ಥಿಸಿದ್ದಾರೆಂತ
ತಾತ್ಪರ್ಯ ॥೩॥

## ೨. ಭಾವಪ್ರಕಾಶಿಕೆ-

ಲೋಕರಮಣನಾದ ಪ್ರಯುಕ್ತ ರಾಮನೆಂದು ಹೆಸರು; ರಾಕ್ಷಸರು,
ಉಪಲಕ್ಷಣಯಾ ದೈತ್ಯರು ಮೊದಲಾದವರ ಕುಲಕ್ಕೆ ಭಯಂಕರನಾಗಿರು
ವನು. ಗಜೇಂದ್ರನು ಮಾಡಿದ ಸ್ತೋತ್ರಕ್ಕೆ ಮೆಚ್ಚಿ ಅವನನ್ನು ಮೊಸಳೆ
ಯಿಂದ ಬಿಡಿಸಿ ದಿವ್ಯಗತಿಯನ್ನಿತ್ತು ಉದ್ಧರಿಸಿದವ. ಮನಸ್ಸಿನಿಂದಲೂ ವಾಕ್ಯ
ದಿಂದಲೂ ಗುಣಾತಿಶಯಗಳನ್ನು ಸ್ತೋತ್ರಾದಿಗಳನ್ನು ಮಾಡಲು ಸಾಧ್ಯ
ವಲ್ಲದವನು. ಅಥವಾ ಮನೋಭಿಮಾನಿಯಾದ ರುದ್ರದೇವರು ಮತ್ತು
ಚಂದ್ರ, ವಾಗಭಿಮಾನಿಯರಾದ ಸರಸ್ವತೀ ಭಾರತಿಯರು, ಮನಸ್ಸಿನ ಪ್ರಭೇದ
ವಾದ ಚಿತ್ತಾಭಿಮಾನಿಗಳು ಬ್ರಹ್ಮವಾಯುಗಳು, ಮತ್ತು ವೇದಾಭಿ
ಮಾನಿಯೂ, ವೇದಸ್ವರೂಪಳೂ ರಮಾದೇವಿಯರು ದುರ್ಗಾರೂಪಿಯಾಗಿ
ರುವರು. ಮನೋವಾಚಾಮಗೋಚರನೆಂದರೆ ರುದ್ರಾದಿಗಳು, ಬ್ರಹ್ಮ-
ವಾಯು, ಸರಸ್ವತೀ, ಭಾರತೀ, ಲಕ್ಷ್ಮೀದೇವಿಯರಿಂದಲೂ ಕೂಡ ತಿಳಿಯಲು
ಸಾಧ್ಯವಿಲ್ಲದವನೆಂದರ್ಥ. ಮುಕ್ತ ಜನರಿಗೆ ಸ್ವರೂಪಾನಂದವನ್ನು ಕೊಡು
ವವನು. ಎಷ್ಟು ಶ್ರವಣ ಮಾಡಿದರೂ ತೃಪ್ತಿಯಾಗದೆ ಇನ್ನೂ ಕೇಳುತ್ತಿರ
ಬೇಕೆಂದು ತೋರುವ ಮನೋಹರವಾದ ಚರಿತ್ರೆಯುಳ್ಳವನು. ಭಾಗವತ

ಪ್ರಥಮ ಸ್ಕಂಧದಲ್ಲಿ ೧೮ನೆಯ ಅಧ್ಯಾಯ ಶೌನಕಾದಿಗಳ ಪ್ರಶ್ನವಾಕ್ಯದಲ್ಲಿ 'ಕೋನಾಮ ತೃಪ್ಯೇಂದ್ರ ಸವಿತ್ಕಥಾಯಾಂ ಮಹತ್ತಮೈಕಾಂತ ಪರಾಯಣಸ್ಯ' ಮಹತ್ತಮರಾದ ರಮಾಬ್ರಹ್ಮಾದಿಗಳಿಗೆ ಉತ್ತಮಾಶ್ರಯನಾದ ಅದ್ಭುತವಾದ ಮಹಿಮೆಯುಳ್ಳ ಪರಮಾತ್ಮನ ಚರಿತ್ರೆಯನ್ನು ಕೇಳಿ ಅದರ ಸಾರವನ್ನು ತಿಳಿದ ಯಾವನು ತೃಪ್ತನಾಗುವನು? ನಮಗಂತೂ ಇದು ಕೇಳಿದುದು ಸಾಕೆಂದು ಅಲಂಬುದ್ಧಿ ಹುಟ್ಟುವುದಿಲ್ಲವೆಂದು ಹೇಳಿರುವರು. ಆದುದರಿಂದ ಚಾರುತರ ಚರಿತನೆಂದರು. ಭೂಮ - ಶಾಶ್ವತವಾದ ಮಹದೈಶ್ವರ್ಯವುಳ್ಳವನೆಂದರ್ಥ. ಅವರವರ ಯೋಗ್ಯತಾನುಸಾರವಾಗಿ ಭೂಮಿಯಲ್ಲಿ ಹುಟ್ಟಿಸುವದು; ಸಾಧನಾನಂತರ ಕಾಮ್ಯಕರ್ಮಾದಿಗಳ ಫಲರೂಪವಾಗಿ ಸ್ವರ್ಗವನ್ನೂ ಕಲ್ಪಾಂತದಲ್ಲಿ ಮುಕ್ತಿಯನ್ನೂ, ರಾಜಸರಿಗೆ ಸಂಸಾರವನ್ನೂ, ತಾಮಸರಿಗೆ ತಮಸ್ಸನ್ನೂ ಕೊಡುವನೆಂಬ ತಾತ್ಪರ್ಯ. ಭಕ್ತರು ಯಾವ ಲೋಕದಲ್ಲಿದ್ದರೂ ನಿಜಭಕ್ತರಿಗೆ ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ ಇವುಗಳು ಹೇಗೆ ಮನೋಭೀಷ್ಟವನ್ನು ಪೂರೈಸುವವೋ ಹಾಗೆಯೇ ಅವರ ಮನೋಭೀಷ್ಟಗಳನ್ನು ಪೂರೈಸುವವನೆಂದರ್ಥ ॥೩॥

**೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ -**

'ರಾಮಃ' ಇತಿ ॥ ಸಾಮಜೇಂದ್ರಃ ॥ ಗಜೇಂದ್ರಃ ॥೫॥ 'ಭೂಮ'- ಪೂರ್ಣ, 'ಭೂಃ' - ರಾಜಾದಿಷ್ಯಃ ॥೩॥

**ಕನ್ನಡಾರ್ಥ-**

ಸಾಮಜ-ಆನೆ. ಅವುಗಳಿಗೆ 'ಇಂದ್ರಃ' - ರಾಜನು (ಶ್ರೇಷ್ಠ-ಒಡೆಯ) ಗಜೇಂದ್ರನು, 'ಭೂಮ'- ಪರಿಪೂರ್ಣ. 'ಭೂಸ್ವರ್ಗಾಪವರ್ಗದ'- ರಾಜಾದಿಗಳಿಗೆ ಭೂಮಿ, ಸ್ವರ್ಗ, ಅಪವರ್ಗಗಳನ್ನು ಕೊಡುವವ ॥೩॥

**೪. ಭಾವದರ್ಪಣ-**

ರಾಮಃ ಸಾಮಜೇಂದ್ರಪ್ರಿಯಃ- ಗಜೇಂದ್ರಪ್ರಿಯ। ಮನೋವಾಚಾಮಗೋಚರ। ತದುಕ್ತಂ। "ಯನ್ಮನಸಾನಮನುತೇಯೇನಾಹುರ್ಮನೋಮತಂ।

ಯದ್ವಾಚಾನಭ್ಯುದಿತಂಯೇನವಾಗಭ್ಯುದ್ಯತೇ" ಇತಿ ಶ್ರುತೇಃ। ಚಿತ್ಸುಖಪ್ರದ-ಸ್ವರೂಪಸುಖಕೊಡತಕ್ಕವ, ಭೌಮ-ಪೂರ್ಣ ಎಂಬರ್ಥ ॥೭॥

**೫. ಶ್ರೀಗುರುಹೃದಯಪ್ರಕಾಶಿಕೆ-**

ರಾಕ್ಷಸಕುಲಕ್ಕೆ ಮಹಾಭಯಂಕರ ಶ್ರೀರಾಮರೂಪನೇ, ಸಾಮಜವೆಂಬ ಮೃದುಸ್ತುತಿವಾಕ್ಯದಿಂದ ಪುನರ್ಜನನವಾದಂತೆ ಸ್ವಾಧೀನವಾಗುವ, ಗಜಜಾತಿ ಶ್ರೇಷ್ಠನಾದ ಇಂದ್ರದ್ಯುಮ್ನನೆಂಬುವನ ಭಕ್ತಿಗೆ ಪ್ರಿಯನಾದವನೇ. ಮನೋಭಿಮಾನಿ ವಾಗಭಿಮಾನಿ ಸಹ ಕೊನೆಗೊಂಡು ತಿಳಿಯುವುದಕ್ಕೆ ಅಸಾಧ್ಯನಾದವನೇ. ಸ್ವರೂಪಜ್ಞಾನಸುಖ ವ್ಯಕ್ತಮಾಡಿಕೊಡುವವನೆ. ಭೂ ಸ್ವರ್ಗ ಅಪವರ್ಗವೆಂಬ ಮೋಕ್ಷವನ್ನೂ ಸಹ ಕೊಡುವವನೆ. ನೀನು ನಿಜಭಕ್ತರೆಂಬ ಸ್ವಭಾವಭಕ್ತರಿಗೆ ಕಾಮಧೇನು, ಸುಕಲ್ಪತರು, ಚಿಂತಾಮಣಿಯಂತೆ ಸಕಲೇಷ್ಟವನ್ನೂ ಕೊಟ್ಟು ಸರ್ವತ್ರ ಪೇಳಿಸಿಕೊಳ್ಳುವವನೆ ರಕ್ಷಿಸೆಂದರ್ಥ ॥೩॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಸರ್ವರನ್ನೂ ಆನಂದಪಡಿಸತಕ್ಕ ಸುಂದರರೂಪವುಳ್ಳ ಶ್ರೀವರಿಗೆ ವಸಿಷ್ಠ ಮಹರ್ಷಿಗಳು **ರಾಮ** ಎಂಬ ಹೆಸರಿಟ್ಟರು. ಎಲ್ಲರನ್ನೂ ರಮಿಸುವವನು ಎಂದರ್ಥ. ರಮು-ಕ್ರೀಡತೇ ಎಂಬ ಧಾತುವಿನ ರೀತ್ಯಾ. ಸರ್ವಜೀವರಲ್ಲೂ ಕ್ರೀಡಿಸುವವನಾದ್ದರಿಂದ **ರಾಮನಾಮಕನು.**

೨. ಶ್ರೀರಾಮಾವತಾರದಲ್ಲಿ ಶ್ರೀಪರಮಾತ್ಮನು ರಾವಣಾದಿ ರಾಕ್ಷಸರಿಗೆ ಭಯಂಕರ ಸ್ವರೂಪನು (ಮೃತ್ಯುಸ್ವರೂಪನು). ಇದರಿಂದ **ರಾಕ್ಷಸಕುಲ ಭಯಂಕರನು.**

೩. ಸಾಮಜ ಎಂದರೆ ಗಜ ಇಂದ್ರ-ಶ್ರೇಷ್ಠ ಎಂದರೆ ಗಜರಾಜನೆಂದರ್ಥ. ಮಡುವಿನಲ್ಲಿ ನಕ್ರನ ಬಾಧೆಗೆ ಸಿಕ್ಕಿ ಪರಿತಪಿಸುತ್ತಿದ್ದ ಗಜರಾಜನು ಶ್ರೀಪರಮಾತ್ಮನನ್ನು ಆದಿಮೂಲ ಎಂದು ಕರೆಯಲಾಕ್ಷಣ, ದಯಾಮಯನಾದ

ಶ್ರೀಹರಿಯು ತನ್ನ ಚಕ್ರದಿಂದ ನಕ್ರನನ್ನು ಸೀಳಿ, ಗಜೇಂದ್ರನನ್ನು ಮೃತ್ಯು ಪಾಶದಿಂದ ಬಿಡಿಸಿದ ಕಥಾಪ್ರಸಂಗ ವಿಶೇಷ. ಇದರಿಂದ **ಸಾಮಜೇಂದ್ರ ಪ್ರಿಯನು.**

೪. ಮನೋ-ಮನಸ್ಸೇಂದ್ರಿಯ. ವಾಚಂ-ವಾಗಿಂದ್ರಿಯ. ಅಗೋಚರನು. ಪ್ರತ್ಯಕ್ಷನಾಗದವನು. ಅಂಥಹ ಸಾಮಜೇಂದ್ರವರದನಾದ ದೇವತಾಸಾರ್ವ ಭೌಮನು ಮನಸ್ಸಿನಿಂದಲೂ, ವಾಕ್ಕುಗಳಿಂದಲೂ ಅಪ್ರಾಪ್ಯನು, ಅಗೋಚರನು.

'ಯತೋ ವಾಚಾ ನಿವರ್ತಂತೇ ಅಪ್ರಾಪ್ಯ ಮನಸಾ ಸಹ' ಎಂಬ ಶ್ರುತಿ ವಾಕ್ಯದಂತೆ. ರಮಾಬ್ರಹ್ಮಾದಿಗಳಿಂದಲೂ ಸಾಕಲ್ಯೇನ ಅರಿಯಲಸಾಧ್ಯನು. ಶುದ್ಧ ಭಕ್ತಿಗೆ ಮಾತ್ರ ಲಭ್ಯನು.

ಮನೋಭಿಮಾನಿಗಳಾದ ರುದ್ರದೇವರಿಂದಲೂ, ವಾಗಭಿಮಾನಿಗಳಾದ ಭಾರತೀ-ಸರಸ್ವತೀ, ಶ್ರೀರಮಾದೇವಿಯರಿಂದಲೂ ಸಾಕಲ್ಯೇನ ಗುಣಾತಿಶಯ ಗಳನ್ನು ಮನಸಾ ತಿಳಿಯುವುದಕ್ಕಾಗಲೀ, ವಾಕ್ಕುಗಳಿಂದ ವರ್ಣಿಸುವುದ ಕ್ಕಾಗಲೀ ಸಾಧ್ಯವಿಲ್ಲ.

೫. ಚಿತ್-ಜ್ಞಾನ, ಸುಖ-ಆನಂದ. ಅಂದರೆ ಸ್ವರೂಪದ ಸುಖವನ್ನು ಅಭಿ ವ್ಯಕ್ತಮಾಡುವ ಮುಕುಂದನು. ಅಂದರೆ, ಸ್ವಸ್ವರೂಪಗತ ಮುಕ್ತಿಯ ಸುಖ ವನ್ನು ಕೊಡುವವನು. ಮೋಕ್ಷಪ್ರದನೆಂದರ್ಥ.

೬. ಚಾರು-ಸುಂದರ(ಮನೋಹರ). ಚಾರುತರ-ಅತ್ಯಂತ ಮನೋಹರನಾದ ಶ್ರೀಲಕ್ಷ್ಮೀದೇವಿಗಿಂತಲೂ ಪರಮಸುಂದರನು. ತನ್ನ ನಿರತಿಶಯವಾದ ಸೌಂದರ್ಯದಿಂದ ಶ್ರೀಲಕ್ಷ್ಮೀದೇವಿಗೆ ಆನಂದಪ್ರದನು. ಶ್ರೀಹರಿಯ ಚರಿತೆ (ಲೀಲಾವಿಶೇಷವಾದ ಚರಿತೆ) ಪರಿಪೂರ್ಣವೂ ನಿರ್ದೋಷವೂ, ಮಂಗಳ ಪ್ರದವೂ ಆದದ್ದು. ತಾನು ಮಂಗಳಾಂಗನಾದ್ದರಿಂದ ಇತರ ಜೀವರಿಗೆ ಶುಭ ದಾಯಕನಾಗಿದ್ದಾನೆ. ಇದರಿಂದ **ಚಾರುತರ ಚರಿತನು.**

೭. ಶ್ರೀಪರಮಾತ್ಮನು ಸಕಲಪ್ರಕಾರಗಳಲ್ಲೂ **ಪರಿಪೂರ್ಣನು**. ಅಪರಿಚ್ಛಿನ್ನ ವಸ್ತು. ಇದರಿಂದ ಪರಿಪೂರ್ಣನಾದ ಪರಮಾತ್ಮನಿಗೆ **ಭೂಮಾ** ಎಂದು ಹೆಸರು.

೮. ಭೂಮಾತ್ಮನಾದ ಶ್ರೀಪರಮಾತ್ಮನು ತನ್ನನ್ನೇ ನಂಬಿ, ನಿರಂತರ ಉಪಾಸಿಸುತ್ತಿರುವ **ನಿಜಭಕ್ತರಿಗೆ**, ಸದಾ ಸರ್ವದೇಶ ಕಾಲಗಳಲ್ಲಿ **(ಸರ್ವತ್ರ)** ಸಂರಕ್ಷಿಸುತ್ತಿರುವನು.

೯. ನಿಜಭಕ್ತರಿಗೆ ಭೂಮನು. ಭೂಮಿಯಲ್ಲಿ **(ಭೂ)**. ಸ್ವರ್ಗಾದಿಲೋಕಗಳಲ್ಲಿ **(ಸ್ವರ್ಗ)**. ಶಾಶ್ವತ ಮುಕ್ತಿ ಸ್ಥಾನಗಳಾದ ಮೋಕ್ಷಧಾಮಗಳಲ್ಲಿ **(ಅಪವರ್ಗ)**. ಆಶ್ರಯದಾತನಾಗಿ, ಅವರ ಪಾಲಿಗೆ ಕಾಮಧೇನು. ಕಲ್ಪವೃಕ್ಷ. ಚಿಂತಾಮಣಿ ಸದೃಶನಾಗಿದ್ದಾನೆ.

೧೦. ಸುರಲೋಕದಲ್ಲಿರುವ **ಕಾಮಧೇನು** ಎಂಬ ಆಕಳು, ಅದನ್ನು ಸೇವಿಸುವವರಿಗೆ ಅವರ ಕಾಮಿತಾರ್ಥವನ್ನು ಪೂರೈಸುವುದು. ಕಾಮಧೇನುವು ಪ್ರಾಣಿವರ್ಗಕ್ಕೆ ಸೇರಿದ್ದು. **ಕಲ್ಪವೃಕ್ಷವು** ತನ್ನ ಭಜಕರಿಗೆ ಸಕಲಮನೋಭಿಲಾಷೆಗಳನ್ನು ನೀಡುವುದು. ಕಲ್ಪವೃಕ್ಷವು ಸ್ಥಾವರರೂಪದಲ್ಲಿರುವ ವೃಕ್ಷವರ್ಗಕ್ಕೆ ಸೇರಿದ್ದು. **ಚಿಂತಾಮಣಿಯು** ತನ್ನನ್ನು ಸೇವಿಸುವವರಿಗೆ ಸಕಲ ಅಭೀಷ್ಟಗಳನ್ನೂ ಕೊಡುವ ರತ್ನವಿಶೇಷವು. ಇವು ಜಡವಸ್ತುವು. ಕಾಮಧೇನು, ಕಲ್ಪವೃಕ್ಷ, ಚಿಂತಾಮಣಿ ಇವು ಕ್ಷೀರಸಮುದ್ರಮಥನಕಾಲದಲ್ಲಿ ಉತ್ಪತ್ತಿಯಾದ ವಸ್ತುಗಳು. ಈ ಅಶಾಶ್ವತ ವಸ್ತುಗಳೇ ಸಕಲಾಭೀಷ್ಟಗಳನ್ನು ಸಲ್ಲಿಸುತ್ತಿರಬೇಕಾದರೆ ನಿತ್ಯನೂ, ಶಾಶ್ವತನೂ, ಪರಿಪೂರ್ಣನೂ, ಆನಂದಮಯನೂ, ಸರ್ವಶಕ್ತನೂ, ಸಕಲಲೋಕವಿಲಕ್ಷಣನೂ ಆದ ಶ್ರೀಪರಮಾತ್ಮನು ನಿಜಭಕ್ತರನ್ನು ಪಾಲಿಸುವ ಸರ್ವಾಭೀಷ್ಟಪ್ರದನಷ್ಟೇ ಅಲ್ಲ, ನಿತ್ಯಾನಂದರೂಪವಾದ ಮುಕ್ತಿಯನ್ನು ಸಹ ನೀಡಲು ಸಮರ್ಥನೆಂಬುವುದು ಆಶ್ಚರ್ಯವಲ್ಲ ॥೨॥

## ಪದ್ಯ-೪

ಮೂಲ -

ಸ್ವರ್ಣವರ್ಣ ಸ್ವತಂತ್ರ ಸರ್ವಗ ।
ಕರ್ಣಹೀನಸುಶಯ್ಯ ಶಾಶ್ವತ ।
ವರ್ಣ ಚತುರಾಶ್ರಮವಿವರ್ಜಿತ ಚಾರುತರ ಸ್ವರತ ॥
ಅರ್ಣಸಂಪ್ರತಿಪಾದ್ಯ ವಾಯು ಸು ।
ಪರ್ಣವರವಹನ ಪ್ರತಿಮ ವಟ ।
ಪರ್ಣಶಯನಾಶ್ಚರ‍್ಯತಮ ಸಚ್ಚರಿತ ಗುಣಭರಿತ ॥೪॥

ಅವತರಣಿಕೆ -

ಶ್ರೀಪರಮಾತ್ಮನ ಗುಣಾವಳಿಗಳನ್ನೇ ಇನ್ನೂ ಸ್ತೋತ್ರ ಮಾಡುತ್ತಾರೆ.

ಪ್ರತಿಪದಾರ್ಥ -

**ಸ್ವರ್ಣವರ್ಣ** - ಬಂಗಾರದ ಬಣ್ಣದಿಂದ ಯುಕ್ತನಾದವನು, ಶ್ರೀಸಂಕರ್ಷಣರೂಪೀ ಪರಮಾತ್ಮನು. **ಸ್ವತಂತ್ರ** - ಪರಾಧೀನನಲ್ಲದ ಸ್ವಾತಂತ್ರ್ಯಗುಣಧರ್ಮವುಳ್ಳವನು (ಸ್ವರೂಪಭೂತಧರ್ಮವು). **ಸರ್ವಗ** - ಸರ್ವಸ್ಥಳಗಳಲ್ಲಿ ಪರಿಪೂರ್ಣವಾಗಿ ವ್ಯಾಪ್ತನಾದವನು. **ಕರ್ಣಹೀನಸುಶಯ್ಯ** - ಸರ್ಪಶ್ರೇಷ್ಠರಾದ ಶ್ರೀಶೇಷದೇವರೇ ತನ್ನ ಸಮೀಚೀನವಾದ ಹಾಸಿಗೆಯನ್ನಾಗಿ ಉಳ್ಳ (ಶೇಷಶಯನನಾದ) (ಕರ್ಣಹೀನ-ಸರ್ಪಕ್ಕೆ ಕಿವಿಗಳಿಲ್ಲ. ನೇತ್ರೇಂದ್ರಿಯದಲ್ಲಿಯೇ ಶ್ರವಣಶಕ್ತಿ ಅಂತರ್ಭೂತವಾಗಿರುವುದು). **ಶಾಶ್ವತ** - ಚತುರ್ವಿಧ ನಾಶರಹಿತನಾದ, ಶಬ್ದದೇಶಪ್ರಕಾರನಾದ. **ವರ್ಣ** - ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳೂ, **ಚತುರಾಶ್ರಮ** - ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸ ಈ ನಾಲ್ಕು ಆಶ್ರಮಗಳಿಂದ, **ವಿವರ್ಜಿತ** - ಅತ್ಯಂತ ದೂರನಾದ, ಅಂದರೆ ಶ್ರೀಪರಮಾತ್ಮನಿಗೆ ಇಂತಹುದೇ ವರ್ಣವೆಂತಾಗಲೀ ಇಲ್ಲ. ಲೋಕವಿಲಕ್ಷಣನು. ಜೀವರಿಗೆ ಮಾತ್ರ ಮುಕ್ತಿಯಲ್ಲೂ ಸಹ ವರ್ಣಾಶ್ರಮಧರ್ಮಗಳಿವೆ. **ಚಾರುತರ** - ಶ್ರೀಲಕ್ಷ್ಮೀ ಮನೋಹರನೇ

(ಸುಂದರಕೆ ಸುಂದರನು), **ಸ್ವರತ** - ಸ್ವರಮಣನು. (ತನ್ನ ಭಗವದ್ರೂಪ ಗಳಲ್ಲಿಯೇ ಕ್ರೀಡಿಸುವವನು). **ಅರ್ಣಸಂಪ್ರತಿಪಾದ್ಯ** - ಅಕಾರಾದಿ ವರ್ಣಾತ್ಮಕವಾದ ಅನಂತಾನಂತ ವೇದಗಳಿಂದ ಪ್ರತಿಪಾದ್ಯನಾದವನು. **ವಾಯು ಸುಪರ್ಣವರವಹನ** - ವಾಯುವಾಹನನು. ಗರುಡವಾಹನನು (ಸುಪರ್ಣ-ಬಂಗಾರದಂತಿರುವ ರೆಕ್ಕೆಗಳುಳ್ಳ ಶ್ರೀಗರುಡದೇವರು). **ಪ್ರತಿಮ** - ಜೀವರಲ್ಲಿ ಜೀವಾಂತರ್ಗತನಾಗಿ ಬಿಂಬರೂಪಿಯಾಗಿರುವವನು. **ವಟಪರ್ಣಶಯನ** - ಮಹಾಪ್ರಳಯಕಾಲದಲ್ಲಿ ವಟಪತ್ರದ ಮೇಲೆ (ಆಲದೆಲೆ) ಶಯನ ಮಾಡುವವನು. **ಆಶ್ಚರ್ಯತಮ** - ಅತ್ಯಂತ ಆಶ್ಚರ್ಯಕರನಾದವನು. **ಸಚ್ಚರಿತ** - ನಿರ್ದೋಷವಾದ ವ್ಯಾಪಾರವುಳ್ಳವನು. **ಗುಣಭರಿತ** - ಅಪರಿಮಿತವಾದ ಕಲ್ಯಾಣಗುಣಗಳಿಂದ ಪರಿಪೂರ್ಣನಾದವನು ॥೯॥

## ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನನ್ನೇ ಸ್ತೋತ್ರ ಮಾಡುತಾರೆ.

ಬಂಗಾರದವರ್ಣ, ಈ ವರ್ಣದಿಂದ ಯುಕ್ತನಾದವ, ಸಂಕರ್ಷಣರೂಪಿ ಪರಮಾತ್ಮ ದುಷ್ಟಜನಸಂಹಾರಕನೆಂದು ತಾತ್ಪರ್ಯ. ಪರಾಧೀನನಲ್ಲದವ. ಸರ್ವತ್ರ ಅಪರಿಚ್ಛಿನ್ನ ವ್ಯಾಪ್ತನಾಗಿರತಕ್ಕವ. ಶ್ರವಣೇಂದ್ರಿಯ ಪ್ರತ್ಯೇಕ ಇಲ್ಲದೆ ನೇತ್ರೇಂದ್ರಿಯದಲ್ಲೇ ಶ್ರವಣೇಂದ್ರಿಯ ಅಂತರ್ಭೂತವಾದ ಶೇಷದೇವರೇ ಸಮೀಚೀನವಾದ ಹಾಸಿಗೆಯಾಗುಳ್ಳವ. ಶಬ್ದೇಕಪ್ರಕಾರನಾಗಿ ಇರತಕ್ಕವ. ಬ್ರಾಹ್ಮಣಾದಿ ನಾಲ್ಕು ವರ್ಣಗಳು, ಬ್ರಹ್ಮಚರ್ಯಾದಿ ನಾಲ್ಕು ಆಶ್ರಮಗಳು ಇವುಗಳಿಂದ ವರ್ಜಿತನಾದವ ಎಂದರೆ, ವಿಲಕ್ಷಣವಾದ ವರ್ಣಾಶ್ರಮ ಉಳ್ಳವ. ಇಂಥಾ ಆಶ್ರಮವುಳ್ಳವನೆಂದು ಹೇಳೋದಕ್ಕೆ ಶಕ್ಯನಲ್ಲದವ. ಇನ್ನು ಚತುರಾಶ್ರಮ ಎಂದರೆ ಬ್ರಹ್ಮಚರ್ಯ ಮೊದಲಾದ ಕರ್ಮಬಂಧರಹಿತನಾದಾಗ್ಯೂ. ಸಜ್ಜನಾನುಗ್ರಹಾರ್ಥ ಸನತ್ಕುಮಾರಾದಿ ರೂಪದಿಂದ ಬ್ರಹ್ಮಚರ್ಯವ್ರತ ಉಳ್ಳವನೇ, ಇನ್ನು ಗೃಹಸ್ಥಾಶ್ರಮ ಧರ್ಮದಲ್ಲಿ ರಾಮಕೃಷ್ಣಾದ್ಯವತಾರಗಳಲ್ಲಿ ಸಾಂಸಾರಿಕಧರ್ಮವನ್ನು ತೋರಿದವನೇ, ಇನ್ನು ಋಷಿರೂಪದಿಂದ ವ್ಯಾಸ [illegible]ಲಾದಿರೂಪದಿಂದ ವಾನಪ್ರಸ್ಥ ಧರ್ಮವನ್ನು ತೋರಿದವನೇ, ಈ ಪ್ರಕಾರ ಆಶ್ರಮ ಧರ್ಮ ತೋರಿದನೆಂದು ತಾತ್ಪರ್ಯ. ಮನೋಹರವಾದ ಪದಾರ್ಥಕ್ಕೆ ಅತಿ

ಮನೋಹರನಾದಂಥಾವ, ಸ್ವರಮಣನಾದಂಥಾವನು ಎಂದರೆ, ತನ್ನಲ್ಲಿ ತಾನೇ ರಮಿಸತಕ್ಕವ. ಅಕಾರಾದಿ ವರ್ಣಾತ್ಮಕವಾದ ಅನಂತ ವೇದಗಳಿಂದ ಚಂದಾಗಿ ಸರ್ವೋತ್ತಮನೆಂದು ಪ್ರತಿಪಾದ್ಯನಾದವ. ಗರುಡದೇವರು, ಈ ಗರುಡ ದೇವರಿಗಿಂತಲೂ ಶ್ರೇಷ್ಠರಾದ ವಾಯುದೇವರು ಇವರಿಬ್ಬರೂ ವಾಹನವಾಗಿ ಉಳ್ಳವ. ಜೀವಾಂತರ್ಗತದಲ್ಲಿ ಬಿಂಬನಾಗಿ ಜೀವಾಕಾರ ಸದೃಶನಾಗಿ ಇರತಕ್ಕವ. ಮಹಾಪ್ರಳಯದಲ್ಲಿ ವಟಪತ್ರದಲ್ಲಿ ಶಯನಮಾಡಿ ಇರತಕ್ಕವ. ಅತ್ಯಂತ ಆಶ್ಚರ್ಯಕರವಾದ ನಿರ್ದೋಷವಾದ ವ್ಯಾಪಾರವುಳ್ಳವ. ಅಪರಿಮಿತವಾದ ಕಲ್ಯಾಣ ಗುಣಗಳಿಂದ ಪೂರ್ಣನಾಗಿ ಇರತಕ್ಕವ, ಇಂಥಾ ಪರಮಾತ್ಮನೆಂದು ತಾತ್ಪರ್ಯ ॥೪॥

## ೫. ಭಾವಪ್ರಕಾಶಿಕೆ -

"ಸುವರ್ಣವರ್ಣೋ ಹೇಮಾಂಗಃ" ಎಂದು ವಿಷ್ಣುಸಹಸ್ರನಾಮದಲ್ಲಿ ಇರುವದು. "ಯದಾಪಶ್ಯಃ ಪಶ್ಯತೇ ರುಗ್ಮವರ್ಣಂ" ಎಂಬ ಶ್ರುತಿಯು ಇವಕ್ಕೆ ಆಧಾರವು. "ಸುವರ್ಣಮಿವ ವರ್ಣೋ ಯಸ್ಯ ಸಹ ಸುವರ್ಣವರ್ಣಃ" ಎಂದು ಸಹಸ್ರನಾಮ ವ್ಯಾಖ್ಯಾನ ವಾಕ್ಯ ಆಧಾರಗಳಿಂದ, ಅಪರೋಕ್ಷದಲ್ಲಿ ಜನರು ನೋಡುವ ಕಾಲದಲ್ಲಿ ಬಂಗಾರದಂತೆ ಬಣ್ಣ ಉಳ್ಳ ಶರೀರವನ್ನು ಕಾಣುವುದರಿಂದ ಸುವರ್ಣವರ್ಣನೆಂದು ಹೆಸರು. ಸ್ವತಂತ್ರನು, ಸರ್ವತ್ರವ್ಯಾಪ್ತನು. ಕಿವಿ ಇಲ್ಲದವನೇ ಹಾಸಿಗೆಯಾಗಿ ಉಳ್ಳವನು. ಅಂದರೆ ಸರ್ಪಗಳಿಗೆ ಚಕ್ಷುಶ್ರವ ಎಂದು ಹೆಸರು. ಕಿವಿಗಳು ಬೇರೆ ಇಲ್ಲದೇ ಕಣ್ಣುಗಳೇ ಕಿವಿಗಳಾಗಿದ್ದು ಕಣ್ಣುಗಳಿಂದಲೇ ಕೇಳುವುದರಿಂದ ಚಕ್ಷುಶ್ರವವೆಂದು ಹೆಸರು. ಆದುದರಿಂದ ಕರ್ಣಹೀನನೆಂದರೆ ಶೇಷದೇವನೆಂದರ್ಥ. ಅವರೇ ಹಾಸಿಗೆಯಾಗಿ ಉಳ್ಳವನೆಂಬ ತಾತ್ಪರ್ಯ. ಶಾಶ್ವತನಾಗಿರುವವನು. ಬ್ರಾಹ್ಮಣಾದಿ ಯಾವ ವರ್ಣದವನೂ ಅಲ್ಲದವನು. ಬ್ರಹ್ಮಚಾರಿ, ಗೃಹಸ್ಥ ಮೊದಲಾದ ನಾಲ್ಕು ಆಶ್ರಮವೂ ಅಲ್ಲದವನು. ಲಕ್ಷ್ಮೀ ದೇವಿಯರ ಮನಸ್ಸನ್ನು ಆಕರ್ಷಿಸುವ ಮನೋಹರರೂಪವುಳ್ಳವನು. ಸ್ವರಮಣನು. ಮಂತ್ರಾಕ್ಷರ ಪ್ರತಿಪಾದ್ಯನು. "ವರದೋ ವಾಯು ವಾಹನಃ" ಎಂದು ಸಹಸ್ರನಾಮದಲ್ಲಿರುವ ವಾಯುವಾಹನ ಶಬ್ದಕ್ಕೆ ವ್ಯಾಖ್ಯಾನದಲ್ಲಿ 'ವಾಯು ಮುಖ್ಯಪ್ರಾಣಂ ವಹತಿ-ಪ್ರೇರಯತೀವ ವಾಯುವಾಹನಃ' ವಾಯು ಎಂದರೆ ಮುಖ್ಯ ಪ್ರಾಣದೇವರು; ಅವರನ್ನು ಪ್ರೇರಿಸುವವನಾದುದರಿಂದ

ವಾಯುವಾಹನನೆಂದು ಅರ್ಥಮಾಡಿರುವರು, ಗರುಡನೆಂಬ ಉತ್ತಮವಾದ ವಾಹನವುಳ್ಳವನು. ಸಮರಚಿತವಾದ ವಟಪತ್ರದಲ್ಲಿ ಪ್ರಳಯಕಾಲದಲ್ಲಿ ಮಾರ್ಕಂಡೇಯರಿಗೆ ಆಲದ ಎಲೆಯ ಮೇಲೆ ಮಲಗಿರುವ ರೂಪವನ್ನು ತೋರಿಸಿರುವವನು. ಅದನ್ನೇ ಇಲ್ಲಿ ಸೂಚಿಸಿರುವರು. ಲೋಕದಲ್ಲಿ ಇವನಿಗಿಂತಲೂ ದೊಡ್ಡವಸ್ತು ಕಾಣದೆ ನೀನೇ ಆಶ್ಚರ್ಯ ಪುರುಷನು; ನೀನೇ ಧನ್ಯನೆಂದು ರಾಜಸಭೆಯಲ್ಲಿ ನಾರದರು ಬಂದು ಶ್ರೀಕೃಷ್ಣನನ್ನು ನೋಡಿ ಹೇಳಲು ಶ್ರೀಕೃಷ್ಣನು "ದಕ್ಷಿಣಾಭಿಃ ಸಾಕಂ" ಎಂದು ಉತ್ತರವನ್ನಿತ್ತನು. ದಕ್ಷಿಣೆ ಎಂದು ಲಕ್ಷ್ಮೀದೇವಿಯರಿಗೆ ಹೆಸರು. ಆಕೆಯಿಂದಲೂ ಕೂಡಿ ನಾನು ಆಶ್ಚರ್ಯನೆಂದು ಹೇಳಿದನೆಂದು ಹರಿವಂಶದ ಕಥೆಯನ್ನು ನಿರ್ಣಯದಲ್ಲಿ ಹೇಳಿರುವರು. ಆ ಕಥೆಯು ಶ್ಲೋಕಸಹಿತವಾಗಿ ಹಿಂದೆ ಹೇಳಲ್ಪಟ್ಟಿದೆ. ಮತ್ತು ವಿಸ್ತಾರಮಾಡಬೇಕಾಗಿಲ್ಲ. ಆದುದರಿಂದ ಆಶ್ಚರ್ಯತಮನೆಂದರು, ಆನಂದಾದಿ ಗುಣಗಳಿಂದ ಪೂರ್ಣವಾದ ಉತ್ತಮಚರಿತ್ರೆಯುಳ್ಳವನು. ಅಥವಾ ಅತ್ಯಾಶ್ಚರ್ಯಕರವಾದ ಸಚ್ಚರಿತ್ರೆಯುಳ್ಳವನೆಂದರ್ಥ. ॥೪॥

## ೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ-

'ಸ್ವರ್ಣ' ಇತಿ॥ 'ಕರ್ಣಹೀನಃ' - ಶೇಷಃ॥ 'ವರ್ಣ' - ಅಕ್ಷರ, ವಾಯುವಾಹನ - ರಾಮಾದೌ, 'ಅಪ್ರತಿಮಾ' - ಅಸದೃಶಃ ॥೪॥

## ಕನ್ನಡಾರ್ಥ -

'ಕರ್ಣಹೀನ' -ಶೇಷ (ಹಾವಿಗೆ ಕಿವಿಗಳಿರುವುದಿಲ್ಲ). 'ವರ್ಣ' - ಅಕ್ಷರಗಳು. ರಾಮಾದಿ ಅವತಾರಗಳಲ್ಲಿ ವಾಯುವಾಹನನಾಗಿರುತ್ತಾನೆ, ಶ್ರೀಹರಿಯು. 'ಅಪ್ರತಿಮ' ಶಬ್ದಕ್ಕೆ ಅಸದೃಶವೆಂದು ಅರ್ಥ ॥೪॥

## ೪. ಭಾವದರ್ಪಣ -

ಸ್ವರ್ಣವರ್ಣ - ಸುವರ್ಣವರ್ಣ । ಕರ್ಣಹೀನ-ಶೇಷ, ವರ್ಣ - ಬ್ರಾಹ್ಮಣಾದಿ ಚತುರ್ವರ್ಣ. ವರ್ಜಿತ. ಆಶ್ರಮ-ಬ್ರಹ್ಮಚರ್ಯಾದಿ ಆಶ್ರಮ ಚತುಷ್ಟಯಾತೀತ । ವರ್ಣ - ವೈದಿಕಾಕ್ಷರಗಳಿಂದ, ಪ್ರತಿಪಾದ್ಯ - ಸ್ತುತ್ಯ,

ವರ್ಣಾಸ್ತ್ರಾರ್ಣಭೇದತಾ ಇತ್ಯತ್ರ ಅರ್ಣಶಬ್ದಸ್ಯ ವರ್ಣೇ ಪ್ರಯೋಗಾತ್ । ವಾಯುರಿತಿ । ವಾಹನಶಬ್ದಸ್ಯ ಉಭಯತ್ರ ಸಂಬಂಧಃ॥ "ವರದೋ ವಾಯು ವಾಹನ" ಇತಿಸಹಸ್ರನಾಮೋಕ್ತೇಃ । ವಟಪರ್ಣಶಯನ - ಆಲದೆಲೆಯಲ್ಲಿ ಶಯನ ॥೪॥

### ಶ್ರೀಗುರುಹೃದಯಪ್ರಕಾಶಿಕೆ-

ಅಪ್ರಾಕೃತ ಸುವರ್ಣವರ್ಣನೆ, ಇತರಾಪೇಕ್ಷೆಯಿಲ್ಲದೆ ಸ್ವತಂತ್ರನೆನಿಸಿದವನೆ, ಸರ್ವವ್ಯಾಪ್ತನೆ, ಕರ್ಣಹೀನನೆಂಬ ಕಿವಿಯಿಲ್ಲದ ಕಣ್ಣೇ ಕಿವಿಯಾಗಿರುವ ಆದಿಶೇಷ ಶಯನನೆ, ಶಾಶ್ವತವೆಂಬ ವಿಕರೀತಿಯಿರುವ ವರ್ಣರೂಪನೆ, ಚತುರಾಶ್ರಮ ಎಂಬ ಬ್ರಹ್ಮಚರ್ಯ ಮೊದಲಾದ ಕರ್ಮಬಂಧರಹಿತನಾದಾಗ್ಯೂ ಸಜ್ಜನಾನು ಗ್ರಹಾರ್ಥ ಸನತ್ಕುಮಾರಾದಿ ರೂಪದಿಂದ ಬ್ರಹ್ಮಚರ್ಯಾದಿ ಮನೋಹರ ಚರಿತೆ ಯುಳ್ಳವನೇ, ಅರ್ಣಸಂಪ್ರತಿಪಾದ್ಯ ಎಂದರೆ ಅರ್ಣವೆಂಬ ವೇದವರ್ಣ ಪ್ರತಿಪಾದ್ಯನೇ, ವಾಯು ಮತ್ತು ಸುಪರ್ಣನೆಂಬ ಗರುಡ ಸಹ ವಾಹನ ವಾಗಿವುಳ್ಳವನೇ, ಸಮಾನರಹಿತನೆ, ವಟಪರ್ಣವೆಂಬ ಲಕ್ಷ್ಮ್ಯಾತ್ಮಕ ಆಲದೆಲೆ ಯಲ್ಲಿ ಮಲಗಿದವನೆ, ಅತ್ಯಾಶ್ಚರ್ಯರೂಪನೆ, ಸಸ್ಮಂಗಳ ಚರಿತ್ರನೆ, ಗುಣಗಣ ಪೂರ್ಣನೆ ರಕ್ಷಿಸೆಂದರ್ಥ ॥೪॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಪರಮಾತ್ಮನ ಶರೀರದ ಬಣ್ಣ ಬಂಗಾರವರ್ಣ ವಿಶಿಷ್ಟವಾದದ್ದು. 'ಸುವರ್ಣವರ್ಣೋ ಹೇಮಾಂಗಃ' - ಎಂಬ **ವಿಷ್ಣುಸಹಸ್ರನಾಮಾಂತರ್ಗತ ವಾದ ಹೆಸರು.** 'ಯದಾ ಪಶ್ಯಃ ಪಶ್ಯತೇ ರುಗ್ಮವರ್ಣಮ್' **ಎಂಬ ಶ್ರುತಿ ವಾಕ್ಯದಂತೆ**, ರುಗ್ಮವರ್ಣ ಎಂದರೆ ಬಂಗಾರದ ಬಣ್ಣ ಎಂದರ್ಥ. 'ಸುವರ್ಣ ಮಿವ ವರ್ಣೋ ಯಸ್ಯ ಸಹ- ಸುವರ್ಣವರ್ಣಃ ಎಂದು ವಿಷ್ಣುಸಹಸ್ರನಾಮದ ವ್ಯಾಖ್ಯಾನವಾಕ್ಯ. ಶ್ರೀಪರಮಾತ್ಮನು, ಅಪ್ರಾಕೃತವಾದ ಅವನ ದೇಹವು ಸುವರ್ಣವರ್ಣಾತ್ಮಕವಾಗಿರುವುದರಿಂದ **ಸುವರ್ಣವರ್ಣನು. ಸು-** ಸಮೀಚೀನವಾದ (ಅಪ್ರಾಕೃತ, ಜಗದ್ವಿಲಕ್ಷಣ). **ವರ್ಣ** - ಬಣ್ಣವಿಶೇಷ.

೨. ಅನಾದ್ಯನಂತಕಾಲದಿಂದಲೂ ಪರಾಧೀನನಲ್ಲದವನು. ಪರಾಪೇಕ್ಷರಹಿತನು. ಇದರಿಂದ **ಸ್ವತಂತ್ರನು.** ಸ್ವಾತಂತ್ರ್ಯವೆಂಬುದು (ತನ್ನ ಇಚ್ಛಾನುಸಾರ ಪರರ ಸಹಾಯವಿಲ್ಲದೇ ತಾನೇ ತಾನಾಗಿ ಸರ್ವಕ್ರಿಯಾ ನಿರ್ವಹಣೆ). ಶ್ರೀಪರಮಾತ್ಮನ ಸ್ವರೂಪಭೂತಗುಣ. ಪಾರತಂತ್ರ್ಯವೆಂಬುದು ರಮಾದಿ ಸಕಲ ಚೇತನರ ಸ್ವರೂಪಭೂತ ಧರ್ಮವು.

೩. ಸರ್ವದೇಶ. ಸರ್ವಕಾಲಗಳಲ್ಲಿ ನಿರಂತರವೂ ವ್ಯಾಪಿಸಿರುವವನು. ಸರ್ವವ್ಯಾಪಕನಾದುದರಿಂದ, **ಸರ್ವಗನು.** ಸರ್ವ-ಸಮಸ್ತದಲ್ಲೂ, ಗ - ಅಂತಸ್ಥಿತನಾದವನು

೪. ಸರ್ಪಗಳಿಗೆ ಕಿವಿಗಳಿಲ್ಲ. ಅವುಗಳ ಕಣ್ಣುಗಳೇ ಕಿವಿಯ ಕಾರ್ಯವನ್ನು ಮಾಡುವುವು. ಸರ್ಪಗಳು ಕಣ್ಣಿನ ಚಲನೆಯಿಂದ ನಾದಕಂಪನಗಳನ್ನು ಗ್ರಹಿಸಿ, ಶಬ್ದ ಪರಿಚಯ ಮಾಡಿಕೊಳ್ಳುವುವು. ಇದರಿಂದ ಸರ್ಪಗಳಿಗೆ **ಕರ್ಣಹೀನ** (ಕಿವಿಗಳು ಇಲ್ಲದ್ದು) ಎಂತ ಪ್ರಯೋಗ. ಅಂಥಹ ಸರ್ಪಶ್ರೇಷ್ಠರಾದ ಶ್ರೀಶೇಷ ದೇವರೇ ಪರಮಾತ್ಮನಿಗೆ ಹಾಸಿಗೆಯ ರೂಪದಲ್ಲಿ ಸೇವೆ ಮಾಡುತ್ತಿರುವರು. ಶೇಷಶಾಯಿಯಾದ ಶ್ರೀಪರಮಾತ್ಮನು **ಕರ್ಣಹೀನಸುಶಯ್ಯನು.** ಇಲ್ಲಿ 'ಸು' ಎಂದರೆ ಶ್ರೇಷ್ಠವಾದ, ಸಮೀಚೀನವಾದ ಎಂದರ್ಥ. ಅಂದರೆ ಶ್ರೀಪರಮಾತ್ಮನ ಹಾಸಿಗೆಯು ಇತರರಂತಲ್ಲ. ವಿಲಕ್ಷಣವಾಗಿರುವುದೆಂದು ತಾತ್ಪರ್ಯ.

೫. ಅನಾದ್ಯನಂತಕಾಲದಿಂದಲೂ ಶ್ರೀಪರಮಾತ್ಮ ಶಾಶ್ವತನು. ನಿತ್ಯನೂ, ಶಾಶ್ವತರೂಪಿಯೂ ಆದ ಆ ನಿರಂಜನನು ಶಶ್ವದೇಕಪ್ರಕಾರನಾಗಿರುವನು. ಆದಿಮಧ್ಯಾಂತರಹಿತನು. ಚತುರ್ವಿಧನಾಶರಹಿತನು. ಆದರೆ ಜೀವರೂ ಸಹ ನಿತ್ಯರೂ ಮತ್ತು ಶಾಶ್ವತರೂ ಆಗಿರುವರು. ಜೀವರು ಚತುರ್ವಿಧನಾಶವುಳ್ಳವರು. ಅವರ ಸ್ವರೂಪಶರೀರವೂ ಈಶಾಧೀನವಾದದ್ದು.

೬. ವರ್ಣಾತ್ಮಕವಾದ, ಶಬ್ದವಿಶಿಷ್ಟವಾದ. ಅಪೌರುಷೇಯವಾದ. ಅನಂತಾನಂತ ವೇದಗಳಿಂದ ಮುಖ್ಯವಾಗಿ ಶ್ರೀಹರಿಯು ಪ್ರತಿಪಾದ್ಯನು. ಇದರಿಂದ ವರ್ಣನಾಮಕನು. ಅಲ್ಲದೇ ಬ್ರಾಹ್ಮಣ. ಕ್ಷತ್ರಿಯ. ವೈಶ್ಯ. ಶೂದ್ರ ಎಂಬ ಚತುರ್ವರ್ಣಗಳು. ಇಂಥಹ ವರ್ಣಗಳ ಸಂಬಂಧಗಳು ಯಾವುವೂ ಇಲ್ಲ,

ಪರಮಾತ್ಮನಿಗೆ. ಅವನು ವರ್ಣಾತೀತ. ಆದರೆ ಅವತಾರಗಳಲ್ಲಿ ಪ್ರಸಂಗಾನು ಸಾರವಾಗಿ ವರ್ಣಗಳಲ್ಲಿ ಅವತರಿಸಿದ್ದಾನೆ. ಭಾರ್ಗವರಾಮ, ವಾಮನನಾಗಿ ಬ್ರಾಹ್ಮಣನಾದ. ಶ್ರೀರಾಮನಾಗಿ ಕ್ಷತ್ರಿಯನಾದ. ಹೀಗೆ.

೭. ಆಶ್ರಮಗಳು ನಾಲ್ಕು ಪ್ರಕಾರ. ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಯತಿ. ಇಂತಹ ಆಶ್ರಮಗಳಿಂದ ವಿವರ್ಜಿತನು. ಆದರೆ ಅವತಾರಗಳಲ್ಲಿ ಸನತ್ಕುಮಾರನಾಗಿ, ವಾಮನನಾಗಿ- ಬ್ರಹ್ಮಚರ್ಯಾಶ್ರಮಿಯಾಗಿದ್ದಾನೆ. ರಾಮ-ಕೃಷ್ಣಾವತಾರಗಳಲ್ಲಿ ಗೃಹಸ್ಥಧರ್ಮ, ಕಪಿಲ, ಋಷಭ, ವೇದವ್ಯಾಸನಾಗಿ ಯತ್ಯಾಶ್ರಮ. ಮೂಲತಃ ಶ್ರೀಪರಮಾತ್ಮನು **ವರ್ಣ - ಆಶ್ರಮ ವಿವರ್ಜಿತನು.**

೮. ಸರ್ವವರ್ಣಪ್ರತಿಪಾದ್ಯನು. ಸಕಲವರ್ಣಗಳೂ (ಅಕ್ಷರಗಳು) ಶ್ರೀಪರಮಾತ್ಮನನ್ನೇ ಮುಖ್ಯ ವಸ್ತುವನ್ನಾಗಿ ಪ್ರತಿಪಾದಿಸುವವು. ಇದರಿಂದ **ಅರ್ಣ ಸಂಪ್ರತಿಪಾದ್ಯನು.** ಅರ್ಣ - ವರ್ಣಗಳು, ಅಕ್ಷರಗಳು, ಸಂಪ್ರತಿ ಪಾದ್ಯ - ಮುಖ್ಯಪ್ರತಿಪಾದ್ಯವಸ್ತು. ಅವನೇ ಸಾರನು.

೯. ವಾಯುದೇವರ ಹೆಗಲಿನ ಮೇಲೆ ಸಂಚರಿಸುವವನು. ಇದರಿಂದ **ವಾಯು ವಾಹನನು.** 'ವರದೋ ವಾಯುವಾಹನಃ' **ಎಂದು ವಿಷ್ಣುಸಹಸ್ರನಾಮ ಪ್ರಮಾಣ.** ಸುಪರ್ಣನೆಂದರೆ ಚಿನ್ನದ ಬಣ್ಣದಂತಿರುವ ರೆಕ್ಕೆಯುಳ್ಳ ಶ್ರೀಗರುಡದೇವರು. ಗರುಡವಾಹನನಾದ್ದರಿಂದ ಸುಪರ್ಣವರವಹನನು. ಇದರಿಂದ **ವಾಯು ಸುಪರ್ಣವರವಹನನು.**

೧೦. ಅತ್ಯಂತ ಮಂಗಳಕರವಾದ ಅವಯವವಿಶಿಷ್ಟವಾದ ದೇಹವುಳ್ಳವನು. ಸುಂದರಕೆ ಸುಂದರನು. ಸೌಂದರ್ಯಸಾರನು. ಇದರಿಂದ **ಚಾರುತರನು.** ಚಾರು - ಸುಂದರ. 'ಸಾಕ್ಷಾತ್ ಮನ್ಮಥಮನ್ಮಥ' **ಭಾಗವತವಾಕ್ಯ.** ಅತ್ಯಂತ ಸೌಂದರ್ಯವತಿಯರಾದ ಶ್ರೀಲಕ್ಷ್ಮೀದೇವಿಯರಿಗಿಂತಲೂ ಮನೋಹರನು.

೧೧. ತನ್ನಲ್ಲಿಯೇ ತಾನು ರಮಿಸುವವನು. ಸ್ವಕ್ರೀಡಾವಿಶಿಷ್ಟನು. ಸ್ವರಮಣ ನಾದ್ದರಿಂದ **ಸ್ವರತನು.**

೧೨. ಸಕಲಚೇತನರೂ ಶ್ರೀಪರಮಾತ್ಮನ ಪ್ರತಿಮಾ ಸದೃಶರು. ಜಲ ಪ್ರತೀಕರು. ಬಿಂಬರೂಪೀ ಶ್ರೀಹರಿಯು ಪ್ರತಿಮಾಂತರ್ಗತನಾಗಿದ್ದು, ಸಕಲ ವ್ಯಾಪಾರಗಳನ್ನೂ ಮಾಡಿ ಮಾಡಿಸುತ್ತಿರುವನು. ಇದರಿಂದ **ಪ್ರತಿಮ** ಶಬ್ದ ಪ್ರಯೋಗ.

೧೩. ಮಹಾಪ್ರಳಯಕಾಲದಲ್ಲಿ ಸರ್ವಸೃಷ್ಟಿಕರ್ತನಾದ ಸರ್ವೇಶ್ವರನು ಆಲದೆಲೆಯ ಮೇಲೆ ಮಲಗುವನು. ವಟಪತ್ರ - ಆಲದೆಲೆ. ಶ್ರೀಲಕ್ಷ್ಮೀ ದೇವಿಯು ಪ್ರಳಯೋದಕರೂಪದಲ್ಲಿ ಶ್ರೀನಾಮಕಳಾಗಿಯೂ, ವಟಪತ್ರ ರೂಪದಲ್ಲಿ ಭೂನಾಮಕಳಾಗಿಯೂ ಮತ್ತು ಸುತ್ತಲೂ ವ್ಯಾಪಿಸಿರುವ ಅಂಧಕಾರರೂಪದಲ್ಲಿ ದುರ್ಗಾನಾಮಕಳಾಗಿ ಶ್ರೀಪರಮಾತ್ಮನನ್ನು ಸೇವಿಸು ತ್ತಿರುವಳು. ಆಲದೆಲೆಯ ಮೇಲೆ, ಪ್ರಳಯೋದಕದಲ್ಲಿ ಮಲಗಿರುವ ಶಿಶುರೂಪೀ ಶ್ರೀಪರಮಾತ್ಮನು **ವಟಪತ್ರಶಯನನು**. ಮಾರ್ಕಂಡೇಯ ಮಹಾಮುನಿಗೆ ತನ್ನ ಆಶ್ಚರ್ಯಕರವಾದ ಪ್ರಳಯಕಾಲದ ರೂಪವನ್ನು ತೋರಿಸಿದನು. ಅತ್ಯಂತ ಆಶ್ಚರ್ಯಕರನಾದವನು.

೧೪. ಅವನ ಅವತಾರ, ಚರಿತ್ರೆ, ಲೀಲಾವೈಭವಗಳೆಲ್ಲವೂ ದೋಷರಹಿತ ವಾದುವು. ಇದರಿಂದ **ಸಚ್ಚರಿತನು**. ಸುಂದರಚಾರಿತ್ರ್ಯವುಳ್ಳವನು.

೧೫. ಅನಂತ ಕಲ್ಯಾಣಗುಣಗಣಪರಿಪೂರ್ಣನಾದ್ದರಿಂದ **ಗುಣಭರಿತನು** ॥೪॥

— ೦ —

## ಪದ್ಯ - ೫

ಮೂಲ -

**ಅಗಣಿತ ಸುಗುಣಧಾಮ ನಿಶ್ಚಲ ।**
**ಸ್ವಗತಭೇದವಿಶೂನ್ಯ ಶಾಶ್ವತ ।**
**ಜಗದಿ ಜೀವಾತ್ಯಂತ ಭಿನ್ನಾಪನ್ನಪರಿಪಾಲ ॥**
**ತ್ರಿಗುಣವರ್ಜಿತ ತ್ರಿಭುವನೇಶ್ವರ ।**
**ಹಗಲಿರಳು ಸ್ಮರಿಸುತಲಿಹರ ಬಿ ।**
**ಟ್ಟಗಲ ಶ್ರೀಜಗನ್ನಾಥವಿಠ್ಠಲ ವಿಶ್ವವ್ಯಾಪಕನು. ॥**

**ಅವತರಣಿಕೆ -**

ಶ್ರೀಪರಮಾತ್ಮನ ಅಗಣಿತಗುಣಾವಳಿಗಳನ್ನು ಸ್ತೋತ್ರಮಾಡುತ್ತಾ ಪ್ರಸಕ್ತ ಅನುಕ್ರಮಣಿಕಾತಾರತಮ್ಯಸಂಧಿಗತ ವಿಷಯವನ್ನು ಉಪಸಂಹರಿಸುತ್ತಾರೆ.

**ಪ್ರತಿಪದಾರ್ಥ -**

**ಅಗಣಿತ** - ಅನಾದ್ಯನಂತಕಾಲದಿಂದ ಎಣಿಸಲಸಾಧ್ಯವಾದ, **ಸುಗುಣಧಾಮ**-ನಿರ್ದೋಷವಾದ ಮಂಗಳಗುಣಗಳಿಗೆ ಆಶ್ರಯನಾದ, **ನಿಶ್ಚಲ**-ಸತ್ಯಸಂಕಲ್ಪನಾದ, **ಸ್ವಗತಭೇದವಿಶೂನ್ಯ**- ತನಗೂ ತನ್ನ ಅವಯವಗಳಿಗೂ ಭೇದವಿಲ್ಲದಿರುವ, **ಶಾಶ್ವತ** - ಅನಾದ್ಯನಂತಕಾಲದಿಂದಲೂ ನಿತ್ಯನಾದ, ಶಶ್ವದೇಕಪ್ರಕಾರನಾಗಿರುವವ, **ಜಗದಿ** - ಜಗತ್ತಿನಲ್ಲಿ, **ಜೀವಾತ್ಯಂತ ಭಿನ್ನ** - ಸಕಲ ಜೀವರುಗಳಿಂದಲೂ ಅತ್ಯಂತ ವಿಲಕ್ಷಣನಾದ, **ಆಪನ್ನಪರಿಪಾಲ** - ಶರಣಾಗತರಾದ ಭಕ್ತಜನರನ್ನು ಸಂರಕ್ಷಣ ಮಾಡುವವ. **ತ್ರಿಗುಣವರ್ಜಿತ** - ಸತ್ತ್ವಾದಿ ಪ್ರಾಕೃತಗುಣಗಳಿಂದ ದೂರನಾದವ. **ತ್ರಿಭುವನೇಶ್ವರ** - ಚತುರ್ದಶಭುವನಕ್ಕೆ [illegible]ನಾದ, **ಹಗಲಿರಳು ಸ್ಮರಿಸುತಿಹರ** - ಅಹೋರಾತ್ರಿ ಬಿಡದೆ ಧ್ಯಾನಿಸುತ್ತಿರುವವರನ್ನು. **ವಿಶ್ವವ್ಯಾಪಕನು** - ಜಡಾತ್ಮಕ ಜಗತ್ತಿನಲ್ಲಿ ಸರ್ವತ್ರ ವ್ಯಾಪ್ತನಾಗಿರುವ, **ಶ್ರೀಜಗನ್ನಾಥವಿಠ್ಠಲ** - ವಿಠ್ಠಲಶಬ್ದವಾಚ್ಯನಾದ ದಾಸರಾಯರ ಅಂಕಿತನಾದ ಸಾಂಕೇತನಾದ ಶ್ರೀಜಗನ್ನಾಥನು. **ಬಿಟ್ಟಗಲ** - ತನ್ನ ಭಕ್ತರನ್ನು ಎಂದೆಂದಿಗೂ ಅಗಲುವವನಲ್ಲ. ॥೫॥

## ವ್ಯಾಖ್ಯಾನಗಳು

### ೧. ಶ್ರೀಸಂಕರ್ಷಣ ಒಡೆಯರ ವ್ಯಾಖ್ಯಾನ

ಶ್ರೀಪರಮಾತ್ಮನನ್ನೇ ಸ್ತೋತ್ರ ಮಾಡುತಾರೆ.

ಗಣನಾದಿಂದ ರಹಿತವಾದ ಆದ್ಯಂತಗಳಿಂದ ಶೂನ್ಯವಾದ ನಿರ್ದೋಷವಾದ ಮಂಗಳಕರಗಳಾದ ಗುಣಗಳಿಗೆ ಆಶ್ರಯನಾದವ, ಸತ್ಯ ಸಂಕಲ್ಪನಾದವ, ತನ್ನ ದೆಶೆಯಿಂದಲೂ, ಜೀವರ ದೆಶೆಯಿಂದಲೂ ಬಹಳ ಭೇದ ಉಳ್ಳವನು. ಶರಣಾ

ದೇಹಕ್ಕೂ, ತನ್ನ ಗುಣಗಳಿಗೂ, ತನ್ನ ಸ್ವಕೀಯಗಳಾದ ಅವತಾರ ಮೊದಲಾದವು
ಗಳಿಗೂ ಯಾವತ್ತೂ ವಿಶೇಷಾಕಾರವಾಗಿ ಭೇದದಿಂದ ರಹಿತನಾದವ, ಅನಾದ್ಯ
ನಂತಕಾಲಕ್ಕೂ ಜನನಮರಣಾದಿಗಳಿಂದ ವರ್ಜಿತನಾಗಿ, ನಿತ್ಯ ಯೌವನನಾಗಿ,
ಪೀನನಾಗಿ, ಅಸದೃಶನಾಗಿ ಇರತಕ್ಕವ. ಜಗತ್ತಿನಲ್ಲಿ ವಿದ್ಯಮಾನರಾದ ಜೀವರು
ಗಳಿಂದಲೂ, ಅಸ್ಪೃಶ್ಯರಿಂದಲೂ, ಮುಕ್ತರಿಂದಲೂ ವಿಶೇಷಾಕಾರವಾಗಿ ಭಿನ್ನ
ನಾದವ. ಶರಣಾಗತರಾದ ತನ್ನ ಭಕ್ತರ ಸಂರಕ್ಷಣ ಮಾಡತಕ್ಕವ. ಪ್ರಾಕೃತ
ಗುಣತ್ರಯಗಳಿಂದ ದೂರನಾದವ. ಚತುರ್ದಶಭುವನಕ್ಕೂ ಸ್ವಾಮಿಯಾದವ,
ಇಂಥಾ ಶ್ರೀಪರಮಾತ್ಮ, ಅಹೋರಾತ್ರಿ ಸಮೀಚೀನವಾದ ಅಚಂಚಲವಾದ
ಭಕ್ತಿಪೂರ್ವಕ ಸ್ಮರಿಸತಕ್ಕ ತನ್ನ ಭಕ್ತರನ್ನು ಬಿಟ್ಟು ದೂರನಾಗೋದಿಲ್ಲ ಮತ್ತು
ಅವರಿಗೆ ಇನ್ನೂ ವಿಶೇಷಾಕಾರವಾದ ಜ್ಞಾನ, ಭಕುತಿ, ವೈರಾಗ್ಯಗಳ ವೃದ್ಧಿ
ಮಾಡತಾನೆ. ಜಗತ್ತಿನಲ್ಲಿ ವಿದ್ಯಮಾನರಾದ ತನ್ನ ಜನರುಗಳ ಪಾಪಪರಿಹಾರ
ಮಾಡುವಂಥ ವಿಠಲಶಬ್ದ ವಾಚ್ಯನಾದ ಶ್ರೀಪರಮಾತ್ಮ ಚರಾಚರಾತ್ಮಕ ಸಮಸ್ತ
ರಲ್ಲಿ ವ್ಯಾಪಿಸಿಕೊಂಡು ಪೂರ್ಣನಾಗಿ ಶ್ರೀಪರಮಾತ್ಮ ಇದ್ದಾನೆಂತ ತಾತ್ಪರ್ಯ ||೫||

**||ಶ್ರೀಮತ್ಸತ್ಯಪರಾಯಣತೀರ್ಥಕರಕಮಲಸಂಜಾತ**
**ಶ್ರೀಮತ್ಸಂಕರ್ಷಣತೀರ್ಥ ವಿರಚಿತಾಯಾಂ ಶ್ರೀಮದ್ಧರಿಕಥಾಮೃತಸಾರ**
**ಕನ್ನಡಭಾಷಾ ಟೀಕಾಯಾಂ ಅನುಕ್ರಮಣಿಕಾತಾರತಮ್ಯಸಂಧಿ**
**ವ್ಯಾಖ್ಯಾನಂ ಸಂಪೂರ್ಣಂ ||**

**|| ಶ್ರೀಕೃಷ್ಣಾರ್ಪಣಮಸ್ತು ||**

**೨. ಭಾವಪ್ರಕಾಶಿಕೆ -**

ಗಣನಮಾಡಲು ಸಾಧ್ಯವಿಲ್ಲದ ಉತ್ತಮವಾದ ಗುಣಗಳಿಗೆ ಮನೆಯಂತಿರು
ವವನು. ಇಂತಹಾ ಸುಗುಣಗಳು ನಿತ್ಯವಾಗಿರುವವು ಅಂದರೆ, ಅಗಣಿತವಾದ
ಸುಗುಣಗಳಿಗೆ ಸರ್ವಕಾಲಗಳಲ್ಲೂ ಆಶ್ರಯನಾಗಿಯೇ ಇರುವವನೆಂದು
ತಾತ್ಪರ್ಯ. ತನ್ನ ಸಂಬಂಧವಾದ ಭೇದಗಳು ಅಂದರೆ ಮೂಲರೂಪ, ಅವತಾರ
ರೂಪಗಳು, ಅಂತರ್ಯಾಮಿರೂಪಗಳು ಇವೇ ಮೊದಲಾದ ಭಗವದ್ರೂಪಗಳಿಗೆ
ಪರಸ್ಪರ ಭೇದವಿಲ್ಲವೆಂದರ್ಥ. ಅನಾದ್ಯನಂತಕಾಲಕ್ಕೂ ಜಡವಾದ ಜಗತ್ತಿನ

ಗತರನ್ನು ಪಾಲಿಸುವವನು. ಸತ್ತ್ವರಜಸ್ತಮೋಗುಣಶೂನ್ಯನು, ಮೂರು ಲೋಕಕ್ಕೂ ಸ್ವಾಮಿಯಾದವನು, ಮೂರು ಲೋಕವೆಂದರೆ ಭೂಲೋಕ, ಭುವರ್ಲೋಕ, ಸ್ವರ್ಗಲೋಕವೆಂಬ ಮೂರು ಲೋಕವೆಂದರ್ಥವಲ್ಲ. ಈ ಆಧಿಪತ್ಯ ಇಂದ್ರನಿಗೆ ಕೂಡ ಇರುವುದು. ಮತ್ತೇನೆಂದರೆ, ಭಾಗವತ ದ್ವಿತೀಯ ಸ್ಕಂಧ ೫ನೆಯ ಅಧ್ಯಾಯದಲ್ಲಿ ೩೯ನೆಯ ಶ್ಲೋಕ ಮೊದಲು ೪೨ನೆಯ ಶ್ಲೋಕದ ವರೆಗೂ ಬ್ರಹ್ಮಾಂಡದಲ್ಲಿ ೧೪ ಲೋಕಗಳನ್ನು ಹೇಳಿ "ಇತಿಲೋಕಮಯಃ ಪುಮಾನ್" ಹೀಗೆ ಪರಮಾತ್ಮನು ಲೋಕಮಯನಾಗಿರುವನು ಎಂದು. ಅದನ್ನು ಉಪಸಂಹರಿಸಿ ಮತ್ತು 'ಭೂರ್ಲೋಕಃ ಕಲ್ಪಿತಃ ಪದ್ಭ್ಯಾಂ ಭುವರ್ಲೋಕಸ್ತು ನಾಭಿತಃ ಸ್ವರ್ಗಲೋಕಃ ಕಲ್ಪಿತೋ ಮೂರ್ಧ್ನಿ ಇತಿ ವಾ, ಲೋಕಕಲ್ಪನಾ" ಪಾದ ಮೊದಲು ಭೂಲೋಕವೆಂತಲೂ, ನಾಭಿಯಲ್ಲಿ ಭುವರ್ಲೋಕವೆಂತಲೂ, ಶಿರಸ್ಸಿನವರೆಗೂ ಸ್ವರ್ಗಲೋಕವೆಂತಲೂ, ಹೀಗಾದರೂ ಲೋಕಗಳನ್ನು ಕಲ್ಪಿಸಬಹುದು ಎಂದರು. ಇತರ ವ್ಯಾಖ್ಯಾನದಲ್ಲಿ ಭೂಲೋಕವೆಂದರೆ ಅತಲ ಮೊದಲು ಪಾತಾಳದವರೆಗೂ ಇರುವ ಏಳುಲೋಕಗಳೂ ಭೂಮಿಯಲ್ಲಿ ಅಂತರ್ಭಾಗವೆಂತಲೂ. ಜನೋಲೋಕ ಮೊದಲು ಸತ್ಯಲೋಕದವರೆಗೂ ಸ್ವರ್ಗಲೋಕದಲ್ಲಿ ಅಂತರ್ಭಾವವೆಂತಲೂ, ಅಂತು ೧೪ ಲೋಕಗಳೂ ಇದರಲ್ಲಿ ಸೇರಿದವೆಂದು ಹೇಳಿರುವರು. ಹಾಗೆ ಮಾಡಿದ್ದರೆ "ಪಾತಾಳಮೇತಸ್ಯ ಹಿ ಪಾದಮೂಲಂ" ಎಂಬ ವಿರಾಡ್ರೂಪ ಚಿಂತನೆಯ ಪ್ರಕಾರವನ್ನು ಹೇಳುವಾಗ ಪಾದತಲಪ್ರಾರಂಭಮಾಡಿ ಕಟಿ ಪ್ರದೇಶದವರೆಗೂ ಅತಲಾದಿ ಏಳುಲೋಕವನ್ನು ಹೇಳಿ "ಮಹೀತಲಂ ತಜ್ಜಘನಂ ಮಹೀಪತೆ" ಎಂದು ಭೂಲೋಕವು ನಾಭಿಯ ಕೆಳಗೆ ಇರುವ ಕೆಳಹೊಟ್ಟೆಯಲ್ಲಿದೆ ಎಂದು ಹೇಳಿರುವರು. ಇಲ್ಲಿ ಪಾದ ಮೊದಲು ಎಂದು ಹೇಳಿದುದರಿಂದ ಪಾತಾಳಾದಿಗಳು ಅದರಲ್ಲಿ ಅಂತರ್ಭಾವವೆಂದು ಸ್ಪಷ್ಟ ಮಾಡಿದಂತಾಯಿತು. "ಸತ್ಯಂ ತು ಶಿರ್ಷಾಣಿ ಸಹಸ್ರಶೀರ್ಷ್ಣಃ" ಸತ್ಯಲೋಕವು ಪರಮಾತ್ಮನ ಶಿರಸ್ಸಿನಲ್ಲಿದೆ ಎಂದು ಅಲ್ಲಿ ಹೇಳಿರುವರು. ಇಲ್ಲಿ ಶಿರಸ್ಸಿನವರೆಗೂ ಸ್ವರ್ಗಲೋಕವೆಂಬರು. ಆದ್ದರಿಂದ ಸ್ವರ್ಗದಲ್ಲಿ ಸತ್ಯಲೋಕದವರೆಗೂ ಎಲ್ಲಾ ಲೋಕಗಳೂ ಅಂತಃಪ್ರವಿಷ್ಟವೆಂದರ್ಥ. ಮುಖ್ಯ ಇಲ್ಲಿ ಹೇಳಿದ ತ್ರಿಭುವನೇಶ್ವರನೆಂಬುವುದಕ್ಕೆ ೧೪ ಲೋಕಗಳಿಗೂ ಈಶ್ವರನೆಂದರ್ಥ. ಅಥವಾ ಶ್ವೇತದ್ವೀಪ, ಅನಂತಾಸನ, ವೈಕುಂಠವೆಂಬ ಮೂರು ಲೋಕಗಳ ಈಶ್ವರ

ನೆಂದರ್ಥ. ವಿಶ್ವವ್ಯಾಪಕನಾದ ಇಂತಹಾ ಜಗನ್ನಾಥವಿಠ್ಠಲನನ್ನು ಹಗಲು ರಾತ್ರಿಯಲ್ಲಿ ಸ್ಮರಿಸುತ್ತಿರುಪವರನ್ನು, ಒಂದು ಕ್ಷಣಬಿಡದೇ ಸರ್ವದಾ ಸಮೀಪ ವಲ್ಲಿದ್ದು ರಕ್ಷಿಸುವನೆಂದು ತಾತ್ಪರ್ಯ. ॥೫॥

**೩. ಶ್ರೀವ್ಯಾಸದಾಸಸಿದ್ಧಾಂತಕೌಮುದೀ-**

ಉಪಸಂಹರತಿ - 'ಅಗಣಿತ' ಇತಿ ॥ 'ನಿಶ್ಚಲ' - ಪದಾದೇಃ ॥೫॥ ಇತಿ ಶ್ರೀವ್ಯಾ. - ಆರೋಹಣ (ಅನುಕ್ರಮಣಿಕಾ) ತಾರತಮ್ಯಸಂಧಿಃ ಪರ್ಯವಸಿತಃ ॥

**ಕನ್ನಡಾರ್ಥ -**

ಈ ಸಂಧಿಯನ್ನು 'ಅಗಣಿತ' ಈ ಪದ್ಯದಿಂದ ಉಪಸಂಹಾರ ಮಾಡುತ್ತಾರೆ.

ತನ್ನ ಸ್ಥಾನ ಮುಂತಾದ (ಪದವೀ) ಇವುಗಳಿಂದ ಚಲಿಸುವುದಿಲ್ಲ. ಆದುದರಿಂದ 'ನಿಶ್ಚಲ' ॥೫॥

ಇಲ್ಲಿಗೆ ಅನುಕ್ರಮಣಿಕಾತಾರತಮ್ಯಸಂಧಿಯು ಮುಗಿದುದು.

## ॥ ಶ್ರೀಮಧ್ವೇಶಾರ್ಪಣಮಸ್ತು ॥

**೪. ಭಾವದರ್ಪಣ-**

ಅಗಣಿತ । ಅಸಂಖ್ಯಾಕ ಗುಣಗಳಿಗೆ ಆಶ್ರಯ ಎಂಬರ್ಥ ॥ ಸ್ವಗತಭೇದ ವಿವರ್ಜಿತ । "ಸ್ವಗತಭೇದವಿವರ್ಜಿತಾತ್ಮೇತಿ" ವಚನಾತ್ । ಜಗದ ಜೀವಾತ್ಯಂತ ಭಿನ್ನ ॥ ಜಗತ್ತಿಗೂ ಜೀವಗಳಿಗೂ ಸಹ ಅತ್ಯಂತ ಭಿನ್ನನಾಗಿ ವಿಲಕ್ಷಣನಾಗಿ ಇರತಕ್ಕವ. ಆಪನ್ನ - ಶರಣಾಗತರು. ತ್ರಿಗುಣವರ್ಜಿತ - ಸತ್ವಾದಿಗುಣರಹಿತ ॥೫॥

ಇತಿ ಶ್ರೀಮತ್ಕವಿಕುಲತಿಲಕ ಶ್ರೀಮಜ್ಜಗನ್ನಾಥದಾಸರಾಜವಿರಚಿತ ಶ್ರೀಮದ್ಧರಿಕಥಾಮೃತಸಾರಸ್ಯ ಭಾವದರ್ಪಣಾಟೀಕಾಯಾಂ ಕಮಲಾಪತಿದಾಸ

ಹೃದ್ಗತೇನ ಶ್ರೀಹರಿಣಾ ಕೃತಾಯಾಂ ಅನುಕ್ರಮಣಿಕಾ ಸಂಧಿಃ ಪರ್ಯವಸಿತಃ ॥

॥ ಶ್ರೀಕೃಷ್ಣಾರ್ಪಣಮಸ್ತು ॥

**೫. ಶ್ರೀಗುರುಹೃದಯಪ್ರಕಾಶಿಕೆ-**

ಎಣಿಸುವುದಕ್ಕೆ ಶಕ್ಯವಲ್ಲದ, ಜ್ಞಾನಾನಂದಾದಿ ಗುಣಸ್ವರೂಪನೆ. ಚಾಂಚಲ್ಯಾದಿ ದೋಷರಹಿತನೇ, ಅವತಾರ ಅಂತರ್ಯಾಮಿ ರೂಪಗಳಲ್ಲಿ ಭೇದ ವಿಲ್ಲದವನೇ, ಸದಾ ಏಕಪ್ರಕಾರನೇ, ಜಗತ್ತಿನ ಸರ್ವಜೀವರಿಗೆ ಅತಿ ಪ್ರತ್ಯೇಕ ನಾದವನೇ, ಆಪನ್ನರೆಂಬ ಶರಣಾಗತರನ್ನು ರಕ್ಷಿಸುವವನೆ, ಸತ್ತ್ವಾದಿ ತ್ರಿಗುಣ ವರ್ಜಿತನೆ. ತ್ರಿಭುವನಸ್ವಾಮಿಯೇ, ರಕ್ಷಿಸೆಂದು ಹಗಲೂ ಇರುಳೂ ಸಹ ಸ್ಮರಿಸುವವರನ್ನು ವಿಶ್ವವ್ಯಾಪಕನಾದ ಆ ಸ್ವಾಮಿಯು ಬಿಟ್ಟಗಲನು ಅಂದರೆ, ಅನುಗ್ರಹವಿಶೇಷಮಾಡಿ ರಕ್ಷಿಸುವವನು. ಅದ್ದರಿಂದ ಜಗತ್ತಿಗೇ ಸ್ವಾಮಿಯೂ ಆಗಿ ಅಜ್ಞರನ್ನು ಉದ್ಧರಿಸುವನು ॥೫॥

**॥ ಇಂತು ಗುರುಹೃದಯಪ್ರಕಾಶಿಕಾ ಎಂಬ ವ್ಯಾಖ್ಯಾನ ಸಮೇತ ಶ್ರೀಹರಿಕಥಾಮೃತಸಾರದಲ್ಲಿ ಅನುಕ್ರಮಣಿಕಾಸಂಧಿ ಎಂಬ ೩೨ನೇ ಸಂಧಿಗೆ ಮಂಗಳಂ ॥**

॥ ಶ್ರೀಕೃಷ್ಣಾರ್ಪಣಮಸ್ತು ॥

## ಸರ್ವವ್ಯಾಖ್ಯಾನಸಾರಸಂಗ್ರಹ

೧. ಶ್ರೀಪರಮಾತ್ಮನು ಅನಂತಕಲ್ಯಾಣಗುಣಗಣಪರಿಪೂರ್ಣನು. ಅವನ ಪರಮಮಂಗಳವಾದ ಗುಣಸ್ತೋಮಗಳನ್ನು ಇಷ್ಟೇ ಎಂದು ಗಣನೆಮಾಡಲು ಅನಾದ್ಯನಂತಕಾಲದಿಂದಲೂ ಅಸಾಧ್ಯ. ಅಪ್ರಾಕೃತಗುಣಗಳಿಗೆ ಆಶ್ರಯನು. ಇವರಿಂದ **ಅಗಣಿತ ಗುಣಧಾಮನು**. ಅಗಣಿತ - ಗಣನೆ ಮಾಡಲು ಸಾಧ್ಯ ವಿಲ್ಲದ, ಸುಗುಣ - ಮಂಗಳಕರವಾದ ಗುಣಗಳು. ಧಾಮ - ಆಶ್ರಯನು (ಮನೆಯಾಗಿರುವನು).

೨. ಅನಾದ್ಯನಂತಕಾಲದಿಂದ ನಿರ್ವಿಕಾರನು. ಸತ್ಯಸಂಕಲ್ಪನಾದ ಸರ್ವೇಶ್ವರನು ಇದರಿಂದ **ನಿಶ್ಚಲನು.** ನಿಶ್ಚಂಚಲವಾದ ಸ್ವರೂಪಗತಧರ್ಮವುಳ್ಳವನು.

೩. ತನ್ನ ದೇಹದ ವಿವಿಧ ಅವಯವಗಳಿಗೂ, ಗುಣಗಳಿಗೂ, ಕ್ರಿಯೆಗಳಿಗೂ, ರೂಪಗಳಿಗೂ, ಅವತಾರವಿಶೇಷಗಳಿಗೂ, ಸರ್ವಾಂತರ್ಯಾಮಿರೂಪಗಳಿಗೂ, ಪರಸ್ಪರ ವ್ಯತ್ಯಾಸವಿಲ್ಲದೇ, ಸರ್ವಕಾಲಗಳಲ್ಲೂ ತನ್ನಿಂದ ತಾನು ಅಭೇದನಾಗಿರುವವನು. ಇದರಿಂದ **ಸ್ವಗತಭೇದವಿಶೂನ್ಯನು.** ಸ್ವಗತ - ತನ್ನಲ್ಲಿರುವ ಸರ್ವದಿಂದಲೂ, ಭೇದ - ವ್ಯತ್ಯಾಸಗಳು, ವಿಶೂನ್ಯ - ವಿಶೇಷಾಕಾರವಾಗಿ ಇಲ್ಲದವನು.

೪. ಸರ್ವದೇಶಕಾಲಾದಿಗಳಿಂದ ನಾಶರಹಿತನು. ಜನನಮರಣ ವಿದೂರನು. ಸಮಾಭ್ಯಧಿಕಶೂನ್ಯನು. ಆದಿಮಧ್ಯಾಂತವಿದೂರನು. ಚತುರ್ವಿಧನಾಶರಹಿತನು. ನಿತ್ಯಶಾಶ್ವತಸ್ವರೂಪಿಯು. ಇದರಿಂದ **ಶಾಶ್ವತನು.**

೫. ಈ ಜಗತ್ತಿನಲ್ಲಿ (ಜಗದಿ) ವಿದ್ಯಮಾನರಾಗಿರುವ ಸಮಸ್ತ ಜೀವರಾಶಿಗಳಿಂದಲೂ ಮತ್ತು ಜಡವಸ್ತುಗಳಿಂದಲೂ ಅತ್ಯಂತ ಭಿನ್ನನು. ಜಗದ್ವಿಲಕ್ಷಣಸ್ವರೂಪನು (ಜೀವೇಶಭೇದ, ಜಡೇಶಭೇದ). ಇದರಿಂದ **ಜೀವಾತ್ಯಂತಭಿನ್ನ.** ಈ ಭೇದವು ನಿತ್ಯವೂ, ಸತ್ಯವೂ, ಪಾರಮಾರ್ಥಿಕವೂ ಆಗಿದೆ.

೬. ತನ್ನನ್ನೇ ನಂಬಿ ಸ್ತುತಿಸುತ್ತಾ ಶರಣಾಗತರಾಗಿ ಬರುವ ಭಕ್ತಜನರನ್ನು ಸದಾ ಸಂರಕ್ಷಿಸುವ ಮಹಾಕರುಣಾಸಾಗರನು. ಇದರಿಂದ **ಆಪನ್ನಪರಿಪಾಲ.** ಆಪನ್ನ-ಶರಣಾಗತರು. ಪರಿಪಾಲ - ಸರ್ವವಿಧದಿಂದಲೂ ಸಂರಕ್ಷನು.

೭. ಸತ್ತ್ವ, ರಜ, ತಮ ಎಂಬ ಪ್ರಾಕೃತಗುಣತ್ರಯಗಳಿಂದ ಅತ್ಯಂತ ದೂರನು. ತ್ರಿಗುಣಾತೀತನು, ಇದರಿಂದ **ತ್ರಿಗುಣವರ್ಜಿತನು.** ಅಂದರೆ ನಿರ್ಗುಣನೆಂದರ್ಥ. ನಿರ್ಗುಣತ್ವವೆಂದರೆ ಯಾವ ಗುಣಗಳಿಂದಲೂ ಶೂನ್ಯನೆಂದರ್ಥವಲ್ಲ. ಪ್ರಾಕೃತಗುಣವಿದೂರನೆಂದರ್ಥ.

೮. ಸಮಸ್ತ ಬ್ರಹ್ಮಾಂಡಕ್ಕೆ ನಿಯಾಮಕನು ಹಾಗೂ ಜಗತ್ಪ್ರಭುವು. ಶ್ರೀಪರಮಾತ್ಮನ ವಿರಾಡ್ರೂಪ ಚಿಂತನೆಯ ಪ್ರಕಾರ, ೧. ಪಾದತಲದಿಂದ [illegible] ನಾಭಿ ಪರ್ಯಂತ ಅತಲಾದಿ ಸಪ್ತಲೋಕಗಳಿವೆ. 'ಪಾತಾಲೋಕಸ್ಯ ಓ

ಪಾದಮೂಲಮ್' ಎಂಬಂತೆ. ೨. ಭೂಲೋಕವು ನಾಭಿಯ ಕೆಳಗೆ ಇರುವ ಕೆಳಮೊಟ್ಟೆಯಲ್ಲಿದೆ. ೩. ನಾಭಿಯಿಂದ ಮೇಲಕ್ಕೆ ಶಿರಪರಿಯಂತ ಊರ್ಧ್ವ ಸಪ್ತಲೋಕಗಳಿವೆ. ಸತ್ಯಲೋಕವು ಶಿರಸ್ಸಿನಲ್ಲಿದೆ. 'ಸತ್ಯಂ ತು ಶೀರ್ಷಾಣಿ ಸಹಸ್ರ ಶೀರ್ಷ್ಣಃ' ಎಂಬಂತೆ, ಅಂದರೆ ಚತುರ್ದಶಭುವನಾತ್ಮಕವಾದ ಈ ಪ್ರಪಂಚಕ್ಕೆ ಒಡೆಯನಾದ್ದರಿಂದ **ತ್ರಿಭುವನೇಶ್ವರನು.**

೯. ಜಗತ್ತಿನಲ್ಲಿ ಎಲ್ಲೆಲ್ಲೂ ಸಕಲ ಚರಾಚರಗಳಲ್ಲೂ ಎಡಬಿಡದೆ ವ್ಯಾಪಿಸಿದ್ದಾನೆ. ಇದರಿಂದ **ವಿಶ್ವವ್ಯಾಪಕನು.**

೧೦. ತನ್ನನ್ನು ಸದಾ ಹಗಲಿರಳು ಎನ್ನದೆ ಉಪಾಸನಾ ಮಾಡುತ್ತಿರುವ ಸಜ್ಜನರ ಸಮೀಪವನ್ನು ಆ ವಿಶ್ವವ್ಯಾಪಕನು ಎಡಬಿಡದೆ ನಿತ್ಯಾವಿಯೋಗಿಯಾಗಿ, ಅನಿಮಿತ್ತ ಬಂಧುವಾಗಿ ಸಂರಕ್ಷಕನಾಗಿರುತ್ತಾನೆ, ಆ ಭಕ್ತವತ್ಸಲನಾದ **ಶ್ರೀಜಗನ್ನಾಥವಿಠ್ಠಲನೆಂದು** ಪ್ರಸಕ್ತ ೫ ನೆಯ ಪದ್ಯದಿಂದ 'ಅನುಕ್ರಮಣಿಕಾತಾರತಮ್ಯಸಂಧಿ' ಉಪಸಂಹಾರಮಾಡಿದ್ದಾರೆ, ಜ್ಞಾನಿವರ್ಯರಾದ ದಾಸಾರ್ಯರು ॥೫॥

॥ಅಂತು ೫ನೇ ಪದ್ಯದಿಂದ **ಸರ್ವವ್ಯಾಖ್ಯಾನಸಾರಸಂಗ್ರಹ** ಎಂಬ ತಾತ್ಪರ್ಯವು ಪರಿಸಮಾಪ್ತಿಯಾಯಿತು ॥

॥ **ಶ್ರೀಕೃಷ್ಣಾರ್ಪಣಮಸ್ತು** ॥



— o —